₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಸೋಮವಾರ 27.01.2025 ಸಂಪುಟ: 67 ಸಂಚಿಕೆ: 262 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಹನುಮನ ಮುಡಿಗೇರಿದ ಬಿಗ್‌ಬಾಸ್ ಕಿರೀಟ, ತ್ರಿವಿಕ್ರಮ್ ರನ್ನರ್ ಅಪ್

ಪ್ರೇಕ್ಷಕರ ಮನಸೂರೆಗೊಂಡ ವಿವಿಧ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳ ಸ್ತಬ್ಧಚಿತ್ರ

ಕರ್ತವ್ಯ ಪಥದಲ್ಲಿ ಗಣರಾಜ್ಯೋತ್ಸವ ಸಂಭ್ರಮ

ದೆಹಲಿ: ರಾಷ್ಟ್ರ ರಾಜಧಾನಿ ದೆಹಲಿ ಸೇರಿದಂತೆ ದೇಶದೆಲ್ಲೆಡೆ 76ನೇ ಗಣರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ದೆಹಲಿಯ ಕರ್ತವ್ಯಪಥದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ಪ್ರಧಾನಮಂತ್ರಿ ನರೇಂದ್ರ ಮೋದಿ, ಇಂಡೋನೇಷ್ಯಾ ಅಧ್ಯಕ್ಷ ಪ್ರಬೋವೊ ಸುಬಿಯಾಂಟೊ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಕರ್ತವ್ಯಪಥದಲ್ಲಿ ನಡೆದ ಅದ್ದೂರಿ ಗಣರಾಜ್ಯೋತ್ಸವ ಸಮಾರಂಭದಲ್ಲಿ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸ್ತಬ್ಧಚಿತ್ರಗಳು ವೀಕ್ಷಕರ ಮನಸೂರೆಗೊಂಡವು.

ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಕರ್ನಾಟಕದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು, ಈ ಬಾರಿ ಗದಗ ಜಿಲ್ಲೆಯ ಲಕ್ಕುಂಡಿಯ ಶಿಲ್ಪಕಲೆಯನ್ನು ಅನಾವರಣಗೊಳಿಸಿರುವ ಲಕ್ಕುಂಡಿ ಶಿಲ್ಪಕಲೆಯ ತೊಟ್ಟಿಲು ಸ್ತಬ್ಧಚಿತ್ರವನ್ನು ಪ್ರದರ್ಶಿಸಿತು. ಅದೇ ರೀತಿ ಅನ್ಯ ರಾಜ್ಯಗಳ ಸ್ತಬ್ಧಚಿತ್ರಗಳೂ ಗಮನ ಸೆಳೆದವು.

ಭಾರತೀಯ ಭೂಸೇನೆ, ನೌಕಾಸೇನೆ ಮತ್ತು ವಾಯುಪಡೆಯ ಆಕರ್ಷಕ ಪಥಸಂಚಲನ, ದೇಶದ ಸೇನಾ ಶಕ್ತಿಗೆ ಕನ್ನಡಿ ಹಿಡಿಯಿತು. ಅಲ್ಲದೇ ವಿವಿಧ ರಕ್ಷಣಾ ಪಡೆಗಳೂ ಶಿಸ್ತುಬದ್ಧ ಕವಾಯಿತು ನಡೆಸಿ ಗಮನ ಸೆಳೆದವು. ಸಶಸ್ತ್ರ ಪಡೆಗಳು ತಮ್ಮ ಆಧುನಿಕ ಶಸ್ತ್ರಾಸ್ತ್ರ ಬತ್ತಳಿಕೆಯ ಪ್ರದರ್ಶನ ಮಾಡಿದ್ದು, ದೇಶದ ರಕ್ಷಣೆಯಲ್ಲಿ ಸದಾಕಾಲ ಸರ್ವಸನ್ನದ್ಧವಾಗಿರುವ ಸಂದೇಶವನ್ನು ರವಾನಿಸಿದವು. ಭಾರತದ ಮಿಲಿಟರಿ ಶಕ್ತಿಯ ಆಕರ್ಷಕ ಪಥಸಂಚಲನಕ್ಕೆ ಇಂಡೋನೇಷ್ಯಾ ಅಧ್ಯಕ್ಷ ಪ್ರಬೋವೊ ಸುಬಿಯಾಂಟೊ ಹೆಮ್ಮೆ ವ್ಯಕ್ತಪಡಿಸಿದರು.

ಪರೇಡ್‌ನ ವಿಶೇಷಗಳು

- ಡಿಆರ್‌ಡಿಒ ಅಭಿವೃದ್ಧಿಪಡಿಸಿದ ಖಂಡಾಂತರ ಕ್ಷಿಪಣಿ 'ಪ್ರಳಯ್' ಈ ಬಾರಿಯ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಕಾಣಿಸಿಕೊಂಡಿತು
- ಕ್ಯಾಪ್ಟನ್ ಡಿಂಪಲ್ ಸಿಂಗ್ ಭಾಟಿ ಅವರು ಚಲಿಸುವ ಮೋಟಾರ್ ಸೈಕಲ್ ಮೇಲೆ ನಿಂತು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸೆಲ್ಯೂಟ್ ಮಾಡಿದರು.
- 'ಸಶಕ್ತ್ ಔರ್ ಸುರಕ್ಷಿತ್ ಭಾರತ್' ಥೀಮ್‌ನಲ್ಲಿ ಇದೇ ಮೊದಲ ಬಾರಿಗೆ ವಾಯುಸೇನೆ, ನೌಕಾಪಡೆ ಮತ್ತು ಭೂಸೇನೆಗಳು ಒಟ್ಟಾಗಿ ಕಾರ್ಯನಿರ್ವಹಿಸುವ ಸ್ತಬ್ಧಚಿತ್ರ ಪ್ರದರ್ಶಿಸಲಾಯಿತು.
- ಯುದ್ಧಭೂಮಿ ಕಣ್ಗಾವಲು ವ್ಯವಸ್ಥೆ 'ಸಂಜಯ್' ಮೊದಲ ಬಾರಿ ಪಥಸಂಚಲನದಲ್ಲಿ ಕಾಣಿಸಿಕೊಂಡಿತು.
- ಇಂಡೋನೇಷ್ಯಾದ 352 ಸದಸ್ಯರ ಪಥಸಂಚಲನ ಹಾಗೂ ಬ್ಯಾಂಡ್ ತಂಡ ಕರ್ತವ್ಯ ಪಥದಲ್ಲಿ ನಡೆದ ಪರೇಡ್‌ನಲ್ಲಿ ಪಾಲ್ಗೊಂಡಿತು.
- 5 ಸಾವಿರಕ್ಕೂ ಹೆಚ್ಚು ಜಾನಪದ ಮತ್ತು ಬುಡಕಟ್ಟು ಕಲಾವಿದರು ದೇಶದ ವಿವಿಧ ಭಾಗಗಳ 45 ರೀತಿಯ ನೃತ್ಯವನ್ನು ಪ್ರದರ್ಶಿಸಿದರು.
- ಸಂಗೀತ್ ನಾಟಕ ಅಕಾಡೆಮಿಯ ಸದಸ್ಯರು 'ಜಯತಿ ಜಯ ಮಹಾ ಭಾರತಮ್' ಗೀತೆಯನ್ನು 11 ನಿಮಿಷಗಳ ಕಾಲ ಹಾಡುವ ಮೂಲಕ ನೆರೆದವರನ್ನು ರಂಜಿಸಿದರು.

ದೆಹಲಿಯಲ್ಲಿ ನಡೆದ 76ನೇ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಗದಗ ಜಿಲ್ಲೆಯ ಹಿರಿಮೆ ಸಾರುವ 'ಲಕ್ಕುಂಡಿ'ಯ ಸ್ತಬ್ಧಚಿತ್ರ ನೋಡುಗರ ಗಮನ ಸೆಳೆಯಿತು.

ವಿವಿಧ ಕ್ಷೇತ್ರಗಳ ಹತ್ತು ಸಾವಿರ ವಿಶೇಷ ಅತಿಥಿಗಳು

ಜನರ ಪಾಲ್ಗೊಳ್ಳುವಿಕೆ ಹೆಚ್ಚಿಸಬೇಕು ಎಂಬ ಉದ್ದೇಶದಿಂದ ಈ ಬಾರಿ, ವಿವಿಧ ಕ್ಷೇತ್ರಗಳ ಜನರಿಗೆ ಆಹ್ವಾನ ನೀಡಲಾಗಿತ್ತು. ಸರಕಾರದ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಿರುವ ಗ್ರಾಮ ಪಂಚಾಯಿತಿಗಳ 300 ಸದಸ್ಯರನ್ನು ಆಹ್ವಾನಿಸಲಾಗಿತ್ತು. ಕೇಂದ್ರದ ಆಡಳಿತ ಸುಧಾರಣೆಗಳು ಮತ್ತು ಸಾರ್ವಜನಿಕ ಕುಂದುಕೊರತೆಗಳ ಇಲಾಖೆ ಈ ಕುರಿತ ಸ್ಪರ್ಧೆಗಳನ್ನು ಹಮ್ಮಿಕೊಂಡಿತ್ತು. ಪ್ರಾಕೃತಿಕ ವಿಕೋಪಗಳಲ್ಲಿ ಪರಿಹಾರ ಕಾರ್ಯ ಕೈಗೊಳ್ಳುವವರ ಪೈಕಿ 300 ಸಿಬ್ಬಂದಿ, ಜಲ ಸಂರಕ್ಷಣೆಗೆ ಹೋರಾಡುತ್ತಿರುವ 400 ಮಂದಿ, ಪ್ರಾಥಮಿಕ ಕೃಷಿ ಪತ್ತಿನ ಸಂಘಗಳ 200 ಪ್ರತಿನಿಧಿಗಳು, ಪಾನಿ ಸಮಿತಿಗಳ 400 ಪ್ರತಿನಿಧಿಗಳು, 400 ಸಮುದಾಯ ಸಂಪನ್ಮೂಲ ವ್ಯಕ್ತಿಗಳು, ಸ್ವಸಹಾಯ ಗುಂಪುಗಳ 200 ಸದಸ್ಯರು ಸೇರಿದಂತೆ ವಿವಿಧ ಕ್ಷೇತ್ರಗಳ 10 ಸಾವಿರಕ್ಕೂ ಹೆಚ್ಚು ಜನರು ಗಣರಾಜ್ಯೋತ್ಸವದ ಪಥಸಂಚಲನವನ್ನು ಕಣ್ತುಂಬಿಕೊಂಡರು. ಈ ವಿಶೇಷ ಅತಿಥಿಗಳು, ಪಥಸಂಚಲನ ವೀಕ್ಷಿಸಿದ ನಂತರ ರಾಷ್ಟ್ರೀಯ ಯುದ್ಧ ಸ್ಮಾರಕ, ಪ್ರಧಾನ ಮಂತ್ರಿಗಳ ಸಂಗ್ರಹಾಲಯ ಹಾಗೂ ದೆಹಲಿಯಲ್ಲಿರುವ ಪ್ರಮುಖ ಸ್ಥಳಗಳಿಗೆ ಭೇಟಿ ನೀಡಿದರು.

> ರಾಜ್ಯದಲ್ಲಿ 5 ಗ್ಯಾರಂಟಿ ಯೋಜನೆಗಳು ಯಶಸ್ವಿಯಾಗಿ ಜಾರಿಗೊಂಡಿದ್ದು, ಈ ಗ್ಯಾರಂಟಿ ಯೋಜನೆಗಳಿಂದಾಗಿ ಆರ್ಥಿಕ ಬಿಕ್ಕಟ್ಟು ಉಂಟಾದೀತು. ಅಭಿವೃದ್ಧಿ ಕುಂಠಿತವಾದೀತು ಎಂಬ ಭವಿಷ್ಯ ಸುಳ್ಳಾಗಿದೆ. – ಥಾವರ್ ಚಂದ್ ಗೆಹ್ಲೋಥ್

ಬೆಂಗಳೂರು: ರಾಜ್ಯಾದ್ಯಂತ 76ನೇ ಗಣರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಣೆ ಮಾಡಲಾಯಿತು. ಆಯಾ ಜಿಲ್ಲಾ ಕೇಂದ್ರ, ತಾಲೂಕುಗಳಲ್ಲಿ ಸಚಿವರು, ಶಾಸಕರು ಸೇರಿದಂತೆ ಗಣ್ಯರು ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು.

ಬೆಂಗಳೂರಿನ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ರಾಜ್ಯಪಾಲ ಥಾವರ್ ಗೆಹ್ಲೋಟ್ ಅವರು ಧ್ವಜಾರೋಹಣ ನೆರವೇರಿಸಿದರು. ಬಳಿಕ ಮಾತನಾಡಿದ ಅವರು, ರಾಜ್ಯ ಸರಕಾರದ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಬೆಳಕು ಚೆಲ್ಲಿದರು. ಆರ್ಥಿಕ ಸವಾಲು, ಅಭಿವೃದ್ಧಿಗೆ ಕೈಗೊಂಡಿರುವ ಕ್ರಮ, ಆರ್ಥಿಕ ಪ್ರಗತಿ, ನೂತನ ಶಿಕ್ಷಣ ನೀತಿ, ಸಂವಿಧಾನಕ್ಕೆ ಅನುಗುಣವಾಗಿ ತೆಗೆದುಕೊಳ್ಳುತ್ತಿರುವ ಕ್ರಮಗಳಿಗೆ ಪ್ರಶಂಸೆ ವ್ಯಕ್ತಪಡಿಸಿದರು.

'ಪಂಚ ಗ್ಯಾರಂಟಿ' ಯೋಜನೆಗಳಿಂದ ರಾಜ್ಯದಲ್ಲಿ ಯಾವುದೇ ಆರ್ಥಿಕ ಬಿಕ್ಕಟ್ಟು ಸೃಷ್ಟಿಯಾಗಿಲ್ಲ. ನನ್ನ ಸರಕಾರ ಆರ್ಥಿಕ-ಸಾಮಾಜಿಕ ಬೆಳವಣಿಗೆ ಶಕ್ತಿ ಮೀರಿ ಪ್ರಯತ್ನಿಸುತ್ತಿದೆ ಎಂದು ಅಭಿಪ್ರಾಯ ಪಟ್ಟರು.

ಭಾಷಣದ ಮುಖ್ಯಾಂಶ

- ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ನಿಯಂತ್ರಿಸುವಲ್ಲಿ ರಾಜ್ಯ ಪೊಲೀಸರು ಶ್ರಮಿಸಿದ್ದರಿಂದ ರಾಜ್ಯದ ಅಪರಾಧ ಸಂಖ್ಯೆ ಇಳಿಕೆಯಾಗಿದೆ.
- ರಾಜ್ಯದ 8.90 ಲಕ್ಷ ಹಾಲು ಉತ್ಪಾದಕರಿಗೆ 1124.15 ಕೋಟಿ ರು. ಪ್ರೋತ್ಸಾಹ ಧನ ಒದಗಿಸಲಾಗಿದೆ.
- 2024-25ನೇ ಸಾಲಿನಲ್ಲಿ ಜಲಜೀವನ ಮಿಷನ್ ಯೋಜನೆಯಲ್ಲಿ 6.75 ಲಕ್ಷ ಮನೆಗಳಿಗೆ ಕ್ರಿಯಾತ್ಮಕ 'ನಲ್ಲಿ' ಸಂಪರ್ಕ ಒದಗಿಸಲಾಗಿದೆ.
- 2024-25ರಲ್ಲಿ 2491 ಕಿ.ಮೀ. ರಾಜ್ಯ ಹೆದ್ದಾರಿ ಹಾಗೂ 3103 ಕಿ.ಮೀ. ಪ್ರಮುಖ ಜಿಲ್ಲಾ ರಸ್ತೆಗಳ ಸುಧಾರಣೆ ಮತ್ತು ನವೀಕರಣ ಪೂರ್ಣಗೊಂಡಿದೆ.
- 2024ರ ಏಪ್ರಿಲ್‌ನಿಂದ ಸೆಪ್ಟೆಂಬರ್ ರವರೆಗೆ 88,853 ಮಿಲಿಯನ್ ಡಾಲರ್ ರಫ್ತು ಮಾಡುವ ಮೂಲಕ ರಫ್ತಿನಲ್ಲಿ ಮೊದಲನೇ ಸ್ಥಾನದಲ್ಲಿದೆ.

ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಭಾನುವಾರ ನಡೆದ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ತೆರೆದ ಜೀಪಿನಲ್ಲಿ ಸಂಚರಿಸಿ ಪರೇಡ್ ಪರಿವೀಕ್ಷಣೆ ನಡೆಸಿದರು.

ಕರಡು ಮಾರ್ಗಸೂಚಿ ಪ್ರಕಟ, ಫೆ.14ರ ವರೆಗೆ ಸಲಹೆಗಳಿಗೆ ಆಹ್ವಾನ

ಒಂದು ರಾಷ್ಟ್ರ, ಒಂದೇ ಸಮಯ

ದೆಹಲಿ: ಕೇಂದ್ರ ಸರಕಾರವು 'ಒಂದು ರಾಷ್ಟ್ರ; ಒಂದೇ ಸಮಯ' ನೀತಿ ಜಾರಿಗೆ ನಿರ್ಧರಿಸಿದೆ.

ಏಕರೂಪದ ಭಾರತೀಯ ಕಾಲಮಾನ (ಐಎಸ್‌ಟಿ-ಇಂಡಿಯನ್ ಸ್ಟ್ಯಾಂಡರ್ಡ್ ಟೈಮ್) ನಿಗದಿಗೆ ಸಂಬಂಧಿಸಿದಂತೆ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯವು ಕರಡು ಮಾರ್ಗಸೂಚಿ ಪ್ರಕಟಿಸಿದ್ದು, ಈ ಕುರಿತು ಫೆಬ್ರವರಿ 14ರ ವರೆಗೆ ಸಾರ್ವಜನಿಕರಿಂದ ಸಲಹೆಗಳನ್ನು ಆಹ್ವಾನಿಸಿದೆ.

ದೇಶದೊಳಗಿನ ವಿವಿಧ ಕಾಲಮಾನಗಳು ಗೊಂದಲ ಸೃಷ್ಟಿಸುವ ಸಾಧ್ಯತೆಯಿದೆ. ಹಾಗಾಗಿ, ಒಂದೇ ಸಮಯದ ಪರಿಪಾಲನೆಗೆ ಒಂದೇ ಮಾನದಂಡ ಅನುಸರಿಸುವುದಕ್ಕೆ ಕಾನೂನು ಚೌಕಟ್ಟು ರೂಪಿಸಲು ಮುಂದಾಗಿದೆ. ಇದರಿಂದ ದೇಶದ ದೂರಸಂಪರ್ಕ, ಬ್ಯಾಂಕಿಂಗ್, ರಕ್ಷಣೆ, 5ಜಿ ಸಂಪರ್ಕ ಮತ್ತು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ವ್ಯವಸ್ಥೆಯು ಕಾರ್ಯ ನಿರ್ವಹಿಸುವುದು ಸುಲಭವಾಗುತ್ತದೆ ಎಂದು ಹೇಳಲಾಗಿದೆ.

ವಾಣಿಜ್ಯ, ಸಾರಿಗೆ, ಸಾರ್ವಜನಿಕ ಆಡಳಿತ, ಕಾನೂನು, ಹಣಕಾಸು ಕಾರ್ಯಾಚರಣೆ, ಅಧಿಕೃತ ದಾಖಲೆ ಸೇರಿ ಎಲ್ಲ ವಲಯಗಳಲ್ಲಿ ಏಕರೂಪವಾಗಿ ಭಾರತೀಯ ಕಾಲಮಾನ ಪದ್ಧತಿ ಅನುಸರಿಸಬೇಕಿದೆ. → 4



- ದೇಶದೊಳಗಿನ ವಿವಿಧ ಕಾಲಮಾನಗಳು ಗೊಂದಲ ಸೃಷ್ಟಿಸುವ ಸಾಧ್ಯತೆ ಇರುವುದರಿಂದ ಐಎಸ್‌ಟಿ ನಿಗದಿಗೆ ನಿರ್ಧಾರ
- ಒಂದೇ ಸಮಯದ ಪರಿಪಾಲನೆಗೆ ಒಂದೇ ಮಾನದಂಡ ಅನುಸರಿಸುವುದಕ್ಕೆ ಕಾನೂನು ಚೌಕಟ್ಟು ರೂಪಿಸಲು ತೀರ್ಮಾನ
- ದೂರಸಂಪರ್ಕ, ಬ್ಯಾಂಕಿಂಗ್, ರಕ್ಷಣೆ, 5ಜಿ ಸಂಪರ್ಕ, ಎಐ ತಂತ್ರಜ್ಞಾನ ವ್ಯವಸ್ಥೆಯು ಕಾರ್ಯ ನಿರ್ವಹಿಸುವುದು ಸುಲಭ
- ಸರಕಾರಿ ಕಚೇರಿಗಳು ಹಾಗೂ ಸಾರ್ವಜನಿಕ ಸಂಸ್ಥೆಗಳು ಭಾರತೀಯ ಕಾಲಮಾನ ನಮೂದಿಸುವುದು ಕಡ್ಡಾಯವಾಗಲಿದೆ

ಏ.1ರಿಂದ ಏಕೀಕೃತ ಪಿಂಚಣಿ ಯೋಜನೆ ಜಾರಿ

ದೆಹಲಿ: ಕೇಂದ್ರದ ಸರಕಾರಿ ನೌಕರರಿಗೆಂದು ರೂಪಿಸಿರುವ 'ಏಕೀಕೃತ ಪಿಂಚಣಿ ಯೋಜನೆ' (ಯುಪಿಎಸ್) ಏ.1ರಿಂದ ಜಾರಿಗೆ ಬರಲಿದೆ ಎಂದು ಕೇಂದ್ರ ಸರಕಾರದ ಪ್ರಕಟಣೆ ತಿಳಿಸಿದೆ. ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಯಡಿ ಕೇಂದ್ರ ಸರಕಾರದ ನೌಕರರಿಗೆ 'ಯುಪಿಎಸ್' ಮೌಲ್ಯವರ್ಧಿತ ಆಯ್ಕೆಯಾಗಿ ಪರಿಚಯಿಸಲು ಸರಕಾರ ಹಿಂದೆಯೇ ನಿರ್ಧರಿಸಿತ್ತು. ಈ ಸಂಬಂಧ ಶನಿವಾರ ಅಧಿಸೂಚನೆ ಹೊರಡಿಸಿದ್ದು, ರಾಜ್ಯ ಸರಕಾರಗಳು ಕೂಡ ಈ ಯೋಜನೆ ಜಾರಿಗೆ ತರಬಹುದು ಎಂದು ಸೂಚಿಸಿದೆ.

ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಸಿದ್ಧ



ಬೆಂಗಳೂರು: ರಾಜ್ಯ ಬಿಜೆಪಿಯಲ್ಲಿ ನಡೆಯುತ್ತಿರುವ ಹಲವು ವಿವಾದಗಳ ನಡುವೆ 'ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಸಿದ್ಧ' ಎನ್ನುವ ಮೂಲಕ ಮತ್ತೊಮ್ಮೆ ವಿಜಯೇಂದ್ರ ವಿರುದ್ಧ ಹೋರಾಡಲು ಬಸನಗೌಡ ಪಾಟೀಲ್ ಯತ್ನಾಳ್ ಮುಂದಾಗಿದ್ದಾರೆ. ತಮ್ಮವರು ಒಪ್ಪಿದರೆ ಚುನಾವಣೆಗೆ ಸ್ಪರ್ಧಿಸಲು ಸಿದ್ಧ. ಸ್ಪರ್ಧೆ ಖಚಿತ.. ಗೆಲುವು ನಿಶ್ಚಿತ.. ಠೇವಣಿ ಉಚಿತ. ನಮ್ಮ ಕೋರ್ ಕಮಿಟಿ ಇದೆ. ಅಲ್ಲಿ ಸೂಕ್ತ ಅಭ್ಯರ್ಥಿ ಬಗ್ಗೆ ಚರ್ಚಿಸುತ್ತೇವೆ. ನನ್ನ ಹೆಸರು

ಮೆಟ್ರೋ ಪ್ರಯಾಣ ದರ ಏರಿಕೆಯಿಂದ ರಿಲೀಫ್

ಬೆಂಗಳೂರು: ನಮ್ಮ ಮೆಟ್ರೋ ಪ್ರಯಾಣ ದರ ಹೆಚ್ಚಳದಿಂದ ಪ್ರಯಾಣಿಕರಿಗೆ ತಾತ್ಕಾಲಿಕ ಪರಿಹಾರ ದೊರಕಿದ್ದು, ಸದ್ಯ ಮೆಟ್ರೋ ದರ ಏರಿಕೆ ಮುಂದಕ್ಕೆ ಹೋಗಿದೆ.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್ ಪ್ರಯಾಣದರ ಏರಿಕೆಯ ಬೆನ್ನಲ್ಲೇ ನಮ್ಮ ಮೆಟ್ರೋ ಪ್ರಯಾಣ ದರ ಹೆಚ್ಚಳ ಮಾಡಲು ಬಿಎಂಆರ್‌ಸಿಎಲ್ ನಿರ್ಧರಿಸಿತ್ತು. ಈ ನಿಟ್ಟಿನಲ್ಲಿ ಸಮಿತಿ ನಿರ್ಮಾಣ ಮಾಡಿ ಸಾರ್ವಜನಿಕರ ಅಭಿಪ್ರಾಯವನ್ನೂ ಕೇಳಿತ್ತು. ಅದರಂತೆ ವರ್ಷಾರಂಭದ ವೇಳೆ ಮೆಟ್ರೋ ಪ್ರಯಾಣ ದರ ಹೆಚ್ಚಳಕ್ಕೂ ಮುಂದಾಗಿತ್ತು. ಆದರೆ ದರ ಏರಿಕೆಯ ಸಂಬಂಧ ನಿರ್ಧಾರ ಪ್ರಕಟಿಸುವ ಮುನ್ನ ಕೇಂದ್ರ ತಂಡವು ಮತ್ತೊಂದು ವರದಿ ಕೇಳಿದೆ. ವರದಿ ಸಲ್ಲಿಕೆ ಬಳಿಕ ಎಲ್ಲವೂ ನಿರ್ಧಾರವಾಗಿ ದರ ಏರಿಕೆ ಅಂತಿಮವಾಗಲು ಸ್ವಲ್ಪ ಸಮಯ ಬೇಕಾಗುವ ಸಾಧ್ಯತೆಯಿದೆ ಎನ್ನಲಾಗಿದೆ. ಹೀಗಾಗಿ ದರ ಏರಿಕೆಯ ಘೋಷಣೆಯನ್ನು ತಾತ್ಕಾಲಿಕವಾಗಿ ಮುಂದಕ್ಕೆ ಹಾಕಲಾಗಿದೆ.

- ದರ ಏರಿಕೆಯ ಸಂಬಂಧ ನಿರ್ಧಾರ ಪ್ರಕಟಿಸುವ ಮುನ್ನ ವರದಿ ಕೇಳಿದ ಕೇಂದ್ರ ತಂಡ
- ವರದಿ ಸಲ್ಲಿಕೆಗೆ ಸಮಯದ ಅಗತ್ಯವಿರುವುದರಿಂದ ದರ ಏರಿಕೆ ತಾತ್ಕಾಲಿಕವಾಗಿ ಮುಂದಕ್ಕೆ

ಬ್ಯಾಂಕಾಕ್: 1 ವಾರ ಉಚಿತ ಸಾರಿಗೆ

ಬ್ಯಾಂಕಾಕ್: ಥೈಲ್ಯಾಂಡ್ ರಾಜಧಾನಿ ಬ್ಯಾಂಕಾಕ್ ನಗರದಲ್ಲಿ ವಾಯು ಮಾಲಿನ್ಯ ಮಿತಿ ಮೀರಿದ್ದು, ಪಿಎಂ 2.5ರ ಮಟ್ಟಕ್ಕೇರಿದೆ. ಪರಿಣಾಮ ಬ್ಯಾಂಕಾಕ್ ನಗರ ಮತ್ತು 31 ಜಿಲ್ಲೆಗಳಲ್ಲಿನ 350 ಶಾಲೆಗಳನ್ನು ಅನಿರ್ದಿಷ್ಟಾವಧಿವರೆಗೆ ಮುಚ್ಚಲಾಗಿದೆ. ವಾಹನ ಸಂಚಾರದ ಮೇಲೆಯೂ ನಿರ್ಬಂಧ ವಿಧಿಸಲಾಗಿದೆ. ವಾಯು ಮಾಲಿನ್ಯ ತಗ್ಗಿಸುವುದಕ್ಕಾಗಿ ಥೈಲ್ಯಾಂಡ್ ಸರಕಾರ ಒಂದು ವಾರ ಕಾಲ ಸಾರ್ವಜನಿಕರಿಗೆ ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಿಕೊಡುತ್ತಿದೆ. ಬ್ಯಾಂಕಾಕ್ ನಗರದಲ್ಲಿನ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳು, ಮೆಟ್ರೊಗಳು, ಸ್ಕೈ ರೈಲ್‌ಗಳಲ್ಲಿ ಒಂದು ವಾರ ಜನರ ಪೂರ್ಣ ಉಚಿತವಾಗಿ ಸಂಚರಿಸಬಹುದಾಗಿದೆ. ಶನಿವಾರದಿಂದಲೇ ಈ ಉಚಿತ ಪ್ರಯಾಣ ಸೌಲಭ್ಯ ಜಾರಿಗೊಂಡಿದೆ.

ಸಿನ್ನರ್ ಮುಡಿಗೆ 2ನೇ ಬಾರಿ ಗ್ರ್ಯಾನ್‌ಸ್ಲಾಮ್

ಮೆಲ್ಬರ್ನ್: ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಅವರನ್ನು ಯಾನಿಕ್ ಸಿನ್ನರ್ ಸೋಲಿಸಿದರು. ಆ ಮೂಲಕ ಎರಡು ಬಾರಿ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದ ಇಟಲಿಯ ಮೊದಲನೇ ಆಟಗಾರ ಎನ್ನುವ ಖ್ಯಾತಿಗೆ ಸಿನ್ನರ್ ಪಾತ್ರರಾಗಿದ್ದಾರೆ. ಗ್ರ್ಯಾನ್‌ಸ್ಲಾಮ್ ಫೈನಲ್ ಪಂದ್ಯದಲ್ಲಿ ಜ್ವರೇವ್ ಅವರನ್ನು 6-3,7-6 (4) ಮತ್ತು 6-3 ಅಂಕಗಳ ಅಂತರದಿಂದ ಸೋಲಿಸಿದರು.

ಡಿಸಿ ಕಚೇರಿಯಲ್ಲಿ ಸಹಾಯವಾಣಿ ಆರಂಭ



ಬೆಂಗಳೂರು: ಜನರಿಗೆ ಖಾಸಗಿ ಹಣಕಾಸು ಸಂಸ್ಥೆಗಳ ಕಿರುಕುಳ ಹೆಚ್ಚುತ್ತಿದ್ದು, ಜನರು ಅಂತಹವರ ವಿರುದ್ಧ ದೂರು ನೀಡಿದ್ದಲ್ಲಿ ತಕ್ಷಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು. ನಿಯಮ ಬಾಹಿರವಾಗಿ ಮೈಕ್ರೋಫೈನಾನ್ಸ್ ಸಂಸ್ಥೆಗಳು ಸಾಲ ವಸೂಲಿ ಮಾಡುತ್ತಿದ್ದರೆ ಕ್ರಮ ವಹಿಸಲು ಸೂಚನೆ ನೀಡಲಾಗಿದೆ. ಮೈಕ್ರೋ ಫೈನಾನ್ಸ್ ಸಂಸ್ಥೆ ಅಥವಾ ಲೇವಾದೇವಿಗಾರರ ನೀಡುವ ತೊಂದರೆಗಳ ವಿರುದ್ಧ ದೂರು ನೀಡಲು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಹಾಯ ವಾಣಿ ತೆರೆಯಲಾಗಿದೆ ಎಂದರು.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಆಸ್ಪತ್ರೆಯಿಂದ ಬಿಡುಗಡೆ

ಬೆಳಗಾವಿ: ಕಾರು ಅಪಘಾತದಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಭಾನುವಾರ ಆಸ್ಪತ್ರೆಯಿಂದ ಬಿಡುಗಡೆಯಾದರು. ಜ.14ರಂದು ನಸುಕಿನಲ್ಲಿ ಸಚಿವರ ಕಾರು ಚನ್ನಮ್ಮನ ಕಿತ್ತೂರು ತಾಲೂಕಿನ ಅಂಬಡಗಟ್ಟಿ ಬಳಿ ಮರಕ್ಕೆ ಡಿಕ್ಕಿ ಹೊಡೆದಿತ್ತು. ಬೆನ್ನು ಮೂಳೆಗೆ ಪೆಟ್ಟಾಗಿದ್ದರಿಂದ ವಿಜಯಾ ಆಸ್ಪತ್ರೆಯಲ್ಲಿ ಕಳೆದ 13 ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು. ಆರೋಗ್ಯದಲ್ಲಿ ಚೇತರಿಕೆ ಕಂಡಿದ್ದರಿಂದ ಆಸ್ಪತ್ರೆಯಿಂದ ಬಿಡುಗಡೆಯಾಗಿ ಮನೆಗೆ ತೆರಳಿದರು.

16 ಸಾವಿರ ಅರ್ಜಿ ಸಲ್ಲಿಸಿದ ಭೂಪ, 9 ಸಾವಿರ ತಿರಸ್ಕೃತ, 10 ಸಾವಿರ ಮಂದಿಗೆ ನೋಟಿಸ್

20 ಪ್ರಭಾವಿ ಆರ್‌ಟಿಐ ಕಾರ್ಯಕರ್ತರಿಗೆ ನಿಷೇಧ

• ಶಿವಕುಮಾರ್ ಬೆಳ್ಳಿತಟ್ಟೆ

ಬೆಂಗಳೂರು: ರಾಜ್ಯ ಮಾಹಿತಿ ಹಕ್ಕು ಆಯೋಗದಲ್ಲಿ 8 ಆಯುಕ್ತರ ಹುದ್ದೆಗಳು ಖಾಲಿಯಾಗಿದ್ದರೂ ಸದ್ದಿಲ್ಲದೆ ಅನೇಕ ಸಾಧನೆಗಳು ದಾಖಲಾಗಿವೆ.

ಕಳೆದ ಎರಡು ವರ್ಷಗಳಲ್ಲಿ ಆಯೋಗದಲ್ಲಿ ಸುಮಾರು 6 ಸಾವಿರ ಅರ್ಜಿಗಳ ಇತ್ಯರ್ಥವಾಗಿದ್ದರೆ, ಕಳೆದ ನಾಲ್ಕೇ ದಿನಗಳಲ್ಲಿ ಸುಮಾರು 6 ಸಾವಿರಕ್ಕೂ ಹೆಚ್ಚು ಅರ್ಜಿಗಳನ್ನು ಇತ್ಯರ್ಥಗೊಳಿಸಲಾಗಿದೆ. ಅದರಲ್ಲೂ ಮುಖ್ಯ ಆಯುಕ್ತರ ಒಂದೇ ಪೀಠದಲ್ಲಿ ಸುಮಾರು 4 ಸಾವಿರಕ್ಕೂ ಅಧಿಕ ಅರ್ಜಿಗಳನ್ನು ವಿಲೇವಾರಿ ಮಾಡಿ ಸಮಸ್ಯೆಗಳಿಗೆ ಒಂದು ಹಂತದ ಪರಿಹಾರ ನೀಡಲಾಗಿದೆ. ಇದೆಲ್ಲಕ್ಕಿಂತ ಅಚ್ಚರಿ ವಿಚಾರವೆಂದರೆ, ಆರ್‌ಟಿಐ ಇತಿಹಾಸದಲ್ಲೇ ಪ್ರಥಮ ಬಾರಿಗೆ 12ಕ್ಕೂ ಹೆಚ್ಚು ಮಂದಿಯನ್ನು ಮಾಹಿತಿ ಆಯೋಗದಿಂದ ನಿಷೇಧಿಸಿ ಕಪ್ಪು ಪಟ್ಟಿಗೆ ಸೇರಿಸಲಾಗಿದೆ. ಅಂತಹವರು ಆರ್‌ಟಿಐ ಮೂಲಕ ಇನ್ನುಂದೆ ಅರ್ಜಿ ಸಲ್ಲಿಸುವಂತಿಲ್ಲ. ಮೇಲ್ಮನವಿಯನ್ನೂ ಹಾಕುವಂತಿಲ್ಲ. ಇದು ಸಾಧ್ಯವಾಗಿದ್ದು ದೇಶದಲ್ಲೇ ಪ್ರಥಮ ಎನ್ನುವಂತೆ ಮುಖ್ಯ ಆಯುಕ್ತರು ನಡೆಸಿದ ಅರ್ಜಿ ವಿಲೇವಾರಿಯ ವಿಶೇಷ ಅಭಿಯಾನದ ಪ್ರಯೋಗದಿಂದ.

ಕಳೆದ ಎರಡು ವರ್ಷಗಳ ಅವಧಿಯಲ್ಲಿ ಮಾಹಿತಿ ಕೋರಿಕೆಗೆ ಸಂಬಂಧಿಸಿದಂತೆ ಸುಮಾರು 57 ಸಾವಿರಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದು, ಇವುಗಳ ವಿಲೇವಾರಿ ಮತ್ತು ಇತ್ಯರ್ಥ ಕುಂಟುತ್ತ ಸಾಗಿತ್ತು. ಇದನ್ನು ಮನಗಂಡ ಮುಖ್ಯ ಆಯುಕ್ತ ಡಾ.ಎಚ್.ಸಿ.ಸತ್ಯನ್ ಅವರು ಅರ್ಜಿಗಳ ವಿಲೇವಾರಿಯ ವಿಶೇಷ ಅಭಿಯಾನ ಆರಂಭಿಸಿದ್ದಾರೆ. ಈ ಮೂಲಕ ದೇಶದಲ್ಲಿರುವ 11 ಮಾಹಿತಿ ಹಕ್ಕು ಆಯೋಗದ ಪೀಠಗಳ ಪೈಕಿ ವಿಶೇಷ ಅಭಿಯಾನದೊಂದಿಗೆ ವಿಶೇಷ ಪೀಠ ಸ್ಥಾಪಿಸಿ ಅರ್ಜಿಗಳ ವಿಲೇವಾರಿ ನಡೆಸುತ್ತಿರುವ ಏಕೈಕ ರಾಜ್ಯ ಕರ್ನಾಟಕ ಎನ್ನುವಂತಾಗಿದೆ. → 4

- ಕಳೆದ ನಾಲ್ಕೇ ದಿನಗಳಲ್ಲಿ ಸುಮಾರು 6 ಸಾವಿರಕ್ಕೂ ಹೆಚ್ಚು ಅರ್ಜಿಗಳನ್ನು ಇತ್ಯರ್ಥ
- ಮುಖ್ಯ ಆಯುಕ್ತರ ಒಂದೇ ಪೀಠದಲ್ಲಿ 4 ಸಾವಿರಕ್ಕೂ ಅಧಿಕ ಅರ್ಜಿಗಳ ವಿಲೇವಾರಿ
- 12ಕ್ಕೂ ಹೆಚ್ಚು ಮಂದಿಯನ್ನು ಮಾಹಿತಿ ಆಯೋಗದಿಂದ ನಿಷೇಧಿಸಿ ಕಪ್ಪು ಪಟ್ಟಿಗೆ ಸೇರಿಸಲಾಗಿದೆ
- ಮಾಹಿತಿ ನೀಡದೆ ಅರ್ಜಿದಾರರನ್ನು ಅಲೆದಾಡಿಸುವ 10 ಸಾವಿರ ಅಧಿಕಾರಿಗಳಿಗೆ ನೋಟಿಸ್

> ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಜಾರಿಗೊಳಿಸಿದ ಮಾಹಿತಿ ಹಕ್ಕು ಕಾಯ್ದೆಯನ್ನು ಸರಕಾರದ ಆಡಳಿತ ದೋಷ ಸರಿಪಡಿಸಲು ಬಳಸಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಆರ್‌ಟಿಐ ಅರ್ಜಿದಾರರು ಹಾಗೂ ಅಧಿಕಾರಿಗಳು ಕೆಲಸ ಮಾಡಬೇಕಿದೆ. ಆದರೆ ಆಗುತ್ತಿಲ್ಲ. ಈ ಬಗ್ಗೆ ಜಾಗೃತಿ ಮೂಡಿಸಿ ಅರ್ಜಿಗಳನ್ನು ಇತ್ಯರ್ಥಗೊಳಿಸಲು ವಿಶೇಷ ಅಭಿಯಾನ ಆರಂಭಿಸಲಾಗಿದೆ. ಅದು ಯಶಸ್ವಿಯೂ ಆಗುತ್ತಿದೆ.
>
> – ಡಾ.ಎಚ್.ಸಿ.ಸತ್ಯನ್
> ರಾಜ್ಯ ಮಾಹಿತಿ ಹಕ್ಕು ಆಯೋಗದ ಮುಖ್ಯ ಆಯುಕ್ತರು

57,000 ಅರ್ಜಿ ಸಲ್ಲಿಕೆ

ರಾಜ್ಯದಲ್ಲಿ ಮಾಹಿತಿ ಮತ್ತು ಮಾಹಿತಿ ನಿರಾಕರಿಸಿದವರ ವಿರುದ್ಧ ಮೇಲ್ಮನವಿ ಸೇರಿ ಕಳೆದ ಎರಡು ವರ್ಷಗಳಲ್ಲಿ 57,000 ಅರ್ಜಿಗಳು ಸಲ್ಲಿಕೆಯಾಗಿವೆ. ಇವುಗಳಲ್ಲಿ 10,000 ಅರ್ಜಿಗಳು ನೈಜ ಸಮಸ್ಯೆಗಳನ್ನು ಬಿಂಬಿಸುವ ಹಾಗೂ ನಿಜವಾದ ಕುಂದು ಕೊರತೆಗಳನ್ನು ಬಗೆಹರಿಸಿಕೊಳ್ಳುವುದಕ್ಕೆ ಸಂಬಂಧಿಸಿದ್ದಾಗಿವೆ. ಆದರೆ ಉಳಿದ 45,000ಕ್ಕೂ ಹೆಚ್ಚು ಅರ್ಜಿಗಳು ಬಹುತೇಕ ಆರ್‌ಟಿಐ ಕಾರ್ಯಕರ್ತರಿಂದಲೇ ಸಲ್ಲಿಕೆಯಾಗಿರುವ ಅರ್ಜಿಗಳಾಗಿವೆ. ಅಂದರೆ ಒಬ್ಬರೇ 5 ಸಾವಿರದಿಂದ 10 ಸಾವಿರದವರೆಗೂ ಸಲ್ಲಿಸಿರುವ ಅರ್ಜಿಗಳು ಆಯೋಗದಲ್ಲಿ ಇತ್ಯಾರ್ಥವಾಗದೆ ಉಳಿದಿವೆ. ಹೀಗಾಗಿ ಮಾಹಿತಿ ಆಯೋಗ ಒಬ್ಬರೇ 5 ಸಾವಿರದಿಂದ 10 ಸಾವಿರವರೆಗೂ ಸಲ್ಲಿಸಿರುವ ಅರ್ಜಿಗಳನ್ನು ಪ್ರತ್ಯೇಕಗೊಳಿಸಿ ಇತ್ಯರ್ಥಗೊಳಿಸಲು ಸಜ್ಜಾಗಿದೆ. ಹೀಗೆ ಅತಿ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ ಸುಮಾರು 300 ಮಂದಿಯನ್ನು ಗುರುತಿಸಲಾಗಿದ್ದು, ಇವರಲ್ಲಿ ಬಹುತೇಕ ಮಂದಿ ಪ್ರಭಾವಿಗಳಾಗಿದ್ದು, ಅವರ ಹಿಂದೆ ರಾಜಕಾರಣಿಗಳು, ಅಧಿಕಾರಿಗಳು ಇರಬಹುದೆಂದೂ ಆಯೋಗ ಶಂಕಿಸಿದೆ. ಏಕೆಂದರೆ, ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸಲ್ಲಿಸಿರುವ ಅರ್ಜಿಗಳಲ್ಲಿ ದುರುದ್ದೇಶದ ಪ್ರಶ್ನೆಗಳೇ ಹೆಚ್ಚಾಗಿದ್ದು, ಸಾರ್ವಜನಿಕ ಹಿತಾಸಕ್ತಿ ಇಲ್ಲದಿರುವುದನ್ನು ಗುರುತಿಸಲಾಗಿದೆ. ಇಂತಹ ಅರ್ಜಿಗಳಿಂದ ಅಧಿಕಾರಿಗಳ ಶೇ.98ರಷ್ಟು ಸಮಯ ವ್ಯರ್ಥವಾಗುತ್ತಿದೆ ಎಂದು ಆಯುಕ್ತರು ಹೇಳಿದ್ದಾರೆ.

ಸೊಂಪಾದ ಪುಟಗಳು

ಬಿಜೆಪಿ ಭಿನ್ನರಿಗೆ ಚುನಾವಣೆಯ ಕನಸು?
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಪ್ರಶಸ್ತಿ, ಪ್ರಶಸ್ತಿ! ಕೊಡುವುದು ಯಾವಾಗ...?
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ನಿಮ್ಮ ಯೋಚನೆ ಅತ್ಯಂತ ಪ್ರಭಾವಶಾಲಿ ಮತ್ತು ಪರಿಣಾಮಕಾರಿ ಎಂಬುದು ನಿಮಗೆ ಸಾಬೀತಾದರೆ, ನೀವು ನಿಮ್ಮ ಜೀವನದಲ್ಲಿ ಎಂದೆಂದೂ ನಕಾರಾತ್ಮಕ ಯೋಚನೆಯನ್ನು ತಾಳುವುದಿಲ್ಲ.

ವಕ್ರತುಂಡೋಕ್ತಿ

ಜೀವನದಲ್ಲಿ ಪ್ರತಿನಿತ್ಯ ಹಲವಾರು ಪಾಠಗಳನ್ನು ಕಲಿಸಿಯೂ, ತನ್ನನ್ನು ಗುರು ಎಂದು ಹೇಳಿಕೊಳ್ಳಲು ಇಚ್ಛಿಸದ ವ್ಯಕ್ತಿಯಿದ್ದರೆ, ಅದು ಹೆಂಡತಿ ಮಾತ್ರ.

ಕ್ಯಾನ್ಸರ್ ಗೆದ್ದು ತವರಿಗೆ ಬಂದ ಶಿವರಾಜ್ ಕುಮಾರ್

ಬೆಂಗಳೂರು: ಅಮೆರಿಕದಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ನಟ ಶಿವರಾಜ್ ಕುಮಾರ್ ಅವರು ಗುಣಮುಖರಾಗಿ ಭಾನುವಾರ ಬೆಂಗಳೂರಿಗೆ ವಾಪಸ್ ಆಗಿದ್ದಾರೆ. 'ಅಮೆರಿಕಕ್ಕೆ ಹೋಗಬೇಕಾದರೆ ತುಂಬಾ ಎಮೋಷನಲ್ ಆಗಿದ್ದೆ, ಭಯವೂ ಕಾಡುತ್ತಿತ್ತು. ಏನೇ ಬಂದರೂ ಎದುರಿಸೋಣ ಎಂದುಕೊಂಡೆ. ವಿಮಾನದಲ್ಲಿ ಪ್ರಯಾಣಿಸುವಾಗಲೂ ನನಗೆ ಕೊಂಚ ಅಳುಕಿತ್ತು. ದೇವರ ದಯೆ, ಎಲ್ಲರ ಹಾರೈಕೆಯಿಂದ ಎಲ್ಲವೂ ಯಶಸ್ವಿಯಾಗಿದೆ. ನಾನೀಗ ಚೇತರಿಸಿಕೊಂಡಿದ್ದೇನೆ ಎಂದು ಪ್ರತಿಕ್ರಿಯಿಸಿದ್ದಾರೆ.

ಮಾತಂದ್ರೆ ಮಾತು

ಬಿಜೆಪಿಯಲ್ಲಿ ಈಗ ಎಲ್ಲವೂ ಸರಿ ಇಲ್ಲ. ಅಲ್ಲಿ ಮನೆಯೊಂದು ಮೂರು ಬಾಗಿಲಲ್ಲ, ಆರು ಬಾಗಿಲು ಆಗಿವೆ. ಅಲ್ಲಿ ಶ್ರೀರಾಮುಲು ಮಾತ್ರವಲ್ಲ, ಹಲವರಿಗೆ ಸಮಸ್ಯೆಗಳಿವೆ. ಇತ್ತೀಚಿನ ದಿನಗಳಲ್ಲಿ ಮತ್ತಷ್ಟು ಹೊಸ ಸಮಸ್ಯೆಗಳು ಹುಟ್ಟುತ್ತಲೇ ಇವೆ.

- ಲಕ್ಷ್ಮಣ ಸವದಿ
ಶಾಸಕ

ಫನ್‌ತರಂಗ

- ರಘುಪತಿ ಶೃಂಗೇರಿ -

ಸಮಾಚಾರ ಸಣ್ಣದಲ್ಲ

ಕಾಣೆಯಾದವರ ಪತ್ತೆಗೆ ಪೊಲೀಸ್ ಮನವಿ

ಕಾರವಾರ: ಪ್ರವೀಣ ಪುರುಷೋತ್ತಮ ಗೋವೆಕರ 43 ವರ್ಷ ಘೋರ್ಲೆಭಾಗ, ಹೊಸಾಳಿ, ಕಾರವಾರ ತಾಲೂಕು ಈತನು 3ನಂವೆಬರ್ 2024ರಂದು ರಾತ್ರಿ 7ಗಂಟೆಗೆ ಹೊಸಾಳಿಯ ಘೋರ್ಲೆಭಾಗದಲ್ಲಿರುವ ತನ್ನ ಅಕ್ಕ ಮನೆಯಿಂದ ತನ್ನ ಮನೆಗೆ ಹೋಗುತ್ತೇನೆ ಎಂದು ಹೇಳಿ ಹೋದವನು ಈವರೆಗೆ ಮನೆಗೂ ಬಾರದೆ ಎಲ್ಲಿಗೋ ಹೋಗಿ ಕಾಣೆಯಾಗಿದ್ದಾನೆ. ಕಾಣೆಯಾದ ವ್ಯಕ್ತಿಯ ಗೋಲು ಮುಖ, ಗೋಧಿ ಮೈ ಬಣ್ಣ, ಸಾಧರಣಾ ಮೈ ಕಟ್ಟು, ಬಲಗೈ ಒಳ ಭಾಗದಲ್ಲಿ ಓಮ್ ಅಚ್ಚೆ ಗುರುತು ಇರುತ್ತದೆ. 5.6 ಅಡಿ ಎತ್ತರ, ಚಾಕಲೇಟ್ ಬಣ್ಣದ ಹಾಫ್ ಟಿ- ಶರ್ಟ್, ಕಪ್ಪು ಬಣ್ಣದ ಹಾಫ್ ಪ್ಯಾಂಟ್ ಧರಿಸಿರುತ್ತಾನೆ. ಮಾನಸಿಕವಾಗಿ ಮಂದ ಬುದ್ದಿಯವನಾಗಿದ್ದು ಕೊಂಕಣಿ ಭಾಷೆ ಮಾತನಾಡುತ್ತಾನೆ. ಇವರು ಸಾರ್ವಜನಿಕರಿಗೆ ಕಂಡು ಬಂದಲ್ಲಿ ಚಿತ್ತಾಕುಲಾ ಪೊಲೀಸ್ ಠಾಣಾ ದೂರವಾಣಿ ಸಂಖ್ಯೆ: 08382-265733 ಮೊ:9480805248, ಉತ್ತರ ಕನ್ನಡ ಜಿಲ್ಲಾ ಪೊಲೀಸ್ ನಿಯಂತ್ರಣ ಕೊಠಡಿ ದೂರವಾಣಿ ಸಂಖ್ಯೆ: 08382-22655ಟನ್ನು ಸಂಪರ್ಕಿಸುವಂತೆ ಚಿತ್ತಾಕುಲಾ ಪೊಲೀಸ್ ಠಾಣೆಯ ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾನೂನು ವಿದ್ಯಾಲಯದಲ್ಲಿ ಗಣರಾಜ್ಯೋತ್ಸವ

ಶಿರಸಿ: ಎಮ್.ಇ.ಎಸ್ ಕಾನೂನು ಮಹಾ ವಿದ್ಯಾಲಯದಲ್ಲಿ ಗಣರಾಜ್ಯೋತ್ಸವವನ್ನು ಸಡಗರದಿಂದ ಆಚರಿಸಲಾಯಿತು. ಪ್ರಾಚಾರ್ಯ ಡಾ ಅಶೋಕ ಭಟ್ಕಳ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡುತ್ತಾ, ಗಣರಾಜ್ಯೋತ್ಸವವು ಒಂದು ಸಾಂಸ್ಕೃತಿಕ ಆಚರಣೆ ಆಗಿರದೇ ಅದು ಭವ್ಯ ಭಾರತ ಪರಂಪರೆಯನ್ನು ತೆರೆದಿಡುವ ಉತ್ಸವವಾಗಿದೆ. ಇದರ ಅಳಿವು ಉಳಿವು ನಮ್ಮೆಲ್ಲರ ಆತ್ಮ ನಿರ್ಭರತೆ ಹಾಗೂ ಏಕತಾ ಮನೋಭಾವನೆಯನ್ನು ಅವಲಂಬಿಸಿದೆ. ಹಲವು ವರ್ಷಗಳಿಂದ ಇದನ್ನು ನಾವೆಲ್ಲರೂ ಆಚರಿಸುತ್ತಾ ಬರುತ್ತಿದ್ದರೂ ನಮ್ಮಲ್ಲಿ ಸಂಕುಚಿತ ಮನೋಭಾವನೆ ಇನ್ನು ದೂರವಾಗಬೇಕಾಗಿದೆ. ಹಾಗಾಗೀ ನಾವೆಲ್ಲರೂ ಜಾತಿ, ಧರ್ಮ, ಮತ ಹಾಗೂ ಲಿಂಗ ಪ್ರಬೇಧಗಳ ಬೇದ ಭಾವ ವಿಲ್ಲದೇ ಭಾರತದ ಸರ್ವತೋಮುಖ ಅಭಿವೃದ್ಧಿಗೆ ಕಠಿಣ ಪರಿಶ್ರಮದಿಂದ ಮುನ್ನುಗ್ಗಬೇಕಿದೆ ಎಂದು ಅಭಿಪ್ರಾಯಿಸಿದರು. ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಗಳಾದ ಪ್ರಶಾಂತ ಅಡಿಗ ಹಾಗೂ ಕಾನೂನು ಮಹಾವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ತುಂಬಾ ಸಡಗರ ಮತ್ತು ಹರ್ಷೋಲ್ಲಾಸದಿಂದ ಪಾಲ್ಗೊಂಡಿದ್ದರು.

ಟಿಎಸ್‌ಎಸ್‌ನಲ್ಲಿ ಗಣರಾಜ್ಯೋತ್ಸವ

ಶಿರಸಿ: ದಿ ತೋಟಗಾರ್ಸ್ ಕೋ-ಆಪರೇಟಿವ್ ಸೇಲ್ ಸೊಸೈಟಿ ಲಿ., ಶಿರಸಿ ಇದರ ಪ್ರಧಾನ ಕಚೇರಿ ಆವರಣದಲ್ಲಿ ಭಾನುವಾರ ಬೆಳಗ್ಗೆ ಗಣ ರಾಜ್ಯೋತ್ಸವವನ್ನು ಟಿಎಸ್‌ಎಸ್ ಅಧ್ಯಕ್ಷರಾದ ಗೋಪಾಲಕೃಷ್ಣ ವೆಂಕಟ್ರಮಣ ವೈದ್ಯ ಮತ್ತಿಘಟ್ಟ ಇವರು ಧ್ವಜಾರೋಹಣ ಮಾಡುವುದರೊಂದಿಗೆ ವಿಜೃಂಭಣೆಯಿಂದ ಆಚರಿಸಲಾಯಿತು. ಸಿಬ್ಬಂದಿಗೆ, ಸದಸ್ಯರಿಗೆ 76ನೇ ಗಣರಾಜ್ಯೋತ್ಸವದ ಶುಭ ಕೋರುವುದರೊಂದಿಗೆ ಡಾ. ಬಿ.ಆರ್. ಅಂಬೇಡ್ಕರ್ ಅವರು ಅಖಂಡ ಭಾರತಕ್ಕೆ ಸೂಕ್ತ ಸಂವಿಧಾನವನ್ನು ರಚಿಸಿ ಭಾರತೀಯರಿಗೆ ಮಾರ್ಗದರ್ಶನ ನೀಡಿದ್ದನ್ನು ಸ್ಮರಿಸಿದರು. ನಮ್ಮ ನೆಲ ಜಲವನ್ನು ನಾವು ಯಾವತ್ತೂ ಪ್ರೀತಿಸೋಣ ಗೌರವಿಸೋಣ. ನಮ್ಮ ದೇಶ ಇನ್ನೂ ಹೆಚ್ಚಿನ ಅಭಿವೃದ್ಧಿ ಪಥದಲ್ಲಿ ಸಾಗಿ ಎಲ್ಲರೂ ಸುಖದಿಂದ ಜೀವಿಸುವಂತಾಗಲಿ ಎಂದು ಆಶಿಸಿದರು. ಟಿಎಸ್‌ಎಸ್ ನಿರ್ದೇಶಕರು, ಪ್ರಭಾರಿ ಪ್ರಧಾನ ವ್ಯವಸ್ಥಾಪಕ ಗಿರೀಶ ಹೆಗಡೆ, ಸಿಬ್ಬಂದಿ, ನಿವೃತ್ತ ಸಿಬ್ಬಂದಿ, ಅಡಕೆ ವರ್ತಕರು, ಸದಸ್ಯರು ಪಾಲ್ಗೊಂಡಿದ್ದರು. ರವಿಚಂದ್ರ ಹೆಗಡೆ ಕಾರ್ಯಕ್ರಮ ನಿರ್ವಹಿಸಿದರು.

ಕಸಾಪದಿಂದ ಗಣರಾಜ್ಯೋತ್ಸವ

ಯಲ್ಲಾಪುರ: ಗಣರಾಜ್ಯೋತ್ಸವದ ನಿಮಿತ್ತ ಪಟ್ಟಣದ ಕನ್ನಡ ಸಾಹಿತ್ಯ ಭವನದಲ್ಲಿ ರವಿವಾರ ಧ್ವಜಾರೋಹಣ ಹಾಗೂ ಧ್ವಜವಂದನೆ ಕಾರ್ಯಕ್ರಮ ನಡೆಯಿತು.ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿದ್ವಾನ್ ಸುಬ್ರಹ್ಮಣ್ಯ ಭಟ್ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಕಸಾಪ ಖಜಾಂಚಿ ಡಿ. ಎನ್.ಗಾಂವ್ಕಾರ್, ಆಜೀವ ಸದಸ್ಯರಾದ ಬೀರಣ್ಣ ನಾಯಕ ಮೊಗಟಾ, ಡಿ.ಜಿ.ಹೆಗಡೆ, ಕೃಷ್ಣ ಭಟ್ಟ ನಾಯಕನಕೆರೆ, ವಿಶ್ವೇಶ್ವರ ಗಾಂವ್ಕಾರ್, ಎನ್.ಎಸ್ .ಭಟ್ಟ, ವಿಶಾಲಾಕ್ಷಿ ಭಟ್ಟ ಮುಂತಾದವರು ಇದ್ದರು.

ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಸಂಜೀವ ಹೊಸಕೇರಿ ಸ್ವಾಗತಿಸಿದರು.

ಜಿಲ್ಲೆ ಅಭಿವೃದ್ಧಿಗೆ ಅನುದಾನದ ಕೊರತೆಯಿಲ್ಲ: ಮಂಕಾಳ ವೈದ್ಯ

ಕಾರವಾರದ ಪೊಲೀಸ್ ಪೆರೇಡ್ ಮೈದಾನದಲ್ಲಿ ಭಾನುವಾರ ನಡೆದ ಜಿಲ್ಲಾ ಮಟ್ಟದ ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಅವರು ಗೌರವ ವಂದನೆ ಸ್ವೀಕರಿಸಿದರು. ಗಣರಾಜ್ಯೋತ್ಸವ ಸಂದರ್ಭದಲ್ಲಿ ಕಲಾವಿದರೊಂದಿಗೆ ಸಚಿವ ಮಂಕಾಳ ವೈದ್ಯ, ಶಾಸಕ ಸತೀಶ ಸೈಲ್, ವಿ.ಪ. ಸದಸ್ಯ ಗಣಪತಿ ಉಳ್ವೇಕರ್, ಅಧಿಕಾರಿಗಳು ಇದ್ದರು.

ಕಾರವಾರ: ಜಿಲ್ಲೆಯಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಅನುದಾನದ ಕೊರತೆಯಿಲ್ಲ, ಜಿಲ್ಲೆಯಲ್ಲಿ ಶಿಕ್ಷಣಕ್ಕೆ ಪ್ರಥಮಾದ್ಯತೆಯನ್ನು ನೀಡಿದ್ದು ಎಲ್ಲಾ ಅಂಗನವಾಡಿಗಳಿಗೆ ಸ್ವಂತ ಕಟ್ಟಡ ಒದಗಿಸಲಾಗುತ್ತಿದೆ ಎಂದು ಮೀನುಗಾರಿಕೆ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವರು ಹಾಗೂ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್. ವೈದ್ಯ ಹೇಳಿದರು.

ಕಾರವಾರದ ಪೊಲೀಸ್ ಪೆರೇಡ್ ಮೈದಾನದಲ್ಲಿ ಭಾನುವಾರ ನಡೆದ ಜಿಲ್ಲಾ ಮಟ್ಟದ ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ರಾಷ್ಟ್ರ ಧ್ವಜಾರೋರಣ ನೆರವೇರಿಸಿ ಅವರು ಮಾತನಾಡಿದರು.

ರು.2000 ಕೋಟಿ ವೆಚ್ಚದಲ್ಲಿ ಕುಡಿಯವ ನೀರಿನ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಗೇರಸೊಪ್ಪ ಜಲಾಶಯ ದಲ್ಲಿ ರು. 8000ಕೋಟಿ ವೆಚ್ಚದಲ್ಲಿ ಜಲವಿದ್ಯುತ್ ಯೋಜನೆಗೆ ಅನುಮೋದನೆ ದೊರೆತಿದೆ ಎಂದರು.

ಜಿಲ್ಲೆಯಲ್ಲಿ ಗ್ಯಾರಂಟಿ ಯೋಜನೆಗಳನ್ನು ಅತ್ಯಂತ ಯಶಸ್ವಿಯಾಗಿ ಜನತೆಗೆ ತಲುಪಿಸಿದ್ದು, ಶಕ್ತಿ ಯೋಜನೆಯಲ್ಲಿ ಮಹಿಳೆಯರಿಗೆ ರು. 400ಕೋಟಿ ಮೊತ್ತದ ಉಚಿತ ಪ್ರಯಾಣ ವ್ಯವಸ್ಥೆ ಮತ್ತು ಗೃಹಲಕ್ಷ್ಮಿ ಯೋಜನೆಯಲ್ಲಿ 1000ಕೋಟಿ ರು. ಗಳ ನೆರವು ನೀಡಿದ್ದು, ಗೃಹಜ್ಯೋತಿ ಯೋಜನೆಯಡಿ ರು. 300ಕೋಟಿ ಮೊತ್ತದ ಉಚಿತ ವಿದ್ಯುತ್, ಅನ್ನಭಾಗ್ಯ ಯೋಜನೆಯಡಿ ರು. 250ಕೋಟಿ ಹಾಗೂ ಯುವನಿಧಿ ಯೋಜನೆಯಡಿ ರು. 6ಕೋಟಿ ನೆರವು ಸೇರಿದಂತೆ ಜಿಲ್ಲೆಯಲ್ಲಿ ಇದುವರೆಗೂ ರು. 2000ಕೋಟಿ ಗೂ ಅಧಿಕ ನೆರವು ನೀಡಲಾಗಿದೆ ಎಂದು ಹೇಳಿದರು.

> **ಕಾರವಾರದಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ನಿರ್ಮಾಣ ಮಾಡಲಾಗುವುದು ಎಂದ ಸ್ಪಷ್ಟಪಡಿಸಿದ ಸಚಿವರು, ಕ್ಯಾನ್ಸರ್ ಆಸ್ಪತ್ರೆ ಕೂಡಾ ಶೀಘ್ರದಲ್ಲಿ ಕಾರ್ಯಾರಂಭ ಮಾಡಲಿದೆ.**
>
> -ಮಂಕಾಳ ವೈದ್ಯ, ಉಸ್ತುವಾರಿ ಸಚಿವ

ಸಂವಿಧಾನದಿಂದ ನೆಮ್ಮದಿಯ ಜೀವನ

ನಮ್ಮ ಸಂವಿಧಾನದಲ್ಲಿನ ಸಮಾನತೆಯ ಆಶಯದಂತೆ, ಸಮಾಜದಲ್ಲಿನ ಕಟ್ಟ ಕಡೆಯ ವ್ಯಕ್ತಿಯೂ ನೆಮ್ಮದಿಯಿಂದ ಜೀವನ ನಡೆಸಲು ಬೇಕಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕು. ರಾಜ್ಯದಲ್ಲಿನ ಪ್ರತಿಯೊಬ್ಬ ವ್ಯಕ್ತಿಯೂ ನೆಮ್ಮದಿಯ ಜೀವನ ನಡೆಸಲು ಅಗತ್ಯವಿರುವ ಸೌಲಭ್ಯ ಮತ್ತು ಅವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕಾರ್ಯನಿರ್ವಹಿಸುತ್ತಿದೆ ಎಂದರು.

ನಮ್ಮ ಸಂವಿಧಾನವನ್ನು ದೇಶದ ಪ್ರತಿಯೊಬ್ಬ ಸಾಮಾನ್ಯ ಜನತೆಗೂ ಅನುಕೂಲವಾಗುವ ರೀತಿಯಲ್ಲಿ ರಚಿಸಲಾಗಿದ್ದು, ಸಮಾನತೆಯ ಪ್ರಮುಖ ಉದ್ದೇಶ ಹೊಂದಿದೆ. ರಾಜ್ಯದಲ್ಲಿ ಪ್ರತಿಯೊಬ್ಬ ಪ್ರಜೆಗೂ ನೆಮ್ಮದಿಯ ಜೀವನದೊಂದಿಗೆ, ಸುರಕ್ಷಿತ ಮತ್ತು ನೆಮ್ಮದಿಯ ವಾತಾವಾರಣ ನಿರ್ಮಾಣ ಮಾಡಲು ರಾಜ್ಯ ಸರ್ಕಾರ ಬದ್ಧವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪೊಲೀಸ್, ಅರಣ್ಯ, ಗೃಹರಕ್ಷಕ ದಳ, ಎನ್.ಸಿ.ಸಿ, ಸ್ಕೌಟ್ಸ್ ಮತ್ತು ಗೈಡ್ಸ್, ಸೇವಾದಳ ತಂಡಗಳಿಂದ ಆಕರ್ಷಕ ಪಥ ಸಂಚಲನ ನಡೆಯಿತು.

ಕಂದಾಯ ಇಲಾಖೆ, ಜಿಲ್ಲಾ ಪಂಚಾಯಿತಿ, ಪೊಲೀಸ್ ಇಲಾಖೆ, ಜಿಲ್ಲಾ ನಗರಾಭಿವೃದ್ಧಿ ಕೋಶದಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ ಸಿಬ್ಬಂದಿಗೆ ಮತ್ತು ಶೈಕ್ಷಣಿಕ ಹಾಗೂ ಕ್ರೀಡಾ ವಿಭಾಗದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಫಲಾನುಭವಿಗಳಿಗೆ ವಿಶೇಷ ಆಹಾರದ ಕಿಟ್ ವಿತರಿಸಲಾಯಿತು. ಶಾಲಾ ವಿದ್ಯಾರ್ಥಿಗಳಿಂದ ರಾಷ್ಟ್ರ ಪ್ರೇಮ ಮೂಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಏಜೆನ್ಸಿ ಲಿಮಿಟೆಡ್ ಅಧ್ಯಕ್ಷ ಸತೀಶ್ ಕೆ. ಸೈಲ್, ವಿಧಾನ ಪರಿಷತ್ ಶಾಸಕ ಗಣಪತಿ ಉಳ್ವೇಕರ, ನಗರ ಸಭೆ ಅಧ್ಯಕ್ಷ ರವಿರಾಜ ಚಂದ್ರಹಾಸ ಅಕೋಲೆಕರ, ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯ, ಜಿ.ಪಂ.ಮುಖ್ಯ ಕಾರ್ಯನಿರ್ವಹಣಾಧಿಕಾರಿ ಈಶ್ವರ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ್, ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ, ಉಪವಿಭಾಗಾಧಿಕಾರಿ ಕನಿಷ್ಕ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಸತೀಶ ನಾಯ್ಕ ಉಪಸ್ಥಿತರಿದ್ದರು.

ಸಂವಿಧಾನದ ಆಶಯಗಳು ಸಾಕಾರಗೊಳ್ಳಬೇಕು: ಪಾಟೀಲ

ಹಾವೇರಿ: ಸಂವಿಧಾನದ ಆಶಯಗಳು ಸಾಕಾರಗೊಳ್ಳಬೇಕು, ಈ ದೇಶದ ಸಾರ್ವಭೌಮನಾದ ಜನ ಸಾಮಾನ್ಯನ ಬದುಕು ಸುಂದರವಾಗಬೇಕು ಎಂದು ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ ಅವರು ಹೇಳಿದರು.

ನಗರದ ದಿ.ಹೊಸಮನಿ ಸಿದ್ದಪ್ಪ ಜಿಲ್ಲಾ ಕ್ರೀಡಾಂಗಣದಲ್ಲಿ 76ನೇ ಗಣರಾಜ್ಯೋತ್ಸವ ದಿನಾಚರಣೆ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಭಾರತದ ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ನಮ್ಮ ಸರ್ಕಾರ ಸರ್ವರನ್ನೂ ಒಳಗೊಂಡ, ಸರ್ವರನ್ನು ಬೆಸೆಯುವ ಮತ್ತು ಸರ್ವರಿಗೂ ಸಮಪಾಲು-ಸಮಬಾಳು ನೀಡಬೇಕೆಂಬ ಪ್ರಾಮಾಣ ಕ ಆಶಯದ ಸರ್ಕಾರವಾಗಿ ಬಡವರ, ದಮನಿತರ, ಶೋಷಿತರ ಏಳಿಗೆಗಾಗಿ ವಿಶೇಷ ಒತ್ತು ನೀಡಿದೆ ಎಂದು ಹೇಳಿದರು.

ಭಾರತದ ಪ್ರಜೆಗಳಾದ ನಾವು ನಮ್ಮ ಸಂವಿಧಾನವನ್ನು ಸಾರ್ವಭೌಮ, ಸಮಾಜವಾದಿ, ಜಾತ್ಯಾತೀತ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಆತ್ಮಾರ್ಪಿತ ಮಾಡಿಕೊಂಡಿದ್ದೇವೆ. ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಇವು ಭಾರತ ರಾಜಕೀಯ ಪದ್ಧತಿಯ ನಾಲ್ಕು ಆಧಾರ ಸ್ಥಂಬಗಳು. ರಾಷ್ಟದ ಎಲ್ಲ ಪ್ರಜೆಗಳಿಗೂ ಸಾಮಾಜಿಕ ನ್ಯಾಯ, ಆರ್ಥಿಕ ನ್ಯಾಯ ಮತ್ತು ರಾಜಕೀಯ ನ್ಯಾಯವನ್ನು ದೊರಕಿಸಿಕೊಡುವುದೇ ನಮ್ಮ ಸಂವಿಧಾನದ ಮುಖ್ಯ ಗುರಿಯಾಗಿದೆ ಎಂದರು.

ಕ್ರೀಡೆ, ಶಿಕ್ಷಣ, ಸಾಮಾಜಿಕ, ಪರಿಸರ, ಮಾಧ್ಯಮ ಹಾಗೂ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಮಾಡಿದ 18ಜನ ಸಾಧಕರನ್ನು ಜಿಲ್ಲಾಡಳಿತದಿಂದ ಸನ್ಮಾನಿಸಲಾಯಿತು.

ಪರೇಡ ಕಮಾಂಡೆಂಟ್ ಶಂಕರಗೌಡ ಪಾಟೀಲ ಅವರ ನೇತೃತ್ವದಲ್ಲಿ ಸಶಸ್ತ್ರ ಮೀಸಲು ಪಡೆ, ನಾಗರೀಕ ಸೇವಾ, ಅಗ್ನಿಶಾಮಕ, ಅಬಕಾರಿ ದಳ, ಅರಣ್ಯ ರಕ್ಷಕ ದಳ, ಹೊಮ್ ಗಾರ್ಡ್ ಹಾಗೂ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಸೇರಿದಂತೆ ವಿವಿಧ 14ತಂಡಗಳಿಂದ ಆಕರ್ಷಕ ಪಥಸಂಚಲನ ಜರುಗಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಂ.ಎಂ.ಹಿರೇಮಠ, ನಗರಸಭೆ ಅಧ್ಯಕ್ಷೆ ಶಶಿಕಲಾ ಮಾಳಗಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ, ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಂ.ಎಂ. ಮೈದೂರ, ನಗರಸಭೆ ಸದಸ್ಯ ಸಂಜೀವಕುಮಾರ ನೀರಲಗಿ, ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ, ಅಪರ ಜಿಲ್ಲಾಧಿಕಾರಿ ಡಾ.ನಾಗಾರಜ ಎಲ್., ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ಶಿರಕೋಳ, ಉಪ ವಿಭಾಗಾಧಿಕಾರಿ ಚನ್ನಪ್ಪ, ತಹಸೀಲ್ದಾರ ಶರಣಮ್ಮ ಇತರರು ಉಪಸ್ಥಿತರಿದ್ದರು.

ಪ್ರಜಾಪ್ರಭುತ್ವ ಗಟ್ಟಿಯಾಗಿ ಇರಲು ಸಂವಿಧಾನ ಕಾರಣ

ಹುಬ್ಬಳ್ಳಿ: ಭಾರತದಲ್ಲಿ ಪ್ರಜಾಪಭುತ್ವ ಗಟ್ಟಿಯಾಗಿ ಉಳಿಯಲು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಕೊಟ್ಟಿರುವ ಸಂವಿಧಾನ ಕಾರಣ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಹುಬ್ಬಳ್ಳಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಮಗೆ ಸ್ವಾತಂತ್ರೋತ್ಸವ ಎಷ್ಟು ಮುಖ್ಯವೋ ಗಣರಾಜ್ಯೋತ್ಸವವೂ ಅಷ್ಟೇ ಮುಖ್ಯ. ನಮ್ಮಷ್ಟಕ್ಕೆ ನಾವೇ ಗಣರಾಜ್ಯವನ್ನು ಒಪ್ಪಿಕೊಂಡಿದ್ದೇವೆ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಕೊಟ್ಟಿರುವ ಸಂವಿಧಾನ ನಮಗೆಲ್ಲ ಮಾರ್ಗದರ್ಶನ ಮಾಡುತ್ತಿದೆ. ಭಾರತದಲ್ಲಿ ಪ್ರಜಾಪ್ರಭುತ್ವ ಗಟ್ಟಿಯಾಗಿ ಉಳಿಯಲು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಕೊಟ್ಟಿರುವ ಸಂವಿಧಾನ ಕಾರಣ. ಅಷ್ಟೇ ಅಲ್ಲ ನಮ್ಮ ದೇಶದೊಂದಿಗೆ 19ದೇಶಗಳು ಸ್ವಾತಂತ್ರ್ಯವಾಗಿದ್ದವು. ಅಲ್ಲಿ ಎಲ್ಲಿಯೂ ಪ್ರಜಾಪ್ರಭುತ್ವ ಉಳಿದಿಲ್ಲ, ಆದರೆ, ಭಾರತದಲ್ಲಿ ಮಾತ್ರ ಪಜಾಪಭುತ್ವ ಉಳಿದಿದೆ.

ಇದಕ್ಕೆ ಭಾರತೀಯರು ಪ್ರಜಾಪ್ರಭುತ್ವದ ಮೇಲೆ ಇಟ್ಟಿರುವ ನಂಬಿಕೆ ಕಾರಣ ಎಂದು ಹೇಳಿದರು. ಮೈಕ್ರೊ ಫೈನಾನ್ಸ್ ನಿಯಂತ್ರಣಕ್ಕೆ ಆರ್‌ಬಿಐ

ನಿಯಮಗಳಿವೆ. ಸುಗ್ರೀವಾಜ್ಞೆ ಬಹಳಷ್ಟಿವೆ. ಆದರೆ, ಅವುಗಳನ್ನು ಜಾರಿಗೆ ತರುವ ಕೆಲಸ ಆಗಬೇಕು. ಪೊಲಿಸರು ಕಳ್ಳರ ಜೊತೆ ಸೇರಿದರೆ ಹೇಗೆ ನಿಯಂತ್ರಣ ಆಗುತ್ತದೆ.

ಮೈಕ್ರೊ ಫೈನಾನ್ಸನ್ನು ಪೊಲೀಸರು ಬೆಂಬಲಿಸುತ್ತಿದ್ದಾರೆ. ಏಕೆಂದರೆ ಟ್ರಾನ್ಸಫರ್‌ನಲ್ಲಿ ಸಾಕಷ್ಟು ಭ್ರಷ್ಟಾಚಾರ ಆಗಿದೆ. ದುಡ್ಡು ಕೊಟ್ಟು ಬಂದ ಅಧಿಕಾರಿ ತನ್ನ ಆದಾಯ ಹೆಚ್ಚಿಸಿಕೊಳ್ಳುವಲ್ಲಿ ಮೈಕ್ರೋ ಫೈನಾನ್ಸ್ ಕೂಡ ಒಂದು. ಬಡವರು ಪೊಲಿಸರಿಗೆ ಏನೂ ಕೊಡುವುದಿಲ್ಲ. ಮೈಕ್ರೋ ಫೈನಾನ್ಸ್ ಮಾಲಿಕರೇ ಹಣ ಕೊಡುವುದು. ಅದನ್ನು ಮೊದಲು ನಿಯಂತ್ರಣ ಮಾಡಲಿ, ತಮ್ಮ ಹುಳುಕನ್ನು ಮುಚ್ಚಿಟ್ಟುಕೊಂಡು ಮೈಕ್ರೊ ಫೈನಾನ್ಸಿಗೆ ಬೆಂಬಲಕೊಟ್ಟ ಪೊಲೀಸ್ ಅಧಿಕಾರಿಗಳ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳಬೇಕು.

ಅದನ್ನು ಬಿಟ್ಟು ಕೇವಲ ಸಭೆ ಮಾಡಿ, ಸುಗ್ರೀವಾಜ್ಞೆ ಮಾಡುವುದರಿಂದ ಏನೂ ಆಗುವುದಿಲ್ಲ. ಏನಾದರೂ ಸಮಸ್ಯೆ ಬಂದರೆ ಸಭೆ ಮಾಡುವ ಚಾಳಿ ಮುಖ್ಯಮಂತ್ರಿಗೆ ಇದೆ. ಅದರಿಂದ ಏನೂ ಪರಿಹಾರ ಆಗುವುದಿಲ್ಲ. ಮುಖ್ಯಮಂತ್ರಿಗಳು ಕೂಡಲೇ ಅನುಷ್ಠಾನಕ್ಕೆ ಇಳಿಯಬೇಕು ಎಂದು ಆಗ್ರಹಿಸಿದರು.

ಗೋವು ಹತ್ಯೆ ಆರೋಪಿ ಬಂಧನದ ವೇಳೆ ಫೈರಿಂಗ್

ಹೊನ್ನಾವರ: ತಾಲೂಕಿನ ಸಾಲ್ಕೊಡು ಗ್ರಾಮದ ಕೊಂಡಾಕುಳಿ ಗರ್ಭಧರಿಸಿದ್ದ ಗೋವು ಹತ್ಯೆ ಮಾಡಿ ಮಾಂಸ ಕದ್ದೊಯ್ದಿದ್ದ ಪ್ರಕರಣದಲ್ಲಿ ಇಬ್ಬರು ಆರೋಪಿಯನ್ನು ಹೊನ್ನಾವರ ಪೊಲೀಸರು ಬಂಧಿಸಿದ್ದು, ಓರ್ವ ಆರೋಪಿ ಬಂಧನದ ವೇಳೆ ಫೈರಿಂಗ್ ನಡೆದಿದೆ.

ಬಂಧಿತ ಆರೋಪಿಗಳು ತಾಲೂಕಿನ ವಲ್ಕಿಯ ತೌಫಿಕ್ ಅಹ್ಮದ್ ಜಿದ್ದಾ, ಕಾಸರಕೋಡಿನ ಫೈಜಾನ್ ಹಸನ್ ಎಂದು ಗುರುತಿಸಲಾಗಿದೆ. ಆರೋಪಿತರು ಸಾಲ್ಕೋಡು ಗ್ರಾಮದ ಕೊಂಡಾ ಕುಳಿ ಅರಣ್ಯದಲ್ಲಿ ಜ.19ರಂದು ಗರ್ಭಧರಿಸಿದ್ದ ಗೋವಿನ ವಧೆ ಮಾಡಿ, ರುಂಡ, ಕಾಲುಗಳನ್ನು ಬಿಟ್ಟು ಗೋಮಾಂಸ ಹಾಗೂ ಹೊಟ್ಟೆಯಲ್ಲಿದ್ದ ಕರುವನ್ನು ಎಸೆದು ಮಾಂಸ ಹೊತ್ತೊಯ್ದಿದ್ದರು.

ಬೆಣ್ಣೆಹಳ್ಳ ಯೋಜನೆ ಸಾಧಕ ಬಾಧಕಗಳ ಪರಿಶೀಲಿಸಲು ಸೂಕ್ತ ಕ್ರಮ

ಅಂಬೇಡ್ಕರ್ ಸಮುದಾಯ ಭವನಕ್ಕೆ ಭೂಮಿಪೂಜೆ | ಸಚಿವ ಶಿವಾನಂದ ಪಾಟೀಲ ಭಾಗಿ

ಹಾವೇರಿ: ಜಿಲ್ಲೆಯಲ್ಲೇ ಉಗಮವಾಗುವ ಬೆಣ್ಣೆಹಳ್ಳ ಯೋಜನೆ ಸಾಧಕ ಬಾಧಕಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಹೇಳಿದರು.

ದುಂಡಶಿ ಗ್ರಾಮದಲ್ಲಿ 75ಲಕ್ಷ ರು. ವೆಚ್ಚದ ಅಂಬೇಡ್ಕರ್ ಸಮುದಾಯ ಭವನಕ್ಕೆ ಶನಿವಾರ ಭೂಮಿಪೂಜೆ ನೆರವೇರಿಸಿ, ಮಾತನಾಡಿದ ಅವರು, ವಿಜಯಪುರ ಜಿಲ್ಲೆಯಲ್ಲಿರುವ ಡೋಣಿ ನದಿ ತನ್ನ ಪಥ ಬದಲಿಸಿ ಹರಿಯುವ ಕಾರಣ ರೈತರು ಸಮಸ್ಯೆಗೀಡಾಗುತ್ತಿದ್ದಾರೆ. ಶಾಸಕ ಯಾಸಿರ್ ಅಹ್ಮದ್ ಖಾನ್ ಪಠಾಣ್ ಅವರು ಬೆಣ್ಣೆಹಳ್ಳ ಯೋಜನೆ ಬಗ್ಗೆ ಪ್ರಸ್ತಾಪಿಸಿದ್ದು, ಈ ಬಗ್ಗೆ ವಿವರ ಪಡೆದು ನಂತರ ನಿರ್ಣಯಕ್ಕೆ ಬರಲಾಗುವುದು ಎಂದು ಹೇಳಿದರು.

ಶಿಗ್ಗಾವಿ ಸವಣೂರು ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಹಲವು ಭರವಸೆಗಳನ್ನು ನೀಡಿದ್ದು, ಈ ಭರವಸೆಗಳ ಪೈಕಿ ಮೊದಲನೆಯ ಯೋಜನೆಗೆ ಇಂದು ಭೂಮಿಪೂಜೆ ಮಾಡಲಾಗಿದೆ ಎಂದು ಹೇಳಿದರು.

ಸಮುದಾಯ ಭವನವನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು, ಕಾಮಗಾರಿ ಗುಣಮಟ್ಟದಿಂದ ಕೂಡಿರಬೇಕು ಎಂದು ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಿದ ಸಚಿವರು, ಸಮುದಾಯ ಭವನಗಳು ಗ್ರಾಮದಲ್ಲಿ ಉಪಯುಕ್ತ ಕಾರ್ಯಗಳಿಗೆ ಬಳಕೆಯಾಗಬೇಕು. ನಿರ್ವಹಣೆ ಕೊರತೆಯಿಂದ ಮತ್ತೊಂದು ಸ್ವರೂಪ ಪಡೆದುಕೊಳ್ಳಬಾರದು ಎಂದು ಹೇಳಿದರು.

ಡಾ. ಬಿ. ಆರ್.ಅಂಬೇಡ್ಕರ್ ಸಂವಿಧಾನ ರಚನೆ ಮಾಡಿದ ಪರಿಣಾಮ ಇಂದು ಸಮಾಜದಲ್ಲಿ ತುಳಿತಕ್ಕೊಳಗಾದವರಿಗೆ, ದುರ್ಬಲರಿಗೆ ಬಲ ಸಿಕ್ಕಿದೆ. ಸವಲತ್ತುಗಳು ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು ಎಂಬುದು ಡಾ. ಬಿ..ಆರ್. ಅಂಬೇಡ್ಕರ್ ಅವರ ಆಶಯವಾಗಿತ್ತು. ಇದಕ್ಕೆ ಪೂರಕವಾಗಿಯೇ ಸಂವಿಧಾನವನ್ನು ರಚನೆ ಮಾಡಿದ್ದಾರೆ ಎಂದರು.

ಶಾಸಕ ಯಾಸಿರ್ ಅಹ್ಮದ್ ಖಾನ್ ಪಠಾಣ್ ಮಾತನಾಡಿ ಉಪಚುನಾವಣೆಯಲ್ಲಿ ಕಾಂಗ್ರೆಸ್

ದುಂಡಶಿ ಗ್ರಾಮದಲ್ಲಿ ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣಕ್ಕೆ ಸಚಿವ ಶಿವಾನಂದ ಪಾಟೀಲ ಅವರು ಭೂಮಿ ಪೂಜೆ ನೆರವೇರಿಸಿದರು. ಶಾಸಕ ಯಾಸಿರ್ ಪಠಾಣ್, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ಹೆಸ್ಕಾ ಅಧ್ಯಕ್ಷ ಸೈಯದ್ ಅಜ್ಜಂಪೀರ್ ಖಾದ್ರಿ ಮುಖಂಡರು ಇದ್ದರು.

ಗೆಲುವಿಗೆ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಅವರ ಶ್ರಮ ಸಾಕ್ಷಿದೆ. ಶಿಗ್ಗಾವಿ ಕ್ಷೇತ್ರವನ್ನು ಪ್ರತಿನಿಧಿಸಿದ ಬಿಜೆಪಿ ಶಾಸಕರು ಮುಖ್ಯಮಂತ್ರಿಯಾದರೂ ಕ್ಷೇತ್ರ ಹಿಂದುಳಿದುರುವುದನ್ನು ಗಮನಿಸಿ ನೂರು ಕೋಟಿ ರು.. ವಿಶೇಷ ಅನುದಾನ ಮಂಜೂರು ಮಾಡಿಸಿಕೊಂಡು ಬಂದರು. ಈ ಅನುದಾನದ ಮೊದಲ ಕಾಮಗಾರಿಗೆ ಇಂದು ಭೂಮಿ ಪೂಜೆ ಮಾಡಿದ್ದೇವೆ ಎಂದರು.

ಚುನಾವಣೆ ಸಮಯದಲ್ಲಿ ಕೊಟ್ಟ ಮಾತಿನಂತೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಕ್ಷೇತ್ರದ ಮತದಾರರು ಯಾವುದೇ ಸಮಸ್ಯೆ ಇದ್ದರೂ ಗಮನಕ್ಕೆ ತಂದರೆ ನಿವಾರಣೆಗೆ ಪ್ರಯತ್ನಿಸುತ್ತೇನೆ. ಜನರ ಸಮಸ್ಯೆ ಆಲಿಸುವ ಉದ್ದೇಶದಿಂದಲೇ ಕಚೇರಿ ಆರಂಭಿಸಿದ್ದು, ನಾನು ಲಭ್ಯ ಇಲ್ಲದಿದ್ದರೂ ಸಿಬ್ಬಂದಿ ನಿಮ್ಮ ಅಹವಾಲುಗಳನ್ನು ಸ್ವೀಕರಿಸಲಿದ್ದಾರೆ ಎಂದರು.

ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಅವರು ಮಾತನಾಡಿ, ಕ್ಷೇತ್ರದ ಅಭಿವೃದ್ಧಿಗೆ ್ರಮಿಸುವ ತಂಡ ಇದೆ. ಯಾವುದೇ ಸಮಸ್ಯೆ ಇದ್ದರೂ ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತನ್ನಿ ಎಂದು ಸಲಹೆ ನೀಡಿದರು. ಹೆಸ್ಕಾಂ ಅಧ್ಯಕ್ಷ ಅಜ್ಜಂಪೀರ ಖಾದ್ರಿ, ಮಾತನಾಡಿ, ಸಮುದಾಯ ಭವನಗಳು ದುಶ್ಚಟಗಳ ತಾಣವಾಗದಂತೆ ನೋಡಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಗ್ರಾಪಂ ಅಧ್ಯಕ್ಷೆ ಹಸೀನಾ ಬೇಗಂ, ಉಪಾಧ್ಯಕ್ಷ ಮಹಮದ್ ರಫೀಕ್, ಹನುಮಂತ ಬಂಡಿವಡ್ಡರ, ಗ್ರಾಪಂ ಸದಸ್ಯರು ಮತ್ತು ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಸಂವಿಧಾನದ ಆಶಯದಂತೆ ನಡೆಯೋಣ: ಹೆಬ್ಬಾರ

ಯಲ್ಲಾಪುರ: ಸಂವಿಧಾನ ನಮಗೆ ಹಕ್ಕು ಮತ್ತು ಕರ್ತವ್ಯವನ್ನು ವಿಧಿಸಿದೆ. ಸಂವಿಧಾನದ ಆಶಯದಂತೆ ನಾವು ನಡೆದುಕೊಳ್ಳಬೇಕಿದೆ ನಾವು ಹಕ್ಕನ್ನು ಮಾತ್ರ ಕೇಳುತ್ತೇವೆ ಜವಾಬ್ದಾರಿಯನ್ನು ಮರೆಯುತ್ತೇವೆ ಎಂದು ಶಾಸಕ ಶಿವರಾಮ ಹೆಬ್ಬಾರ್ ಹೇಳಿದರು.

ಅವರು, ಭಾನುವಾರ 76ನೇ ಗಣರಾಜ್ಯೋತ್ಸವದ ಅಂಗವಾಗಿ ಕಾಳಮ್ಮ ನಗರದ ತಾಲೂಕಾ ಕ್ರೀಡಾಂಗಣದಲ್ಲಿ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಮಾತನಾಡಿದರು.

ಗಣರಾಜ್ಯ ಒಂದು ಒಕ್ಕೂಟ ವ್ಯವಸ್ಥೆ ಇದರ ಪರಿಕಲ್ಪನೆ ಬಹಳ ವಿಶಾಲ ತಳಹದಿಯಿಂದಕೂಡಿದೆ ನಮ್ಮ ಯುವಕರು ಪ್ರಜಾ ಪ್ರಭುತ್ವದ ನಿಜವಾದ ಅರ್ಥ ತಿಳಿದು ದೇಶದ ಪ್ರಗತಿಗೆ ಕೊಡುಗೆ ನೀಡಬೇಕು ಅಂದಾಗ ಮಾತ್ರ ಸ್ವತಂತ್ರ್ಯಕ್ಕಾಗಿ ತ್ಯಾಗ

ಬಲಿದಾನಮಾಡಿದ ಹಿರಿಯರ ಆಸೆ ಈಡೇರಿದಂತಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಶೈಕ್ಷಣಿಕ, ಕ್ರೀಡೆ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ತಾಲೂಕಿನ ಸಾಧಕರಿಗೆ ಶಾಸಕರು ಶಾಲು ಹೊದಿಸಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಯಲ್ಲಪ್ಪಾ ಗೋಣೆನವರ್, ಪ.ಪಂ ಅಧ್ಯಕ್ಷ ನರ್ಮದಾ ನಾಯ್ಕ, ಉಪಾಧ್ಯಕ್ಷ ಅಮಿತ ಅಂಗಡಿ, ತಾಲೂಕಾ ಸರಕಾರಿ ನೌಕರರ ಸಂಘದ ತಾಲೂಕಾಧ್ಯಕ್ಷ ಸಂಜೀವಕುಮಾರ ಹೊಸ್ಕೇರಿ ಇದ್ದರು.

ವಾರ್ತಾ ಇಲಾಖೆಯಲ್ಲಿ ಗಣರಾಜ್ಯೋತ್ಸವದ ಆಚರಣೆ

ಕಾರವಾರ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರವಾರ ಕಚೇರಿಯಲ್ಲಿ 76ನೇ ಗಣರಾಜ್ಯೋತ್ಸವ ದಿನಾಚರಣೆ ಯನ್ನು ಅತ್ಯಂತ ಸಂಭ್ರಮ ದಿಂದ ಭಾನುವಾರ ಆಚರಿಸಲಾಯಿತು. ಕಚೇರಿಯ ನಿವೃತ್ತ ಸಿಬ್ಬಂದಿ ಶ್ಯಾಮ ದತ್ತಾ ತಳೇಕರ ರಾಷ್ಟ್ರ ಧ್ವಜಾರೋರಣ ನೆರವೇರಿಸಿದರು.

ಈ ಸಂದರ್ಭದಲ್ಲಿ ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕ ಬಿ. ಶಿವಕುಮಾರ್, ಸಿಬ್ಬಂದಿಗಳಾದ ರಾಜು ಭೋವಿ, ಗಂಗಾಧರ ಚಲವಾದಿ, ಕಮಲಾ ನಾಯ್ಕ, ರಾಘವೇಂದ್ರ ತಡಸದ, ವಿ. ಮನೋಹರ, ಅಪ್ರೆಂಟಿಸ್ ಗಳಾದ ಮುತ್ತುರಾಜ ಕೆ., ನಾಗರತ್ನ, ಪತ್ರಕರ್ತರು, ಹವಾಮಾನ ಇಲಾಖೆಯ ಸಿಬ್ಬಂದಿ ಮತ್ತಿತ್ತರರು ಇದ್ದರು.

ಸಮಾಚಾರ ಸಣ್ಣದಲ್ಲ

ವಿವಿಧ ಗ್ರಾ.ಪಂಗಳಲ್ಲಿ ಗಣರಾಜ್ಯೋತ್ಸವ

ಮುದಗಲ್: ಪಟ್ಟಣ ಸಮೀಪದ ವಿವಿಧ ಗ್ರಾಮ ಪಂಚಾಯತಿಗಳಲ್ಲಿ ಗಣರಾಜ್ಯೋತ್ಸವವನ್ನ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ನಾಗಲಾಪೂರ ಗ್ರಾ.ಪಂ. ಯಲ್ಲಿ ಮೇಘಪ್ಪ ರಾಠೋಡ, ನಾಗರಹಾಳ ಗ್ರಾ.ಪಂಯಲ್ಲಿ ನೀಲಮ್ಮ ಮುಕ್ಕಣ್ಣನವರ, ಹಲಕಾವಟಗಿ ಗ್ರಾ.ಪಂಯಲ್ಲಿ ಸಂಗಮ್ಮ ಗೌಂಡಿ, ಉಪ್ಪಾರನಂದಿಹಾಳ ಗ್ರಾ.ಪಂ.ಯಲ್ಲಿ ಶಾಂತಾ ಗೌಂಡಿ, ಆಮದಿಹಾಳ ಗ್ರಾ.ಪಂ. ಯಲ್ಲಿ ಜಗದೀಶ ಹೊಸಮನಿ, ಚಿಕ್ಕಲೆಕ್ಕಿಹಾಳ ಸರಕಾರಿ ಪ್ರೌಢಶಾಲೆಯಲ್ಲಿ ಬಸವರಾಜ ಕಾಚಾಪೂರ, ಹೂನೂರು ಗ್ರಾ.ಪಂ.ಯಲ್ಲಿ ರೇಣುಕಾ ನಾಯಕ, ನಾಗಲಾಪೂರ ವಿವಿದೊದ್ದೇಶ ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕಿನಲ್ಲಿ ಅಧ್ಯಕ್ಷ ಶರಣಬಸವ ವ್ಯಾಕರನಾಳ, ನಾಗರಹಾಳ ವಿವಿದೊದ್ದೇಶ ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕಿನಲ್ಲಿ ಅದ್ಯಕ್ಷ ಅಮರಪ್ಪ ಕನಕೇರಿ, ಬನ್ನಿಗೋಳ ಗ್ರಾ.ಪಂ. ಯಲ್ಲಿ ಲಚಮಮ್ಮ ಚವಡಿ ಸೇರಿದಂತೆ ನಾನಾ ಕಡೆಗಳಲ್ಲಿ 76 ನೇ ಗಣರಾಜ್ಯೋತ್ಸವ ಧ್ವಜಾರೋಹಣ ನೇರವೇರಿಸಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ಪ್ರವೀಣಕುಮಾರ ಪಾಟೀಲ್, ಸಂಗಪ್ಪ ಅಂಗಡಿ ನಜೀರ ಸಾಬ, ಸುರೇಶ ಪಾಟೀಲ್, ರಾಮಪ್ಪ, ನಾಗಪ್ಪ ಬನ್ನಿಗೋಳ ವಿರೇಶ ಶಿವನಗುತ್ತಿ, ವೀರಭದ್ರಪ್ಪ, ಮಾಹಾದೇವಪ್ಪ, ಹಾಗೂ ಸರ್ವಸದಸ್ಯರು ಸಿಬ್ಬಂದಿಗಳು ಇದ್ದರು.

ಅಂಗನವಾಡಿ ಮಕ್ಕಳಿಗೆ ಸಮವಸ್ತ್ರ ವಿತರಣೆ

ಮುದಗಲ್: ನೂತನವಾಗಿ ನಿರ್ಮಿತವಾದ ಅಂಗನವಾಡಿ ಕಟ್ಟಡದ ಉದ್ಘಾಟನೆಗೆ ಆಗಮಿಸಿದ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಕಟ್ಟಡವನ್ನು ನೋಡಿ ಸಂತಸಪಟ್ಟು, ಕೇಂದ್ರದ ಮಕ್ಕಳಿಗೆ ಸಮವಸ್ತ್ರ ಕೊಡಿಸುವ ಭರವಸೆಯನ್ನು ನೀಡಿದ ಅಧೀಕ್ಷಕಿ ಗ್ರೇಡ್ 3 ಸರಸ್ವತಿಯವರು ಇಂದು ಮೇಗಳಪೇಟೆ ಅಂಗನವಾಡಿ ಕೇಂದ್ರ-3ರ ಮಕ್ಕಳಿಗೆ ಆಗಮಿಸಿ ಸಮವಸ್ತ್ರ ವಿತರಿಸಿದರು. ಪಟ್ಟಣದ ಮೇಗಳಪೇಟೆ ಅಂಗನವಾಡಿ ಕೇಂದ್ರ-3 ನೂತನ ಕಟ್ಟಡದ ಉದ್ಘಾಟನೆ ಸಂದರ್ಭದಲ್ಲಿ ಅವರು ಉಪಸ್ಥಿತರಿದ್ದರು. ಕಟ್ಟಡವನ್ನು ನೋಡಿ ಮಕ್ಕಳ ಹಾಜರಿಗೆ ಸಂತಸ ವ್ಯಕ್ತಪಡಿಸಿದ್ದರು. ಅಂದೇ ಕೇಂದ್ರದ ಮಕ್ಕಳಿಗೆ ಸಮವಸ್ತ್ರ ವಯಕ್ತಿಕವಾಗಿ ಕೊಡುತ್ತೇನೆಂದು ಭರವಸೆ ಕೊಟ್ಟು ಹೋಗಿದ್ದರು. ಸಮವಸ್ತ್ರ ಧಾರಿಗಳಾಗಿ ಶೈಕ್ಷಣಿಕವಾಗಿ ಪ್ರೇರೇಪಣೆ ದೊರೆಯಲಿ ಎನ್ನುವದೇ ಉದ್ದೇಶ. ಮಕ್ಕಳು ಬಾಲ್ಯಾವಸ್ಥೆಯಲ್ಲಿಯೇ ಶಿಸ್ತು ಕಲಿಯಲಿ ಎನ್ನುವುದು ಮತ್ತೊಂದು ಉದ್ದೇಶ ಎಂದು ಪತ್ರಿಕೆಗೆ ಮಾಹಿತಿ ನೀಡಿದರು. ಈ ಸಮಯದಲ್ಲಿ ಮೇಲ್ವಿಚಾರಕಿ ಗುರುಬಸಮ್ಮ, ಅನಸೂಯಾ, ಮುಖಂಡರಾದ ಅಯ್ಯಪ್ಪಯ್ಯ, ಅಂಗನವಾಡಿ ಕಾರ್ಯಕರ್ತೆ ಬಸಮ್ಮ, ಶಾಂತಾ, ಪದ್ಮಾ, ನಾಗರತ್ನಾ ಸೇರಿದಂತೆ ಕೇಂದ್ರಗಳ ಸಹಾಯಕಿಯರು, ಆಶಾ ಕಾರ್ಯಕರ್ತೆಯರು ಇದ್ದರು.

ಕೊಪ್ಪಳದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಿಂದ ಧ್ವಜಾರೋಹಣ | ಶಾಲೆ, ಕಾಲೇಜು ಸೇರಿ ವಿವಿಧ ಕಡೆ ಆಚರಣೆ

ಜಿಲ್ಲಾದ್ಯಂತ ಸಂಭ್ರಮದ 76ನೇ ಗಣರಾಜ್ಯೋತ್ಸವ

ಕೊಪ್ಪಳ: ಡಾ.ಬಿ.ಆರ್.ಅಂಬೇಡ್ಕರ್ ಅವರ ಅವಿರತ ಶ್ರಮದಿಂದ ದೇಶದಲ್ಲಿ ಗಣತಂತ್ರ ವ್ಯವಸ್ಥೆ ಜಾರಿಗೆ ಬಂದಿದ್ದು, ಭಾರತದ ಪ್ರಜಾಪ್ರಭುತ್ವ ಇಡೀ ವಿಶ್ವಕ್ಕೆ ಮಾದರಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ 76ನೇ ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಭಾನುವಾರ ಮಾತನಾಡಿದರು.

ಸಂವಿಧಾನ ಕರಡು ರಚನಾ ಸಮಿತಿ ಅಧ್ಯಕ್ಷರಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್ ಮತ್ತವರ ತಂಡದ ಶ್ರಮದಿಂದ 1950ರ ಜ 26 ರಂದು ಸಂವಿಧಾನ ಅಂಗೀಕರಿಸಲಾಯಿತು. ಈಗ ಸಂವಿಧಾನ ಭಾರತದ ಆಡಳಿತಕ್ಕೆ ಕೈಗನ್ನಡಿಯಾಗಿದೆ. ಈ ದಿನವನ್ನು ನಾವು ಗಣರಾಜ್ಯ ದಿನವಾಗಿ ಆಚರಿಸುತ್ತಾ ಬಂದಿದ್ದೇವೆ ಎಂದರು.

ಭಾರತೀಯರಾದ ನಾವು ದೇಶವನ್ನು ಸರ್ವಸ್ವತಂತ್ರ, ಸಮಾಜವಾದಿ, ಜಾತ್ಯಾತೀತ ಗಣರಾಜ್ಯವಾಗಿ ರೂಪಿಸುವುದಾಗಿ ಸಂವಿಧಾನದಲ್ಲಿ ಘೋಷಿಸಲಾಗಿದೆ. ಇದಕ್ಕೆ ಪೂರಕವಾಗಿ ಸ್ವಾತಂತ್ರ್ಯ, ಸಮಾನತೆ ಹಾಗೂ ನ್ಯಾಯ ರಕ್ಷಿಸುವುದಾಗಿ ಸಂವಿಧಾನದ ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ. ನಮ್ಮ ಸಂವಿಧಾನವು ವಿಶ್ವದ ಬೃಹತ್ ಸಂವಿಧಾನವಾಗಿದೆ. ಒಟ್ಟು 448 ವಿಧಿ, 12 ಪರಿಚ್ಛೇಧ ಹಾಗೂ 103ಕ್ಕೂ ಹೆಚ್ಚು ಬಾರಿ ತಿದ್ದುಪಡಿ ಒಳಗೊಂಡ ಸಂವಿಧಾನವಾಗಿದೆ. ಎಂಥ ಸವಾಲು ಬಂದರೂ ಅವು ಎದುರಿಸಿ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ಭದ್ರವಾಗಿ ನಿಂತಿದೆ ಎಂದು ತಿಳಿಸಿದರು.

ದೇಶದ ಒಕ್ಕೂಟ ವ್ಯವಸ್ಥೆಯಲ್ಲಿ ನಾವೆಲ್ಲರೂ ಕೂಡಿ ಬಾಳಬೇಕಿದೆ. ಕರ್ನಾಟಕ ಸರ್ವ ಜನಾಂಗದ ಶಾಂತಿಯ ತೋಟ. ಇಲ್ಲಿ ಹಿಂದೂ, ಕ್ರೈಸ್ತ, ಮುಸಲ್ಮಾನ, ಪಾರಸಿಕ, ಜೈನರು ಸೇರಿ ಎಲ್ಲಾ ಧರ್ಮ, ಜಾತಿ ಜನಾಂಗದವರು ಸಹೋದರರಂತೆ ಬಾಳುತ್ತಿದ್ದೇವೆ. ಈ ಮೂಲಕ ವಿವಿಧತೆಯಲ್ಲಿ ಏಕತೆಯನ್ನು ಇಡೀ ವಿಶ್ವಕ್ಕೆ ಸಾರಿದ ದೇಶ ನಮ್ಮದು. ಸಂವಿಧಾನದ ಆಶಯಗಳನ್ನು ಎಲ್ಲರೂ ಸೇರಿ ಮುನ್ನಡೆಸೋಣ ಎಂದು ಆಶಿಸಿದರು.

ಕಳೆದ ಐಸಿಸಿ ಸಭೆಯಲ್ಲಿ ಎಲ್ಲ ಜನಪ್ರತಿನಿಧಿಗಳು, ರೈತ ಮುಖಂಡರನ್ನು ಒಳಗೊಂಡು, ನೀರಾವರಿ ಸಲಹಾ ಸಮಿತಿ ಸಭೆ ಮಾಡಿದ್ದೇವೆ. ಎಲ್ಲ ರೈತರಿಗೆ ಬೇಡಿಕೆಗೆ ಅನುಗುಣವಾಗಿ ನೀರು ಪೂರೈಕೆ ಮಾಡುವುದಕ್ಕೆ ನಿರ್ಧರಿಸಲಾಗಿದೆ. ಎಲ್ಲ ಗೇಜ್ ಸರಿಯಾಗಿ ನಿರ್ವಹಿಸಿ ಸರಿಯಾದ ನೀರು ಪೂರೈಕೆ ಖಾತ್ರಿ ಪಡಿಸಲಾಗುತ್ತಿದೆ ಎಂದು ಹೇಳಿದರು.

ಈ ಮೊದಲು ಪೊಲೀಸ್ ಇಲಾಖೆ, ಸಶಸ್ತ್ರ ಮೀಸಲು ಪಡೆ, ಗೃಹ ರಕ್ಷಕದಳ, ಭಾರತ ಸೇವಾದಳ, ಎನ್.ಸಿ.ಸಿ, ಭಾರತ್ ಸ್ಕೌಟ್ಸ್ ಗೈಡ್ಸ್ ತಂಡಗಳು ಜಿಲ್ಲಾ ಕ್ರೀಡಾಂಗಣದಲ್ಲಿ ಆಕರ್ಷಕ ಪಥಸಂಚಲನ ನಡೆಸಿ, ಸಚಿವರಿಗೆ ಗೌರವ ವಂದನೆ ಸಲ್ಲಿಸಿದವು. ಸ್ವಾತಂತ್ರ್ಯ ಹೋರಾಟಗಾರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹುತಾತ್ಮ ದಿನದ ಹಿನ್ನೆಲೆ ಜಿಲ್ಲಾ ಕ್ರೀಡಾಂಗಣದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

ಪ್ರಗತಿ ಪುಸ್ತಕ ಬಿಡುಗಡೆ: ಕೊಪ್ಪಳ ಜಿಲ್ಲಾಡಳಿತ ಹೊರತಂದ ವಿವಿಧ ಇಲಾಖೆಗಳ ಪ್ರಗತಿ ಮಾಹಿತಿ ಒಳಗೊಂಡ ''ವಿಕಾಸ್'' ಪುಸ್ತಕವನ್ನು ಸಚಿವರು, ಸಂಸದರು, ಶಾಸಕರು ಸೇರಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಇದೇ ಸಂದರ್ಭದಲ್ಲಿ ಬಿಡುಗಡೆಗೊಳಿಸಿದರು. ಕೊಪ್ಪಳದ ಬಾಲಕಿಯರ ಪಿಯು ಕಾಲೇಜು ಮತ್ತು ಜ್ಞಾನಬಂಧು ಪಿಯು ಕಾಲೇಜು ವಿದ್ಯಾರ್ಥಿಗಳು ದೇಶಭಕ್ತಿ ಗೀತೆಗಳಿಗೆ ನೃತ್ಯ ಮಾಡಿದರು. ಪಥಸಂಚಲನದಲ್ಲಿ ಭಾಗವಹಿಸಿದ ತಂಡಗಳಿಗೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ಮಕ್ಕಳಿಗೆ ಪ್ರಶಸ್ತಿ ಪತ್ರ ನೀಡಲಾಯಿತು.

ಕೊಪ್ಪಳದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 76ನೇ ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ಸಚಿವ ಶಿವರಾಜ ತಂಗಡಗಿ ಗೌರವ ವಂದನೆ ಸ್ವೀಕರಿಸಿದರು.

> ಕೊಪ್ಪಳ ಜಿಲ್ಲೆಯ ತೊಗಲು ಗೊಂಬೆ ಆಟದ ಕಲಾವಿದೆ ಭೀಮವ್ವ ಶಿಳ್ಳೇಕ್ಯಾತರ ಪದ್ಮಶ್ರೀ ಪ್ರಶಸ್ತಿಗೆ ಭಾಜನವಾಗಿರುವುದು ರಾಜ್ಯಕ್ಕೆ ಹೆಮ್ಮೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ರಾಜ್ಯ ಸರಕಾರ ಪದ್ಮಶ್ರೀ ಪ್ರಶಸ್ತಿಗೆ ಭೀಮವ್ವ ಶಿಳ್ಳೇಕ್ಯಾತರ ಅವರ ಹೆಸರನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡಿತ್ತು. ಜಿಲ್ಲೆಯ ಮುನಿರಾಬಾದ್ ಐಆರ್ ಬಿ ಕಮಾಂಡೆಂಟ್ ಬಿ.ಎಂ.ಪ್ರಸಾದ್ ರಿಗೆ ರಾಷ್ಟ್ರಪತಿ ವಿಶಿಷ್ಟ ಸೇವಾ ಪದಕ ದೊರೆತಿದೆ. ಈ ಇಬ್ಬರು ಸಾಧಕರಿಗೆ ಅಭಿನಂಧನೆ ಸಲ್ಲಿಸುತ್ತೇನೆ.
>
> - ಶಿವರಾಜ ತಂಗಡಗಿ, ಜಿಲ್ಲಾ ಉಸ್ತುವಾರಿ ಸಚಿವ

ಭೀಮವ್ವರಿಗೆ ಸನ್ಮಾನ

2025ನೇ ಸಾಲಿನ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿರುವ ಕೊಪ್ಪಳ ಜಿಲ್ಲೆಯ ತೊಗಲುಗೊಂಬೆ ಕಲಾವಿದೆ ಭೀಮವ್ವ ಶಿಳ್ಳೇಕ್ಯಾತರ ಮತ್ತು ಕರ್ನಾಟಕ ಮಾಧ್ಯಮ ಅಕಾಡೆಮಿ ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾದ ಹಿರಿಯ ಪತ್ರಕರ್ತ ಹೆಚ್.ಎಸ್.ಹರೀಶ್ ಹಾಗೂ ಸೀರಾಜ ಬಿಸರಳ್ಳಿ ಮತ್ತು ಅಕಾಡೆಮಿಯ ದತ್ತಿ ಪ್ರಶಸ್ತಿಗೆ ಆಯ್ಕೆಯಾದ ಪತ್ರಕರ್ತ ಮೋಹಮ್ಮದ್ ಅಖೀಲ್ ಉಡೇವು ಮತ್ತು ಇತರೆ ಸಾಧಕರಿಗೂ ಸನ್ಮಾನಿಸಲಾಯಿತು.

ದ್ವಿಚಕ್ರ ವಾಹನಗಳ ವಿತರಣೆ

2024-25ನೇ ಸಾಲಿನ ರಾಜ್ಯ ಹಣಕಾಸು ಆಯೋಗ ಜಿಲ್ಲಾ ಪಂಚಾಯತ್ ಅನಿರ್ಬಂಧಿತ ಶೇ.5ರ ಅನುದಾನದಲ್ಲಿ ದೈಹಿಕ ವಿಕಲಚೇತನರಿಗೆ 15 ಯಂತ್ರಚಾಲಿತ ದ್ವಿಚಕ್ರ ವಾಹನ ಅರ್ಹ ಫಲಾನುಭವಿಗಳಿಗೆ ಸಚಿವರು ವಿತರಣೆ ಮಾಡಿದರು. ನಂತರ ಕ.ಕ. ಪ್ರದೇಶಾಭಿವೃದ್ಧಿ ಯೋಜನೆಯಡಿ ಕೊಪ್ಪಳ ನಗರದಲ್ಲಿ ನಡೆಯುತ್ತಿರುವ ವಿವಿಧ ಕಾಮಗಾರಿಗೆ ಸಚಿವರು ಶಂಕುಸ್ಥಾಪನೆ ನೆರವೇರಿಸಿದರು.

ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಅಧ್ಯಕ್ಷತೆ ವಹಿಸಿದ್ದರು. ಸಂಸದ ಕೆ.ರಾಜಶೇಖರ ಹಿಟ್ನಾಳ, ಎಂಎಲ್ಸಿ ಹೇಮಲತಾ ನಾಯಕ, ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಶ್ರೀನಿವಾಸ ಗುಪ್ತಾ, ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೆ, ಎಸ್ಪಿ ಡಾ. ರಾಮ್ ಎಲ್ ಅರಸಿದ್ದಿ, ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಾವ್ಯ ಚತುರ್ವೇದಿ, ಎಡಿಸಿ ಸಿದ್ರಾಮೇಶ್ವರ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಎಎಸ್ಪಿ ಹೇಮಂತ ಕುಮಾರ್, ತಹಸೀಲ್ದಾರ ವಿಠ್ಠಲ ಚೌಗಲಾ ಸೇರಿ ಇತರರು ಇದ್ದರು.

ಎಲ್ಲರನ್ನೂ ಗೌರವಿಸುವುದೇ ದೇಶಪ್ರೇಮ

ರಾಯಚೂರು: ಸ್ವತಂತ್ರ ಸ್ವಾಯತ್ತ ಸಂಸ್ಥೆಗಳು ಸಂವಿಧಾನ ಬದ್ಧ, ಪ್ರಾಮಾಣಿಕವಾಗಿ ಯಾರ ಮುಲಾಜಿಲ್ಲದೆ ಕಾರ್ಯ ನಿರ್ವಹಿಸಬೇಕು. ಅಧಿಕಾರ ಯಾರಿಗೂ ಶಾಶ್ವತ ಅಲ್ಲ. ನಾವು ಮಾಡುವ ಸತ್ಕಾರ್ಯಗಳೆ ಶಾಶ್ವತ. ನಾವೆಲ್ಲರೂ ದೇಶಪ್ರೇಮ ಬೆಳೆಸಿಕೊಳ್ಳಬೇಕು. ನಿಜವಾದ ದೇಶ ಪ್ರೇಮವೆಂದರೆ ಎಲ್ಲರನ್ನೂ ಪ್ರೀತಿಸುವುದು, ಗೌರವಿಸುವುದಾಗಿದೆ ಎಂದು ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ಆಗಿರುವ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಶರಣಪ್ರಕಾಶ್ ಪಾಟೀಲ್ ಅವರು ಹೇಳಿದರು.

ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಗಣರಾಜ್ಯೊತ್ಸವದ ಅಂಗವಾಗಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಈ ದೇಶ ಎಲ್ಲರಿಗೂ ಸೇರಿದೆ. ಎಲ್ಲರಿಗೂ ಸಮಾನತೆ ಇದೆ ಎನ್ನುವಂತಹ ವಿಷಯಗಳ ಬಗ್ಗೆ ನಾವಿಂದು ನಮ್ಮ ಮಕ್ಕಳು, ನಮ್ಮ ಮುಂದಿನ ಪೀಳಿಗೆಗೆ ಹೇಳುತ್ತಿದ್ದೇವೆ. ಈ ರೀತಿ ಮನವರಿಕೆ ಮಾಡುವ ಮಹತ್ಕಾರ್ಯದಿಂದಲೇ ನಾವಿಂದು ಶಾಂತಿ ಸಹಬಾಳ್ವೆಯಿಂದಿರಲು ಸಾಧ್ಯವಾಗಿದೆ ಎಂದರು.

ಈ ಜಗದ ಮಕ್ಕಳೆಲ್ಲರೂ ಸಮಾನರು, ನಾವೆಲ್ಲ ಸೇರಿಯೇ ದೇಶ ಕಟ್ಟಬೇಕಿದೆ ಎಂಬುದಾಗಿ ತಿಳಿಸುವ ಮಹತ್ವದ ಕಾರ್ಯವನ್ನು ನಮ್ಮೆಲ್ಲ ಶಿಕ್ಷಕರು ಸೇರಿ ಮಾಡಬೇಕು. ಇದು ಎಲ್ಲ ಶಿಕ್ಷಕ ಸಮುದಾಯದ ಮಹತ್ವದ ಕರ್ತವ್ಯವಾಗಿದೆ ಎಂದು ಹೇಳಿದರು.

ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಗಣರಾಜ್ಯೊತ್ಸವದ ಅಂಗವಾಗಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಲಾಯಿತು.

ನಮ್ಮ ದೇಶದಲ್ಲಿ ಸ್ವಾತಂತ್ರ್ಯೋತ್ಸವ ಮತ್ತು ಪ್ರಜಾರಾಜ್ಯೋತ್ಸವವು ಮಹತ್ವದ ರಾಷ್ಟ್ರೀಯ ಹಬ್ಬಗಳಾಗಿವೆ. ಸ್ವಾತಂತ್ರ್ಯ ಚಳವಳಿಯು ಮಹಾತ್ಮ ಗಾಂಧೀಜಿ ಸೇರಿದಂತೆ ಹಲವಾರು ನಾಯಕರ ನೇತೃತ್ವದಲ್ಲಿ ವಿಶ್ವವೇ ಬೆರಗಾಗುವಂತೆ ನಡೆಯಿತು. ಈ ಚಳುವಳಿಯಲ್ಲಿ ಅನೇಕ ಮಹನಿಯರು ದೇಶಕ್ಕಾಗಿ ಆಸ್ತಿ ಪಾಸ್ತಿ ತ್ಯಾಗ ಮಾಡಿದರು.

ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯು ಸರಿಯಾಗಿದೆ ಎಂಬುದು ನಮ್ಮ ಜನತೆ ಎಷ್ಟು ಜಾಗೃತರಾಗಿದ್ದಾರೆ ಎಂಬುದರ ಮೇಲೆಯೇ ನಿರ್ಣಯವಾಗುತ್ತದೆ ಎಂದ ಸಚಿವರು, ನಮ್ಮ ಸಂವಿಧಾನ ಹೇಳುವಂತೆ ಸಮಾಜದಲ್ಲಿನ ಎಲ್ಲರಿಗೂ ಅವಕಾಶ ಸೌಕರ್ಯಗಳು ಸಮರ್ಪಕವಾಗಿ ಸಮಾನವಾಗಿ ದೊರೆಯುವಂತೆ ಮಾಡುವಲ್ಲಿ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿ ವರ್ಗವು ಸಹ ಎಚ್ಚರಿಕೆಯಿಂದ ಕೆಲಸ ಮಾಡಬೇಕಿದೆ ಎಂದು ಸಲಹೆ ಮಾಡಿದರು.

ಸಮಾರಂಭದಲ್ಲಿ ರಾಯಚೂರ ಗ್ರಾಮೀಣ ಶಾಸಕ ಬಸನಗೌಡ ದದ್ದಲ್, ವಿಧಾನ ಪರಿಷತ್ ಸದಸ್ಯ ಎ ವಸಂತಕುಮಾರ, ನಗರಸಭೆ ಅಧ್ಯಕ್ಷೆ ನರಸಮ್ಮ ಮಾಡಗಿರಿ, ಜಿಲ್ಲಾಧಿಕಾರಿ ನಿತೀಶ ಕೆ., ಜಿಲ್ಲಾ ಪಂಚಾಯಿತಿ ಸಿಇಒ ರಾಹುಲ್ ತುಕಾರಾಂ ಪಾಂಡ್ವೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ, ಅಪರ ಜಿಲ್ಲಾಧಿಕಾರಿ ಶಿವಾನಂದ, ತಹಸೀಲ್ದಾರ ಸುರೇಶ ವರ್ಮಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮೂಲಭೂತ ಹಕ್ಕುಗಳು ನಾಗರಿಕರ ಬೆಳವಣಿಗೆಗೆ ಪೂರಕ

ಲಿಂಗಸುಗೂರು: ಸಂವಿಧಾನದ ಆಶಯಗಳ ಕುರಿತು ಶಾಲಾ ಕಾಲೇಜುಗಳ ಮಕ್ಕಳಿಗೆ, ಸಾರ್ವಜನಿಕರಿಗೆ ತಿಳಿಹೇಳಿ, ಪಾಲಿಸುವಂತೆ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಸಹಾಯಕ ಆಯುಕ್ತರಾದ ಬಸವಣ್ಣೆಪ್ಪ ಕಲಶೆಟ್ಟಿ ಹೇಳಿದರು.

ತಾಲೂಕು ಆಡಳಿತದಿಂದ ತಾಲೂಕು ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಸಂವಿಧಾನ ದೇಶದ ಹೆಮ್ಮೆಯ ವಿಷಯ ಸಂವಿಧಾನದ ಕಲಂ 51.ಎ. ಮೂಲಭೂತ ಕರ್ತವ್ಯಗಳ ಪಾಲನೆ ಮಾಡುವುದು ಪ್ರತಿಯೊಬ್ಬ ಭಾರತೀಯ ನಾಗರಿಕರ ಜವಾಬ್ದಾರಿಯಾಗಿದೆ.14 ರಿಂದ 32 ರವರೆಗೆ ಮೂಲಭೂತ ಹಕ್ಕುಗಳ ಪ್ರತಿಪಾದನೆ ಮಾಡಲಾಗಿದೆ. ದೇಶ ಮುನ್ನಡೆಸಲು ಸಂವಿಧಾನವೇ ಮಾರ್ಗದರ್ಶಿಯಾಗಿದೆ ಎಂದರು. ಪೊಲೀಸ್ ಇಲಾಖೆ, ಗೃಹ ರಕ್ಷಕ ದಳ, ಸ್ಕೌಟ್ಸ್ ಗೈಡ್ಸ್ ಮತ್ತು ವಿವಿಧ ಶಾಲಾ ಮಕ್ಕಳಿಂದ ಪಥಸಂಚಲನ ಜರುಗಿತು. ಕೊನೆಯಲ್ಲಿ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಶಾಸಕ ಮಾನಪ್ಪ ವಜ್ಜಲ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷ ಬಾಬುರೆಡ್ಡಿ ಮುನ್ನೂರು, ಎಪಿಎಂಸಿ ಅಧ್ಯಕ್ಷ ಅಮರೇಶ ದೊಡ್ಡಪ್ಪ, ತಹಶೀಲ್ದಾರ್ ಎನ್. ಶಂಶಾಲಂ, ಪೊಲೀಸ್ ಉಪವಿಭಾಗಾಧಿಕಾರಿ ದತ್ತಾತ್ರೇಯ ಕರ್ನಾಡ್, ತಾಲೂಕು ಆರೋಗ್ಯಾಧಿಕಾರಿ ಡಾ. ಅಮರೇಶ ಮಾಕಾಪೂರ, ಕ್ಷೇತ್ರ ಶಿಕ್ಷಣಾಧಿಕಾರಿ ಹುಂಬಣ್ಣ ರಾಠೋಡ, ಸಿಪಿಐ ಪುಂಡಲೀಕ ಪಟ್ಟೇದಾರ್, ಗೃಹ ರಕ್ಷಕ ದಳದ ಘಟಕಾಧಿಕಾರಿ ತಿಮ್ಮನಗೌಡ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ಗಣ್ಯರು ನೆರವೇರಿಸಿದರು.

ಸಂವಿಧಾನದ ಘೋಷಣೆ
- ಸರ್ವಸ್ವತಂತ್ರ
- ಸಮಾಜವಾದಿ
- ಜಾತ್ಯಾತೀತ
- ಸ್ವಾತಂತ್ರ್ಯ, ಸಮಾನತೆ
- ನ್ಯಾಯ ರಕ್ಷಿಸುವುದು

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ನಾಡದೇವಿ ಭುವನೇಶ್ವರಿ
ಕಂಚಿನ ಪ್ರತಿಮೆ
ಅನಾವರಣ ಕಾರ್ಯಕ್ರಮ

ದಿನಾಂಕ : 27.01.2025, ಸೋಮವಾರ, ಸಮಯ: ಸಂಜೆ 4.30 ಗಂಟೆಗೆ
ಸ್ಥಳ : ವಿಧಾನಸೌಧದ ಪಶ್ಚಿಮ ದಿಕ್ಕಿನ ಗೇಟ್ ನಂ.1 ಮತ್ತು 2ರ ನಡುವೆ, ಬೆಂಗಳೂರು

ಪ್ರತಿಮೆಯ ಅನಾವರಣ: ಶ್ರೀ ಸಿದ್ದರಾಮಯ್ಯ, ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಗೌರವ ಉಪಸ್ಥಿತಿ

ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಕೇಂದ್ರ ಹಣಕಾಸು ಕಾರ್ಪೋರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಕುಮಾರಿ ಶೋಭಾ ಕರಂದ್ಲಾಜೆ
ಮಾನ್ಯ ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಕಾರ್ಮಿಕ ಉದ್ಯೋಗ ರಾಜ್ಯ ಸಚಿವರು ಭಾರತ ಸರ್ಕಾರ

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ರವರೊಂದಿಗೆ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀ ಶಿವರಾಜ ಎಸ್. ತಂಗಡಗಿ ರವರು ಸಮಾರಂಭದಲ್ಲಿ ಭಾಗವಹಿಸಿರುವುದು.

ಘನ ಉಪಸ್ಥಿತಿ

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ — ಸನ್ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್
ಶ್ರೀ ಯು.ಟಿ. ಖಾದರ್ — ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ
ಶ್ರೀ ಶಿವರಾಜ ಎಸ್. ತಂಗಡಗಿ — ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು
ಶ್ರೀ ಸತೀಶ ಜಾರಕಿಹೊಳಿ — ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರು

ಅಧ್ಯಕ್ಷತೆ

ಶ್ರೀ ರಿಜ್ವಾನ್ ಅರ್ಷದ್ — ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ

ಮುಖ್ಯ ಅತಿಥಿಗಳು

ಶ್ರೀ ರಾಮಲಿಂಗಾರೆಡ್ಡಿ — ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಶ್ರೀ ಕೆ.ಜೆ. ಜಾರ್ಜ್ — ಮಾನ್ಯ ಇಂಧನ ಸಚಿವರು
ಶ್ರೀ ದಿನೇಶ್ ಗುಂಡೂರಾವ್ — ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು
ಶ್ರೀ ಕೃಷ್ಣ ಭೈರೇಗೌಡ — ಮಾನ್ಯ ಕಂದಾಯ ಸಚಿವರು
ಶ್ರೀ ಸುರೇಶ ಬಿ.ಎಸ್. — ಮಾನ್ಯ ನಗರಾಭಿವೃದ್ಧಿ ಸಚಿವರು
ಶ್ರೀ ಬಿ. ಝಡ್. ಜಮೀರ್ ಅಹಮದ್ ಖಾನ್ — ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು
ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ — ಮಾನ್ಯ ವಿರೋಧ ಪಕ್ಷದ ನಾಯಕರು ಕರ್ನಾಟಕ ವಿಧಾನ ಪರಿಷತ್
ಶ್ರೀ ಆರ್. ಅಶೋಕ್ — ಮಾನ್ಯ ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನಸಭೆ
ಶ್ರೀ ಅಶೋಕ್ ಮಹದೇವಪ್ಪ ಪಟ್ಟಣ್ — ಮಾನ್ಯ ಸರ್ಕಾರಿ ಮುಖ್ಯ ಸಚೇತಕರು ಕರ್ನಾಟಕ ವಿಧಾನಸಭೆ
ಶ್ರೀ ಸಲೀಂ ಅಹ್ಮದ್ — ಮಾನ್ಯ ಸರ್ಕಾರಿ ಮುಖ್ಯ ಸಚೇತಕರು ಕರ್ನಾಟಕ ವಿಧಾನ ಪರಿಷತ್
ಶ್ರೀ ದೊಡ್ಡನಗೌಡ ಎಚ್. ಪಾಟೀಲ್ — ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು, ಕರ್ನಾಟಕ ವಿಧಾನಸಭೆ
ಶ್ರೀ ಎನ್.ಎ. ಹ್ಯಾರೀಸ್ — ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ
ಶ್ರೀ ಬಿ. ಶಿವಣ್ಣ — ಮಾನ್ಯ ಅಧ್ಯಕ್ಷರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಹಾಗೂಶಾಸಕರು, ಆನೇಕಲ್ ವಿಧಾನಸಭಾ ಕ್ಷೇತ್ರ
ಡಾ. ಕೆ. ಗೋವಿಂದರಾಜ್ — ಮಾನ್ಯ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳು ಹಾಗೂ ಶಾಸಕರು, ವಿಧಾನ ಪರಿಷತ್
ಶ್ರೀ ನಸೀರ್ ಅಹ್ಮದ್ — ಮಾನ್ಯ ಮುಖ್ಯಮಂತ್ರಿಯವರ ರಾಜಕೀಯಕಾರ್ಯದರ್ಶಿಗಳು ಹಾಗೂ ಶಾಸಕರು, ವಿಧಾನ ಪರಿಷತ್
ಡಾ. ಪುರುಷೋತ್ತಮ ಬಿಳಿಮಲೆ — ಮಾನ್ಯ ಅಧ್ಯಕ್ಷರು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು

ನುಡಿದಂತೆ ನಡೆದಿದ್ದೇವೆ... ಶಕ್ತಿ | ಗೃಹಜ್ಯೋತಿ | ಅನ್ನಭಾಗ್ಯ | ಗೃಹಲಕ್ಷ್ಮಿ ₹2000 | ಯುವನಿಧಿ ₹3000 | ₹1500

ಅತಿಥಿಗಳು : ಬೆಂಗಳೂರು ನಗರದ ಮಾನ್ಯ ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು, ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಹಾಗೂ ಚುನಾಯಿತ ಪ್ರತಿನಿಧಿಗಳು

"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು" – ಇದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಕರ್ತವ್ಯ.

ಸರ್ವರಿಗೂ ಆದರದ ಸುಸ್ವಾಗತ

ಡಾ. ಎನ್. ಮಂಜುಳ, ಭಾ.ಆ.ಸೇ. — ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಡಾ. ಧರಣೀದೇವಿ ಮಾಲಗತ್ತಿ, ಭಾ.ಪೊ.ಸೇ. — ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ. — ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ
ಕೆ. ಸತ್ಯನಾರಾಯಣ ಬಿ.ಇ., ಎಫ್.ಐ.ಇ — ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ

ಬನ್ನಿ, ನಾಡದೇವಿಯ ಕಂಚಿನ ಪ್ರತಿಮೆಯ ಅನಾವರಣದ ಐತಿಹಾಸಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳೋಣ.

ಟ್ವೀಟೂ-ಖಾರಾ

ಜಾತ್ಯತೀತ ಜನತಾ ದಳ, ಕರ್ನಾಟಕ

ಪುಡಿಗಾಸು 5 ಲಕ್ಷ ರು. ಘೋಷಿಸಿ ಚೊಚ್ಚಲ ಖೋ ಖೋ ವಿಶ್ವಕಪ್ ಗೆದ್ದ ಭಾರತ ತಂಡದಲ್ಲಿದ್ದ ಕರ್ನಾಟಕದ ಖೋ ಖೋ ಆಟಗಾರರಿಗೆ ಕಾಂಗ್ರೆಸ್ ಸರಕಾರ ಅವಮಾನಿಸಿರುವುದು ಸರಿಯಲ್ಲ. ಪಕ್ಕದ ಕೇರಳ ರಾಜ್ಯಕ್ಕೆ ಸದಾ ಮಿಡಿಯುವ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಮನ ಕನ್ನಡಿಗರಾದ ಬಿ.ಚೈತ್ರಾ ಹಾಗೂ ಎಂ.ಕೆ.ಗೌತಮ್ ಅವರ ಅಮೋಘ ಸಾಧನೆಗೆ ಮಿಡಿಯದಿರುವುದು ವಿಪರ್ಯಾಸ.

ನವೀನ್ ಕೆ., ಬೆಂಗಳೂರು

5 ಲಕ್ಷ ಪುಡಿಗಾಸೇ ಸ್ವಾಮಿ..! ಇತರ ರಾಜ್ಯಗಳು ಸ್ಪಷ್ಟವಾಗಿ ಎಷ್ಟು ನೀಡಿವೆ ಎಂಬುದು ಮುಖ್ಯವಲ್ಲ. ಸರಿಯಾದ ಪ್ರೋತ್ಸಾಹ ಕ್ರೀಡೆಗಳಿಗೆ, ಕ್ರೀಡಾಪಟುಗಳಿಗೆ ಸಿಗಬೇಕು ಎಂಬುದನ್ನು ಸೂಕ್ತವಾಗಿ ಆಗ್ರಹಿಸಿ.

ಗ್ಯಾರಂಟಿ ಹೊರತಾಗಿಯೂ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯ ನಿಂತಿಲ್ಲ | ಗೆಹ್ಲೋಟ್ ಭಾಷಣದ ಮೂಲಕ ಪ್ರತಿಪಕ್ಷಗಳಿಗೆ ಸರಕಾರದ ತಿರುಗೇಟು

ಸರಕಾರಕ್ಕೆ ರಾಜ್ಯಪಾಲರಿಂದ ಪೂರ್ಣಾಂಕ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜಧಾನಿಯಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಜ್ಯ ಸರಕಾರದ ಸಾಧನೆಗಳ ಕುರಿತು ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಕೊಂಡಾಡಿದ್ದಾರೆ.

ಗಣರಾಜ್ಯೋತ್ಸವ ಅಂಗವಾಗಿ ಬೆಂಗಳೂರಿನ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಭಾಷಣ ಮಾಡಿದ ಅವರು, 24 ಪುಟಗಳ ಭಾಷಣ ಓದಿ ಸರಕಾರದ ಸಾಧನೆಯನ್ನು ಜನರಿಗೆ ಸಂದೇಶ ಸಾರಿದರು. ಪ್ರಮುಖವಾಗಿ ಗ್ಯಾರಂಟಿ ಯೋಜನೆ ಸರಕಾರದ ಸಾಧನೆ. ಗ್ಯಾರಂಟಿ ಯೋಜನೆಯ ಹೊರತಾಗಿಯೂ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ನಿಂತಿಲ್ಲ ಎಂದು ಸರಕಾರ ರಾಜ್ಯಪಾಲರ ಮೂಲಕ ಸಂದೇಶ ಕೊಟ್ಟಿತು. ಕಾನೂನು ಸುವ್ಯವಸ್ಥೆಯೂ ಉತ್ತಮವಾಗಿದೆ ಎಂದು ಪ್ರತಿಪಕ್ಷಗಳಿಗೆ ರಾಜ್ಯಪಾಲರ ಭಾಷಣದ ಮೂಲಕ ಸರಕಾರ ತಿರುಗೇಟು ನೀಡಿದೆ. ಅಲ್ಲದೇ ಕಾಂಗ್ರೆಸ್ ಸರಕಾರ ಬಂದಾಗಿನಿಂದ ಯಾವೆಲ್ಲ ಅಭಿವೃದ್ಧಿ ಕೆಲಸ, ಅಭಿವೃದ್ಧಿ ಯೋಜನೆಗಳು ಜಾರಿ ಮಾಡಲಾಗಿದೆ ಎಂದು ಅಂಕಿ ಅಂಶಗಳ ಸಮೇತ ಸರಕಾರ ತನ್ನ ಸಾಧನೆಯನ್ನು ಬಿಚ್ಚಿಟ್ಟಿದೆ ಎಂದು ತಿಳಿಸಿದರು.

ಕೃಷಿಕರಿಗೆ ನೆರವಿನ ಮಹಾಪೂರ: 2024-25ನೇ ಸಾಲಿನಲ್ಲಿ 18.51 ಲಕ್ಷ ರೈತರಿಗೆ 15,612.24 ಕೋಟಿ ಮೌಲ್ಯದ ಅಲ್ಪಾವಧಿ ಬೆಳೆ ಸಾಲ ನೀಡಲಾಗಿದೆ. 39,439 ರೈತರಿಗೆ 1,165.12 ಕೋಟಿ ಮೌಲ್ಯದ ಮಧ್ಯಮ ಮತ್ತು ದೀರ್ಘಾವಧಿಯ ಕೃಷಿಸಾಲ ನೀಡಲಾಗಿದೆ. ಇತಿಹಾಸದಲ್ಲಿ ಮೊದಲ ಬಾರಿಗೆ ಕರ್ನಾಟಕ ಆಸ್ತಿ ಸಮೀಕ್ಷೆಗೆ ಡ್ರೋನ್ ಸಮೀಕ್ಷೆ ನಡೆಸಿ ಸ್ವಾಮಿತ್ವ ಯೋಜನೆ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಹಾಲು ಉತ್ಪಾದಕರ ಪ್ರೋತ್ಸಾಹ ಯೋಜನೆಯಡಿ 8.90 ಲಕ್ಷ ಹಾಲು ಉತ್ಪಾದಕರಿಗೆ 1,124.15 ಕೋಟಿ ಪ್ರೋತ್ಸಾಹಧನ ನೀಡಲಾಗಿದೆ. ಮತ್ಸ್ಯ ಯೋಜನೆ ಪರಿಹಾರ ಮೊತ್ತ 1,500 ರಿಂದ 3 ಸಾವಿರ ರು.ಗಳಿಗೆ ಹೆಚ್ಚಿಸಲಾಗಿದೆ ಎಂದು ಥಾವರ್‌ಚಂದ್ ಗೆಹ್ಲೋಟ್ ವಿವರಿಸಿದರು.

120 ಕೋಟಿ ಪೌಷ್ಟಿಕ ಆಹಾರ ಕಿಟ್ ವಿತರಣೆ: ಪೌಷ್ಟಿಕ ಆಹಾರ ಯೋಜನೆಯಡಿ 12 ಪರಿಶಿಷ್ಟ ಸಮುದಾಯಗಳ 47,859 ಕುಟುಂಬಗಳಿಗೆ 120 ಕೋಟಿ ಪೌಷ್ಟಿಕ ಆಹಾರ ವಿತರಣೆ ಮಾಡಲಾಗಿದೆ. ದೇಶದಲ್ಲಲ್ಲೇ ಮೊದಲ ಬಾರಿಗೆ ಕೆಎಸ್‌ಆರ್‌ಟಿಸಿ ನೌಕರರ ಅನುಕೂಲಕ್ಕಾಗಿ ವಿಶಿಷ್ಟ ಯೋಜನೆ ಜಾರಿಯಾಗಿದೆ. ಅಪಘಾತದಲ್ಲಿ ಸಾರಿಗೆ ನೌಕರರು ಮೃತಪಟ್ಟರೆ ಒಂದು ಕೋಟಿ ರು. ವಿಮಾ ಯೋಜನೆ ಅನುಷ್ಠಾನಗೊಂಡಿದೆ. ಕರ್ನಾಟಕದ ಪೊಲೀಸರು, ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆ ಮತ್ತು ಅಪರಾಧ ಪತ್ತೆ ಮತ್ತು ನಿಯಂತ್ರಣದಲ್ಲಿ ಉತ್ತಮ ಪ್ರಗತಿ ಸಾಧಿಸಿದ್ದಾರೆ ಎಂದು ರಾಜ್ಯಪಾಲರು ಪ್ರಶಂಸಿಸಿದರು.

ಹೆಸರಘಟ್ಟ ಹುಲ್ಲುಗಾವಲು ಪ್ರದೇಶವನ್ನು ಗ್ರೇಟರ್ ಹೆಸರಘಟ್ಟ ಹುಲ್ಲುಗಾವಲು ಸಂರಕ್ಷಣಾ ಮೀಸಲು ಪ್ರದೇಶ ಎಂದು ಘೋಷಣೆ ಮಾಡಲು ನಿರ್ಧಾರ ಮಾಡಲಾಗಿದೆ. ಶಾಲಾ ಮಕ್ಕಳಿಗೆ 6 ದಿನ ಮೊಟ್ಟೆ ಕೊಡಲಾಗುತ್ತಿದೆ. ಬೆಳಗಾವಿಯಲ್ಲಿ ಗಾಂಧಿಭಾರತ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿತ್ತು. ಬಿಡಿಎ 34 ಸ್ಥಳಗಳಲ್ಲಿ ವಸತಿ ಸಂಕೀರ್ಣಗಳನ್ನು ನಿರ್ಮಿಸುವ ಮೂಲಕ 30 ಸಾವಿರ ವಸತಿ ಘಟಕಗಳನ್ನು ವಿತರಿಸುವ ಗುರಿ ಹೊಂದಲಾಗಿದೆ. ಈವರೆಗೆ 25 ಯೋಜನೆಗಳಲ್ಲಿ 14,909 ಫ್ಲ್ಯಾಟ್ ನಿರ್ಮಾಣ ಪ್ರಾರಂಭ ಮಾಡಲಾಗಿದೆ. 10,615 ಫ್ಲ್ಯಾಟ್ ನಿರ್ಮಾಣ ಕಾರ್ಯ ಮುಗಿದಿದೆ ಎಂದು ಗೆಹ್ಲೋಟ್ ಮಾಹಿತಿ ನೀಡಿದರು.

ಗಣರಾಜ್ಯೋತ್ಸವದಲ್ಲಿ ಪಾಲ್ಗೊಳ್ಳಲು ಬೆಂಗಳೂರಿನ ಮಾಣಿಕ್ ಷಾ ಮೈದಾನಕ್ಕೆ ಆಗಮಿಸಿದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾರ್ದಿಕವಾಗಿ ಸ್ವಾಗತಿಸಿದರು. ಸಿಎಂ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜು ಇದ್ದರು.

ಜಿಎಸ್‌ಟಿ ಆದಾಯದಲ್ಲಿ ಕರ್ನಾಟಕಕ್ಕೆ 2ನೇ ಸ್ಥಾನ

ರಾಜ್ಯಗಳ ಒಟ್ಟು ಜಿಎಸ್‌ಟಿ ಆದಾಯದಲ್ಲಿ ಕರ್ನಾಟಕ ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ. 2024-25ರಲ್ಲಿ ಏಪ್ರಿಲ್‌ನಿಂದ ಸೆಪ್ಟೆಂಬರ್ 2024 ರವರೆಗೆ 88.853 ದಶಲಕ್ಷ ಅಮೆರಿಕ ಡಾಲರ್ ಮೌಲ್ಯದಷ್ಟು ರಫ್ತು ಮಾಡಿದೆ. ರಫ್ತಿನಲ್ಲಿ ನಾವು ಮೊದಲ ಸ್ಥಾನದಲ್ಲಿದ್ದೇವೆ. ಕಳೆದ ವರ್ಷಕ್ಕಿಂತ ಶೇ.11.17 ರಷ್ಟು ಬೆಳವಣಿಗೆಯನ್ನು ರಾಜ್ಯ ಸಾಧಿಸಿದೆ. 2024-25ರ ಅವಧಿಯಲ್ಲಿ 2,491 ಕಿಲೋ ಮೀಟರ್ ರಾಜ್ಯ ಹೆದ್ದಾರಿಗಳು, 3,103 ಕಿ.ಮೀ ಪ್ರಮುಖ ಜಿಲ್ಲಾ ರಸ್ತೆಗಳ ಸುಧಾರಣೆ ಮತ್ತು ನವೀಕರಣ ಪೂರ್ಣಗೊಂಡಿದೆ. 190 ಸೇತುವೆ ನಿರ್ಮಾಣ ಮಾಡಲಾಗಿದೆ. ರಾಜ್ಯಸ್ವ ಸಂಗ್ರಹದಲ್ಲಿ ರಾಜ್ಯ ಸರಕಾರ ಪ್ರಗತಿ ಸಾಧಿಸಿದೆ. ಡಿಸೆಂಬರ್ ವೇಳೆಗೆ 1,81,908 ಕೋಟಿ ಆದಾಯ ಸಂಗ್ರಹ ಮಾಡಲಾಗಿದೆ. ಶೇ.13 ಬೆಳವಣಿಗೆ ಸಾಧಿಸಿದೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ತಿಳಿಸಿದರು.

ರಾಜ್ಯಪಾಲರ ಭಾಷಣದ ಪ್ರಮುಖ ಅಂಶಗಳು

ಗೃಹಲಕ್ಷ್ಮಿ: ಈ ಯೋಜನೆಯಡಿ, ಆಗಸ್ಟ್ 2023ರಿಂದ ಪ್ರತಿ ಕುಟುಂಬದ ಯಜಮಾನಿಯರಿಗೆ ಮಾಸಿಕ 2,000 ರು.ನಂತೆ ಒಟ್ಟು 35,180.20 ಕೋಟಿ ರು. ಆರ್ಥಿಕ ನೆರವು ನೀಡಿಕೆ.

ಗೃಹಜ್ಯೋತಿ: ಯೋಜನೆಯಡಿ, ಪ್ರಸ್ತುತ 1.62 ಕೋಟಿ ಗ್ರಾಹಕರು ಪ್ರಯೋಜನ ಪಡೆಯುತ್ತಿದ್ದಾರೆ. ಸರಕಾರವು ಆಗಸ್ಟ್ 2023 ರಿಂದ ಈವರೆಗೆ (18 ತಿಂಗಳು) ವಿದ್ಯುತ್ ಸರಬರಾಜು ಕಂಪನಿಗಳಿಗೆ 13,409 ಕೋಟಿ ರು. ಸಬ್ಸಿಡಿ ಮೊತ್ತ ಬಿಡುಗಡೆ .

ಸ್ತ್ರೀಶಕ್ತಿ ಯೋಜನೆ: ಯೋಜನೆಯ ಆರಂಭದಿಂದ 2025ರ ಜನವರಿ 17ರವರೆಗೆ ರಾಜ್ಯದಲ್ಲಿ ಒಟ್ಟು 373.27 ಕೋಟಿ ಟ್ರಿಪ್ಪುಗಳಲ್ಲಿ ಫಲಾನುಭವಿಗಳು ಶಕ್ತಿ ಯೋಜನೆಯಿಂದ ಪ್ರಯೋಜನ ಪಡೆದಿದ್ದಾರೆ. ಇದಕ್ಕಾಗಿ ಸರಕಾರದಿಂದ 9,051 ಕೋಟಿ ರು. ವಿನಿಯೋಗ.

ಯುವನಿಧಿ: ಯೋಜನೆಯಡಿಯಲ್ಲಿ 1,94,986 ಅಭ್ಯರ್ಥಿಗಳನ್ನು ನೋಂದಾಯಿಸಲಾಗಿದೆ ಮತ್ತು 1,24,176 ಅರ್ಹ ಅಭ್ಯರ್ಥಿಗಳಿಗೆ ನೇರ ನಗದು ವರ್ಗಾವಣೆ ಮಾಡಲಾಗಿದೆ. 12,000 ಅಭ್ಯರ್ಥಿಗಳಿಗೆ ಕೈಗಾರಿಕಾ ಸಂಪರ್ಕ ಕೋಶ ಮತ್ತು ಭವಿಷ್ಯದ ಕೌಶಲಗಳ ಅಡಿಯಲ್ಲಿ ತರಬೇತಿ.

ಅನ್ನಭಾಗ್ಯ: ಬಿಪಿಎಲ್ ಪಡಿತರ ಚೀಟಿಗಳ ಪ್ರತಿ ಫಲಾನುಭವಿಗೆ 5 ಕೆಜಿ ಅಕ್ಕಿ ನೀಡುವ ಜೊತೆಗೆ, ಹೆಚ್ಚುವರಿ 5 ಕೆಜಿ ಅಕ್ಕಿಯ ಬದಲಾಗಿ ಪ್ರತಿ ಸದಸ್ಯರಿಗೆ 170 ರು.ನಂತೆ ಅವರ ಬ್ಯಾಂಕ್ ಖಾತೆಗೆ ನೇರ ಹಣ ವರ್ಗಾವಣೆ ಮಾಡಲಾಗುತ್ತಿದೆ. 2023ರ ಜುಲೈನಿಂದ ಇಲ್ಲಿಯವರೆಗೆ 4,48,12,382 ಫಲಾನುಭವಿಗಳಿಗೆ ಡಿಬಿಟಿ ಮೂಲಕ ವರ್ಗಾಯಿಸಲು 9,775.51 ರು. ಕೋಟಿ ಬಿಡುಗಡೆ ಮಾಡಲಾಗಿದೆ.

ಮಾಣಿಕ್ ಷಾ ಮೈದಾನದಲ್ಲಿ ಸಶಸ್ತ್ರ ಪಡೆಗಳಿಂದ ಆಕರ್ಷಕ ಪಥಸಂಚಲನ.

ಸಮಾಚಾರ ಸಣ್ಣದಲ್ಲ

ಐದು ವರ್ಷವೂ ಸಿದ್ದರಾಮಯ್ಯ ಸಿಎಂ

ಕೊಪ್ಪಳ: ಐದು ವರ್ಷವೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿ ಮುಂದುವರೆಯಲಿದ್ದಾರೆ ಎಂದು ವಸತಿ ಸಚಿವ ಬಿ.ಝಡ್. ಜಮೀರ್ ಅಹ್ಮದ ಖಾನ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಸದ್ಯ ಸಿಎಂ ಖುರ್ಚಿ ಖಾಲಿ ಇಲ್ಲ. ಈ ಬಗ್ಗೆ ಚರ್ಚೆಯೂ ಅಗತ್ಯ ಇಲ್ಲ. ಅದರಂತೆ ಕೆಪಿಸಿಸಿ ಅಧ್ಯಕ್ಷರ ಖುರ್ಚಿಯೂ ಖಾಲಿ ಇಲ್ಲ. ಕೆಪಿಸಿಸಿ ಅಧ್ಯಕ್ಷ ಹುದ್ದೆ ಬಗ್ಗೆ ಸತೀಶ ಜಾರಕಿಹೊಳಿ ಮಾತನಾಡಿರಬಹುದು. ಅದು ಅವರ ವೈಯಕ್ತಿಕ ಅಭಿಪ್ರಾಯ. ಆದರೆ, ಕೆಪಿಸಿಸಿ ಅಧ್ಯಕ್ಷರ ಹುದ್ದೆಯೂ ಖಾಲಿ ಇಲ್ಲ ಎಂದರು. ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ಪಾತ್ರ ಸ್ವಲ್ಪವೂ ಇಲ್ಲ. ಸಿದ್ದರಾಮಯ್ಯ ಅವರನ್ನು ಅಲುಗಾಡಿಸಿದರೆ ಕಾಂಗ್ರೆಸ್‌ಗೆ ತೊಂದರೆ ಆಗುತ್ತದೆ ಎಂದು ಬಿಜೆಪಿಗರು ಕಿರಿಕಿರಿ ಮಾಡುತ್ತಿದ್ದಾರೆ, ಇದೆಲ್ಲ ನಡೆಯುವುದಿಲ್ಲ ಎಂದರು.

ಚಾರ್ಮಾಡಿ ಘಾಟ್ ನಿಲ್ಲದ ಕಾಡ್ಗಿಚ್ಚು

ಚಿಕ್ಕಮಗಳೂರು: ಮೂಡಿಗೆರೆ ತಾಲೂಕಿನ ಚಾರ್ಮಾಡಿ ಘಾಟಿಯ ಅಣ್ಣಪ್ಪ ಸ್ವಾಮಿ ದೇವಾಲಯದ ಬಳಿ ಅರಣ್ಯಕ್ಕೆ ಭಾರಿ ಪ್ರಮಾಣದಲ್ಲಿ ಕಾಡ್ಗಿಚ್ಚು ಆವರಿಸಿದ್ದು, ನೂರಾರು ಎಕರೆ ಅರಣ್ಯ ಬೆಂಕಿಗೆ ಆಹುತಿಯಾಗಿದೆ. ಕಳೆದ ವಾರ ಚಾರ್ಮಾಡಿ ಘಾಟಿಯ ಬಿದಿರುತಳ ತಪ್ಪಲಿನ ಕಾಡಿನಲ್ಲಿ ಕಾಡ್ಗಿಚ್ಚಿಗೆ ಅರಣ್ಯ ಹಾಗೂ ಪ್ರಾಣಿಸಂಕುಲ ನಾಶವಾಗಿತ್ತು. ಎರಡು ದಿನಗಳ ಹಿಂದೆ ಮತ್ತೆ ಚಾರ್ಮಾಡಿ ತಪ್ಪಲಿನ ಅರಣ್ಯಕ್ಕೆ ಬೆಂಕಿ ಬಿದ್ದು ನೂರಾರು ಎಕರೆ ಅರಣ್ಯ ನಾಶವಾಗಿದೆ. ಬೆಂಕಿಯ ಕೆನ್ನಾಲಿಗೆ 10 ಕಿ. ಮೀ ನಷ್ಟು ದೂರಕ್ಕೆ ವ್ಯಾಪಿಸಿದ್ದರಿಂದ ಗುಡ್ಡದ ಮೇಲೆರಿ ಬೆಂಕಿ ನಂದಿಸಲಾಗದೇ ಸ್ಥಳೀಯರು ಪರದಾಡಿದರು. ಬೆಂಕಿ ಹೊತ್ತಿಕೊಂಡು ಎರಡು ಗಂಟೆ ಕಳೆದರೂ ಅರಣ್ಯ ಸಿಬ್ಬಂದಿ ಸ್ಥಳಕ್ಕೆ ಬಂದಿಲ್ಲ ಎಂದು ಸ್ಥಳೀಯರು ಆರೋಪಿಸಿದರು.



ಪ್ರೇಯಸಿ ಆತ್ಮಹತ್ಯೆ ಪ್ರಿಯಕರನ ಸೆರೆ

ಧಾರವಾಡ: ಇನ್‌ಸ್ಟಾಗ್ರಾಮ್ ಪ್ರೀತಿಯ ಪ್ರಕರಣದಲ್ಲಿ ಆತ್ಮಹತ್ಯೆ ಮಾಡಿಕೊಂಡ ಗೃಹಿಣಿಯ ಪ್ರಿಯಕರನನ್ನು ಧಾರವಾಡ ಪೊಲೀಸರು ಬಂಧಿಸಿದ್ದಾರೆ. ಆರೋಪಿಯನ್ನು ಧಾರವಾಡದ ಶಿವಳ್ಳಿಯ ವಿಜಯ್ ನಾಯ್ಕ ಎಂದು ಗುರುತಿಸಲಾಗಿದೆ. ಆತ್ಮಹತ್ಯೆ ಮಾಡಿಕೊಂಡ ಯುವತಿ ಶ್ವೇತಾ (23)ಳ ವಿವಾಹ ವಿಚ್ಛೇದನಕ್ಕೆ ಆತ ಕಾರಣನಾಗಿದ್ದ. ಮಹಿಳೆ ಪತಿಯನ್ನು ಬಿಟ್ಟು ಧಾರವಾಡದಲ್ಲಿ ಬಾಡಿಗೆ ಕೊಠಡಿಯಲ್ಲಿದ್ದಳು. ಆದರೆ ಆಕೆ ಎರಡು ದಿನಗಳ ಹಿಂದೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಶ್ವೇತಾ ನೇಣಿಗೆ ಶರಣಾಗುವ ಮುನ್ನ, ನನ್ನ ಸಾವಿಗೆ ನಾನೇ ಕಾರಣ ಎಂದು ಕೈಯಲ್ಲಿ ಬರೆದುಕೊಂಡಿದ್ದಳು. ಆಕೆಯನ್ನು ಆರೋಪಿ ಮದುವೆಯಾಗುವುದಾಗಿ ನಂಬಿಸಿದ್ದ. ಆದರೆ ವಿಜಯ್ ಕುಟುಂಬ ಒಪ್ಪದ ಕಾರಣ ಯುವತಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಧಾರವಾಡ ಪೊಲೀಸ್ ಆಯುಕ್ತ ಶಶಿಕುಮಾರ್ ತಿಳಿಸಿದ್ದಾರೆ. ಶ್ವೇತಾ ಕುಟುಂಬದವರು ಧಾರವಾಡ ಉಪನಗರ ಠಾಣೆಯಲ್ಲಿ ವಿಜಯ್ ನಾಯ್ಕ ವಿರುದ್ಧ ದೂರು ದಾಖಲಿಸಿದ್ದರು.

ವಿರಾಮ
ಪ್ರತಿ ಭಾನುವಾರ

{ **ದಿನೇಶ್ ಗುಂಡೂರಾವ್** } ಸಚಿವ

ಸಿಎಂ ಬದಲಾವಣೆ ವಿಚಾರದ ಬಗ್ಗೆ ಚರ್ಚೆ ಮಾಡುವ ಅಗತ್ಯವಿಲ್ಲ. ಒಬ್ಬರು ಮುಖ್ಯಮಂತ್ರಿ ಇರುವಾಗ ಇನ್ನೊಬ್ಬರು ಸಿಎಂ ಆಗುವ ಪ್ರಶ್ನೆ ಬರುವುದಿಲ್ಲ. ಈ ಬಗ್ಗೆ ಏನೇ ಇದ್ದರೂ ವರಿಷ್ಠರು ತೀರ್ಮಾನ ತೆಗೆದುಕೊಳ್ಳುತ್ತಾರೆ. ಸಿದ್ದರಾಮಯ್ಯ ಎಲ್ಲರಲ್ಲೂ ಶೇ.100 ರಷ್ಟು ವಿಶ್ವಾಸ ಇರುವ ನಾಯಕ.

ಗಣರಾಜ್ಯೋತ್ಸವ: ಹರಿದುಬಿದ್ದ ರಾಷ್ಟ್ರಧ್ವಜ

ಹೊಸಪೇಟೆ: 76 ನೇ ಗಣರಾಜ್ಯೋತ್ಸವದ ಸಂಭ್ರಮದ ವೇಳೆ ದೇಶದ ಅತಿ ಎತ್ತರದ 405 ಅಡಿ ಧ್ವಜಸ್ತಂಭದಿಂದ ರಾಷ್ಟ್ರಧ್ವಜ ಹರಿದುಬಿದ್ದ ಅಚಾತುರ್ಯ ಹೊಸ ಪೇಟೆಯ ಕ್ರೀಡಾಂಗಣದಲ್ಲಿ ಭಾನುವಾರ ನಡೆದಿದೆ.

8.55ಕ್ಕೆ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಖಾನ್ 405ಅಡಿ ಎತ್ತರದ ಧ್ವಜಸ್ತಂಭದಲ್ಲಿ ಧ್ವಜಾರೋಹಣ ಮಾಡಿದರು. ನಂತರ ವೇದಿಕೆ ಮುಂದೆ ಧ್ವಜರೋಹಣ ಮಾಡಿದರು. ನಾನಾ ಪಡೆಗಳಿಂದ ಗೌರವ ವಂದನೆ ಸ್ವೀಕರಿಸುವ ವೇಳೆ ಧ್ವಜಸ್ತಂಭದಲ್ಲಿ ಏರುತ್ತಿರುವಾಗಲೇ ರಾಷ್ಟ್ರಧ್ವಜ ಏಕಾಏಕಿ ಹಗ್ಗ ಹರಿದು ಜಾರಿಬಿದ್ದಿದೆ.

ಧ್ವಜಾರೋಹಣ ವೇಳೆ ಕಾಡುಕೋಣ ಪ್ರತ್ಯಕ್ಷ

ಬಾಗಲಕೋಟೆ: ಧ್ವಜಾರೋಹಣ ವೇಳೆ ಕಾಡುಕೋಣ ಬಂದು ಕೆಲಹೊತ್ತು ಭಯದ ವಾತಾವರಣ ನಗರದಲ್ಲಿ ಸೃಷ್ಟಿಯಾಗಿತ್ತು.

ಇಲ್ಲಿನ ಬಿಟಿಡಿಎಯಲ್ಲಿ ಗಣರಾಜ್ಯೋತ್ಸವದ ಧ್ವಜಾರೋಹಣದ ವೇಳೆಯಲ್ಲಿ ಕಾಡುಕೋಣ ಬಂದು ಅವಾಂತರ ಸೃಷ್ಟಿಯಾಗಿತ್ತು. ಬಿಟಿಡಿಎ ಆವರಣದಲ್ಲಿರುವ ಸರಕಾರಿ ಶಾಲೆಯ ವಿದ್ಯಾರ್ಥಿಗಳು ಗಾಬರಿಗೊಂಡಿದ್ದರು. ಬಿಟಿಡಿಎ ಸಿಬ್ಬಂದಿ ಕಾಡುಕೋಣವನ್ನು ಕೃಷ್ಣಾ ನದಿಯತ್ತ ಓಡಿಸಿದ್ದಾರೆ.

ಬಾಗಲಕೋಟೆಯ ಬಿಟಿಡಿಎ ಆವರಣದಲ್ಲಿ ಕಾಡುಕೋಣ ಕಾಣಿಸಿಕೊಂಡಿತು.

ಕೃಷಿ ಲಾಭಕ್ಕಾಗಿ ರೈತರಿಗೆ ತಾಂತ್ರಿಕ ನೆರವು: ಚಲುವರಾಯಸ್ವಾಮಿ

ಸುತ್ತೂರು ಜಾತ್ರೆಗೆ ವಿಧ್ಯುಕ್ತ ಚಾಲನೆ

ಮೈಸೂರು: ಕೃಷಿಯಲ್ಲಿ ನಷ್ಟ, ಕೃಷಿ ಮಾಡುವುದೇ ಕಷ್ಟ ಎಂಬ ಕಾಲವಿತ್ತು. ಆದರೆ, ಕೃಷಿಯಲ್ಲೂ ಲಾಭ ಮಾಡಬಹುದು ಎಂಬ ನಿಟ್ಟಿನಲ್ಲಿ ಸರಕಾರ ರೈತರಿಗೆ ತಾಂತ್ರಿಕವಾಗಿ ಬೆಂಬಲ ನೀಡುತ್ತಿದೆ ಎಂದು ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಸುತ್ತೂರಿನಲ್ಲಿ ಭಾನುವಾರ ಆದಿಜಗದ್ಗುರು ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಕೃಷಿಮೇಳ ಉದ್ಘಾಟಿಸಿದ ಅವರು, ಸಮಗ್ರ ಕೃಷಿಯಿಂದ ಲಾಭವಿದ್ದು, ರೈತರು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕಿದೆ ಎಂದರು.

ಕಬ್ಬು ಕಟಾವು ಯಂತ್ರಕ್ಕೆ ಸರಕಾರ ಸಬ್ಸಿಡಿ ನೀಡುತ್ತಿದ್ದು, ಇದು ತಾಂತ್ರಿಕವಾಗಿ ಕಬ್ಬು ಬೆಳೆಯಲು, ಕಟಾವು ಮಾಡಲು ಹೆಚ್ಚು ಅನುಕೂಲವಾಗುತ್ತದೆ. ಹೀಗಾಗಿ ರೈತರು ಈ ಬಗ್ಗೆ ಗಮನ ಹರಿಸಬೇಕೆಂದು ಕರೆನೀಡಿದರು.

ಸುತ್ತೂರು ಮಠದ ಸೇವೆ ಸ್ತುತ್ಯರ್ಹ: ಸುತ್ತೂರು ಮಠ ಕೇವಲ ಧಾರ್ಮಿಕ ಕಾರ್ಯಗಳನ್ನಲ್ಲದೆ ಆರೋಗ್ಯ, ಶಿಕ್ಷಣ, ಕೃಷಿ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ಜನಪರವಾಗಿ ಕೆಲಸ ಮಾಡುತ್ತಿದೆ. ಮಠಕ್ಕೆ ತನ್ನದೇ ಆದ ಹಿರಿಮೆ ಇದೆ ಎಂದು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆಲಗೂರು ಬಬಲೇಶ್ವರ ಪೀಠದ ಮಹಾದೇವ ಶಿವಾಚಾರ್ಯ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ಎ. ಆರ್.ಕೃಷ್ಣಮೂರ್ತಿ, ಪಿ.ರವಿಕುಮಾರ್ ಗಣಿಗ, ಎಂಎಲ್‌ಸಿ ದಿನೇಶ್ ಗೂಳಿಗೌಡ, ಮಾಜಿ ಶಾಸಕರಾದ ಎಲ್.ನಾಗೇಂದ್ರ, ನಿರಂಜನ ಕುಮಾರ್, ನಿವೃತ್ತ ಪೊಲೀಸ್ ಮಹಾನಿರ್ದೇಶಕ ಶಂಕರ್ ಬಿದರಿ ಇದ್ದರು.

ಮೈಸೂರು ಜಿಲ್ಲೆಯ ಸುತ್ತೂರಿನಲ್ಲಿ ಆದಿಜಗದ್ಗುರು ಶಿವರಾತ್ರೀಶ್ವರ ಜಗದ್ಗುರುಗಳ ಜಾತ್ರೆಯ ಅಂಗವಾಗಿ ಸಚಿವ ಚಲುವರಾಯಸ್ವಾಮಿ ಭಾನುವಾರ ಕೃಷಿಮೇಳ ಉದ್ಘಾಟಿಸಿದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸುತ್ತೂರು ಶ್ರೀಗಳಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರತಿಪಕ್ಷ ನಾಯಕ ಅಶೋಕ, ಬಬಲೇಶ್ವರ ಪೀಠದ ಮಹಾದೇವ ಶಿವಾಚಾರ್ಯ, ನಿವೃತ್ತ ಐಪಿಎಸ್ ಅಧಿಕಾರಿ ಶಂಕರ್ ಬಿದರಿ ಮೊದಲಾದವರು ಇದ್ದರು.

30 ಸಾವಿರ ರೈತ ಮಹಿಳೆಯರಿಗೆ ಡ್ರೋನ್ ತರಬೇತಿ ನೀಡಲಾಗುತ್ತಿದೆ. ಇದರಿಂದ ಬೆಳೆಗಳಿಗೆ ಮಹಿಳೆಯರೇ ಔಷಧ ಸಿಂಪಡಿಸಬಹುದು. ಹೆಚ್ಚು ಇಳುವರಿ ಬರುವ ಬೆಳೆಗಳನ್ನು ಪರಿಚಯಿಸಲಾಗುತ್ತಿದೆ. ಕೇಂದ್ರದ ಯೋಜನೆಗಳನ್ನು ರಾಜ್ಯ ಸರಕಾರ ರೈತರಿಗೆ ಸೂಕ್ತವಾಗಿ ತಲುಪಿಸಿದಾಗ ಮಾತ್ರ ಕೃಷಿ ಲಾಭದಾಯವಾಗುತ್ತದೆ.
-ಎನ್.ಚಲುವರಾಯಸ್ವಾಮಿ, ಸಚಿವ

ಧರ್ಮ, ಮಠ ಮಂದಿರ ರಕ್ಷಣೆ ಅಗತ್ಯ

ಸಾಂಸ್ಕೃತಿಕ ಮೇಳ ಉದ್ಘಾಟಿಸಿದ ಪ್ರತಿಪಕ್ಷ ನಾಯಕ ಆರ್.ಅಶೋಕ ಮಾತನಾಡಿ, ಸುತ್ತೂರು ಮಠ ಎಂದರೆ ನೆನಪಾಗುವುದೇ ಸೇವೆ. ಶಿಕ್ಷಣ, ಆರೋಗ್ಯ, ಅನ್ನದಾಸೋಹ ವನ್ನು ಮಠ-ಮಂದಿರಗಳು ಮಾಡುತ್ತಿವೆ. ಮಠಗಳಿಂದ ಭಾರತ ಇಂದಿಗೂ ಭಾರತವಾಗಿಯೇ ಉಳಿದಿದೆ. ಇಂತಹ ಮಠ-ಮಂದಿರಗಳ ರಕ್ಷಣೆ ಅತ್ಯಗತ್ಯ ಎಂದು ಪ್ರತಿಪಾದಿಸಿದರು.

ಒಂದು ದೇಶ-ಒಂದು ಚುನಾವಣೆಯಿಂದ ಲಾಭ

ಬೆಳಗಾವಿ: ಒಂದು ದೇಶ-ಒಂದು ಚುನಾವಣೆ ವ್ಯವಸ್ಥೆ ಜಾರಿಗೆ ಬಂದರೆ ಆರು ವರ್ಷ ನಾವು ಶಾಸಕರಾಗಿ ಇರಬಹುದು ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಅವಧಿಗೆ ಮೊದಲು ಚುನಾವಣೆ ಬರುತ್ತದೆ ಎಂಬ ಬಿಜೆಪಿ ನಾಯಕರ ಹೇಳಿಕೆಗೆ, ಕೇಂದ್ರ ಸರಕಾರ ಒನ್ ನೇಶನ್-ಒನ್ ಎಲೆಕ್ಷನ್ ಜಾರಿಗೆ ತಂದರೆ ಹೆಚ್ಚುವರಿಯಾಗಿ ಒಂದು ವರ್ಷ ಶಾಸಕರಾಗಿ ಇರಬಹುದು ಎಂದರು.

ನಾವು ಬೆಂಬಲ ಕೊಡಲಿ, ಬಿಡಲಿ. ಕೇಂದ್ರದಲ್ಲಿ ಅವರಿಗೆ ಬಹುಮತ ಇದೆ. ಹಾಗಾಗಿ, ಏಕಕಾಲಕ್ಕೆ ಚುನಾವಣೆ ಮಾಡಿಯೇ ಮಾಡುತ್ತಾರೆ. ಅದರಿಂದ ಆರು ವರ್ಷ ನಾವು ಶಾಸಕರಾಗಿ ಇರುತ್ತೇವೆ ಎಂದು ತಿರುಗೇಟು ಕೊಟ್ಟರು. ಗ್ಯಾರಂಟಿ ಯೋಜನೆಯಿಂದ ತೆರಿಗೆ ಹೆಚ್ಚಳ ಯಾವುದೂ ಮಾಡಿಲ್ಲ. ಸಾರಿಗೆ ಬಸ್ ಟಿಕೆಟ್ ದರ ಹೆಚ್ಚಳ ಮಾಡಿರುವುದು ಬಿಟ್ಟರೆ ಯಾವುದೇ ತೆರಿಗೆ ಹೆಚ್ಚಳ ಮಾಡಿಲ್ಲ. ಬೇರೆ ರಾಜ್ಯದಲ್ಲಿ ನೋಡಿದರೆ ನಮ್ಮ ರಾಜ್ಯದಲ್ಲಿ ಸಾರಿಗೆ ಬಸ್ ಟಿಕೆಟ್ ದರ ಕಡಿಮೆ ಮಾಡಲಾಗಿದೆ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಸಂಸದ ಸುಧಾಕರ್ ಮಾನಸಿಕ ಅಸ್ವಸ್ಥ: ಸಚಿವರ ಕಿಡಿ

ಚಿಕ್ಕಬಳ್ಳಾಪುರ: ಸಂಸದರು ಮಾನಸಿಕ ಅಸ್ವಸ್ಥರಾಗಿರಬೇಕು. ಇಲ್ಲವೇ ಕೊರೋನಾ ಸಂದರ್ಭದಲ್ಲಿ ದಿಲ್ಲಿಯಿಂದ ಬರುತ್ತಿದ್ದ ಆದಾಯ ಬರದೇ ಇರುವ ಕಾರಣಕ್ಕೆ ಈ ರೀತಿಯಾಗಿ ಹೇಳಿಕೆ ಕೊಟ್ಟಿರಬಹುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಸಂಸದ ಸುಧಾಕರ್ ಅವರ ಹೇಳಿಕೆಗೆ ತಿರುಗೇಟು ನೀಡಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸಂಸದರಿಗೆ ಕೋವಿಡ್ ಸಂದರ್ಭದಲ್ಲಿ ಜನರ ಪ್ರಾಣಗಳ ಮೇಲೆ ಹಣ ಲೂಟಿ ಮಾಡುತ್ತಿದ್ದ ಆದಾಯ ಕಡಿಮೆಯಾಗಿರುವ ಹಿನ್ನೆಲೆ ನೋವಿನಿಂದ ಮಾತನಾಡಿದ್ದಾರೆ ಎಂದು ಹೇಳಿದರು.

ಇಲಾಖೆಗೊಬ್ಬ ಏಜೆಂಟರನ್ನು ನೇಮಿಸುವ ಸಂಸ್ಕೃತಿ ಈ ಹಿಂದಿನ ಅವಧಿಯಲ್ಲಿತ್ತು. ಸ್ವಂತ ಕಂಪನಿಗಳಿಗೆ ಪ್ಯಾಕೇಜ್ ಮಾಡಿಕೊಂಡು ಗುತ್ತಿಗೆ ತೆಗೆದುಕೊಂಡಿದ್ದರು. ನಮ್ಮ ಅವಧಿಯಲ್ಲಿ ಯಾರನ್ನೂ ನೇಮಿಸಿಲ್ಲ. ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಕೇಳಬಹುದು. ಸಂಸದರಾಗಿ ಆಯ್ಕೆಯಾಗಿರುವುದು ತೃಪ್ತಿ ತಂದಿಲ್ಲ ಬರುತ್ತಿದ್ದ ವರಮಾನ ಕೈತಪ್ಪಿದೆ. ಚಿಕ್ಕಬಳ್ಳಾಪುರ ಉತ್ಸವ ಮತ್ತು ಶಿವೋತ್ಸವಕ್ಕೆ ಎಷ್ಟು ವಸೂಲಿ ಆಯಿತು. ಜಿಪಂ, ತಾಪಂ ಚುನಾವಣೆಗಳಿಗೆ ಪೊಲೀಸ್ ಠಾಣೆಗಳಿಂದ ಎಲ್ಲೆಲ್ಲಿ ವಸೂಲಿ ಆಯಿತು. ಕಾಮಗಾರಿಗಳಿಗೆ ಎಲ್ಲೆಲ್ಲಿ ವಸೂಲಿ ಆಯಿತು ಎಂಬ ಎಲ್ಲಾ ಮಾಹಿತಿ ಸಂಸದರಿಗೆ ಗೊತ್ತಿದೆ ಎಂದು ಕಾಲೆಳೆದರು.

ಒಂದು ರಾಷ್ಟ್ರ, ಒಂದೇ ಸಮಯ

← ಮೊದಲಪುಟದಿಂದ

ಸರಕಾರಿ ಕಚೇರಿಗಳು ಹಾಗೂ ಸಾರ್ವಜನಿಕ ಸಂಸ್ಥೆಗಳು ಭಾರತೀಯ ಕಾಲಮಾನ ನಮೂದಿಸುವುದು ಕಡ್ಡಾಯವಾಗಲಿದೆ. ಇದರಿಂದ ಸೈಬರ್ ಭದ್ರತೆಯು ಮತ್ತಷ್ಟು ಬಲಗೊಳ್ಳಲಿದೆ ಎಂದು ಹೇಳಲಾಗಿದೆ. ಏಕರೂಪ ಸಮಯ ನಿಗದಿ ಸಂಬಂಧ ಗ್ರಾಹಕ ವ್ಯವಹಾರಗಳ ಸಚಿವಾಲಯ ದೊಟ್ಟಿಗೆ ರಾಷ್ಟ್ರೀಯ ಭೌತಿಕ ಪ್ರಯೋಗಾಲಯ ಹಾಗೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಕೆಲಸ ನಿರ್ವಹಿಸಲಿವೆ.

20 ಪ್ರಭಾವಿ ಆರ್‌ಟಿಐ ಕಾರ್ಯಕರ್ತರಿಗೆ ನಿಷೇಧ

← ಮೊದಲಪುಟದಿಂದ

ಮಾಹಿತಿ ನೀಡದೆ ಅರ್ಜಿದಾರರನ್ನು ಅಲೆದಾಡಿಸುವ 10 ಸಾವಿರಕ್ಕೂ ಹೆಚ್ಚು ಅಧಿಕಾರಿಗಳಿಗೆ ನೋಟಿಸ್ ನೀಡಲಾಗಿದ್ದು, ಸುಮಾರು 20 ಲಕ್ಷಕ್ಕೂ ಹೆಚ್ಚು ದಂಡ ವಿಧಿಸಿ ಆದೇಶ ಹೊರಡಿಸಲಾಗಿದೆ. ಇದರಲ್ಲಿ ಬಿಬಿಎಂಪಿ, ಬಿಡಿಎ, ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಿಗೆ ಸಂಬಂಧಿಸಿದ ಅರ್ಜಿಗಳಿಗೆ ಮಾಹಿತಿ ನೀಡದಿರುವ 30ಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಲಾಗಿದ್ದು, ಕೆಲವರ ವಿರುದ್ಧ ಆರೋಪ ಪಟ್ಟಿಗಳನ್ನೂ ಸಲ್ಲಿಸಲಾಗಿದೆ.

ಹಾಗೆಯೇ ಅನೇಕರು ಸಾರ್ವಜನಿಕ ಹಿತಾಸಕ್ತಿ ಇಲ್ಲದ ಹಾಗೂ ದುರುದ್ದೇಶ ಪೂರಿತವಾದ ಅರ್ಜಿಗಳನ್ನು ಅನಗತ್ಯವಾಗಿ ಸಲ್ಲಿಸಿ ಸರಕಾರದ ಆಡಳಿತ ಯಂತ್ರ ದುರ್ಬಳಕೆ ಮಾಡುತ್ತಿದ್ದಾರೆ. ಅಲ್ಲದೆ, ಆಯೋಗದ ಕೋರ್ಟ್ ಸಮಯವನ್ನೂ ವ್ಯರ್ಥ ಮಾಡಿದ್ದಾರೆ.

ಆಯೋಗ ಅನೇಕ ಅರ್ಜಿದಾರರಿಗೆ ದಂಡ ವಿಧಿಸಿದೆ. ಜತೆಗೆ ಸಾರ್ವಜನಿಕ ಹಿತಾಸಕ್ತಿ ಇಲ್ಲದೆ ಸಲ್ಲಿಸಿದ್ದ ನೂರಾರು ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಇದರಿಂದ ಆರ್‌ಟಿಐ ದುರ್ಬಳಕೆಗಳ ವಿವಿಧ ಮುಖಗಳು ಬಯಲಾಗುತ್ತಿದ್ದು, ಕಪ್ಪು ಪಟ್ಟಿ ಸೇರುವ ಆರ್‌ಟಿಐ ಅರ್ಜಿದಾರರ ಸಂಖ್ಯೆ 20ಕ್ಕೆ ಏರುವ ಸಾಧ್ಯತೆ ಇದೆ ಎಂದು ಆಯೋಗದ ಮೂಲಗಳು ತಿಳಿಸಿವೆ.

ಅಪಘಾತದಲ್ಲಿ ಗಾಯಗೊಂಡಿದ್ದ ಸಚಿವೆ ಆರೋಗ್ಯದಲ್ಲಿ ಚೇತರಿಕೆ
ಪ್ರತಿಪಕ್ಷಗಳ ಆರೋಪಕ್ಕೆ ಅಸಮಾಧಾನ, ಪ್ರತಿಕ್ರಿಯೆಗೆ ನಕಾರ

ಆಸ್ಪತ್ರೆಯಿಂದ ಲಕ್ಷ್ಮೀ ಹೆಬ್ಬಾಳ್ಕರ್ ಬಿಡುಗಡೆ

ಬೆಳಗಾವಿ: ರಸ್ತೆ ಅಪಘಾತದಲ್ಲಿ ಗಾಯಗೊಂಡು ಕಳೆದ 11 ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಭಾನುವಾರ ಬೆಳಿಗ್ಗೆ ಆಸ್ಪತ್ರೆಯಿಂದ ಮನೆಗೆ ತೆರಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನನ್ನ ಅಪಘಾತದ ಬಗ್ಗೆ ರಾಜಕೀಯ ಮಾಡುವ ವ್ಯಕ್ತಿಗಳು ಕಲ್ಲಿನ ಹೃದಯದವರು. ಅವರ ಬಗ್ಗೆ ಪ್ರತಿಕ್ರಿಯೆ ಕೊಡಲು ಹೋಗುವುದಿಲ್ಲ. ಸಾವು, ಬದುಕಿನ ಹೋರಾಟದಲ್ಲಿ ನಾನು ಗೆದ್ದು ಬಂದಿದ್ದೇನೆ. ವಿಪಕ್ಷದವರು ನನ್ನ ಅಪಘಾತದಲ್ಲಿ ಹಣ ಸಾಗಾಟ ಮಾಡುತ್ತಿದ್ದರು ಎನ್ನುವ ಆರೋಪಕ್ಕೆ ಪ್ರತಿಕ್ರಿಯೆ ನೀಡಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾರು ಅಪಘಾತದ ಬಗ್ಗೆ ತನಿಖೆ ನಡೆಸಲು ಸೂಚನೆ ನೀಡಲ್ಲ. ರಾಜ್ಯದ ಜನರ ಸೇವೆ ಮಾಡುವುದು ಒಂದೇ ನನ್ನ ಗುರಿ, ನನ್ನ ಮೇಲೆ ಜವಾಬ್ದಾರಿ ಹೆಚ್ಚಿದೆ.

ಮಾರ್ಚ್ ನಲ್ಲಿ ರಾಜ್ಯ ಬಜೆಟ್ ಇದೆ. ವೈದ್ಯರು ನನಗೆ ವಿಶ್ರಾಂತಿ ಪಡೆದುಕೊಳ್ಳಲು ಹೇಳಿದ್ದಾರೆ. ಮೊದಲು ರಾಜ್ಯದ ಅಭಿವೃದ್ಧಿ ಮುಖ್ಯ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕೆಲಸಗಳು ಸಾಕಷ್ಟು ಇವೆ. ಅದರ ಕಡೆ ಗಮನ ಹರಿಸುವೆ ಎಂದರು.

ನನಗೆ ಈ ದುರ್ಘಟನೆ ಆಗಬಾರದಿತ್ತು. ನನ್ನ ಕಷ್ಟ ಕಾಲದಲ್ಲಿ ರಾಜ್ಯದ ವಿವಿಧ ಮಠಾಧೀಶರು ಆಶೀರ್ವಾದ ಮಾಡಿದ್ದು ನನಗೆ ಶಕ್ತಿ ತಂದು ಕೊಟ್ಟಿತ್ತು. ಅಲ್ಲದೆ, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸಚಿವ ಸಂಪುಟದ ಸಹೋದ್ಯೋಗಿಗಳು, ಹಾಲಿ, ಮಾಜಿ ಶಾಸಕರು, ನನ್ನ ಕ್ಷೇತ್ರದ ಜನರು ಪೂಜೆ ಮಾಡಿ ನಾನು ಚೇತರಿಸಿಕೊಳ್ಳುವಂತೆ ಹಾರೈಸಿದ್ದು ನನ್ನ ಪುಣ್ಯ ಎಂದರು.



ನಗರದ ಖಾಸಗಿ ಆಸ್ಪತ್ರೆಯಿಂದ ಮನೆಗೆ ತೆರಳುತ್ತಿರುವ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್.

ವೈದ್ಯರಿಗೆ ಸಚಿವರ ಭಾವನಾತ್ಮಕ ಪತ್ರ

ಕಳೆದ 13 ದಿನಗಳು ಇಲ್ಲಿ ನನಗೆ ಆಸ್ಪತ್ರೆಗಿಂತ ಮನೆಯಂತೆ ಭಾಸವಾಯಿತು, ನೀವು ನನ್ನ ಕುಟುಂಬಕ್ಕಿಂತ ಕಡಿಮೆಯಿಲ್ಲದಂತೆ ನನ್ನನ್ನು ನೋಡಿಕೊಂಡಿದ್ದೀರಿ. ನನ್ನ ಕಷ್ಟದ ಸಮಯದಲ್ಲಿ, ನೀವು ನನ್ನ ಪಕ್ಕದಲ್ಲಿ ನಿಂತು, ಪ್ರಬಲವಾದ ಬೆಂಬಲ ಮತ್ತು ಕಾಳಜಿಯನ್ನು ತೋರಿಸಿದ್ದೀರಿ. ನಿಮ್ಮ ದಯೆ, ತಾಳ್ಮೆ ಮತ್ತು ಸಮರ್ಪಣೆ ಹೃದಯಸ್ಪರ್ಶಿಯಾಗಿತ್ತು. ನೀವು ಹಗಲಿರುಳು ನನ್ನೊಂದಿಗೆ ಇದ್ದು ನಾನು ಸದೃಢವಾಗಲು ಕಾರಣರಾಗಿದ್ದೀರಿ ಮತ್ತು ಧೈರ್ಯ ಕಳೆದುಕೊಳ್ಳದಂತೆ ಪ್ರೇರೇಪಿಸಿದ್ದೀರಿ. ನಿಮ್ಮ ಪ್ರೋತ್ಸಾಹ ನನಗೆ ಶೀಘ್ರ ಗುಣಮುಖನಾಗಲು ಶಕ್ತಿಯನ್ನು ನೀಡಿತು ಮತ್ತು ನಿಮ್ಮ ಸಹಾನುಭೂತಿ ಮತ್ತು ಪರಿಣತಿಗೆ ನಾನು ಎಂದೆಂದಿಗೂ ಕೃತಜ್ಞನಾಗಿರುತ್ತೇನೆ. ನಿಮ್ಮ ಎಲ್ಲಾ ಪ್ರಯತ್ನಗಳಲ್ಲಿ ಯಶ ಸಿಗಲಿ, ನಿಮಗೆ ಅತ್ಯಂತ ಉಜ್ವಲ ಭವಿಷ್ಯ ಮತ್ತು ಯಶಸ್ಸನ್ನು ಹಾರೈಸುತ್ತೇನೆ.

ಮೈಕ್ರೋ ಫೈನಾನ್ಸ್ ಹಾವಳಿ ನಡೆಯುತ್ತಿರುವುದು ನನ್ನ ಗಮನಕ್ಕೆ ಆರು ತಿಂಗಳ ಹಿಂದೆಯೇ ನನ್ನ ಗಮನಕ್ಕೆ ಬಂದಿತ್ತು. ಆಗಲೇ ನಾನು ನಗರ ಪೊಲೀಸ್ ಇಲಾಖೆ ಆಯುಕ್ತರ ಗಮನಕ್ಕೆ ತಂದಿದ್ದೆ. ಅತಿ ಹೆಚ್ಚು ಯಮಕನಮರಡಿಯಲ್ಲಿ ಮೈಕ್ರೋ ಫೈನಾನ್ಸ್ ಹಾವಳಿ ಇದೆ. ಇದಕ್ಕೆ ಕಡಿವಾಣ ಹಾಕಬೇಕೆಂದು ಸೂಚಿಸಿದ್ದೆ.
ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

ಮರಿ ಲೇಖಕರಿಗೆ ಪ್ರೋತ್ಸಾಹ

– ಹುಲುಮಾನವೇ , ಮಾಧುರಿ ಭಾವೆ

ನಾನು ವೃತ್ತಿಯಲ್ಲಿ ಶಿಕ್ಷಕಿ. ಉಮೇದು ಬಂದಾಗ ಏನಾದ್ರೂ ಬರೆದು ಭಟ್ಟರಿಗೆ ಕಳುಹಿಸಿ ಕೊಡುತ್ತೇನೆ. ಅಪರೂಪಕ್ಕೆ ಬರೆಯುವುದರಿಂದ ಖಂಡಿತ ಅದು ಅಪ್ರಬುದ್ಧ ಬರವಣಿಗೆಯೇ ಆಗಿರುತ್ತದೆ. ಆದರೂ ಭಟ್ಟರು ನಮಗೆ ಉತ್ತೇಜನ ನೀಡಲು ನನ್ನಂಥ ವರ ಬರವಣಿಗೆಯನ್ನು ವಿರಾಮ ಪುರವಣಿಯಲ್ಲಿ ಪ್ರಕಟಿಸುತ್ತಾರೆ ಮತ್ತು ಪ್ರೋತ್ಸಾಹಿಸುತ್ತಾರೆ. ಪತ್ರಿಕೆಯ ಗುಣಮಟ್ಟ ಅಥವಾ ಜನಪ್ರಿಯತೆಗೆ ಧಕ್ಕೆ ಬರಬಹುದೆಂಬ ಭಯವಿಲ್ಲದೆ ಸಾಹಿತ್ಯ ಲೋಕದಲ್ಲಿ ಈಗಷ್ಟೇ ಕಣ್ಣು ಬಿಡುತ್ತಿರುವಂತಹ ನಮ್ಮಂತಹ ಮರಿ ಲೇಖಕರಿಗೆ ಬೆನ್ನು ತಟ್ಟುತ್ತಿರುವ ಭಟ್ಟರಿಗೆ ಅನಂತ ಧನ್ಯವಾದಗಳು. ಕಳೆದ ಹತ್ತು ವರ್ಷಗಳಿಂದ ಅವರೆಷ್ಟು ಬರಹಗಾರರನ್ನು ತಯಾರು ಮಾಡಿದ್ದಾರೋ ಏನೋ.

ಪತ್ರಿಕೆಯ ಹೆಸರೇ ಸಂಪದ್ಭರಿತ

–ರಂಗನಾಥ್ ಗುಡಿಮನಿ, ಬಾಗಲಕೋಟೆ

ವಿಶ್ವವಾಣಿ ಪತ್ರಿಕೆಗೆ ಪ್ರಸ್ತುತ ಒಂಬತ್ತು ವರ್ಷ ಪೂರ್ಣಗೊಂಡು ಯಶಸ್ವಿ 10ನೇ ವರ್ಷಕ್ಕೆ ದಾಪುಗಾಲಿಡುತ್ತಿರುವುದು, ಇಡೀ ಕನ್ನಡನಾಡು ಹಾಗೂ ಸಮಸ್ತ ಓದುಗ ಲೋಕವೇ ಸಂತಸ ಪಡುವ ಸಂಗತಿ. ಪತ್ರಿಕೆ ಎಂದರೆ ಮಾನವನಿಂದ ಬರೆಯಲ್ಪಟ್ಟ ಅಕ್ಷರಗಳ ವ್ಯರ್ಥ ಪ್ರಯತ್ನವಲ್ಲ. ಕೇವಲ ಸುದ್ದಿ ಪತ್ರಿಕೆಯಾಗದೆ ಜ್ಞಾನದ ನಿಧಿಯಾಗಿ, ಮೇಲಾಗಿ ಅತ್ಯುಪಯುಕ್ತ ವಿಷಯಗಳ ಆಗರವಾಗಿ ಮೂಡಿಬರುತ್ತಿದೆ.ಈ ಪತ್ರಿಕೆಯ ಹೆಸರೇ ಸಂಪದ್ಭರಿತವಾಗಿದ್ದು, ಹೆಸರಿಗೆ ತಕ್ಕಂತೆ ವಿಶ್ವಮಟ್ಟದಲ್ಲಿಯೇ ಸದ್ದು ಮಾಡುತ್ತಿರುವ ಪತ್ರಿಕೆ. 'ವಿಶ್ವಾಸವೇ ವಿಶ್ವ' ಎನ್ನುತ್ತ ಬಂದು ಇಡೀ ವಿಶ್ವದ ತುಂಬೆಲ್ಲ ವಿಶ್ವಾಸ ಉಳಿಸಿಕೊಳ್ಳುತ್ತಿರುವ ಪತ್ರಿಕೆ ಎಂದರೂ ತಪ್ಪಾಗಲಾರದು. ಇಲ್ಲಿನ ಅಂಕಣಗಳ ವಿಷಯ ಒಂದಕ್ಕಿಂತ ಒಂದು ಹೆಚ್ಚಿನ ಮೌಲ್ಯ ಮತ್ತೆ ತೂಕವುಳ್ಳವು. ಪತ್ರಿಕೆಯ ಪ್ರಚಲಿತ ಘಟನೆಗಳು, ರಾಜಕೀಯ, ಕಲೆ,ಸಾಹಿತ್ಯ, ಸಂಸ್ಕೃತಿ, ವಾಣಿಜ್ಯ, ಕ್ರೀಡೆ, ಸ್ಥಳೀಯ, ದೇಶ ವಿದೇಶ ಹಾಗೂ ಸಾಮಾಜಿಕ ವಿದ್ಯಮಾನದ ವಿಷಯಗಳು ತುಂಬಾ ಲಲಿತ, ಹರ್ಷಚಿತ್ತ ಹಾಗೂ ವರ್ಣರಂಜಿತವಾಗಿ ಮೂಡಿಬರುತ್ತಿರುವುದು ನಿಜಕ್ಕೂ ಆದರ್ಶ, ಪ್ರಶಂಸನೀಯ. ಪ್ರತಿದಿನದ ಆರಾಮ,ಭಾನುವಾರದ ವಿರಾಮ ಪುರವಣಿಗಳು ಸರ್ವರಿಗೂ ಸಲ್ಲುವ,ಸರ್ವರೂ ಓದ ಬಯಸುವ ಈ ಪತ್ರಿಕೆಯು ದಿನದಿಂದ ದಿನಕ್ಕೆ ಜನಮಾನಸದಲ್ಲಿ ಇದೇ ರೀತಿ ಕ್ಷಿಪ್ರಗತಿಯಲ್ಲಿ ಉತ್ತರೋತ್ತರವಾಗಿ ಬೆಳೆಯಲಿ. ವೈಯಕ್ತಿಕವಾಗಿ ಹೇಳುವುದಾದರೆ ಚಿತ್ತ ವಿಹಾರ ಅಂಕಣದಲ್ಲಿ ನನ್ನ ಮೊದಲ 'ಅರಳುವ ಹೂವುಗಳ ಬಾಡಿಸದಿರಿ' ಎನ್ನುವ ಲೇಖನದಿಂದ ಪ್ರಾರಂಭವಾದ ಬರೆಯುವ,ಓದುವ ಗೀಳು ಹೆಚ್ಚಿಸಿದ್ದು ಇದೇ ಪತ್ರಿಕೆ ಎಂದು ತುಂಬು ಅಭಿಮಾನದಿಂದ ಹೇಳುತ್ತೇನೆ. ಸುದ್ದಿ ಹಾಗೂ ಇತರ ಮಾಹಿತಿಗಳನ್ನು ವಸ್ತುನಿಷ್ಠವಾಗಿ ಸಾದರಪಡಿಸುವುದು ವಿಶ್ವವಾಣಿಯ ಹೆಗ್ಗಳಿಕೆ. ದೇಶ-ವಿದೇಶಗಳ ಸಮಗ್ರ ಮಾಹಿತಿ ಪತ್ರಿಕೆಯಲ್ಲಿ ಲಭ್ಯವಾಗುತ್ತವೆ. ಎಲ್ಲ ವರ್ಗಗಳನ್ನೂ ಆಕರ್ಷಿಸುವಂತೆ ಪತ್ರಿಕೆ ರೂಪಿಸುವಲ್ಲಿ ವಿಶ್ವೇಶ್ವರ ಭಟ್ ಯಶಸ್ವಿಯಾಗಿದ್ದಾರೆ.

ವಿಶಾಲವಾಣಿಯಾಗಿ ಬೆಳೆದು ನಿಂತ ವಿಶ್ವವಾಣಿ!

–ಎಸ್ ಜಿ ಹೆಗಡೆ, ಮುಂಬೈನ ಲಾಸಾ ಸೂಪರ್ ಜನೆರಿಕ್ಸ್‌ನ ಸಂಸ್ಥಾಪಕ ನಿರ್ದೇಶಕರು

ವಿಶ್ವೇಶ್ವರ ಭಟ್ ಅವರ ಒಡೆತನಕ್ಕೆ ಸಿಕ್ಕ ನಂತರದ ವಿಶ್ವವಾಣಿ ದಿನಪತ್ರಿಕೆ ಹತ್ತು ವರ್ಷದ ಸಫಲತೆಯನ್ನು ಸಂಭ್ರಮಿಸುತ್ತಿದೆ. ಕಳೆದ ಒಂಭತ್ತು ವರ್ಷಗಳಲ್ಲಿ ಪತ್ರಿಕೆಯು ವಿಶಾಲವಾಣಿಯಾಗಿ, ವ್ಯಾಪಕ ವಾಣಿಯಾಗಿ ಜನತೆಯನ್ನು ತಲುಪುವಲ್ಲಿ ಸಫಲವಾಗಿದೆ ಎನ್ನುವುದು ಎಲ್ಲರೂ ಒಪ್ಪುವ ಮಾತು. ಹತ್ತು ವರ್ಷಕ್ಕೆ ದಾಪುಗಾಲಿಟ್ಟ ಈ ಸಂದರ್ಭದಲ್ಲಿ ಹರಿದು ಬರುತ್ತಿರುವ ಶುಭಾಶಯಗಳ ಮಹಾಪೂರವೇ ಇದಕ್ಕೆ ಸಾಕ್ಷಿ. ಲಕ್ಷಾಂತರ ಓದುಗರ ಪಡೆಯಿರುವ ವಿಶ್ವವಾಣಿ ನೀಡುತ್ತಿರುವ ನಿಖರವಾದ ಸುದ್ದಿ ಮತ್ತು ಓದಿನ ನಿತ್ಯನೂತನ ಅನುಭವವು ಪತ್ರಿಕೆಯ ಯಶಸ್ಸಿನ ಮುಖ್ಯ ಕಾರಣವೆನ್ನಬೇಕು.

ನನ್ನ ಲೇಖನಗಳು ವಿಶ್ವವಾಣಿಯಲ್ಲಿ 8 ವರ್ಷಗಳಿಂದ ಪ್ರಕಟವಾಗುತ್ತಿವೆ. ಮೊದಲ ಲೇಖನ ಪ್ರಕಟವಾಗಿದ್ದು 2017ರಲ್ಲಿ. ನಂತರ ಆಗಾಗ ಬರೆದ ಬರಹಗಳನ್ನು ವಿಶ್ವವಾಣಿಯು ಕ್ಲುಪ್ತವಾಗಿ ಪ್ರಕಟಿಸಿದೆ. ಮೊದಲ ಕೆಲವು ಲೇಖನಗಳನ್ನು ಕಳುಹಿಸಿದ್ದು ಕಾಗದದ ಮೇಲೆ ಬರೆದಿದ್ದು. ದೀರ್ಘಕಾಲ ಮುಂಬೈನಲ್ಲಿ ವಾಸಿಸಿರುವಾಗ ಕನ್ನಡದಲ್ಲಿ ಅಭಿವ್ಯಕ್ತಿ ಬೇಕೆನಿಸಿತ್ತು. ಅವೆಲ್ಲವನ್ನೂ ವಿಶ್ವವಾಣಿ ಪತ್ರಿಕೆ ಸ್ವೀಕರಿಸಿ ಪ್ರಕಟಿಸಬಹುದೆಂಬ ನಿರೀಕ್ಷೆ ಇರಲಿಲ್ಲ. ಏಕೆಂದರೆ ವಿಶ್ವೇಶ್ವರ ಭಟ್ ಅವರು ಆಗಲೇ ಕನ್ನಡ ಪತ್ರಿಕೋದ್ಯಮದಲ್ಲಿ ತಮ್ಮದೇ ಛಾಪು ಮೂಡಿಸಿದವರು. ಉನ್ನತಮಟ್ಟದ ಬರಹಗಾರನಾಗಿ ಹೆಸರಾದವರು. ಅಂದಾಗ ತಮ್ಮದೇ ಪತ್ರಿಕೆಯಲ್ಲಿ ಆರಂಭದಿಂದಲೂ ಪ್ರಕಟಿಸುವ ಬರಹಗಳ ಗುಣಮಟ್ಟದ ಕುರಿತು ಹೆಚ್ಚಿನ ಕಾಳಜಿ ವಹಿಸುವರೆಂದು ತಿಳಿದಿತ್ತು. ಆದರೆ ಯಾವುದೇ ಅಡೆತಡೆಯಿಲ್ಲದೆ ಅಂದಿನಿಂದ ಇಂದಿನವರೆಗೂ ನನ್ನ ಬರಹಗಳಿಗೆ ಸೂಕ್ತ ಎಡೆಮಾಡಿ ಪ್ರಕಟಿಸಿರುವ ಕುರಿತು ಈ ಸಂದರ್ಭದಲ್ಲಿ ಉಲ್ಲೇಖಿಸುವುದು ನಾನಿಲ್ಲಿ ಸೂಚಿಸುತ್ತಿರುವ ಗೌರವವೆಂದುಕೊಳ್ಳುವೆ.

ವಿಶ್ವೇಶ್ವರ ಭಟ್ ಅಪ್ರತಿಮ ಬ್ಯಾಟ್ಸ್‌ಮನ್: ವಿಶ್ವೇಶ್ವರ ಭಟ್ ಮತ್ತು ನನ್ನ ಊರು ಒಂದೇ. ಅಂದರೆ ಮೂಲವನ್ನು ಅದೇ ಪರಿಸರದಲ್ಲಿ ಗುರುತಿಸಬಹುದಾಗಿದೆ.ಅರಬ್ಬಿ ಸಮುದ್ರ ತಟದಲ್ಲಿರುವ ಕುಮಟಾ ತಾಲೂಕಿನ ಸಮೀಪದ ಮೂರೂರು ಎಂಬ ಗ್ರಾಮ. ಕುಮಟಾ ಪೇಟೆಯಿಂದ ಸುಮಾರು ಆರು ಕಿಲೋ ಮೀಟರ್ ದೂರ. ತಾಲೂಕು ಕೇಂದ್ರದಿಂದ ಹೊರಟು ಗುಡ್ಡೆಯ ಮೇಲೇರಿ, ಸ್ವಲ್ಪದೂರ ಸಾಗಿ ಇನ್ನೊಂದು ಗುಡ್ಡ ಇಳಿದರಾಯಿತು ಬಂತು ಮೂರೂರು. ಸೃಷ್ಟಿ ಸೌಂದರ್ಯ ತುಂಬಿರುವ ತಾಣ. ನಾನು ಕುಮಟಾ ಕಾಲೇಜಿಗೆ ಹೋಗುತ್ತಿದ್ದ ಕಾಲದಲ್ಲಿ ವಿಶ್ವೇಶ್ವರ ಮಾಧ್ಯಮಿಕ ಶಾಲೆಯಲ್ಲಿ ಓದಿರಬಹುದೆಂಬ ನೆನಪು. ವಿಶ್ವೇಶ್ವರ ಮತ್ತು ತಮ್ಮ ಸದಾನಂದ್ ಭಟ್ ಅವರ ಭೇಟಿಯಾಗುತ್ತಿದ್ದುದು ರಜಾ ದಿನಗಳಲ್ಲಿ, ಕ್ರಿಕೆಟ್ ಆಡಲು ಹೋದಾಗ. ಊರಿನಲ್ಲಿ ಗೋಳಿಬೈಲು ಮತ್ತು ಹಂದಿಮಕ್ಕಿ ಎಂಬ ಎರಡು ಸಮತಟ್ಟಾದ ಬೇಣದಲ್ಲಿ ಕ್ರಿಕೆಟ್ ಆಡಲು ಸೇರುವುದಿತ್ತು. ಹೆಚ್ಚು ಮಾತನಾಡದ ಸೌಮ್ಯ ಸ್ವಭಾವದ, ಮುಗುಳ್ನಗೆಯ ವಿಶ್ವೇಶ್ವರರ ಚಿತ್ರಣ ನನ್ನ ಅಂದಿನ ನೆನಪು. ಓಪನಿಂಗ್ ಬ್ಯಾಟ್ಸ್‌ಮನ್ ಆಗಿ ವಿಶ್ವೇಶ್ವರ್ ಭಟ್ ಇನ್ನಿಂಗ್ಸ್ ಆರಂಭಿಸಿದರೆ ಔಟ್ ಮಾಡುವುದು ತುಂಬಾ ಕಷ್ಟದ ಸಂಗತಿಯಾಗಿತ್ತು! ಔಟ್ ಆಗದೇ ರನ್ ಗಳಿಸುತ್ತಿದ್ದುದು ಅವರ ಆಟದ ವಿಶೇಷವಾಗಿತ್ತು. ದಿಟ್ಟತನ ಮತ್ತು ಚಾತುರ್ಯವನ್ನು ಕ್ರಿಕೆಟ್ ಆಟದಲ್ಲೂ ಅಂದು ಅವರಲ್ಲಿ ಕಂಡಿದ್ದೆ.

ವಿಶ್ವೇಶ್ವರರ ಸೈಕಲ್ ಸವಾರಿಯ ಚಮತ್ಕಾರ: ವಿಶ್ವೇಶ್ವರರ ಕುರಿತ ಇನ್ನೊಂದು ವಿಶೇಷ ನೆನಪೆಂದರೆ ಕ್ರಿಕೆಟ್ ಆಡಲು ಬಂದಾಗ ತಮ್ಮ ಸೈಕಲ್ಲನ್ನು ಒಂದೇ ಸ್ಥಳದಲ್ಲಿ ರೌಂಡ್ ಹಾಕುತ್ತಿದ್ದುದು. ನಾವೆಲ್ಲ ಯತ್ನಿಸಿದರೂ ಹಾಗೆ ವರ್ತುಲ ಹಾಕಲು ಸಾಧ್ಯವಾಗುತ್ತಿರಲಿಲ್ಲ. ಊರಿನಲ್ಲಿ ವಿಶ್ವೇಶ್ವರ್ ಕುಟುಂಬದ ಮಾಲೀಕತ್ವದ ದಿನಸಿ ಅಂಗಡಿ, ಎಣ್ಣೆ ಮತ್ತು ಹಿಟ್ಟಿನ ಗಿರಣಿಗಳಿದ್ದವು. ಸಾಮಾನು ತರಲೆಂದು ಹಲವು ಸಾರಿ ಅವರ ಅಂಗಡಿಗೆ ಹೋಗಿದ್ದೆ. ಒಣಗಿದ ಕೊಬ್ಬರಿಯಿಂದ ಎಣ್ಣೆ ತೆಗೆಸಿಕೊಂಡು ಬಂದಿದ್ದೆ. ಹಬ್ಬದ ಸಮಯದಲ್ಲಿ ದೇವರಿಗೆ ಸಲ್ಲುವ ಪೂಜಾ ಪ್ರಸಾದದ ಪಂಚಕಜ್ಜಾಯದ ಹಿಟ್ಟನ್ನು ಮಡಿಯಲ್ಲಿ ಮಾಡಿಕೊಡುವ ವ್ಯವಸ್ಥೆಯೂ ಅಲ್ಲಿತ್ತು. ರಜಾ ದಿನಗಳಲ್ಲಿ ಕೆಲವೊಮ್ಮೆ ಅಂದಿನ ದಿನಗಲ್ಲಿ ವಿಶ್ವೇಶ್ವರ್ ಭಟ್ ಅವರನ್ನು ಅಂಗಡಿಯಲ್ಲಿ ನೋಡಿದ ನೆನಪು. ವ್ಯಾಪಾರ- ವ್ಯವಹಾರದಲ್ಲಿನ ಸಿಹಿ-ಕಹಿಯ ವಾಸ್ತವ ಮತ್ತು ವೃತ್ತಿಯನ್ನು ಮಡಿವಂತಿಕೆಯಿಂದ ನಡೆಸುವ ಮನಸ್ಥಿತಿಯು ಬಾಲ್ಯದಿಂದಲೇ ಅವರನ್ನು ಹಿನ್ನೆಲೆಯಾಗಿ ಅವರಿಸಿತ್ತೆಂದು ನಾನು ಭಾವಿಸುತ್ತೇನೆ.

ಬದುಕಿನ ಆಕರ್ಷಣೆ ನಿಗ್ರಹಿಸಿ ನಿಲ್ಲಬೇಕು: ಸಾಮಾನ್ಯ ಆರ್ಥಿಕ ಹಿನ್ನೆಲೆಯಿಂದ ಬಂದ ವ್ಯಕ್ತಿ ಉದ್ಯಮಿಯಾಗಿ ನೆಲೆ ನಿಲ್ಲುವುದು ಅತ್ಯಂತ ಕಷ್ಟದ ಸಂಗತಿ. ಉದ್ಯಮ ನಡೆಸುವ ಹಂಬಲದಲ್ಲಿ ಪೂರ್ತಿ ಬದುಕನ್ನೇ ಉದ್ಯಮಕ್ಕೆಂದು ಮುಡುಪಾಗಿಡುವುದು ಅನಿವಾರ್ಯ. ಸಾಮಾನ್ಯನೊಬ್ಬ ಅಸಾಮಾನ್ಯ ಸಾಧನೆಗೆಂದು ಶ್ರಮಿಸುವ ಹಾದಿಯಲ್ಲಿ ಸಹಜ ಬದುಕಿನ ಆಕರ್ಷಣೆಯನ್ನು ನಿಗ್ರಹಿಸಿ ನಿಲ್ಲಬೇಕು. ಉದ್ಯಮವನ್ನು ಸ್ಥಿರವಾಗಿಸಿ ಸಫಲವಾಗಿಸುವ ದಿಶೆಯಲ್ಲಿ ಶಕ್ತಿಮೀರಿ ನೀಡಬೇಕು. ನಮ್ಮ ದೇಶದ ಬೃಹತ್ ಉದ್ಯಮದ ಆರಂಭಿಕ ಕರ್ತರಾದ ಧೀರೂಭಾಯಿ ಅಂಬಾನಿ, ಜಮಶೇಟ್‌ಜಿ ಟಾಟಾ ಬಿರ್ಲಾ ಅಥವಾ ನಾರಾಯಣ ಮೂರ್ತಿ ಹೀಗೆ ಎಲ್ಲರ ಬದುಕಿನ ಪುಟಗಳೂ ಹೇಳುವ ಸಾರ ಅದೇ. ರಾಜ್ಯಮಟ್ಟದ ಕನ್ನಡ ಪತ್ರಿಕೋದ್ಯಮಕ್ಕೆ ಸೀಮಿತವಾಗಿ ಹೇಳುವುದಾದರೆ ಉಳಿದೆಲ್ಲ ದೈನಿಕಗಳನ್ನು ನಡೆಸುತ್ತಿರುವವರು ಭಾರಿ ಉದ್ಯಮಿ,ಬಂಡವಾಳಶಾಹಿಗಳು, ದತ್ತಿ ಸಂಘ - ಸಂಸ್ಥೆಗಳು,ಅಥವಾ ಟ್ರಸ್ಟ್‌ಗಳು. ಅತ್ಯಂತ ಸಾಮಾನ್ಯ ಆರ್ಥಿಕ ಹಿನ್ನೆಲೆಯಿಂದ ಬಂದು ಸ್ವಂತಿಕೆಯ ಆಧಾರದ ಮೇಲೆ ಪತ್ರಿಕೋದ್ಯಮದಂಥ ಕ್ಲಿಷ್ಟ ಪರಿಕ್ರಮದಲ್ಲಿ ತೊಡಗಿಕೊಂಡು ಅಳಿವು-ಉಳಿವಿನ ಹೋರಾಟದಲ್ಲಿ ಗೆಲುವು ಪಡೆದಿರುವ ವಿಶ್ವೇಶ್ವರ ಭಟ್ಟರದು ಈ ನಿಟ್ಟಿನ ಏಕೈಕ ಶ್ರೇಷ್ಠ ಮಟ್ಟದ ಮಾದರಿಯೆನ್ನಬಹುದು.

ಉದ್ಯಮದ ಯಶಸ್ಸಿಗೆ ಪರಿಶ್ರಮ ಅಗತ್ಯ: ಪತ್ರಿಕೆಯೊಂದನ್ನು ಆರಂಭಿಸಿ ನಡೆಸಿಕೊಂಡು ಬರುವುದು ಖಂಡಿತ ಸುಲಭದ ಮಾತಲ್ಲ. ಹಾರಿದರೆ ಹಾರಲಿ, ಬಿದ್ದರೆ ಬೀಳಲಿ ಎನ್ನುವ ಗಾಳಿಪಟ ಹಾರಿಸುವ ಆಟವಲ್ಲ. ಅದರಲ್ಲೂ ಬರಹಗಾರನಾಗಿ, ಪ್ರಮುಖ ಪತ್ರಿಕೆಗಳಲ್ಲಿ ಸಂಪಾದಕನಾಗಿ ಅಷ್ಟೆಲ್ಲ ಹೆಸರು ಗಳಿಸಿದ ಮೇಲಂತೂ ಪ್ರತಿಷ್ಠೆಯ ಪ್ರಶ್ನೆಯಾಗುವುದು ಒಂದು ಕಡೆ. ಇನ್ನೊಂದೆಡೆ ಪತ್ರಿಕೆಯನ್ನು ನಡೆಸಲು ಬೇಕಾದ ಸಂಪನ್ಮೂಲಗಳನ್ನು ಒದಗಿಸುವ ಸವಾಲು. ಅಚ್ಚುಕಟ್ಟಾಗಿ ಮುದ್ರಿಸುವ ಯಂತ್ರ ಮತ್ತು ಅದನ್ನು ಸದಾ ಸುಸ್ಥಿತಿಯಲ್ಲಿಟ್ಟುಕೊಳ್ಳುವ ತಂತ್ರ ಬೇಕು. ನಡುವೆ ಮುದ್ರಣ ಪ್ರಕ್ರಿಯೆ ಒಂದುದಿನವೂ ಕೈಕೊಡುವಂತಿಲ್ಲ. ಪತ್ರಿಕೆ ತುಂಬುವಷ್ಟು ಸರಿಯಾದ, ತಾಜಾ, ಮನ ಮುಟ್ಟುವ ಸುದ್ದಿಗಳು ಬೇಕು. ಆಡಳಿತಾಂಗ ಮತ್ತು ಜನತೆಯ ನಡುವೆ ಸೇತುವೆಯಾಗಬೇಕು. ಪರಿಕಲ್ಪನೆಗಳು ನಿತ್ಯ ನೂತನವಾಗಿರಬೇಕು. ಪ್ರಚೋದಕವಷ್ಟೇ ಅಲ್ಲ ಉದ್ಬೋಧಕವಿರಬೇಕು. ಮುಖ್ಯವಾಗಿ ಸಮಾಜ ಸುಧಾರಣೆ ಧ್ಯೇಯ ವಾಗಬೇಕು. ಎಲ್ಲ ಕ್ಷೇತ್ರಗಳನ್ನು ಒಳಗೊಂಡಿರಬೇಕು. ಸಮಯಕ್ಕೆ ಸರಿಯಾಗಿ ಪ್ರತಿನಿತ್ಯ ಓದುಗರನ್ನು ತಲುಪಬೇಕು. ಎಲ್ಲವನ್ನೂ ಸಮರ್ಥವಾಗಿ ನಿರ್ವಹಿಸಬಲ್ಲ ನಂಬಿಗಸ್ಥ ಮಾನವ ಸಂಪನ್ಮೂಲ ಅತ್ಯಗತ್ಯ. ಮಾನವ ಸಂಪನ್ಮೂಲದ ನಿರ್ವಹಣೆ ಯಾವುದೇ ಉದ್ಯಮವು ಎದುರಿಸಬೇಕಾದ ಅತ್ಯಂತ ಮಹತ್ವದ ಸವಾಲು. ಎಲ್ಲವನ್ನೂ ಸುಧಾರಿಸಿಕೊಂಡು ಯಶಸ್ಸು ಕಂಡಾಗ ಅದು ಎಲ್ಲದರಾಗುತ್ತದೆ. ಸೋಲು ಮಾತ್ರ ಒಬ್ಬನದೇ! ಈ ಮಾತು ಬಹುತೇಕ ಎಲ್ಲ ಸ್ವಾಮಿತ್ವದ ಉದ್ಯಮಗಳಿಗೆ ಅನ್ವಯವಾಗುವ ಸತ್ಯ.

ಸವಾಲಿನ ಕೆಲಸ: ಸಾಮಾನ್ಯ ಕೌಟುಂಬಿಕ ಹಿನ್ನೆಲೆಯಿಂದ ಬಂದು ಉದ್ಯಮ ಸ್ಥಾಪಿಸುವ ದಿಶೆಯಲ್ಲಿ ನಾನೂ ಯತ್ನಿಸಿದವನೇ. ರಸಾಯನ ಶಾಸ್ತ್ರದಲ್ಲಿ ಅಧ್ಯಯನ ಮಾಡಿ ಮುಂಬೈ ಸೇರಿದ ಮೇಲೆ ಔಷಧ ಸಾಮಗ್ರಿ ತಯಾರಿಸುವ ಸ್ವಂತ ಉದ್ಯಮ ಸ್ಥಾಪಿಸುವ ಸಾಹಸದಲ್ಲಿ ತೊಡಗಿ ಪಡಿಪಾಟಲು ಅನುಭವಿಸಿದೆ. ಇಲ್ಲಿ ಸ್ವಾರ್ಥಕ್ಕಿಂತ ಮೊದಲು ಪದಾರ್ಥ ನೀಗುವುದು ಆದ್ಯತೆಯಾಗುತ್ತದೆ. ಉದ್ಯಮದಲ್ಲಿ ನಾನು ಕಂಡ ಮಹತ್ವದ ಸವಾಲುಗಳೆಂದರೆ ಹಣ ಜೋಡಣೆ, ಮಾನವ ಸಂಪನ್ಮೂಲ ನಿರ್ವಹಣೆ, ಉತ್ಕೃಷ್ಟ ಗುಣಮಟ್ಟದ ಪದಾರ್ಥಗಳೊಂದಿಗೆ ಸುಲಭ ಬೆಲೆಯಲ್ಲಿ ಮಾರುಕಟ್ಟೆ ತಲುಪುವುದು, ಸದಾ ನಾವೀನ್ಯತೆ ಅಳವಡಿಸಿಕೊಳ್ಳುವುದು, ಬೇರೆ ಬೇರೆ ಲೈಸೆನ್ಸಗಳನ್ನು ನೀಡುವ ಸರಕಾರದ ಅಧೀನದಲ್ಲಿನ ಏಜೆನ್ಸಿಗಳೊಂದಿಗೆ ಸಮನ್ವಯ ಸಾಧಿಸುವುದು. ಯಾವುದೇ ಉದ್ಯಮವು ನಿಂತ ನೀರಾದರೆ ರೇಖಾನಕ್ಷೆಯು ಅಧೋಮುಖವಾಗುವ ಸಾಧ್ಯತೆ ಸದಾ ತೂಗಾಡುವ ಕತ್ತಿಯಂತೆ ಇರುತ್ತದೆ. ಇಂಥ ಪ್ರಮುಖ ಸವಾಲಿನತ್ತ ಆದಾಗಲೇ ಸಾಕಷ್ಟು ಗಮನ ಹರಿಸಿ ಲೋಕಧ್ವನಿ ಪತ್ರಿಕೆ, ವಿಶ್ವವಾಣಿ ಟಿವಿ,ವಿಶ್ವವಾಣಿ ಪುಸ್ತಕ ಎಂಬ ಪ್ರಕಾಶಕ ಸಂಸ್ಥೆ, ವಿಶ್ವವಾಣಿ ವಿದ್ಯಾಪೀಠ ಎಂಬ ಶಿಕ್ಷಣ ಸಂಸ್ಥೆ,ವಿಶ್ವವಾಣಿ ಗ್ಲೋಬಲ್ ಫೋರಮ್ ಎಂಬ ಅಂತಾರಾಷ್ಟ್ರೀಯ ಸಾಧಕರ ಸಮಾವೇಶ,ವಿಶ್ವವಾಣಿ ಕ್ಲಬ್‌ಹೌಸ್ ಮುಂತಾದ ಹತ್ತೆಂಟು ಯೋಜನೆಗಳೊಂದಿಗೆ ಪಸರಿಸಿ ಸದಾ ಮುನ್ನಡಿಯಿಟ್ಟು ಸಾಗುವಲ್ಲಿ ವಿಶ್ವವಾಣಿಯ ಮಹತ್ತರವಾದ ಹೆಜ್ಜೆಗಳನ್ನು ಗುರುತಿಸಬಹುದು.ವಿಶ್ವವಾಣಿಯು ಆರಂಭಿಸಿದ ಹಲವಾರು ಕವಲುಗಳು ಮತ್ತು ಪ್ರಗತಿಪರ ಕಾರ್ಯಕ್ರಮಗಳು ಪತ್ರಿಕೆಯ ದೂರದೃಷ್ಟಿ ಮತ್ತು ಅರ್ಥಗರ್ಭಿತ ಔದ್ಯಮಿಕ ಮತ್ತು ಸಾಮಾಜಿಕ ವಿವೇಚನೆಯನ್ನು ಸೂಚಿಸುತ್ತಿವೆ.

ವಿಶ್ವವಾಣಿಯ ಯಶಸ್ಸಿನ ಹತ್ತರ ಸಂಭ್ರಮದ ಆಚರಣೆಯ ಸಮಯದಲ್ಲಿ ವಿಶ್ವೇಶ್ವರ ಭಟ್ ಅವರು ಹಂಚಿಕೊಂಡ ಅನುಭವಗಳನ್ನು ಮತ್ತು ಹಲವು ಗಣ್ಯರ ಮಾತುಗಳನ್ನು ಗಮನಿಸಿರುವೆ. 640 ರು. ಮಾಸಿಕ ಸಂಬಳದೊಂದಿಗೆ ತಮ್ಮ ವೃತ್ತಿ ಆರಂಭಿಸಿದ್ದಾಗಿ ಭಟ್ಟರು ಹೇಳಿದ್ದಾರೆ. ಮೊದಲನೇ ದಿನದಿಂದಲೇ 1,94,000 ಪ್ರತಿಗಳನ್ನು ಪ್ರಕಟಿಸಿ ಓದುಗರನ್ನು ತಲುಪಿಸುವ ಕಟ್ಟುಪಾಡು ಕಠಿಣವಾದ ಆರಂಭದ ದಿನಗಳಿಗೆ ಕಾರಣವಾಗಿದ್ದುದು ಮತ್ತು ಮೊದಲಿನ ಕೆಲ ವರ್ಷಗಳಲ್ಲಿ ಅನುಭವಿಸಿದ ಹಣ ಜೋಡಣೆಯ ವಿಚಾರದಲ್ಲಿನ ಕಷ್ಟದ ಸಂಗತಿಗಳನ್ನು ನೆನೆಸಿಕೊಂಡಿದ್ದಾರೆ. ಹಾಗೆ ಅನಿಸಿದರೂ,ಪತ್ರಿಕೆಯನ್ನು ನಿಲ್ಲಿಸಿ ಬಿಡುವ ಸುಲಭವಾದ ಮಾರ್ಗವನ್ನು ಬಿಟ್ಟು ಏನೇ ಆದರೂ ಮುನ್ನಡೆಸುವ ಕಷ್ಟಕರ ಆಯ್ಕೆಯನ್ನು ಅಪ್ಪಿಕೊಂಡ ಕುರಿತೂ ಹೇಳಿದ್ದಾರೆ. ಎಲ್ಲ ಅಡೆತಡೆಗಳನ್ನು ಸಮರ್ಥವಾಗಿ ಎದುರಿಸಿ ಮುನ್ನುಗ್ಗಿದ ನಿರ್ಧಾರದ ಹಿಂದಿರುವುದು ಅಪಾರ ಅನುಭವ, ಉನ್ನತ ವಲಯದಲ್ಲಿನ ನಿಕಟ ಸಂಬಂಧ, ಕೆಚ್ಚೆದೆ ಮತ್ತು ಸಮರ್ಪಣಾ ಭಾವವೆಂಬುದನ್ನು ಮತ್ತೆ ಹೇಳಬೇಕಿಲ್ಲ.

ವಸ್ತುನಿಷ್ಠ ಪ್ರಸ್ತುತಿ: ಮುಂಬೈನಲ್ಲಿ ಉಳಿದು, ಬಿಡುವಿಲ್ಲದ ಕೆಲಸದ ನಡುವೆಯೂ ಒಂಭತ್ತು ವರ್ಷಗಳಿಂದ ವಿಶ್ವವಾಣಿ ಪತ್ರಿಕೆಯನ್ನು ತಪ್ಪದೇ ಓದುತ್ತಿರುವೆ. ವಿಶ್ವವಾಣಿ ಪತ್ರಿಕೆಯು ಬೆಳೆದುಬಂದ ರೀತಿ, ವೈವಿಧ್ಯವನ್ನು ಸಾಧಿಸಿದ ಬಗೆ ಮತ್ತು ಎತ್ತರವನ್ನು ಗಮನಿಸಿರುವೆ. ಮಹತ್ವದ ಅಂಶವೆಂದರೆ ಪಕ್ಷ ಅಥವಾ ವ್ಯಕ್ತಿನಿಷ್ಠವಾಗದೆ ವಸ್ತುನಿಷ್ಠವಾದ ಪ್ರಸ್ತುತಿ. ನಿತ್ಯನೂತನ. ವಿಶ್ವಾಸವೇ ವಿಶ್ವವೆನಿಸಿದ್ದು.

ವಿಶ್ವವಾಣಿ ಬೆಳೆದು ನಿಂತ ಮತ್ತು ಸಾಗುತ್ತಿರುವ ದಾರಿಯ ಕುರಿತು ಹೆಮ್ಮೆ ಪಡಬೇಕಿರುವ, ಗೌರವ ಸಲ್ಲಿಸುವ ಈ ಸಂದರ್ಭದಲ್ಲಿ, ಕೇಂದ್ರದ ಪೂರ್ವ ಮಂತ್ರಿ, ಖ್ಯಾತ ಪತ್ರಕರ್ತ ಎಮ್. ಜೆ. ಅಕ್ಬರ್ ಅವರು ಹೇಳಿರುವ ಮಾತನ್ನು ಉಲ್ಲೇಖಿಸುವುದು ಸಮರ್ಪಕವೆನಿಸುತ್ತಿದೆ. Vishwavani not only informs, it also shapes the discourse towards the demands of justice and the focus of knowledge. Its circulation is impressive; but it's goodwill is incalculable. Congratulations, Vishweshwar : you have become one of the legends of Indian journalism !'

ಸಂವಿಧಾನ ವಿರೋಧಿಗಳ ವಿರುದ್ಧ ಹೋರಾಟ ಅಗತ್ಯ

ಬೆಂಗಳೂರು: ಸರ್ವರಿಗೂ ಒಳಿತು ಮಾಡುವ ಕಾರಣಕ್ಕಾಗಿ ಬಾಬಾ ಸಾಹೇಬ್ ಅಂಬೇಡ್ಕರ್ ರಚಿಸಿರುವ ಸಂವಿಧಾನವನ್ನು ಇಂದು ಕೆಲವರು ವಿರೋಧಿಸುತ್ತಿದ್ದಾರೆ. ಅವರ ವಿರುದ್ಧ ಹೋರಾಟ ಇಂದಿನ ಅಗತ್ಯವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಗಣರಾಜ್ಯೋತ್ಸವದ ಸಂದೇಶದಲ್ಲಿ ಈ ಬಗ್ಗೆ ಮಾತನಾಡಿರುವ ಅವರು, ಸಂವಿಧಾನ ಜಾರಿಗೊಳಿಸಿ ಪ್ರಜಾಪ್ರಭುತ್ವ ರಾಷ್ಟ್ರ ಎಂದು ಘೋಷಣೆ ಮಾಡಿಕೊಂಡ 75 ವರ್ಷಗಳ ನಂತರವೂ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಉಳಿಸಲು ಹೋರಾಟ ನಡೆಸಬೇಕಾದ ವಿಷಾದನೀಯ ಸ್ಥಿತಿಯಲ್ಲಿ ನಾವು ಗಣರಾಜ್ಯೋತ್ಸವ ಆಚರಿಸುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಇದು ಗತವೈಭವದಲ್ಲಿ ಮೈಮರೆಯದೇ ವರ್ತಮಾನದ ವಾಸ್ತವಗಳಿಗೆ ಮುಖಾಮುಖಿಯಾಗುವ ಕಾಲ. ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳೆಂಬ ಸಂವಿಧಾನದ ಮೂರು ಮುಖ್ಯ ಆಧಾರ ಸ್ತಂಭಗಳು ಭದ್ರವಾಗಿದ್ದು, ಆರೋಗ್ಯಕರವಾಗಿ ಕಾರ್ಯನಿರ್ವಹಿಸಿದರೆ ಮಾತ್ರ ಸಂವಿಧಾನದ ಪಾಲನೆಯಾಗುತ್ತಿದೆ ಮತ್ತು ಪ್ರಜಾಪ್ರಭುತ್ವ ಸುರಕ್ಷಿತವಾಗಿದೆ ಎಂದು ಅರ್ಥ ಎಂದಿದ್ದಾರೆ.

ಆದರೆ ಕಟು ಸತ್ಯವೆಂದರೆ ಏನೆಂದರೆ ಸರ್ವಾಧಿಕಾರದ ದಂಡದಡಿ ನಮ್ಮ ಕಾರ್ಯಾಂಗ ಕರ್ತವ್ಯ ಭ್ರಷ್ಟಗೊಳ್ಳುತ್ತಿದೆ, ಶಾಸಕಾಂಗವನ್ನು ಖರೀದಿಸಲಾಗುತ್ತಿದೆ ಮತ್ತು ನ್ಯಾಯಾಂಗಕ್ಕೆ ಬೆದರಿಕೆ ಒಡ್ಡಿ ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಷಡ್ಯಂತ್ರ ನಡೆಯುತ್ತಿದೆ. ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳೆಂಬ ಆಧಾರ ಸ್ತಂಭಗಳು ದುರ್ಬಲಗೊಂಡು ಶಕ್ತಿಹೀನವಾದಾಗ ಸಂವಿಧಾನವೇ ಅಪ್ರಸ್ತುತವಾಗಿ ಪ್ರಜಾಪ್ರಭುತ್ವ ವ್ಯವಸ್ಥೆ ಬುಡಮೇಲಾಗುವ ಸಾಧ್ಯತೆಗಳಿವೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

> **ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿದ್ದ ನಮ್ಮ ಕಾಂಗ್ರೆಸ್ ಪಕ್ಷ ಜೈ ಬಾಪು, ಜೈ ಭೀಮ್ ಮತ್ತು ಜೈ ಸಂವಿಧಾನ ಎಂಬ ಅಭಿಯಾನ ಪ್ರಾರಂಭಿಸಿದೆ. ನಾಡ ಬಾಂಧವರೆಲ್ಲರೂ ಪಕ್ಷ, ಪಂಥ, ಜಾತಿ-ಧರ್ಮಗಳ ಎಲ್ಲೆಯನ್ನು ಮೀರಿ ಈ ಅಭಿಯಾನದಲ್ಲಿ ಕೈ ಜೋಡಿಸಬೇಕು.**
> **-ಸಿದ್ದರಾಮಯ್ಯ,** ಮುಖ್ಯಮಂತ್ರಿ

- **ಸರ್ವಾಧಿಕಾರಿ ಧೋರಣೆಯಲ್ಲಿ ಕಾರ್ಯಾಂಗ ಕರ್ತವ್ಯ ಭ್ರಷ್ಟವಾಗುತ್ತಿದೆ**
- **ಪ್ರಜಾಪ್ರಭುತ್ವ ಉಳಿಸುವ ಜವಾಬ್ದಾರಿ ಜನರ ಮೇಲಿದೆ**

ಭಾರತ ಅಪಾಯದ ಸ್ಥಿತಿಯಲ್ಲಿದೆ: ಇಂತಹ ಅಪಾಯದ ಸ್ಥಿತಿಯಲ್ಲಿ ಭಾರತ ನಿಂತಿದೆ. ಪ್ರಜಾಪ್ರಭುತ್ವವನ್ನು ಉಳಿಸುವ ದೊಡ್ಡ ಜವಾಬ್ದಾರಿ ಪ್ರತಿಯೊಬ್ಬ ಪ್ರಜೆಯ ಹೆಗಲ ಮೇಲಿದೆ. ಜಾತಿ, ಮತ, ಪಂಥ, ಪ್ರದೇಶದ ಭೇದಗಳನ್ನು ಮರೆತು ಇಡೀ ದೇಶ ಒಂದಾಗಿ ಹೊರಗಿನ ಶತ್ರುಗಳನ್ನು ಹೊಡೆದೋಡಿಸಲು ಹೇಗೆ ಸ್ವಾತಂತ್ರ್ಯ ಹೋರಾಟ ನಡೆಸಲಾಯಿತೋ, ಅಂತಹದ್ದೇ ಒಂದು ಹೋರಾಟವನ್ನು ದೇಶದೊಳಗಿನ ಸಂವಿಧಾನ ವಿರೋಧಿ ಶತ್ರುಗಳ ವಿರುದ್ಧ ನಡೆಸಬೇಕಾಗಿದೆ. ಇದಕ್ಕಾಗಿ ಎರಡನೇ ಸ್ವಾತಂತ್ರ್ಯ ಹೋರಾಟ ನಡೆಯದೆ ಹೋದರೆ ಮುಂದಿನ ಪೀಳಿಗೆಗೆ ಬದುಕುಳಿಯಲು ಪ್ರಜಾಪ್ರಭುತ್ವ ಇರುವುದಿಲ್ಲ ಎಂದಿದ್ದಾರೆ.

ಗಣರಾಜ್ಯೋತ್ಸವದ ದಿನವಾದ ಇಂದು ನಾವೆಲ್ಲರೂ ಒಗ್ಗೂಡಿ ದೃಢಚಿತ್ತದಿಂದ ಸಂವಿಧಾನವನ್ನು ಉಳಿಸುವ ಸಂಕಲ್ಪ ಮಾಡಬೇಕಾಗಿದೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ಉಳಿಸುವ ಮೂಲಕ ನಮ್ಮ ಭಾರತವನ್ನು ರಕ್ಷಿಸುವ ಹೋರಾಟಕ್ಕೆ ನಮಗಿರುವ ಅಸ್ತ್ರಗಳೆಂದರೆ ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಚಿಂತನೆಗಳು ಎಂದು ತಿಳಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗವಹಿಸಿದ್ದರು.

ಬಡವರನ್ನು ಕಡೆಗಣಿಸಿ, ಶ್ರೀಮಂತರಿಗೆ ಸೌಲಭ್ಯ: ಖರ್ಗೆ

ಸಮಾಜ ವಿಭಜಿಸುತ್ತಿರುವ ಬಿಜೆಪಿ

ಬೆಂಗಳೂರು: ಸಮಾಜವನ್ನು ವಿಭಜಿಸುವ, ಸಂವಿಧಾನವನ್ನು ವಿರೋಧಿಸುವ ಬಿಜೆಪಿಯ ನಡೆ ಒಪ್ಪಲು ಸಾಧ್ಯವಿಲ್ಲ. ದೇಶದ ಐಕ್ಯ ಹಾಗೂ ಸಂವಿಧಾನದ ರಕ್ಷಣೆಗೆ ನಾವೆಲ್ಲರೂ ಹೋರಾಡಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಧಾರ್ಮಿಕ ಮೂಲಭೂತವಾದದಲ್ಲಿ ಮುಳುಗಿರುವ ದ್ವೇಷಪೂರಿತ ಅಜೆಂಡಾ ಕಳೆದ 10 ವರ್ಷಗಳಿಂದ ಸಮಾಜವನ್ನು ವಿಭಜಿಸಲು ಪ್ರಯತ್ನಿಸುತ್ತಿದೆ. ಪವಿತ್ರ ಸಂವಿಧಾನದ ತತ್ವವನ್ನು ಸರ್ವಾಧಿಕಾರಿ ಆಡಳಿತದಿಂದ ತುಂಡುಗಳಾಗಿ ಚೂರುಚೂರು ಮಾಡಲಾಗುತ್ತಿದೆ ಎಂದು ಆರೋಪಿಸಿದ್ದಾರೆ. ಬಿಜೆಪಿಯವರು ಹಿಂದುಳಿದ ಯುವಕರನ್ನು ರಾಷ್ಟ್ರೀಯತೆ ಮತ್ತು ಧಾರ್ಮಿಕ ಪಾರಮ್ಯದ ಧ್ವಜವನ್ನು ಹಿಡಿಯುವಂತೆ ಮಾಡುವ ಮೂಲಕ ಹುಸಿ-ರಾಷ್ಟ್ರೀಯತೆಯನ್ನು ಅಭ್ಯಾಸ ಮಾಡಿಸುತ್ತಿದೆ, ಆದರೆ ಅವರಿಗೆ ಉದ್ಯೋಗವನ್ನು ಪಡೆಯಲು ಏನನ್ನೂ ಮಾಡುತ್ತಿಲ್ಲ ಎಂದು ಟೀಕಿಸಿದರು. ಸಂವಿಧಾನ ರಕ್ಷಣೆ ಹಾಗೂ ಸಂವಿಧಾನದ ಪ್ರಕಾರವಾಗಿ ನಡೆದುಕೊಳ್ಳುವುದು ಅತಿ ಮುಖ್ಯ. ಆದರೆ ಈಗಿರುವ ಕೇಂದ್ರ ಸರಕಾರ ಸಂವಿಧಾನದ ಎಲ್ಲಾ ಮೌಲ್ಯಗಳನ್ನು ಮೂಲೆಗುಂಪು ಮಾಡುತ್ತಿದೆ. ಇದರಿಂದ ನಾಗರಿಕರಿಗೆ ಸಿಗಬೇಕಾದ ಮೂಲಭೂತ ಹಕ್ಕುಗಳು, ಅದರಲ್ಲೂ ಮಹಿಳೆಯರಿಗೆ ವಿಶೇಷವಾಗಿ ಸಿಗುವ ಸ್ವಾತಂತ್ರ್ಯ ಮೊಟಕುಗೊಳಿಸಲಾಗುತ್ತಿದೆ ಎಂದು ಟೀಕಿಸಿದರು.

ಸಂವಿಧಾನದಲ್ಲಿ ಎಲ್ಲರಿಗೂ ವಿಶೇಷ ಸ್ಥಾನ

ದೇಶಕ್ಕೆ ಸ್ವಾತಂತ್ರ್ಯ ಹಾಗೂ ಸಂವಿಧಾನ ಸಿಕ್ಕ ನಂತರ ನಮಗೆ ವಿಶೇಷವಾದ ಸ್ಥಾನಮಾನ ಸಿಕ್ಕಿದೆ. ಇದು ಅನೇಕರಿಗೆ ಗೊತ್ತಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರ ಮನೆ ಬಾಗಿಲಿಗೆ ಹೋಗಿ ಮತ ಕೇಳಲಾಗುತ್ತಿದೆ. ಇದು ಕಾಂಗ್ರೆಸ್ ಕೊಡುಗೆ. ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಪಂಡಿತ್ ಜವಹಾರ್ ಲಾಲ್ ನೆಹರು ಅವರ ಕೊಡುಗೆ. ಇವರುಗಳ ಕೊಡುಗೆಯಿಂದ ನಾವು ಈ ದೇಶವನ್ನು ಸ್ವಾತಂತ್ರ್ಯವಾಗಿ ಉಳಿಸಿ, ದೇಶದ ಐಕ್ಯತೆಗಾಗಿ ಹೋರಾಟ ಮಾಡುತ್ತಿದ್ದೇವೆ. ಆದರೆ ದುಃಖದ ವಿಚಾರ ಎಂದರೆ, ಅಮಿತ್ ಶಾರಂತಹ ದೇಶದ ಪ್ರಮುಖ ನಾಯಕರು ಸಂವಿಧಾನವನ್ನು ಹಿಯಾಳಿಸುತ್ತಿದ್ದಾರೆ. ಸಂವಿಧಾನ ರಚಿಸಿದವರ ಬಗ್ಗೆ ಟೀಕೆ ಮಾಡಿ ಅವರಿಗೆ ಅಗೌರವ ತೋರುತ್ತಿದ್ದಾರೆ ಎಂದು ತಿಳಿಸಿದರು.

ಕಾಂಗ್ರೆಸ್‌ನಲ್ಲಿ ದಾಯಾದಿ ಕಲಹವಿಲ್ಲ: ಡಿಸಿಎಂ ಡಿಕೆಶಿ

ಬೆಂಗಳೂರು: ಕಾಂಗ್ರೆಸ್ ಪಕ್ಷದಲ್ಲಿ ದಾಯಾದಿ ಕಲಹವಿಲ್ಲ. ನಮ್ಮದು ಒಂದೇ ಪಕ್ಷ. ನಮ್ಮಲ್ಲಿ ಯಾವುದೇ ಬಿಕ್ಕಟ್ಟಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮಲ್ಲಿ ಯಾವುದೇ ಬಿಕ್ಕಟ್ಟಿಲ್ಲ ಎಂದು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ಕಾಂಗ್ರೆಸ್ ಪಕ್ಷವೇ ಒಂದು ಕುಟುಂಬ. ನಮ್ಮಲ್ಲಿ ಯಾವುದೇ ಸಮಸ್ಯೆಯಿಲ್ಲ. ಎಐಸಿಸಿ ಅಧ್ಯಕ್ಷರು ಯಾವ ಸೂಚನೆ ನೀಡಿದ್ದಾರೆ ಎನ್ನುವ ಪ್ರಶ್ನೆಗೆ, ಕಾಂಗ್ರೆಸ್ ಕಚೇರಿ ಕಟ್ಟಿದ್ದು ಮಲ್ಲಿಕಾರ್ಜುನಖರ್ಗೆ ಅವರು ಇಲ್ಲಿ ಎರಡು ನಿಮಿಷ ನೆಮ್ಮದಿಯಾಗಿ ಕಾಫಿ ಕುಡಿಯಬಾರದೇ. ನೀವು ನಿಮ್ಮ ಮನೆಯವರು ಚರ್ಚೆ ಮಾಡಿದ್ದನ್ನು ಸಾರ್ವಜನಿಕವಾಗಿ ಮಾತನಾಡುತ್ತಿರಾ ಎಂದು ಪ್ರಶ್ನಿಸಿದರು.

ಇದಕ್ಕೂ ಮೊದಲು ಕೆಪಿಸಿಸಿ ಕಚೇರಿಯಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂವಿಧಾನ ಈ ದೇಶದ ಆತ್ಮ. ಸಂವಿಧಾನ ಇಲ್ಲದೇ ಹೋದರೆ ಈ ದೇಶಕ್ಕೆ ಆತ್ಮವೇ ಇರುವುದಿಲ್ಲ. ಇದನ್ನು ನಾವು ಉಳಿಸಿಕೊಂಡು, ಬೆಳೆಸಿಕೊಂಡು ಹೋಗಬೇಕು ಎಂದು ಹೇಳಿದರು.

> **ರಾಜ್ಯದಿಂದ ಬಿಜೆಪಿಯ ಎಷ್ಟೊಂದು ಸಂಸದರಿದ್ದಾರೆ. ಕರ್ನಾಟಕ ರಾಜ್ಯಕ್ಕೆ ಮೋಸ ಮಾಡುವುದಿಲ್ಲ, ಅನುದಾನ ಕೊಡುತ್ತಾರೆ ಎಂಬ ನಂಬಿಕೆ ಮೇಲೆ ಕೇಳಿದ್ದೇವೆ. ದೇವೇಗೌಡರು, ಕುಮಾರಸ್ವಾಮಿ ಒಂದೇ ದಿನದಲ್ಲಿ ಮೋದಿ ಅವರ ಕೈಯಿಂದ ಮೇಕೆದಾಟಿಗೆ ಸಹಿ ಹಾಕಿಸುವುದಾಗಿ ಹೇಳಿದ್ದರು. ಅದಕ್ಕಾಗಿ ಕ್ಷಣಗಣನೆಗೆ ಕಾಯುತ್ತಿದ್ದೇನೆ. ಸಂಸತ್ ಕಲಾಪದ ವೇಳೆಯೂ ಹೋಗಿ ಭೇಟಿ ಮಾಡುತ್ತೇನೆ.**
> **-ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರಾದ ಬಳಿಕ 2ನೇ ಬಾರಿಗೆ ಪಕ್ಷದ ಕಚೇರಿಯಲ್ಲಿ ಧ್ವಜಾರೋಹಣ ನೆರವೇರಿಸಿದ್ದಾರೆ. ಜನವರಿ 26 ಸಂವಿಧಾನವನ್ನು ಅನುಷ್ಠಾನಕ್ಕೆ ತಂದ ಪವಿತ್ರವಾದ ದಿನ. ಒಕ್ಕೂಟ ವ್ಯವಸ್ಥೆ ಜಾರಿಯಾದ ದಿನ. ಎಲ್ಲಾ ಭಾಷೆ, ಧರ್ಮ, ಜಾತಿಗಳು ಒಂದೇ ಎಂದು ಸಾರಿದ ದಿನ. ಉಸಿರಾಡೋಕೆ ಹೇಗೆ ಗಾಳಿ ಬೇಕೋ ಹಾಗೇ ದೇಶ ನಡೆಸೋಕೆ, ನಾವು ಬದುಕಲು ಸಂವಿಧಾನ ಇರಲೇಬೇಕು. ನೆಹರೂ ಅವರು ಪ್ರಧಾನಮಂತ್ರಿಯಾಗಿದ್ದಾಗ, ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಸಂವಿಧಾನ ರಚನೆಯ ಜವಾಬ್ದಾರಿ ನೀಡಿ ಈ ದೇಶಕ್ಕೆ ಸಂವಿಧಾನ ನೀಡಲಾಯಿತು ಎಂದು ನೆನೆದರು.

ಬಿಹಾರ, ಆಂಧ್ರ ನೋಡದೇ ಬೆಂಗಳೂರಿಗೆ ಅನುದಾನ ನೀಡಲಿ

ಬೆಂಗಳೂರಿನ ಯೋಜನೆಗಳಿಗೆ ಅನುದಾನ ಕೋರಿ ಪತ್ರ ಬರೆದಿರುವುದನ್ನು ಕೇಂದ್ರ ಸರಕಾರ ಪರಿಗಣಿಸುವುದೇ ಎನ್ನುವ ಪ್ರಶ್ನೆಗೆ ಪ್ರತಿಕ್ರಿಯಿಸಿ, ಬೆಂಗಳೂರು ಜಾಗತಿಕ ನಗರವಾಗಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಅಮೆರಿಕ ರಾಯಭಾರಿ ಕಚೇರಿ ಆರಂಭವಾಗಿದ್ದು, ಮೂರು ದಿನಗಳ ಹಿಂದೆ ಫ್ರಾನ್ಸ್ ಪ್ರತಿನಿಧಿ ನನ್ನನ್ನು ಭೇಟಿ ಮಾಡಿ ಮುಂದಿನ ವರ್ಷ ಬೆಂಗಳೂರಿನಲ್ಲಿ ಕಚೇರಿ ಆರಂಭಿಸಲಿದ್ದಾರೆ. ಅವರ ದೃಷ್ಟಿಯಲ್ಲಿ ಬೆಂಗಳೂರು ಪ್ರಮುಖ ನಗರವಾಗಿದ್ದು, ಹೀಗಾಗಿ ಕೇಂದ್ರ ಸರಕಾರ ಕೇವಲ ಬಿಹಾರ ಹಾಗೂ ಆಂಧ್ರಪ್ರದೇಶವನ್ನು ಮಾತ್ರ ನೋಡದೆ ಕರ್ನಾಟಕದ ಪ್ರತಿನಿಧಿಯಾಗಿ ನಮ್ಮ ರಾಜ್ಯದ ಕಡೆಯೂ ನೋಡಿ, ಬೆಂಗಳೂರಿಗೆ ಅಗತ್ಯ ಅನುದಾನ ನೀಡುವಂತೆ ಕೇಂದ್ರ ಸಚಿವರು ಹಾಗೂ ಪ್ರಧಾನಮಂತ್ರಿಗೆ ಮನವಿ ಮಾಡಿದ್ದೇನೆ ಎಂದು ತಿಳಿಸಿದರು.

ವಿಶ್ವವಾಣಿ
ಕ್ಲಬ್ ಹೌಸ್
27.01.2025
ಕಾರ್ನರ್



ಸಂಜೆ: 06.55 ರಿಂದ 08.05 ರವರೆಗೆ
ಸೋಮವಾರದ ಅತಿಥಿ
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ವಿಷಯ
ಸನಾತನ ಧರ್ಮ
vishwavani.news

ನಮ್ಮೊಂದಿಗಿರುವವರು ಬಯಸಿದರೆ ಚುನಾವಣೆಗೆ ಸ್ಪರ್ಧಿಸುವೆ: ಯತ್ನಾಳ್

ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಸಿದ್ಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು/ವಿಜಯಪುರ

ರಾಜ್ಯ ಬಿಜೆಪಿಯಲ್ಲಿ ನಡೆಯುತ್ತಿರುವ ಹಲವು ವಿವಾದಗಳ ನಡುವೆ ಮುಂದಿನ ದಿನದಲ್ಲಿ ಎದುರಾಗಲಿರುವ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಸಿದ್ಧ ಎನ್ನುವ ಮೂಲಕ ಮತ್ತೊಮ್ಮೆ ವಿಜಯೇಂದ್ರ ವಿರುದ್ಧ ಹೋರಾಡಲು ಮುಂದಾಗಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯುವ ಬಗ್ಗೆ ಪರ-ವಿರೋಧ ಚರ್ಚೆಯ ನಡುವೆಯೇ ಬಸನಗೌಡ ಪಾಟೀಲ್ ಯತ್ನಾಳ್ ತಮ್ಮವರು ಒಪ್ಪಿದರೆ ಚುನಾವಣೆಗೆ ಸ್ಪರ್ಧಿಸಲು ಸಿದ್ಧ. ಸ್ಪರ್ಧೆ ಖಚಿತ.. ಗೆಲುವು ನಿಶ್ಚಿತ.. ತೇವಣಿ ಉಚಿತ. ಕೋರ್ ಕಮಿಟಿಯಲ್ಲಿ ನನ್ನ ಹೆಸರು ಅಂತಿಮವಾದರೆ ಸ್ಪರ್ಧಿಸುವೆ ಎಂದು ಸ್ಪಷ್ಟಪಡಿಸಿದ್ದಾರೆ. ನಮ್ಮ ಕೋರ್ ಕಮಿಟಿ ಇದೆ. ಅಲ್ಲಿ ಸೂಕ್ತ ಅಭ್ಯರ್ಥಿ ಬಗ್ಗೆ ಚರ್ಚಿಸುತ್ತೇವೆ. ಕೋರ್ ಕಮಿಟಿ ನಿರ್ಣಯ ಮಾಡಿದವರು ಸ್ಪರ್ಧೆ ಮಾಡುತ್ತೇವೆ. ನನ್ನ ಹೆಸರು ಅಂತಿಮವಾದರೆ ನಾನೇ ಸ್ಪರ್ಧಿಸುವೆ ಎಂದರು. ಉಸ್ತುವಾರಿ ಸಭೆಗೆ ಯತ್ನಾಳ ಗೈರು ವಿಚಾರಕ್ಕೆ ಶಾಸಕ ಯತ್ನಾಳ್ ಪ್ರತಿಕ್ರಿಯಿಸಿ, ನಾನು ಸಭೆಗೆ ಹೋಗಿಲ್ಲ, ಅಲ್ಲಿ 600 ಶಾಸಕರ ಬೆಂಬಲ ಇದೆ, ಅಲ್ಲಿ ನಮಗೇನು ಕೆಲಸ. 600 ಶಾಸಕರು, 1500 ಸಂಸದರು, 2000 ಎಂಎಲ್‌ಸಿಗಳ ಬೆಂಬಲ ಇದೆ ಎಂದು ವ್ಯಂಗ್ಯವಾಡಿದರು. ಯತ್ನಾಳ, ಜಾರಕಿಹೊಳಿ ಹಿಂದೆ ಯಾವ ಮಗಾ ಇದ್ದಾನೆ? ಅದಕ್ಕೆ ನಾವು ಹೋಗಿಲ್ಲ. ಕಾರ್ಯಕರ್ತರ ಹುರುಪು ಆಗುವಂತೆ ಅಧ್ಯಕ್ಷರಾಗಬೇಕು, ರಾತ್ರಿ ಡಿಕೆಶಿ ಮನೆಯಲ್ಲಿ.. ಮುಂಜಾನೆ ಸಿದ್ದರಾಮಯ್ಯ ಮನೆ.. 11ಕ್ಕೆ ಬೋಲೋ ಭಾರತ್ ಮಾತಾ ಕೀ ಜೈ ಎಂದರೆ ಹೇಗೆ? ಎಂದು ಯತ್ನಾಳ ಪರೋಕ್ಷವಾಗಿ ಬಿ.ವೈ. ವಿಜಯೇಂದ್ರರಿಗೆ ಟೀಕಿಸಿದರು.

ರೆಡ್ಡಿ-ರಾಮುಲು ಮಧ್ಯೆ ಹುಳಿ ಹಿಂಡಿದ್ದಾರೆ

ಜನಾರ್ಧನ ರೆಡ್ಡಿ, ಶ್ರೀರಾಮುಲು ಮುನಿಸು ವಿಚಾರಕ್ಕೆ ಯತ್ನಾಳ ಮಾತ ನಾಡಿ, ರೆಡ್ಡಿ-ರಾಮುಲು ಜಗಳವಾಡಬೇಡಿ... ಒಂದಾಗಿರಿ, ಮನೆಯ ಕಾಂಪೌಂಡ್ ಕಿತ್ತು ಹಾಕಿ ಒಂದಾಗಿ. ರೆಡ್ಡಿ, ಶ್ರೀರಾಮುಲು ನಡುವೆ ಹುಳಿ ಹಿಂಡಿದ್ದಾರೆ. ಇಲ್ಲ ಸಲ್ಲದ್ದನ್ನು ಹೇಳಿ ಇಬ್ಬರ ನಡುವೆ ಬೆಂಕಿ ಹಚ್ಚಿದ್ದಾರೆ. ಕಷ್ಟದಿಂದ ಬಂದಿದ್ದೀರಿ.. ಒಂದಾಗಿರಿ. ಜನಾರ್ದನ ರೆಡ್ಡಿ, ಶ್ರೀರಾಮುಲು, ಕರುಣಾಕರ ರೆಡ್ಡಿ, ಸೋಮಶೇಖರ್ ರೆಡ್ಡಿ ಒಂದೇ ಸ್ಕೂಟಿ ಮೇಲೆ ಅಡ್ಡಾಡ್ತಿದ್ದರು. ನಾನು ಕೇಂದ್ರ ಮಂತ್ರಿಯಾಗಿದ್ದ ವೇಳೆ ಒಂದೇ ಸ್ಕೂಟಿ ಮೇಲೆ ಒಂದೇ ಹಾರ ಮೂರು ಜನರು ತಂದಿದ್ದರು. ಕಷ್ಟದಲ್ಲಿ ಒಂದಾಗಿದ್ದವರು ಹೆಲಿಕಾಪ್ಟರ್‌ನಲ್ಲಿ ಅಡ್ಡಾಡುವ ಮಟ್ಟಕ್ಕೆ ಬೆಳೆದರು. ಇಬ್ಬರೂ ಒಂದಾಗಲಿ ಎಂದು ಬಸನಗೌಡ ಪಾಟೀಲ್ ಯತ್ನಾಳ್ ಕಿವಿಮಾತು ಹೇಳಿದರು.

ಶಕ್ತಿ ಯೋಜನೆಯಿಂದ ಯಾವುದೇ ನಷ್ಟ ಆಗಿಲ್ಲ



ರಾಮನಗರ: ಶಕ್ತಿ ಯೋಜನೆಯಿಂದ ಯಾವುದೇ ನಷ್ಟವಾಗಿಲ್ಲ. ಶಕ್ತಿ ಯೋಜನೆಯಿಂದ ಬರಬೇಕಾದ ಹಣ ಸಾರಿಗೆ ಇಲಾಖೆಗೆ ಬಂದಿದೆ ಎಂದು ರಾಮನಗರ ಉಸ್ತುವಾರಿ ಸಚಿವ ರಾಮಲಿಂಗಾ ರೆಡ್ಡಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, 8.8 ಕೋಟಿ ರು.ಗೂ ಹೆಚ್ಚು ಮೊತ್ತ ಸಾರಿಗೆ ಇಲಾಖೆಗೆ ಬಂದಿದೆ. ಕೆಎಸ್‌ಆರ್‌ಟಿಸಿಯಲ್ಲಿ ಬಿಜೆಪಿ ಸರಕಾರ ಇದ್ದಾಗ 5,900 ಕೋಟಿ ಸಾಲ ಇತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ 10 ಸಾವಿರ ಮಂದಿಯನ್ನು ಸಂಸ್ಥೆಗೆ ನೇಮಕ ಮಾಡಿಕೊಂಡಿದ್ದೇವೆ. ಈಗಾಗಲೇ ಡಿ.ಕೆ. ಶಿವಕುಮಾರ್ ಹಾಗೂ ಸುರೇಶ್ ರಾಮನಗರ ಜಿಲ್ಲೆಯನ್ನು ಸಾಕಷ್ಟು ಅಭಿವೃದ್ಧಿ ಮಾಡಿದ್ದಾರೆ. ಜಿಲ್ಲೆಗೆ ಈ ಬಾರಿಯ ಬಜೆಟ್‌ನಲ್ಲಿ ಹೆಚ್ಚಿನ ಅನುದಾನಕ್ಕೆ ಮನವಿ ಮಾಡಿದ್ದೇವೆ. ಜಿಲ್ಲೆಗೆ ಆಗಬೇಕಿರುವ ಅಭಿವೃದ್ಧಿ ಪಟ್ಟಿಯನ್ನು ಡಿಸಿ ಅವರು ನೀಡುತ್ತಾರೆ. ಫೆ.4 ರಂದು ಪ್ರಗತಿ ಪರಿಶೀಲನಾ ಸಭೆ ಕರೆದಿದ್ದೇನೆ ಎಂದರು.

ವಿಶ್ವವಾಣಿ

ಸಂಪಾದಕೀಯ

ಅತಿರೇಕಗಳಿಗೆ ಲಗಾಮು ಹಾಕಿ

ಮೈಕ್ರೋ ಫೈನಾನ್ಸ್ ಸಂಸ್ಥೆಗಳ ವಿರುದ್ಧ ಸಾರ್ವಜನಿಕರಿಂದ ಬರುತ್ತಿದ್ದ ದೂರುಗಳ ಸಂಖ್ಯೆಯು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದ್ದ ಹಿನ್ನೆಲೆಯಲ್ಲಿ, ಸಚಿವರು ಮತ್ತು ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಮುಖ್ಯಸ್ಥರ ತುರ್ತುಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಸಾಲ ಮರುಪಾವತಿಗೆ ಇರುವ ಮಾರ್ಗಸೂಚಿಯನ್ನು ಬಿಟ್ಟು ಬೇರೆ ರೀತಿಯಲ್ಲಿ ವಸೂಲಿಗೆ ಮುಂದಾದರೆ ಕಠಿಣಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿರುವುದು ಶ್ಲಾಘನೀಯ. ಜತೆಗೆ, ಇಂಥ ಸಂಸ್ಥೆಗಳ ದಾಂಧಲೆ ತಗ್ಗಿಸಲು ಮತ್ತು ಸಾರ್ವಜನಿಕರಿಗೆ ರಕ್ಷಣೆ ನೀಡಲು ಸುಗ್ರೀವಾಜ್ಞೆ ಹೊರಡಿಸಲೂ ಸರಕಾರ ತೀರ್ಮಾನಿಸಿರುವುದು ಸಮಾಜದ ವಿವಿಧ ವರ್ಗಗಳಲ್ಲಿ ಸಮಾಧಾನ ತಂದಿದೆ ಎನ್ನಬೇಕು. ಮೈಕ್ರೋಫೈನಾನ್ಸ್ ವಲಯದ ಕಿರಿಕಿರಿಯನ್ನು ನಿವಾರಿಸುವುದರ ಜತೆಜತೆಗೆ, ಮತ್ತೊಂದು ಅಪಸವ್ಯದ ನಿವಾರಣೆಗೂ ಸರಕಾರ ಕಟಿಬದ್ಧವಾಗಬೇಕಿದೆ. ಅದುವೇ ಮೀಟರ್ ಬಡ್ಡಿ ದಂಧೆಕೋರರ ಕಿರುಕುಳ. ಇದು ರಾಜ್ಯದಲ್ಲಿ ಬಹಳ ಕಾಲದಿಂದ ಅವ್ಯಾಹತವಾಗಿ ನಡೆಯುತ್ತಾ ಬಂದಿರುವುದನ್ನು ಬಿಡಿಸಿ ಹೇಳಬೇಕಿಲ್ಲ. ಮೊನ್ನೆ ಗದಗ್‌ನ ಬೆಟಗೇರಿಯಲ್ಲಿ ಇಂಥದೊಂದು ಅತಿರೇಕದ ಕಿರುಕುಳದ ಘಟನೆ ನಡೆದಿದೆ. ಒಂದು ಲಕ್ಷ ರುಪಾಯಿ ಮೊತ್ತದ ಸಾಲಕ್ಕೆ ಬಡ್ಡಿ ನೀಡಲಿಲ್ಲವೆಂದು ಮೀಟರ್ ಬಡ್ಡಿ ದಂಧೆಕೋರರು ವ್ಯಕ್ತಿಯೊಬ್ಬನನ್ನು ಮನೆಯೊಂದರಲ್ಲಿ ಕೂಡಿಹಾಕಿ, ಆತನ ಬಟ್ಟೆ ಬಿಚ್ಚಿ, ಬಾಯಿಗೆ ಬಟ್ಟೆ ತುರುಕಿ ಚಿತ್ರಹಿಂಸೆ ನೀಡಿರುವ ಪ್ರಸಂಗವಿದು. ಮತ್ತೊಂದೆಡೆ, ಇಂಥವರ ಕಿರುಕುಳವನ್ನು ಸಹಿಸಲಾಗದ ಯುವಕನೊಬ್ಬ ನೇಣಿಗೆ ಕೊರಳೊಡ್ಡಿದ ದುರಂತವು ಕೆ.ಆರ್.ಪೇಟೆಯ ಗ್ರಾಮವೊಂದರಲ್ಲಿ ಜರುಗಿದೆ. ಮೀಟರ್ ಬಡ್ಡಿ ದಂಧೆಯವರ ಕರಾಳತೆ ಯಾವ ಮಟ್ಟಿಗಿದೆ, ಅವರ ಕಬಂಧಬಾಹು ಎಲ್ಲಿಯವರೆಗೆ ಚಾಚಿದೆ ಎಂಬುದಕ್ಕೆ ಈ ಎರಡು ಉದಾಹರಣೆಗಳು ಸಾಕು. ನೀತಿ-ನಿಯಮಗಳ ಭಯವಿಲ್ಲದಿದ್ದರೆ, ಕಾನೂನಿನ ಕಟ್ಟುಪಾಡಿನ ಬಿಗಿಯಿಲ್ಲದಿದ್ದರೆ ಜರುಗು ವಂಥ ಅಪಸವ್ಯಗಳಿವು ಎಂಬುದು ಸ್ಪಷ್ಟಗೋಚರ. ಈ ಅನಾಗರಿಕ ಪ್ರವೃತ್ತಿಗೆ ಸರಕಾರ ಇನ್ನಾದರೂ ಪರಿಣಾಮಕಾರಿಯಾಗಿ ಮದ್ದು ಅರೆಯಬೇಕಿದೆ. ಇಲ್ಲವಾದಲ್ಲಿ, ರಾಜ್ಯದ ಉದ್ದಗಲಕ್ಕೂ ಇಂಥ ಮತ್ತಷ್ಟು ಘಟನೆಗಳು ಪುನರಾವರ್ತನೆಯಾದರೆ ಅದೇನೂ ಅಚ್ಚರಿಯ ಸಂಗತಿಯಲ್ಲ. ಸುಖೀಸಮಾಜದ ನಿರ್ಮಾಣ ಸರಕಾರದ ಸಂಕಲ್ಪವಾಗಲಿ.

ಸೊಂಪಾದಕೀಯ

ಮಂಗಗಳ ಮಂಗಳಕಾರ್ಯ

ಕಥಾನಾಯಕನು ಕಷ್ಟದಲ್ಲಿರುವವರ ರಕ್ಷಣೆ ಮಾಡುವ ದೃಶ್ಯಗಳನ್ನು ನಾವು ಅನೇಕ ಸಿನಿಮಾಗಳಲ್ಲಿ ನೋಡಿದ್ದೇವೆ. 'ಅಯ್ಯೋ, ಈ ಅನ್ಯಾಯನಾ ತಡೆಯೋಕೆ ಯಾರೂ ಇಲ್ವಾ..?' ಅಂತ ಚಿತ್ರದ ಪಾತ್ರವೊಂದು ಕೂಗಿ ಹೇಳಿದಾಗ ನಾಯಕ ನಟನ ಎಂಟ್ರಿ ಆಗೋದು, ಅವನು ಬಂದು ಅನ್ಯಾಯನ ನಿಲ್ಲಿಸೋದು ಎಲ್ಲವನ್ನೂ ನೋಡಿದ್ದೇವೆ. ಇದು ಮುಂದುವರಿದು, ಅನೇಕ ಪ್ರಾಣಿಪ್ರಧಾನ ಚಿತ್ರಗಳಲ್ಲಿ ನಾಯಿ, ಕೋತಿ, ಹಸು ಮುಂತಾದ ಪ್ರಾಣಿಗಳು ಸಂಕಷ್ಟದಲ್ಲಿರುವವರನ್ನು ಪಾರುಮಾಡಿದ ಉದಾಹರಣೆಗಳನ್ನೂ ನಾವು ನೋಡಿದ್ದೇವೆ. ಇದು ಅಂಥದ್ದೇ ಒಂದು ಪ್ರಸಂಗ. ಸೆಕ್ಸ್ ಅನ್ನೋ ವಿಷಯಕ್ಕೆ ಬಂದ್ರೆ ಮನುಷ್ಯ ಕ್ರೂರಮೃಗ ಆಗ್ತಾನೆ ಅನ್ನೋದಕ್ಕೆ ಅನೇಕ ಉದಾಹರಣೆಗಳಿವೆ. ಇತ್ತೀಚೆಗಂತೂ ಮನುಷ್ಯನನ್ನು ಕೊಂದು, ದೇಹವನ್ನು ಕತ್ತರಿಸಿ, ಅದರ ತುಂಡುಗಳನ್ನು ಫ್ರಿಜ್‌ನಲ್ಲಿ ಶೇಖರಿಸಿಡುವವರೆಗೆ ಈ ಕ್ರೂರತನ ಮುಂದುವರಿದಿರೋದ್ರಿಂದ ಇದು ಶೀತಲ ಸಮರವಾಗಿ ಉಳಿದಿಲ್ಲ. ಮನುಷ್ಯನೊಳಗಿನ ಮೃಗ ಒಂದು ಕಡೆ ಆದರೆ, ಮೃಗಗಳಲ್ಲಿರೋ ಮನುಷ್ಯತ್ವ ಇನ್ನೊಂದು ಕಡೆ. ಅಂಥ ಮೃಗಗಳ ಮಾನವೀಯತೆ ಸಾರುವಂಥ ವಿಷಯ ಇದು. ಕೆಲ ತಿಂಗಳ ಹಿಂದೆ ಉತ್ತರಪ್ರದೇಶದಲ್ಲಿ ಮಂಗಗಳು, ಅತ್ಯಾಚಾರಕ್ಕೆ ಒಳಗಾಗುತ್ತಿದ್ದ ಬಾಲಕಿಯನ್ನು ರಕ್ಷಣೆ ಮಾಡಿ, ಮನುಷ್ಯ ಮೇಲೋ, ಪ್ರಾಣಿ ಮೇಲೋ ಎಂಬ ಪ್ರಶ್ನೆಗೆ ಉತ್ತರ ನೀಡಿದ ಕಥೆಯಿದು. 6 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗುವ ಪ್ಲ್ಯಾನ್ ಮಾಡಿ, ಆಕೆಯ ಜತೆ ನಯವಾಗಿ ಮಾತಾಡಿ ಪಾಳುಬಿದ್ದ ಮನೆಯೊಂದಕ್ಕೆ ಕರೆದೊಯ್ದಿದ್ದ ಕಾಮುಕ, ಇನ್ನೇನು ಆಕೆಯ ಮೇಲೆ ಅತ್ಯಾಚಾರಕ್ಕೆ ಸಿದ್ಧವಾಗಿದ್ದಾಗ ಅವನ ಮೇಲೆ ಅಟ್ಯಾಕ್ ಮಾಡಿದ ಮಂಗಗಳು ಆತನನ್ನು ಅಲ್ಲಿಂದ ಓಡಿಸಿ ಮಂಗಗಳಿಗೂ ಮಾನವೀಯತೆ ಇದೆ ಅಂತ ಪ್ರೂವ್ ಮಾಡಿದವು. ಬಾಲಕಿಯ ಚೀರಾಟ ಕೇಳಿ ಅಲ್ಲಿದ್ದ ಮಂಗಗಳ ಹಿಂಡು ಈ ಕಾಮುಕನ ಮೇಲೆ ದಾಳಿ ಮಾಡಿತು. ಮಂಗಗಳ ಸಂಖ್ಯೆ ಜಾಸ್ತಿ ಇದ್ದಿದ್ದರಿಂದ ಅವನು ಬೇರೆ ದಾರಿ ಕಾಣದೆ ಅಲ್ಲಿಂದ ಪೇರಿ ಕಿತ್ತ. ಬಾಲಕಿಯ ಮನೆಯವರು ಸಾಕ್ಷಾತ್ ಹನುಮಂತನೇ ಬಂದು ನಮ್ಮ ಮಗಳನ್ನು ರಕ್ಷಿಸಿದ್ದಾನೆ ಅಂತ ನಿಟ್ಟುಸಿರು ಬಿಟ್ಟರು. ಒಟ್ಟಿನಲ್ಲಿ ಮಂಗಗಳು ಅಂದ್ರೆ ಬರೀ ಕಪಿಚೇಷ್ಟೆ ಮಾಡಲು ಮಾತ್ರ ಅಂದುಕೊಂಡಿದ್ದವರಿಗೆ ಮಂಗಗಳಿಂದ ಮಂಗಳಕರ ಕೆಲಸಗಳೂ ಆಗುತ್ತವೆ ಅಂತ ಪ್ರೂವ್ ಮಾಡಿ ತೋರಿಸಿದವು ಈ ಕೋತಿಗಳು.

ಸಂಪಾದಕರ ಸದ್ಯಶೋಧನೆ

ಒಂದು ನಾಯಿಯ ಕಥೆಯಿದು!

ಇಟಲಿಯ ಫ್ಲಾರೆನ್ಸ್ ನಗರದಿಂದ ಸುಮಾರು 20 ಕಿ.ಮೀ. ದೂರದಲ್ಲಿ ಬೋರ್ಗೋ ಸ್ಯಾನ್ ಲೊರೆಂಝೋ ಎಂಬ ಸಣ್ಣ ಊರಿದೆ. ಆ ಊರಿನ ಜನಸಂಖ್ಯೆ 15,000 ಇದ್ದಿರಬಹುದು. ಈ ಊರು ತನ್ನ ಭೌಗೋಳಿಕ ಸೌಂದರ್ಯದಿಂದ ಪ್ರಸಿದ್ಧವಾಗಿದೆ. ಫ್ಲಾರೆನ್ಸ್‌ಗೆ ಬಂದವರು ಬೋರ್ಗೋ ಸ್ಯಾನ್ ಲೊರೆಂಝೋಕ್ಕೆ ಒಂದು ನಾಯಿಯ ಸ್ಮಾರಕ ನೋಡಲು ಆಗಮಿಸುತ್ತಾರೆ ಅಂದರೆ ಆಶ್ಚರ್ಯವಾಗಬಹುದು. ಆ ಊರಿನಲ್ಲಿ ಫಿಡೊ ಎಂಬ ಇಟಾಲಿಯನ್ ನಾಯಿಯ ಸ್ಮಾರಕವಿದೆ. ಆ ನಾಯಿ 17 ವರ್ಷಗಳ ಕಾಲ ಬದುಕಿತ್ತು. ಫಿಡೊ ತನ್ನ ಯಜಮಾನನಿಗೆ ಅಚಲ ನಿಷ್ಠೆಯನ್ನು ಪ್ರದರ್ಶಿಸಿದ್ದರ ದ್ಯೋತಕವಾಗಿ ಆ ಸ್ಮಾರಕವನ್ನು ಸ್ಥಾಪಿಸಲಾಗಿದೆ. ಆ ನಾಯಿಯ ಕುರಿತು ಅನೇಕ ಇಟಾಲಿಯನ್ ಮತ್ತು ಅಂತಾರಾಷ್ಟ್ರೀಯ ನಿಯತಕಾಲಿಕೆಗಳು ಹಾಗೂ ಪತ್ರಿಕೆಗಳಲ್ಲಿ ಸಾವಿರಾರು ಲೇಖನಗಳು ಪ್ರಕಟವಾಗಿರಬಹುದು. 1941ರಲ್ಲಿ ಫಿಡೊ, ಬೋರ್ಗೋ ಸ್ಯಾನ್ ಲೊರೆಂಝೋ ಪುರಸಭೆಯ ಸಣ್ಣ ಪಟ್ಟಣದಲ್ಲಿ ಒಂದು ಬೀದಿ ನಾಯಿಯಾಗಿತ್ತು. ಅದೇ ವರ್ಷ ಒಂದು ರಾತ್ರಿ, ಕಾರ್ಲೋ ಸೊರಿಯಾನಿ ಎಂಬ ಇಟ್ಟಿಗೆಗೂಡು ಕೆಲಸಗಾರ, ಬಸ್ ನಿಲ್ದಾಣದಿಂದ ಮನೆಗೆ ಹೋಗುತ್ತಿದ್ದಾಗ, ರಸ್ತೆ ಬದಿಯ ಕಂದಕದಲ್ಲಿ ಗಾಯಗೊಂಡು ಬಿದ್ದಿದ್ದ ನಾಯಿಯನ್ನು ನೋಡಿದ. ನಾಯಿ ಯಾರದ್ದು ಎಂದು ತಿಳಿಯದೆ, ಸೊರಿಯಾನಿ ಮನೆಗೆ ಕರೆದೊಯ್ದು ಶುಶ್ರೂಷೆ ಮಾಡಿ ಪ್ರೀತಿಯಿಂದ ಸಾಕಿದ. ಸೊರಿಯಾನಿ ಮತ್ತು ಅವನ ಪತ್ನಿ ನಾಯಿಯನ್ನು ದತ್ತು ತೆಗೆದುಕೊಳ್ಳಲು ನಿರ್ಧರಿಸಿದರು. ಅದಕ್ಕೆ ಫಿಡೋ (ಲ್ಯಾಟಿನ್ ಭಾಷೆಯಲ್ಲಿ ಫಿಡೊ ಅಂದ್ರೆ ನಿಷ್ಠಾವಂತ ಎಂದರ್ಥ) ಎಂದು ನಾಮಕರಣ ಮಾಡಿದರು. ಫಿಡೋ ಚೇತರಿಸಿಕೊಂಡ ನಂತರ, ಸೊರಿಯಾನಿ ಪ್ರತಿದಿನ ಕೆಲಸಕ್ಕೆ ಹೋಗುವಾಗ ಆತನನ್ನು ಹಿಂಬಾಲಿಸಲಾರಂಭಿಸಿತು. ಸಂಜೆ ಬಸ್ಸಿನಿಂದಿಳಿದು ಹಿಂದಿರುಗಿದಾಗ, ಫಿಡೋ ಸೊರಿಯಾನಿಯನ್ನು ಸ್ವಾಗತಿಸಿ ಮನೆಗೆ ಹಿಂಬಾಲಿಸುತ್ತಿತ್ತು. ಇದು 2 ವರ್ಷಗಳವರೆಗೆ ನಡೆಯಿತು. 1943ರಲ್ಲಿ ಬೋರ್ಗೋ ಸ್ಯಾನ್ ಲೊರೆಂಝೋ ಎರಡನೇ ಮಹಾಯುದ್ಧದ ಸಮಯದಲ್ಲಿ ಮಿತ್ರರಾಷ್ಟ್ರಗಳ ಬಾಂಬ್ ದಾಳಿಗೆ ತುತ್ತಾಯಿತು. ಆ ಸಮಯದಲ್ಲಿ ಸೊರಿಯಾನಿ ಸತ್ತುಹೋದ. ಅದೇ ದಿನ ಸಂಜೆ, ಫಿಡೋ ಬಸ್ ನಿಲ್ದಾಣದಲ್ಲಿ ಎಂದಿನಂತೆ ಕಾಣಿಸಿಕೊಂಡಿತು. ಆದರೆ ಸೊರಿಯಾನಿ ಇಳಿಯುವುದನ್ನು ನೋಡಲಿಲ್ಲ. ಫಿಡೋ ನಂತರ ಮನೆಗೆ ಹಿಂದಿರುಗಿತು, ಆದರೆ 14 ವರ್ಷಗಳ ಕಾಲ (5,000ಕ್ಕಿಂತ ಹೆಚ್ಚು ಬಾರಿ), ಸಾಯುವ ದಿನದವರೆಗೆ, ಪ್ರತಿದಿನ ಸ್ಟಾಪ್‌ಗೆ ಹೋಗುತ್ತಿತ್ತು. ತನ್ನ ಯಜಮಾನ ಬರಬಹುದು ಎಂದು ನಿತ್ಯವೂ ಕನವರಿಸುತ್ತಿತ್ತು. ಫಿಡೋ ಸ್ವಾಮಿನಿಷ್ಠೆಯ ಪರಾಕಾಷ್ಠೆಯ ಕಥೆ ಕೇವಲ ಆ ಊರಿಗೆ ಮಾತ್ರವಲ್ಲ, ಇಟಲಿಯ ಆಚೆಗೂ ಹರಡಿತು. ಸಾಯಂಕಾಲವಾಗುತ್ತಿದ್ದಂತೆ ಯಜಮಾನನ ದಾರಿ ನೋಡಲು ಬಸ್ ನಿಲ್ದಾಣಕ್ಕೆ ಬರುವುದನ್ನು ನೋಡಲು ಸಾವಿರಾರು ಜನ ಸೇರುತ್ತಿದ್ದರು. ಅದರ ಜೀವಿತಾವಧಿಯಲ್ಲಿ ಮಾಧ್ಯಮದ ಆಸಕ್ತಿಯೂ ಬೆಳೆಯಿತು. ಇಟಾಲಿಯನ್ ನಿಯತಕಾಲಿಕೆಗಳು ಫಿಡೊ ಕಥೆಯನ್ನು ಪ್ರಕಟಿಸಿದವು. ಇದು ಹಲವಾರು ನ್ಯೂಸ್ ರೀಲ್‌ಗಳಲ್ಲಿ ಕಾಣಿಸಿಕೊಂಡಿತು. 1958ರಲ್ಲಿ ಫಿಡೊ ತೀರಿಕೊಂಡಾಗ, ಲೊರೆಂಝೋ ಊರಿನ ಜನ ಕಂಬನಿ ಮಿಡಿದರು. ಸ್ವತಃ ಆ ಊರಿನ ಮೇಯರ್ ಶೋಕಸಭೆಯನ್ನು ಏರ್ಪಡಿಸಿದ. ಫಿಡೊ ನಿಧನ ವಾರ್ತೆ ಇಟಲಿಯ ಎಲ್ಲ ಪತ್ರಿಕೆಗಳಲ್ಲಿ ಮುಖಪುಟದಲ್ಲಿ ಪ್ರಕಟವಾಯಿತು. 'ಟೈಮ್' ಮ್ಯಾಗಜಿನ್ ಕೂಡ ಲೇಖನ ಪ್ರಕಟಿಸಿತು. ಫಿಡೊ ಸಾಯುವುದಕ್ಕಿಂತ ಒಂದು ವರ್ಷ ಮುಂಚೆಯೇ, ಆ ಊರಿನ ಜನ ಅದರ ನೆನಪಿಗಾಗಿ ಒಂದು ಸ್ಮಾರಕವನ್ನು ನಿರ್ಮಿಸಲು ನಿರ್ಧರಿಸಿದ್ದರು. ಫಿಡೊ ತಾನು ಬದುಕಿರುವಾಗಲೇ, ತನ್ನ ಸ್ಮಾರಕವನ್ನು ನೋಡಲಿ ಎಂಬುದು ಅವರ ಆಶಯವಾಗಿತ್ತು. ಕವಿ ಡಾಂಟೆ ವೃತ್ತದ ಸನಿಹ ಊರಿನ ಕೇಂದ್ರ ಭಾಗದಲ್ಲಿ ಫಿಡೊಗೆ ಸ್ಮಾರಕವನ್ನು ನಿರ್ಮಿಸಲಾಯಿತು. ನಾಯಿಯ ಪ್ರತಿಮೆಯ ಕೆಳಗೆ To Fido, example of loyalty ಎಂದು ಬರೆಯಲಾಗಿದೆ. ಸೊರಿಯಾನಿ ಪತ್ನಿ ಮತ್ತು ಫಿಡೊ ಸಮ್ಮುಖದಲ್ಲಿಯೇ ಆ ಪ್ರತಿಮೆಯನ್ನು ಮೇಯರ್ ಉದ್ಘಾಟಿಸಿದ್ದು ವಿಶೇಷ. ಫಿಡೊ ಇದನ್ನೆಲ್ಲಾ ಕಣ್ತುಂಬಿಕೊಳ್ಳಲಿ ಎಂದು ಊರಿನವರೆಲ್ಲ ಬಯಸಿದ್ದರು.

ಬಿಜೆಪಿ ಭಿನ್ನರಿಗೆ ಚುನಾವಣೆಯ ಕನಸು?



ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ಬಿಜೆಪಿಯ ಹಿರಿಯ ನಾಯಕರಾದ ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ ಹಲವು ನಾಯಕರು ಕಳೆದ ವಾರ ದಿಲ್ಲಿಗೆ ಹೋಗಿದ್ದಾರೆ. ಹೀಗೆ ಹೋದವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಜಗತ್ ಪ್ರಕಾಶ್ ನಡ್ಡಾ ಅವರ ಬಳಿ ಗಂಭೀರ ವಿಷಯವೊಂದನ್ನು ಪ್ರಸ್ತಾಪಿಸಿದ್ದಾರೆ. ಅವರ ಪ್ರಕಾರ, ಕರ್ನಾಟಕದ ರಾಜಕೀಯ ಬೆಳವಣಿಗೆಗಳು ವಿಧಾನಸಭೆಗೆ ಮಧ್ಯಂತರ ಚುನಾವಣೆ ನಡೆಯುವುದನ್ನು ಅನಿವಾರ್ಯವಾಗಿಸಲಿವೆ. ಹೀಗಾಗಿ ರಾಜ್ಯ ಬಿಜೆಪಿಯ ನಾಯಕತ್ವ ಹಿರಿಯ ನಾಯಕರಿಗೆ ದಕ್ಕಬೇಕು. ಕಾರಣ? ಹಾಲಿ ಅಧ್ಯಕ್ಷ ವಿಜಯೇಂದ್ರ ಅವರ ನಾಯಕತ್ವದಲ್ಲಿ ಬಹುತೇಕರು ನಂಬಿಕೆ ಕಳೆದುಕೊಂಡಿದ್ದಾರೆ. ಹೀಗಾಗಿ ಅವರನ್ನು ತಕ್ಷಣ ಕೆಳಗಿಳಿಸಿ ಬೇರೆಯವರನ್ನು ನೇಮಿಸಬೇಕು ಎಂಬುದು ಯತ್ನಾಳ್ ಗ್ಯಾಂಗಿನ ವಾದ.

ಅಂದ ಹಾಗೆ, ಪಕ್ಷಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಬದಲಿಸಬೇಕು ಎಂಬ ಯತ್ನಾಳ್ ಗ್ಯಾಂಗಿನ ವಾದ ಹೊಸತೇನಲ್ಲ. ಆದರೆ ಈ ಸಲ ನಡ್ಡಾ ಅವರನ್ನು ಭೇಟಿ ಮಾಡಿದ ಈ ಗ್ಯಾಂಗು ವಿಜಯೇಂದ್ರ ಅವರನ್ನು ಯಾವ ಕಾರಣಕ್ಕಾಗಿ ಬದಲಿಸಬೇಕು ಅಂತ ಹೇಳಿರುವುದು ವಿಶೇಷ. ''ಸರ್, ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸುವ ಬದಲು, ಮುಂದಿನ ವಿಧಾನಸಭೆ ಚುನಾವಣೆ ಹತ್ತಿರವಾಗುವ ತನಕ ಬೇರೊಬ್ಬರನ್ನು ನೇಮಕ ಮಾಡಿ. ಇದನ್ನು ನಾವು ನಿಮಗೇಕೆ ಹೇಳುತ್ತಿದ್ದೇವೆ ಎಂದರೆ ಕರ್ನಾಟಕದ ರಾಜಕಾರಣ ಅಂಥ ಸಂಕ್ರಮಣ ಸ್ಥಿತಿಯಲ್ಲಿದೆ'' ಅಂತ ಈ ಗ್ಯಾಂಗು ಹೇಳತೊಡಗಿದಾಗ ನಡ್ಡಾ ಕುತೂಹಲದಿಂದ ಕಿವಿ ಅರಳಿಸಿದ್ದಾರೆ. ಈ ಸಂದರ್ಭದಲ್ಲಿ ಮಾತು ಮುಂದುವರಿಸಿದ ಯತ್ನಾಳ್ ಮತ್ತಿತರ ನಾಯಕರು, ''ಸರ್, ಇವತ್ತಿನ ಸ್ಥಿತಿ ನೋಡಿದರೆ 2026ರ ಮಾರ್ಚ್ ವೇಳೆಗೆ ಕರ್ನಾಟಕ ವಿಧಾನಸಭೆಗೆ ಮಧ್ಯಂತರ ಚುನಾವಣೆ ನಡೆಯಬಹುದು. ರಾಜ್ಯ ಕಾಂಗ್ರೆಸ್‌ನ ಬೆಳವಣಿಗೆಗಳನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. ನಮಗಿರುವ ಮಾಹಿತಿಯ ಪ್ರಕಾರ, 2025ರ ನವೆಂಬರ್ ಹೊತ್ತಿಗೆ ಅಧಿಕಾರ ಹಂಚಿಕೆಯ ಮಾತು ಕಾಂಗ್ರೆಸ್ ಪಕ್ಷವನ್ನು ತಲ್ಲಣಗೊಳಿಸಲಿದೆ. ಯಾಕೆಂದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಹಂಚಿಕೆ ಮಾಡಲು ಪಕ್ಷದ ವರಿಷ್ಠರು ನಿರ್ಧರಿಸಿದ್ದಾರೆ. ಈ ಕುರಿತಂತೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಕೆ.ಸಿ.ವೇಣುಗೋಪಾಲ್, ಸುರ್ಜೇವಾಲ ಅವರ ಸಮ್ಮುಖದಲ್ಲೇ ಒಪ್ಪಂದ ಪತ್ರ ಸಿದ್ಧವಾಗಿದೆ. ಅದರ ಪ್ರಕಾರ, ಈ ವರ್ಷದ ನವೆಂಬರ್ ಹೊತ್ತಿಗೆ ಸಿದ್ದರಾಮಯ್ಯ ಅವರು ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಹುದ್ದೆಯನ್ನು ಬಿಟ್ಟುಕೊಡಬೇಕು. ಆದರೆ ಈಗಿನ ಬೆಳವಣಿಗೆಗಳನ್ನು ನೋಡಿದರೆ ಸಿದ್ದರಾಮಯ್ಯ ಅವರು ಅಧಿಕಾರ ಬಿಟ್ಟುಕೊಡುವುದಿಲ್ಲ. ಯಾಕೆಂದರೆ ಅವರ ಬೆಂಬಲಿಗ ಸಚಿವರ್ಯಾರೂ ಡಿ.ಕೆ.ಶಿವಕುಮಾರ್ ಸಿಎಂ ಆಗುವುದನ್ನು ಬಯಸುವುದಿಲ್ಲ. ಕಾರಣ? ಈಗ ಉಪಮುಖ್ಯಮಂತ್ರಿ ಆಗಿರುವಾಗಲೇ ಅವರು ತಮ್ಮನ್ನು ಸೈಡ್‌ಲೈನ್ ಮಾಡಲು ಯತ್ನಿಸುತ್ತಿದ್ದಾರೆ. ಇಂಥವರು ನಾಳೆ ಸಿಎಂ ಆದರೆ ಸುಮ್ಮನಿರುತ್ತಾರಾ? ನೋ ಚಾನ್ಸ್. ಹೀಗಾಗಿ ನೀವು ಮುಖ್ಯಮಂತ್ರಿ ಹುದ್ದೆಯನ್ನು ಬಿಟ್ಟುಕೊಡಬೇಡಿ ಎಂಬುದು ಈ ಬೆಂಬಲಿಗ ಸಚಿವರ ವಾದ. ಅದರಲ್ಲೂ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಂತೂ, 'ನೀವು ಅಧಿಕಾರ ಬಿಟ್ಟುಕೊಡುವುದೇ ಆದರೆ ನಾವು ಹೇಳಿದವರು ಸಿಎಂ ಆಗಬೇಕು. ಇಲ್ಲವೇ ನಾವು ಐವತ್ತರಷ್ಟು ಶಾಸಕರು ಪಕ್ಷ ತೊರೆಯಲು ಸಿದ್ಧರಿದ್ದೇವೆ' ಅಂತ ಸಿದ್ದರಾಮಯ್ಯ ಅವರಿಗೆ ಹೇಳಿದ್ದಾರೆ. ಹೀಗೆ ಸಿದ್ದರಾಮಯ್ಯ ಅವರ ಕ್ಯಾಂಪಿನಲ್ಲಿ ಇಂಥ ಬೆಳವಣಿಗೆ ನಡೆದಿದ್ದರೆ, ಅತ್ತ ಡಿ.ಕೆ.ಶಿವಕುಮಾರ್ ಅವರ ಕ್ಯಾಂಪಿನಲ್ಲೂ ಹಲವು ಬೆಳವಣಿಗೆಗಳು ನಡೆದಿವೆ. ಅದರ ಪ್ರಕಾರ, ನವೆಂಬರ್ ಹೊತ್ತಿಗೆ ಸಹಜವಾಗಿಯೇ ಡಿ.ಕೆ.ಶಿವಕುಮಾರ್ ಸಿಎಂ ಹುದ್ದೆಗೆ 'ಕ್ಲೇಮ್' ಮಾಡುತ್ತಾರೆ. ಎಷ್ಟೇ ಆದರೂ ಕರ್ನಾಟಕದಲ್ಲಿ ಪಕ್ಷ ಅಧಿಕಾರಕ್ಕೆ ಬರಲು ದೊಡ್ಡ ಮಟ್ಟದಲ್ಲಿ ಇನ್‌ವೆಸ್ಟ್ ಮಾಡಿದವರು ಅವರು. ಆದ್ದರಿಂದ ಅವರು ಕ್ಲೇಮ್ ಮಾಡಿದಾಗ ಹೈಕಮಾಂಡ್ ನಾಯಕರು ಇಲ್ಲ ಅನ್ನುವುದು ಕಷ್ಟ. ಹೀಗಾಗಿ ಅವರು ಸಿದ್ದರಾಮಯ್ಯ ಅವರಿಗೆ ಅಧಿಕಾರ ಬಿಟ್ಟುಕೊಡಲು ಹೇಳುತ್ತಾರೆ. ಆದರೆ ಅದನ್ನು ಸಿದ್ದರಾಮಯ್ಯ ಒಪ್ಪದೆ ಹೋದಾಗ ಸಂಘರ್ಷ ಪ್ರಾರಂಭವಾಗುತ್ತದೆ ಮತ್ತು ಈ ಸಂಘರ್ಷ ಸರಕಾರದ ಪತನಕ್ಕೆ ಕಾರಣವಾಗಲಿದೆಯಲ್ಲದೆ, ಕರ್ನಾಟಕ ಮಧ್ಯಂತರ ಚುನಾವಣೆಗೆ ಅಣಿಯಾಗುವುದು ಅನಿವಾರ್ಯವಾಗುತ್ತದೆ. ನಾವು ಇದನ್ನೇಕೆ ಹೇಳುತ್ತಿದ್ದೇವೆ ಎಂದರೆ ಕಾಂಗ್ರೆಸ್ ಸರಕಾರ ಪತನವಾದಾಗ ಪರಿಸ್ಥಿತಿಯನ್ನು ಎನ್‌ಕ್ಯಾಷ್ ಮಾಡಿಕೊಳ್ಳುವ ಶಕ್ತಿ ಬಿಜೆಪಿಗಿರಬೇಕು. ಅದರೆ ಆ ಸಂದರ್ಭದಲ್ಲಿ ವಿಜಯೇಂದ್ರ ಅಧ್ಯಕ್ಷರಾಗಿದ್ದರೆ ಅದು ಕಷ್ಟ. ಯಾಕೆಂದರೆ ಅವರ ನಾಯಕತ್ವದಡಿ ಹೋರಾಡಲು ಬಹುತೇಕ ನಾಯಕರು ಸಿದ್ಧರಿಲ್ಲ. ಹೀಗಾಗಿ ರಾಜ್ಯಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಕೆಳಗಿಳಿಸಬೇಕು'' ಅಂತ ಒತ್ತಾಯಿಸಿದರಂತೆ. ಅದಕ್ಕೆ ನಡ್ಡಾ ಅವರು, ''ನೋಡೋಣ, ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಬೇಕು ಅಂತ ತೀರ್ಮಾನಿಸಿದ ಮೇಲೆ ಅದನ್ನು ತಡೆಯುವುದು ಕಷ್ಟ ಅನ್ನಿಸುತ್ತದೆ'' ಅಂತ ಹೇಳಿದರಂತೆ.

ಗೌಡ್ರ ಮನೆಯಲ್ಲಿ ನಡೆದಿದ್ದೇನು?

ಹೀಗೆ ಯತ್ನಾಳ್ ಆ್ಯಂಡ್ ಟೀಮು ದಿಲ್ಲಿಗೆ ಹೋಗಿಬಂದ ಮೇಲೆ ಜನವರಿ 22ರ ಬುಧವಾರ ಮಾಜಿ ಸಿಎಂ ಡಿ.ವಿ.ಸದಾನಂದಗೌಡರ ಮನೆಯಲ್ಲಿ ಒಂದು ಸಭೆ ನಡೆದಿದೆ. ಈ ಸಭೆಯಲ್ಲಿ ಭಾಗವಹಿಸಿದ್ದ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಆರ್.ಅಶೋಕ್, ಡಾ.ಅಶ್ವತ್ಥ ನಾರಾಯಣ, ಸಿ.ಟಿ.ರವಿ, ಡಾ.ಸುಧಾಕರ್, ದಾಸರಹಳ್ಳಿ ಮುನಿರಾಜು ಮತ್ತಿತರರು ರಾಜ್ಯಾಧ್ಯಕ್ಷ ಸ್ಥಾನದ ಚುನಾವಣೆ ನ್ಯಾಯಯುತವಾಗಿ ನಡೆಯಲು ಸಾಧ್ಯವೇ ಇಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ಇವತ್ತು ಬಿಜೆಪಿಯ ಜಿಲ್ಲಾಧ್ಯಕ್ಷರಾಗಿರುವ ಬಹುತೇಕರು ವಿಜಯೇಂದ್ರ ಅವರ ಒತ್ತಾಸೆಯಿಂದ ನೇಮಕಗೊಂಡವರು. ಹಲವು ಮಂಡಲ ಅಧ್ಯಕ್ಷರ ಕತೆಯೂ ಇದೇ. ನಾಳೆ ಚುನಾವಣೆಯಲ್ಲಿ ಇವರೇ ಮತದಾರರಾದರೆ ಅವರು ವಿಜಯೇಂದ್ರ ಅವರ ಪರವಾಗಿ ನಿಲ್ಲುತ್ತಾರೆ. ಪರಿಸ್ಥಿತಿ ಹೀಗಿರುವಾಗ ಚುನಾವಣೆ ನಡೆದರೆ ಏನಾಗುತ್ತದೆ? ವಿಜಯೇಂದ್ರ ಗೆದ್ದೇ ಗೆಲ್ಲುತ್ತಾರೆ. ಹೀಗೆ ಪೂರ್ವ ನಿರ್ಧರಿತ ಎಪಿಸೋಡು ನಡೆಯುವುದಾದರೆ ಅದರಲ್ಲಿ ಅರ್ಥವೇ ಇಲ್ಲ. ಹೀಗಾಗಿ ಚುನಾವಣೆ ನಡೆಯುವುದಾದರೆ ಮೊದಲು ಇಂಥ ಮತದಾರರನ್ನು ಕಟ್ ಮಾಡಬೇಕು. ಅರ್ಥಾತ್, ಈಗ ಜಿಲ್ಲಾಧ್ಯಕ್ಷರಾಗಿ ನೇಮಕಗೊಂಡವರ ಪೈಕಿ ಬೆಂಗಳೂರಿನ ಮೂವರು ಅಧ್ಯಕ್ಷರು ಸೇರಿದಂತೆ ಹದಿನಾಲ್ಕು ಜಿಲ್ಲಾಧ್ಯಕ್ಷರನ್ನು ಬದಲಿಸಬೇಕು. ಅಂದ ಹಾಗೆ, ಜಿಲ್ಲಾಧ್ಯಕ್ಷರು, ಮಂಡಲ ಅಧ್ಯಕ್ಷರು ಅಂತಲ್ಲ, ಪಕ್ಷದ ಪದಾಧಿಕಾರಿಗಳ ನೇಮಕಾತಿ ವಿಷಯದಲ್ಲಿ ನಡೆದಿರುವುದೂ ಇದೇ. ಹೀಗೆ ವಿಜಯೇಂದ್ರ ಅವರ ಆಪ್ತರೇ ಹೆಚ್ಚಿರುವ ಪದಾಧಿಕಾರಿಗಳ ಪಟ್ಟಿಯನ್ನು ಬದಲಿಸಿ ಅಂತ ಪಕ್ಷದ ಬಹುತೇಕ ಹಿರಿಯ ನಾಯಕರು ಒತ್ತಾಯಿಸುತ್ತಲೇ ಇದ್ದಾರೆ. ಅಷ್ಟೇ ಅಲ್ಲ, ಇದರ ಪರಿಣಾಮವಾಗಿ ನಾಯಕರಲ್ಲಿ ವೈಮನಸ್ಸು ಬೆಳೆಯುತ್ತಲೇ ಇದೆ. ಹೀಗಾಗಿ ಇದನ್ನೆಲ್ಲ ಸರಿಪಡಿಸದೆ ಮುಂದುವರಿದರೆ ಪಕ್ಷದಲ್ಲಿ ಒಗ್ಗಟ್ಟು ಬರುವುದು ಹೇಗೆ? ಎಲ್ಲರೂ ಒಗ್ಗೂಡಿ ಒಮ್ಮತದಿಂದ ದುಡಿಯುವುದು ಹೇಗೆ? ಅಂತ ಮಾತನಾಡಿಕೊಂಡ ಈ ನಾಯಕರು ಅಂತಿಮವಾಗಿ ಸಭೆಯ ಸಂದೇಶವನ್ನು ವರಿಷ್ಠರಿಗೆ ತಲುಪಿಸಲು ನಿರ್ಧರಿಸಿದ್ದಾರೆ.

ಕುತೂಹಲದ ಸಂಗತಿ ಎಂದರೆ ಈ ಸಭೆಯಲ್ಲಿ ಮಾತನಾಡಿದ ಮಾಜಿ ಡಿಸಿಎಂ ಡಾ.ಅಶ್ವತ್ಥ ನಾರಾಯಣ ಮತ್ತು ಸಂಸದ ಡಾ.ಸುಧಾಕರ್ ಅವರು, ''ವರಿಷ್ಠರು ಬಯಸಿದರೆ ರಾಜ್ಯಾಧ್ಯಕ್ಷ ಹುದ್ದೆಯನ್ನು ನಿಭಾಯಿಸಲು ನಾವು ರೆಡಿ'' ಅಂದಿದ್ದಾರಂತೆ.

ಬೊಮ್ಮಾಯಿ, ಅಶೋಕ್ ರೆಬೆಲ್ ಆಗಿದ್ದೇಕೆ?

ಇನ್ನು ಸದಾನಂದಗೌಡರ ಮನೆಯಲ್ಲಿ ನಡೆದ ಸಭೆಗೆ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಮತ್ತು ವಿಪಕ್ಷ ನಾಯಕ ಆರ್.ಅಶೋಕ್ ಹೋದ ಬೆಳವಣಿಗೆ ಎಲ್ಲರ ಕುತೂಹಲಕ್ಕೆ ಕಾರಣವಾಗಿದೆ. ಯಾಕೆಂದರೆ ಇವರಿಬ್ಬರು ಇತ್ತೀಚಿನವರೆಗೆ ಯಡಿಯೂರಪ್ಪ ಅವರ ಜತೆಗಿದ್ದವರು. ಆದರೆ ಈಗ ಇದ್ದಕ್ಕಿದ್ದಂತೆ ವಿರೋಧಿ ಪಾಳಯದಲ್ಲಿ ಗುರುತಿಸಿಕೊಂಡಿದ್ದಾರೆ.

ಈ ಪೈಕಿ ಬೊಮ್ಮಾಯಿ ಅವರು ಇತ್ತೀಚೆಗೆ ನಡೆದ ಉಪಚುನಾವಣೆಯ ನಂತರ ಯಡಿಯೂರಪ್ಪ-ವಿಜಯೇಂದ್ರ ವಿರುದ್ಧ ತಿರುಗಿ ಬಿದ್ದಿದ್ದಾರೆ. ಕಾರಣ? ಶಿಗ್ಗಾವಿ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ತಮ್ಮ ಪುತ್ರ ಭರತ್ ಬೊಮ್ಮಾಯಿ ಸೋಲಿಗೆ ಯಡಿಯೂರಪ್ಪ, ವಿಜಯೇಂದ್ರ ಅವರೇ ಕಾರಣ ಎಂಬುದು ಬೊಮ್ಮಾಯಿ ಸಿಟ್ಟು. ಈ ಇಬ್ಬರು ಸೇರಿ ಕ್ಷೇತ್ರದ ಲಿಂಗಾಯತ ಮತ ಬ್ಯಾಂಕನ್ನು ಒಡೆದರು. ಆ ಮೂಲಕ ಕಾಂಗ್ರೆಸ್ ಗೆಲುವಿಗೆ ಕಾರಣರಾದರು ಎಂಬುದು ಬೊಮ್ಮಾಯಿ ಕೋಪ. ಹೀಗಾಗಿ ಅವರು ವಿರೋಧಿ ಪಾಳಯದಲ್ಲಿ ಕಾಣಿಸಿಕೊಂಡಿದ್ದಾರೆ.

ಇನ್ನು ಅಶೋಕ್ ಅಸಮಾಧಾನಕ್ಕೆ ಅವರ ಕಿವಿ ತಲುಪಿದ ಒಂದು ಮೆಸೇಜು ಕಾರಣ. ಅದರ ಪ್ರಕಾರ ಇತ್ತೀಚೆಗೆ ದಿಲ್ಲಿಗೆ ಹೋಗಿದ್ದ ವಿಜಯೇಂದ್ರ ಅವರು ''ಅಸೆಂಬ್ಲಿಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಅಶೋಕ್ ಅವರ ಪರ್ಫಾರ್ಮೆನ್ಸ್ ಡಲ್ಲು'' ಅಂದಿದ್ದರಂತೆ. ಹೀಗೆ ವಿಜಯೇಂದ್ರ ತಮ್ಮ ಬಗ್ಗೆ ವರಿಷ್ಠರಿಗೆ ಕೊಟ್ಟ ರಿಪೋರ್ಟಿನ ವಿವರ ಮರುದಿನವೇ ಅಶೋಕ್ ಕಿವಿಗೆ ಬಿದ್ದಿದೆ. ಪರಿಣಾಮ? ಕೆರಳಿದ ಅಶೋಕ್ ಕೂಡಾ ಈಗ ವಿಜಯೇಂದ್ರ ವಿರೋಧಿ ಪಾಳಯದಲ್ಲಿ ಕಾಣಿಸಿಕೊಂಡಿದ್ದಾರೆ.

ಅಗರ್ವಾಲ್‌ಗೇ ಗುರ್ರೆಂದ ಕಟ್ಟಾ ಟೀಮು

ಈ ಮಧ್ಯೆ ರಾಜ್ಯ ಬಿಜೆಪಿಯ ಒಳಬೇಗುದಿಯನ್ನು ಅರಿಯಲು ಪಕ್ಷದ ಉಸ್ತುವಾರಿ ರಾಧಾಮೋಹನದಾಸ್ ಅಗರ್ವಾಲ್ ಕಳೆದ ವಾರ ಸಭೆ ನಡೆಸಿದರಲ್ಲ? ಈ ಸಭೆಯ ನಂತರ ಮಾಜಿ ಸಚಿವರಾದ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ರೇಣುಕಾಚಾರ್ಯ ಮತ್ತಿತರರು ಅಗರ್ವಾಲ್ ಅವರನ್ನು ಅಮರಿಕೊಂಡಿದ್ದಾರೆ.

''ಅಲ್ಲ ಸರ್, ಪಕ್ಷದಲ್ಲಿ ಇಷ್ಟೆಲ್ಲ ಬೆಳವಣಿಗೆಗಳು ನಡೆಯುತ್ತಿವೆ. ಆದರೆ ಈ ಕುರಿತು ಚರ್ಚಿಸಲು ನೀವು ನಮ್ಮೊಂದಿಗೆ ಏಕೆ ಸಭೆ ಮಾಡುತ್ತಿಲ್ಲ?'' ಅಂತ ಪ್ರಶ್ನಿಸಿದ್ದಾರೆ. ಆಗ ಉತ್ತರಿಸಿದ ಅಗರ್ವಾಲ್, ''ಅರೇ, ಮಾತೆತ್ತಿದರೆ ನಿಮ್ಮನ್ನೆಲ್ಲ ಕರೆಯುತ್ತಾ ಕೂರಲು ಆಗುತ್ತದಾ?ನೀವೇನು ಹಾಲಿ ಎಮ್ಮೆಲ್ಲೆಗಳಾ? ಎಮ್ಮೆಲ್ಸಿಗಳಾ?'' ಎಂದು ಕೇಳಿದ್ದಾರೆ.

ಆಗೆಲ್ಲ ಉರಿದುಬಿದ್ದ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮತ್ತಿತರರು, ''ನಾವು ಹಾಲಿ ಎಮ್ಮೆಲ್ಲೆಗಳು, ಎಮ್ಮೆಲ್ಸಿಗಳು ಅಲ್ಲ ಅಂದ್ರೆ ರಾಜಕೀಯವಾಗಿ ಶಕ್ತಿ ಇಲ್ಲದವರು ಅಂತ ಅರ್ಥನಾ? ಅಥವಾ ಇರುವ ಅರವತ್ತು ಪ್ಲಸ್ ಶಾಸಕರನ್ನು ಕಟ್ಟಿಕೊಂಡು ರಾಜ್ಯದಲ್ಲಿ ಪಕ್ಷ ಕಟ್ಟಬಹುದು ಅಂತೇನಾದರೂ ನೀವು ತೀರ್ಮಾನಿಸಿದ್ದೀರಾ?'' ಅಂತ ಅಬ್ಬರಿಸಿದ್ದಾರೆ. ಅಷ್ಟೇ ಅಲ್ಲ, ಮಾತು ಮುಂದುವರಿಸಿ ''ನಾವೂ ಮೂರು-ನಾಲ್ಕು ಬಾರಿ ಶಾಸಕರಾದವರು. ಸಚಿವರಾಗಿ ಕೆಲಸ ಮಾಡಿದವರು. ರಾಜ್ಯದಲ್ಲಿ ಪಕ್ಷಕ್ಕೆ ಭದ್ರನೆಲೆ ಅಂತಿದ್ದರೆ ಅದರಲ್ಲಿ ನಮ್ಮ ಕೊಡುಗೆಯೂ ಇದೆ. ಇದನ್ನೆಲ್ಲ ಮನಸ್ಸಿನಲ್ಲಿಟ್ಟುಕೊಂಡು ಮಾತನಾಡಿ. ಈಗ ನೀವು ಹೇಳುತ್ತಿರುವುದು ಹೇಗಿದೆ ಎಂದರೆ 'ನಿಮ್ಮಿಂದೇನು ಪ್ರಯೋಜನ' ಅನ್ನುವಂತಿದೆ. ಆದರೆ ಇವೆಲ್ಲ ನಡೆಯುವುದಿಲ್ಲ, ಇನ್ನು ಮೇಲೆ ರಾಜ್ಯ ಬಿಜೆಪಿಯ ಬೆಳವಣಿಗೆಗಳೇನೇ ಇದ್ದರೂ ನಮ್ಮನ್ನು ಕರೆಸಿ ಮಾತನಾಡಬೇಕು'' ಅಂತ ತಾಕೀತು ಮಾಡಿದ್ದಾರೆ.

ಯಾವಾಗ ಹಿರಿಯ ನಾಯಕರ ದಂಡು ಹೀಗೆ ಗುಟುರು ಹಾಕತೊಡಗಿತೋ, ಆಗ ರಾಧಾಮೋಹನದಾಸ್ ಅಗರ್ವಾಲ್ ಬೆಚ್ಚಿ ಬಿದ್ದಿದ್ದಾರೆ. ಅಷ್ಟೇ ಅಲ್ಲ, ಕುಳಿತ ಜಾಗದಿಂದ ಮೇಲೆದ್ದು ಹೊರಡಲು ಅಣಿಯಾಗಿದ್ದಾರೆ. ಅಷ್ಟಾದರೂ ಪಟ್ಟು ಬಿಡದ ಕಟ್ಟಾ ಮತ್ತಿತರರು, ''ಇಷ್ಟು ದಿನದಿಂದ ಯತ್ನಾಳ್ ಮತ್ತಿತರರು ರಾಜ್ಯ ನಾಯಕತ್ವದ ವಿರುದ್ಧ ಮಾತನಾಡುತ್ತಲೇ ಇದ್ದಾರೆ. ಯಾಕೆ ಅವರ ಮೇಲೆ ಕ್ರಮ ಕೈಗೊಂಡಿಲ್ಲ'' ಅಂತ ಕೇಳಿದ್ದಾರೆ. ಆಗ ಅಗರ್ವಾಲ್ ಅವರು, ''ಯತ್ನಾಳ್ ಪಕ್ಷದ ಹಿರಿಯ ನಾಯಕರು. ಹೀಗಾಗಿ ತಕ್ಷಣ ಅವರ ಮೇಲೆ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ'' ಅಂತ ಹೇಳಿ ರಪಕ್ಕನೆ ಪಕ್ಕದಲ್ಲಿದ್ದ ರೂಮು ಸೇರಿಕೊಂಡಿದ್ದಾರೆ.

ಜನಪದದಲ್ಲಿ ಮಾರ್ಕ್ಸ್‌ವಾದಿಗಳ ಅಪಲಾಪ

ಚರ್ಚಾವೇದಿಕೆ

ಜನಮೇಜಯ ಉಮರ್ಜಿ

vveditoped@gmail.com

ಪುಢಾರಿಗಳ ಭಾಷಣದ ಫಜೀತಿ ಏನ್ ಕೇಳ್ತೀರಿ- ದಿನಕ್ಕೆ ಹತ್ತಾರು ಸಮಾರಂಭ, ಎಲ್ಲಾ ಕಡೆ ಮಾತನಾಡಬೇಕು. ಹೀಗಾಗಿ ಭಾಷಣದ ಸಿದ್ಧಮಾದರಿ ಒಂದನ್ನು ಇಟ್ಟುಕೊಂಡಿರುತ್ತಾರೆ. ಶಾಲೆಗೆ ಹೋದರೆ, 'ಇಂಥ ಶಾಲೆಗಳು ಪ್ರತಿ ಊರಲ್ಲೂ ಇರಬೇಕು, ಜನರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು' ಅನ್ನೋದು, ಆಸ್ಪತ್ರೆಗೆ ಹೋದರೆ ಅದನ್ನೇ ಕೊಂಚ ಬದಲಿಸಿ, 'ಇಂಥ ಆಸ್ಪತ್ರೆಗಳು ಪ್ರತಿ ಊರಲ್ಲೂ ಇರಬೇಕು, ಜನರು ಇದರ ಸದುಪಯೋಗ ಪಡೆದುಕೊಳ್ಳಬೇಕು' ಅನ್ನೋದು. ಒಟ್ಟಿನಲ್ಲಿ, ಎಲ್ಲಿಗೇ ಹೋದರೂ ಹೀಗೆ ಹೊಂದಿಸಿಕೊಂಡು ಮಾತನಾಡುವುದು. ನೀರು ಒಂದೇ, ಆದರೆ ಪಾತ್ರೆಗಳು ಮಾತ್ರ ಬೇರೆ ಬೇರೆ ಧಾತುಗಳಿಂದ ಮಾಡಿದಂಥವು ಹಾಗೂ ಬೇರೆ ಬೇರೆ ಗಾತ್ರದವು!

ಸ್ವಯಂಘೋಷಿತ ವಿಚಾರವಾದಿಗಳು ಅಲಿಯಾಸ್ ಪ್ರಗತಿಪರರು ಉರುಫ್ ಮಾರ್ಕ್ಸ್‌ವಾದಿಗಳದ್ದೂ ಇದೇ ಕಥೆಯೇ! ಸಮಯ-ಸಂದರ್ಭ, ಊರು-ಕೇರಿ, ವಿಷಯ-ಆಶಯ ಯಾವುದೇ ಇರಲಿ, ಇವರದ್ದು ಅದೇ ಮಾತು ಅದೇ ಬರಹ. ವಿಷ್ಣು-ಶಿವ, ನಿರಾಕಾರ-ಸಾಕಾರ ಪೂಜೆ, ಉತ್ತರ-ದಕ್ಷಿಣ, ಆರ್ಯ-ದ್ರಾವಿಡ, ಮೂಲನಿವಾಸಿ-ವಲಸೆಗಾರದಂಥ ಭೇದಕಲ್ಪನೆಗಳು ಮಾತ್ರವಲ್ಲದೆ, 'ಶ್ರೇಣೀಕೃತ ವ್ಯವಸ್ಥೆ', 'ಶೋಷಿತ ಸಮಾಜ', 'ಸ್ಥಾಪಿತ ನಂಬಿಕೆಯನ್ನು ಧಿಕ್ಕರಿಸುವ ಕ್ರಾಂತಿ' ಹೀಗೆ ಕಂಠಪಾಠ ಮಾಡಿದ ಪದಗುಚ್ಛಗಳಂತೆ ಕಾಣುವಂಥ ವಿಷಯಗಳು ಇವರ ಮಾತಿನಲ್ಲಿ ಹೇರಳ.

ಇಷ್ಟೆಲ್ಲಾ ಯಾಕೆ ಹೇಳಬೇಕಾಯಿತೆಂದರೆ, ಇತ್ತೀಚೆಗೆ ಕರ್ನಾಟಕದ ಜನಪದ ಕಲೆಗಳ ಬಗ್ಗೆ ಬರೆಯಬೇಕಾಗಿ ಬಂತು. ಬಹುಪಾಲು ಪುಸ್ತಕಗಳನ್ನು ತಡಕಾಡಿದಾಗ, ಅಧಿಕೃತ ಜಾಲತಾಣಗಳನ್ನು ಜಾಲಾಡಿದಾಗ ಕಂಡುಬಂದದ್ದು ಇದೇ ರೀತಿಯ ಅಪಲಾಪಗಳು. ಉದಾಹರಣೆಗೆ, ಪುರವಂತಿಕೆ ಅಥವಾ ವೀರಗಾಸೆ ಮೇಳ. ಇದಕ್ಕೆ ಪ್ರಗತಿಪರರ ಲೇಪ ಇಂತಿದೆ: 'ಆರ್ಯ ಭಾಷಿಕರಾದ ವೈದಿಕರು ಪಾರ್ಸಿಗಳೊಂದಿಗೆ ಬದುಕಲಾರದೆ, ವಾಯವ್ಯ ಭಾಗದಿಂದ ಭಾರತವನ್ನು ಪ್ರವೇಶಿಸುವಾಗ, ಅವರು ಮೊದಲು ಎದುರುಗೊಂಡಿದ್ದು ಹರಪ್ಪಾ ನಾಗರಿಕತೆಯ ಜನರನ್ನೇ. ಈ ಹರಪ್ಪಾ ನಾಗರಿಕತೆಯು ದ್ರಾವಿಡರದು ಎಂಬ ವಾದ ಇರುವಂತೆಯೇ, ದ್ರಾವಿಡ ಮೂಲದ್ದಲ್ಲ ಎಂಬ ವಾದವೂ ಇದೆ. ಆದರೂ ಪುರವಂತಿಕೆಯ ಮೂಲವಂತೂ ಹರಪ್ಪಾ ನಾಗರಿಕತೆಯಲ್ಲೇ ಇದೆ. ಇದು ಈ ಕಲೆಗೆ ಇರುವ ಚರಿತ್ರೆಯ ಆಯಾಮ. ಈ ಪುರವಂತಿಕೆಗೆ ಪೌರಾಣಿಕ ಆಯಾಮವೂ ಇದೆ. ಅಂದಿನ ಆರ್ಯರ ರಾಜನಾಗಿದ್ದ ದಕ್ಷನ 'ನಿರೀಶ್ವರ ಯಾಗ'ವನ್ನು, ಶಿವನ ಜಟೆಯ ಕೂದಲಿನಿಂದ ಜನಿಸಿದ ವೀರಭದ್ರನ ಮೂಲ ಈರಭದ್ರ ಧ್ವಂಸಗೊಳಿಸಿದ ಪ್ರಸಂಗ, ಚರಿತ್ರೆಯಲ್ಲಿ ಘಟಿಸಿದ್ದಿರಬಹುದಾದ ದಕ್ಷಯಜ್ಞ ಧ್ವಂಸ ಪ್ರಸಂಗಗಳು ಸಮರ ಮತ್ತು ಹಿಂಸೆಯ ಸಂಕೇತಗಳೇ ಆಗಿವೆ. ಆದ್ದರಿಂದಲೇ ಒಂದರ್ಥದಲ್ಲಿ ಪುರವಂತಿಕೆಯನ್ನು ಸಾಂಸ್ಕೃತಿಕವಾದ ಸಮರಕಲೆ ಎಂದೇ ನಾವು ಗುರುತಿಸಬೇಕಿದೆ. ಪುರವನ್ನು ಹಾಳುಮಾಡುವವರು ಪುರಂದರರು. ಪುರವನ್ನು ರಕ್ಷಿಸಲು ಶಸ್ತ್ರ ಹಿಡಿದವರು ಪುರವಂತರು. ವೀರಗಾಸೆಯು ಇವರಿಬ್ಬರ ನಡುವಿನ ಸಂಘರ್ಷದ ಆಚರಣೆ''.

ಇದೇ ರೀತಿಯಲ್ಲಿ, ಡೊಳ್ಳುವಾದನದ ಬಗ್ಗೆ ಇರುವ ವಿವರವನ್ನೂ ನೋಡೋಣ. ಅದು ಹೀಗಿದೆ: ''ಇದು ಬೀರೇದೇವರ ಭಜನೆ. ಬೀರೇದೇವರೆಂದರೆ ಈರೇದೇವರೆಂದೇ ಅರ್ಥ. 'ಈರ' ಎಂದರೆ ನೀರು. ದ್ರಾವಿಡ ಸಂಸ್ಕೃತಿಯಲ್ಲಿ ನೀರಿನ ಈರೇದೇವರೆಂದರೆ ಶಿವನೇ. ಡೊಳ್ಳಿಗೆ ಸಂಬಂಧಿಸಿದಂತೆ ಇರುವ ಜಾನಪದೀಯ ಪುರಾಣಗಳಲ್ಲಿ, ಶಿವನೇ ಜಗತ್ತಿನ ಪ್ರಥಮ ಡೊಳ್ಳು ತಯಾರಕ, ವಾದಕ ಮತ್ತು ನರ್ತಕ. ಸೂಜಿಮೊನೆಯ ಮೇಲೆ ನಿಂತು ತನ್ನನ್ನು ಕುರಿತು ತಪಸ್ಸು ಮಾಡಿದ ಡೊಳ್ಳುಹೊಟ್ಟೆಯ ಡೊಳ್ಳಾಸುರ ಎಂಬುವವನಿಗೆ ಶಿವನು ತನ್ನನ್ನೇ ನುಂಗುವ ವರವನ್ನು ನೀಡಿದನಂತೆ. ಆದರೆ, ಹೊಟ್ಟೆಯಲ್ಲಿನ ಶಿವನ ಭಾರ ತಡೆಯಲಾಗದ ಅಸುರನು, ಹೊರಬರುವಂತೆ ಶಿವನನ್ನು ಕೋರಿದ. ಅಸುರನ

ಹೊಟ್ಟೆ ಸೀಳಿಕೊಂಡು ಹೊರಬಂದ ಶಿವನು, ಅಸುರನ ಡಿಂಬವನ್ನೇ ಡೊಳ್ಳು ಮಾಡಿ, ಚರ್ಮ ಸುಲಿದು ಎರಡೂ ಬದಿಗೆ ಹೊದಿಸಿ, ಕರುಳನ್ನೇ ಹಗ್ಗ ಮಾಡಿ ಬಿಗಿದು, ಕೈಗಳನ್ನೇ ಬಿದಿರುಕೋಲಿನ ಗುಣಿ ಮಾಡಿ ಬಡಿದು ನರ್ತಿಸಿದನಂತೆ. ಈ ಡೊಳ್ಳಾಸುರನಿಗೆ ಸಂಬಂಧಿಸಿದ ಪುರಾಣಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನಪಠ್ಯಗಳಲ್ಲಿದ್ದು, ಇಲ್ಲಿ ವಿಷ್ಣುವಿನ ಅನಗತ್ಯ ಮಧ್ಯಪ್ರವೇಶವೂ ಸೇರಿಕೊಂಡಿದೆ. ಯಾಕೆಂದರೆ, ಜಾನಪದ ಸಂಸ್ಕೃತಿಯಲ್ಲಿ ಶಿವ, ಗಂಗೆ, ಗೌರಿ, ಪಾರ್ವತಿಯರ ಪ್ರಸ್ತಾಪಗಳೇ ಪ್ರಧಾನವಾಗಿ ಕಂಡುಬರುವಂಥವು. ಜಾನಪದಕ್ಕೆ ಹೊರತಾದ ವೈದಿಕ ಮೂಲದ ವಿಷ್ಣುವಿನ ಸೇರ್ಪಡೆಗಳೆಲ್ಲವೂ ನಿಸ್ಸಂಶಯವಾಗಿ 'ಪ್ರಕ್ಷಿಪ್ತ'ಗಳೇ. ಅದರೊಂದಿಗೆ 'ಅಸುರ' ಎಂಬುದರ ಮೂಲವು, ಪರ್ಷಿಯನ್ ಭಾಷೆಯ 'ಅಹುರ' ಎಂಬ ಪದವೇ. ಪಾರ್ಸಿಗಳ ಸರ್ವಶಕ್ತ ದೇವರೇ 'ಅಹುರ್ ಮಜ್ದಾ'. ಆದರೆ, ಭಾರತೀಯ ಆರ್ಯ ವೈದಿಕರ ಕಡುವೈರಿ ದಾಯಾದಿಗಳಾದ ಪಾರ್ಸಿಗಳ ದೈವವಾದ 'ಅಹುರ'ನನ್ನೇ ದುಷ್ಟನನ್ನಾಗಿ ರೂಪಿಸಿ, ಅಸುರನನ್ನಾಗಿಸಿ ಪುರಾಣ ಹೊಸೆದವರು ವೈದಿಕರೇ''.

ಒಂದು ಕಡೆ ಪುರಾಣಗಳನ್ನು 'ಅಂತೆ-ಕಂತೆ' ಎನ್ನುತ್ತಾ, ಇನ್ನೊಂದು ಕಡೆ ಅದನ್ನೇ 'ಚರಿತ್ರೆ' ಎನ್ನುತ್ತಾ, ತಥಾಕಥಿತ ವಿರಾಸತ್ತಿನ ವಾರಸುದಾರರು ಕಲೆಗಳಲ್ಲಿ ಚೆಲ್ಲಾಟ ಆಡುತ್ತಿದ್ದಾರೆ. ಬಹುಪಾಲು ಜನಪದ ಕಲೆಗಳಿಗೆ ಪುರಾಣ-ಪುಣ್ಯಕಥೆಗಳೇ ಮೂಲ. ಭಾಗವತ ಪುರಾಣವಂತೂ ಆಸೇತು ಹಿಮಾಚಲ ನೃತ್ಯ, ಸಂಗೀತ, ನಾಟಕ ಹೀಗೆ ಹಲವು ಕಲೆಗಳನ್ನು ಪ್ರವರ್ತಿಸಿದೆ. ಪುರವಂತಿಕೆಯು ವೀರಭದ್ರನ ಆಟ. ಇದಕ್ಕೆ ಪುರಾಣವೇ ತಲೆ, ಬುಡ ಮತ್ತು ದೇಹ. 'ಅಹಹಾ ವೀರ ಅಹಹಾ ಭದ್ರ, ಕಡೆ ಕಡೆ' ಎನ್ನುತ್ತಾ ಮಾಡುವ ಶಿವನ ರುದ್ರರೂಪದ, ವೀರರೂಪದ ಆರಾಧನೆ ಇಲ್ಲಿದೆ. ಶಸ್ತ್ರವನ್ನು ಚುಚ್ಚಿಸಿಕೊಳ್ಳುವ ಮೂಲಕ ಭಕ್ತಿಯ ಪರಾಕಾಷ್ಠೆ ಸಾರುವ ಕಲೆಯಾಗಿರುವ ಇದು, ಇಂದಿಗೂ ಸಂಪ್ರದಾಯವಾಗಿ ಉಳಿದು ಶಿರೋಧಾರ್ಯವಾಗಿದೆ. 'ಆರ್ಯರು ಮೂರ್ತಿಪೂಜಕರು' ಎಂದೆಲ್ಲ ಹೇಳುತ್ತಿದ್ದವರು ಇಲ್ಲಿ ಮಾತ್ರ ದಕ್ಷನನ್ನು ನಿರೀಶ್ವರವಾದಿಯಾಗಿ ಮಾಡಿದ್ದಾರೆ. ನಿರೀಶ್ವರವಾದಿ ಎಂದರೆ ಶಿವನವಿರೋಧಿ ಎಂದು ಅರ್ಥ ಮಾಡಲಾಗಿದೆ. ಇದೊಂದು ರೀತಿಯಲ್ಲಿ, 'ಅಸ್ತಿ ಇದ್ದವನೇ ಆಸ್ತಿಕ' ಎಂದಂತೆ. ಪುರಾಣ-ಪುಣ್ಯಕಥೆಗೆ 'ಪುರಂದರ-ಪುರವಂತರ' ಸಂಘರ್ಷದ ಕಥೆ ಕಟ್ಟಲಾಗಿದೆ.

ಇನ್ನು, ಪಾರ್ಸಿ ಡೊಳ್ಳಾಸುರನನ್ನು ದ್ರಾವಿಡ ಶಿವನು ಸಂಹರಿಸಿ ಡೊಳ್ಳು ಮಾಡಿದ ಕಥೆಗೆ ಬರೋಣ. ಇವರ ಕಥೆಯಲ್ಲಿ ಆರ್ಯ ವಿಷ್ಣುವು ಪ್ರವೇಶ ಮಾಡಿ ಪ್ರಕ್ಷಿಪ್ತ ಎನಿಸಿಕೊಂಡ. ಬೀರದೇವರು ವೀರನಾರಾಯಣನೆಂದು, ಬೀರೇಶ್ವರನೆಂದು, ಹರಿಹರ ಪುತ್ರನೆಂದು, ಮೂಲದೈವನೆಂದು ಹಲವು ರೀತಿಯಾಗಿ ಪುರಾಣಗಳಲ್ಲಿದೆ. ಇವೆಲ್ಲವೂ ನಮ್ಮ ಶ್ರದ್ಧೆ, ಭಕ್ತಿಭಾವಗಳು. ''ಡೊಳ್ಳಿನ್ ಮ್ಯಾಲ್ ಕೈ ಭರಮಪ್ಪ ಹಾಕ್ಯಾನು ತಾಳವ ಶಿವನಪ್ಪ ತಟ್ಟ್ಯಾನ್ಯ, ಒಳ್ಳೊಳ್ಳೆ ಪದಗಳ ಹನುಮಪ್ಪ ಹಾಡ್ಯಾನು ಚೆಲುವ ಕನಕಪ್ಪ ಕುಣಿದಾನ್ಯ'' ಎಂದು ಕನಕದಾಸರು ಸಾಮರಸ್ಯ ಮಾಡಿ ಸ್ವಾರಸ್ಯವಾಗಿ ಹೇಳಿದಂತೆ, ಹಣೆಗೆ ಭಂಡಾರ ಹಚ್ಚಿ ಬೀರೆದೇವರನ್ನು ಕುರಿತು ಡೊಳ್ಳಿನ ಲಯದಲ್ಲಿ ಭಕ್ತಿಯಿಂದ ಹಾಡುವ, ಹಿಗ್ಗಿನಿಂದ ಕುಣಿಯುವ, ಭಾವಪರವಶರಾಗುವ ಕಲೆಗೆ ಆರ್ಯ, ದ್ರಾವಿಡ, ಪಾರ್ಸಿ ತ್ರಿಕೋನ ಕಥೆ ಸೇರಿಸಿದ್ದೇ ಅಪಲಾಪ.

ಜನಪದಗಳು ಎಂದರೆ ಗ್ರಾಮೀಣ ಜಗತ್ತಿನ ಹೃದಯ. ಇವು ಬದುಕಿನೊಂದಿಗೆ ಹೊಂದಿಕೊಂಡಿರುವ ಮೌಲ್ಯಗಳು. ಜೀವನ, ಉಜ್ಜೀವನದ ಪರಿವೆ ಇಲ್ಲದ ಸಾಮ್ಯವಾದಿಗಳು, ಬದುಕು ಪ್ರೀತಿಸುವ ಜನಪದಗಳನ್ನು ಎಂದು ತಿಳಿದಾರು? ಆಧ್ಯಾತ್ಮಿಕತೆ, ಸಾಂಸ್ಕೃತಿಕ ಶ್ರೀಮಂತಿಕೆಯಲ್ಲಿ ವೈರುಧ್ಯ ಬಿತ್ತುವಲ್ಲಿ ಏನು ಲಾಭವಿದೆಯೋ ದೇವನೇ ಬಲ್ಲ! ಮಾರ್ಕ್ಸ್‌ವಾದ ಜಗತ್ತಿನ ಎಲ್ಲ ಸಂಸ್ಕೃತಿಗಳಿಗೆ, ಬಹುತ್ವಕ್ಕೆ ಮಾರಕ. ಇವರನ್ನು ಹೊರಗಿಟ್ಟು ನಮ್ಮ ಪಾರಂಪರಿಕ ಕಲೆಗಳನ್ನು ಉಳಿಸಿಕೊಳ್ಳಬೇಕಾಗಿದೆ. ಗ್ರಾಮೀಣ ಜೀವನದ ಮೂಲಭೂತ ಆಶಯಗಳನ್ನು ಆಳವಾಗಿ ಅರಿತುಕೊಂಡು, ಸ್ಥಳೀಯತೆ, ಸಾಂಸ್ಕೃತಿಕ ವಿಶೇಷತೆ ಮತ್ತು ಆಧ್ಯಾತ್ಮಿಕ ಪ್ರಜ್ಞೆಯನ್ನು ಗುರುತಿಸಿ, ಅದಕ್ಕೆ ಪೂರಕ ದಿಕ್ಕಿನಲ್ಲಿ ಸಾಗಬೇಕಾಗಿದೆ.

(ಲೇಖಕರು ಚಿಂತಕರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಹಾಸ್ಯಾಸ್ಪದ ಸಂಗತಿ

ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿದ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಬೀದಿನಾಯಿಗಳು ಮತ್ತು ಇತರ ಪ್ರಾಣಿಗಳಿಗೆ ಆಹಾರ ನೀಡುವುದನ್ನು ನಿಷೇಧಿಸುವಂತೆ ಕೋರಿ ಮೈಸೂರು ಗ್ರಾಹಕರ ಪರಿಷತ್‌ನ ನೇತೃತ್ವದಲ್ಲಿ ಸಹಿ ಸಂಗ್ರಹ ಮಾಡಲಾಗುತ್ತಿದೆ ಎಂದು ವರದಿಯಾಗಿದೆ. ಗ್ರಾಹಕರ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಎಚ್ಚರ ಮೂಡಿಸಲೆಂದು ಸೃಷ್ಟಿಯಾಗಿರುವ ಈ ಪರಿಷತ್‌ಗೇ, ಬೀದಿನಾಯಿಗಳಿಗೆ ಆಹಾರ ನೀಡುವ ಬಗ್ಗೆ ಇಂದು ಜಾರಿಯಲ್ಲಿರುವ ಕಾನೂನಿನ ಬಗ್ಗೆ ಮಾಹಿತಿಯಿಲ್ಲದಿರುವುದು ಹಾಸ್ಯಾಸ್ಪದ ಸಂಗತಿ.

ಬೀದಿನಾಯಿಗಳಿಗೆ ಆಹಾರ ನೀಡುವುದು ನಾಗರಿಕರ ಹಕ್ಕು ಮತ್ತು ಅದನ್ನು ತಡೆಯಬಾರದು ಎಂದು ತೀರ್ಪು ನೀಡಿರುವ ಭಾರತದ ಸುಪ್ರೀಂಕೋರ್ಟ್, 'ಬೀದಿನಾಯಿಗಳಿಗೆ ಅವು ಇರುವಲ್ಲಿಯೇ ಆಹಾರ ನೀಡುವುದು ಮತ್ತು ಇತರ ಸಹಜೀವಿಗಳ ಬಗ್ಗೆ ಸಹಾನುಭೂತಿ ತೋರುವುದು ಮೂಲಭೂತ ಕರ್ತವ್ಯವಾಗಿದೆ' ಎಂದು ಹೇಳಿದೆ. 'ಅನಿಮಲ್ ವೆಲ್‌ಫೇರ್ ಬೋರ್ಡ್ ಆಫ್ ಇಂಡಿಯಾ'ವು ಈ ಬಗ್ಗೆ ಮಾರ್ಗಸೂಚಿಗಳನ್ನು ಹೊಂದಿದ್ದು, ಆಹಾರ ನೀಡುವುದನ್ನು ನಿರಾಕರಿಸುವಂತಿಲ್ಲ ಅಥವಾ ಫೀಡರ್‌ಗಳ ಒಪ್ಪಂದವಿಲ್ಲದೆ ಆಹಾರ ತಾಣಗಳನ್ನು ಗೊತ್ತುಪಡಿಸುವಂತಿಲ್ಲ ಎಂದು ಕೂಡ ನ್ಯಾಯಾಲಯ ಹೇಳಿದೆ. ಹೀಗಾಗಿ, ಮೈಸೂರು ಗ್ರಾಹಕರ ಪರಿಷತ್ ಮಾಡುತ್ತಿರುವ ಕೆಲಸವು, ಪ್ರಾಣಿಗಳ ಮೇಲಿನ ಕ್ರೌರ್ಯದ ತಡೆ, ಪ್ರಾಣಿಜನನ ನಿಯಂತ್ರಣ ನಿಯಮಗಳು ಮತ್ತು ಸುಪ್ರೀಂಕೋರ್ಟ್‌ನ ಮಾರ್ಗಸೂಚಿಗಳನ್ನು ಉಲ್ಲಂಘಿಸುತ್ತದೆ. ಬೀದಿನಾಯಿಗಳಿಗೆ ಆಹಾರ ನೀಡುವ ಬಗ್ಗೆ ಮೈಸೂರಿಗರಿಗೆ ತಪ್ಪುಮಾಹಿತಿ ನೀಡುವುದು ಮತ್ತು ಮೈಸೂರು ವಿಶ್ವವಿದ್ಯಾಲಯವು ಅಸಾಂವಿಧಾನಿಕವಾಗಿ ನಡೆದುಕೊಳ್ಳುವಂತೆ ಪ್ರೇರೇಪಿಸುವುದು ಗ್ರಾಹಕರ ಪರಿಷತ್‌ಗೆ ಗೌರವ ತರುವ ನಡೆಯಲ್ಲ. ಪರಿಷತ್‌ನ ಈ ಕ್ರಮವು ವೈಯಕ್ತಿಕವಾಗಿ ಕಾನೂನುಬಾಹಿರ ಮತ್ತು ಅಮಾನವೀಯ ಕೃತ್ಯವಾಗಿದೆ. ಜತೆಗೆ ಸಹಿಗಾರರನ್ನು, ಸುಪ್ರೀಂ ಕೋರ್ಟ್ ತೀರ್ಪಿಗೆ ಮತ್ತು ನೆಲದ ಕಾನೂನಿಗೆ ವಿರುದ್ಧವಾಗಿ ಸಹಿಮಾಡುವಂತೆ ದುಷ್ಪ್ರೇರಣೆ ಕೂಡ ಮಾಡಿದಂತಾಗುವುದು. ಇಂಥ ಸಂಘ-ಸಂಸ್ಥೆಗಳ ಸದಸ್ಯರು ತಮ್ಮ ಮನೆಯಲ್ಲಿರುವ ಮಕ್ಕಳು-ಮರಿಮಕ್ಕಳನ್ನು ಈ ಬಗ್ಗೆ ಕೇಳಿದರೆ ಸಾಕು ಸರಿಯಾದ ಮಾರ್ಗದರ್ಶನ ಸಿಗುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ, 'ಈ ಭೂಮಿಯು ಮಾನವನಿಗೆ ಮಾತ್ರ ಸೇರಿದ್ದು' ಎಂಬಂತೆ ನಾವು ನಡೆದುಕೊಳ್ಳಬಹುದೇ? ಪ್ರಾಣಿ-ಪಕ್ಷಿ, ಗಿಡ-ಮರಗಳು ಇಲ್ಲದೆಯೇ ಮೈಸೂರು ಸುಂದರವಾಗಿದೆಯೇ? ಮಾನವರ ಜತೆ ಬಾಳುವ ಪ್ರಾಣಿಗಳು ಎಲ್ಲಿಗೆ ಹೋಗಬೇಕು? ಈ ಸನ್ನಿವೇಶವು, ಪ್ರಾಣಿಪ್ರಿಯರು ಮತ್ತು ಪ್ರಾಣಿಗಳಿಂದ ತೊಂದರೆಗೀಡಾದವರ ನಡುವಿನ ಘರ್ಷಣೆಗೆ ಕಾರಣವಾಗದೆ, ನಮ್ಮೊಳಗಿನ ಪ್ರೀತಿ, ಸತ್‌ಚಿಂತನೆ, ಸಹಾನುಭೂತಿಗಳಿಗೆ ಅವಕಾಶ ನೀಡುವ ಪ್ರೇರಣಾದಾಯಿ ಬೆಳವಣಿಗೆಯಾಗಲಿ.

- ವೇಣುಗೋಪಾಲ್, ಮೈಸೂರು

ದೇವರೇ ಕಾಪಾಡಪ್ಪಾ!

ಇತ್ತೀಚೆಗೆ ಕುಟುಂಬದೊಂದಿಗೆ ಮೈಸೂರು ಪ್ರವಾಸಕ್ಕೆ ಹೋಗಿದ್ದೆ. ನಿಜಕ್ಕೂ ಸುಂದರ, ಸುಸಂಸ್ಕೃತ, ಚೊಕ್ಕ ನಗರವಿದು. ಶ್ರೀ ಚಾಮುಂಡೇಶ್ವರಿಯ ದರ್ಶನಕ್ಕೆಂದು ಬೆಟ್ಟದಲ್ಲಿ 30 ರುಪಾಯಿಯ ಟಿಕೆಟ್ ಪಡೆದು ಪ್ರತ್ಯೇಕ ಕ್ಯೂನಲ್ಲಿ ನಿಂತೆವು. ಹಲವು ತಿರುವುಗಳು, ಕಾಲಡಿ ಎಟಕುವ ಕಂಬಗಳ ಕೆಳತುದಿಗಳನ್ನು ತಪ್ಪಿಸಿ ಮುಂದೆ ಸಾಗಿದೆವು. ದೇವಿ ಸನ್ನಿಧಿಗೆ 30 ಮೀ. ಅಂತರವಿರುವಾಗಲೇ ಕಾಮನ್ ಕ್ಯೂ ಮತ್ತು ವಿಶೇಷ ಟಿಕೆಟ್ ಕ್ಯೂ ಎರಡನ್ನೂ ಒಟ್ಟಾಗಿಸುತ್ತಾರೆ. ನಂತರ ಶುರು ತಿಕ್ಕಾಟ.

ಈ ಮಧ್ಯೆ ಅಲ್ಲಿನ ಬೃಹತ್ ಹುಂಡಿಗೆ ಒರಗಿನಿಂತ ಸರಕಾರಿ ಸಿಬ್ಬಂದಿಯೊಬ್ಬರು, ''ಮುಂದೆ ಹೋಗಿ, ನಿಮ್ಮ ಹರಕೆ ಕಾಣಿಕೆ ಹಣ ಹುಂಡಿಗೆ ಹಾಕಿ'' ಎಂದು ಉಚ್ಚಸ್ಥಾಯಿಯಲ್ಲಿ ಆರ್ಡರ್ ಮಾಡುವವರಂತೆ ಕೂಗುತ್ತಿರುತ್ತಾರೆ. ಅನೇಕರು ಸಮ್ಮೋಹಿನಿಗೆ ಒಳಗಾದವರಂತೆ ಹಣ ಹಾಕುತ್ತಾರೆ. ನಮ್ಮಂಥ ಹಿರಿಯ ನಾಗರಿಕರು ಹಾಗೂ-ಹೀಗೂ ನುಗ್ಗಿ ಚಾಮುಂಡಿ ತಾಯಿಯೆದುರು ನಿಂತರೆ,

ಒಂದರೆಕ್ಷಣ ಪ್ರಾರ್ಥಿಸಲೂ ಬಿಡದೆ, 'ಮುಂದೆ ಹೋಗಿ' ಎಂದು ನೂಕುತ್ತಾರೆ. ದೇವಸ್ಥಾನದ ಆವರಣದ ವಿವಿಧೆಡೆ ವಿಭಿನ್ನ ವಿನ್ಯಾಸದ ಸಾಕಷ್ಟು ಮುಜರಾಯಿ ಹುಂಡಿಗಳು, 'ಇ-ಹುಂಡಿ'ಯ ಬೋರ್ಡುಗಳು! ಸರಕಾರವು ಇಂಥ ಹುಂಡಿಗಳ ಮೂಲಕ 'ಗ್ಯಾರಂಟಿ' ಯೋಜನೆಗಳಿಗೆ ಧನಸಂಗ್ರಹ ಮಾಡುವಲ್ಲಿ ತೋರುವ ಆಸಕ್ತಿಯನ್ನೇ ಭಕ್ತರ ಹಿತರಕ್ಷಣೆಯತ್ತಲೂ ತೋರಬೇಕಲ್ಲವೇ? ಅದರಲ್ಲೂ ಹಿರಿಯ ನಾಗರಿಕರಿಗೆ ಸುಲಭ ದರ್ಶನದಂಥ ಅವಶ್ಯ ಸೌಲಭ್ಯಗಳನ್ನು ಒದಗಿಸಬೇಕು ಮತ್ತು ದಾರಿಯುದ್ದಕ್ಕೂ ಕಾಡುವ ಪೂಜಾ ಸಾಮಗ್ರಿಗಳ ಮಾರಾಟಗಾರರು, ಅಂಗಡಿಗಳವರು, ಭಿಕ್ಷುಕರಿಂದ ಕಾಪಾಡಲು ಕ್ರಮ ಕೈಗೊಳ್ಳಬೇಕು. ಶ್ರೀರಂಗಪಟ್ಟಣದಲ್ಲಿ ದರ್ಶನಕ್ಕೆ ಅಷ್ಟೊಂದು ಪ್ರಯಾಸವಾಗದಿದ್ದರೂ, ಅಲ್ಲಿನ ಪರಿಸರ ಜುಗುಪ್ಸೆ ತರಿಸಿತು. ದೇಗುಲಕ್ಕೆ ತೆರಳುವ ದಾರಿಯ ಇಕ್ಕೆಲಗಳಲ್ಲಿ, ಹೊರಬದಿಯಲ್ಲಿ, ಕಾರು ನಿಲುಗಡೆ ತಾಣದಲ್ಲಿ ಹೇರಳ ಕಸದ ಗುಡ್ಡೆಗಳು! ಕೆಸರುನೀರಿನ ಹರಿವು, ಕಾಲಿಡಲೂ ಅಸಹ್ಯ! ಈ ದೇಗುಲದಲ್ಲೂ ಸಾಕಷ್ಟು ಸಂಖ್ಯೆಯಲ್ಲಿದ್ದವು ಹುಂಡಿಗಳು. ಮುಂದೆ ನಂಜನಗೂಡಿನಲ್ಲಿ ಇವೆಲ್ಲವನ್ನೂ ಮರೆಯುವಂತೆ ಸುಂದರ ವಾತಾವರಣವಿದ್ದು ಆಧ್ಯಾತ್ಮಿಕ ಸಮಾಧಾನ ದೊರೆಯಿತು ಎನ್ನಿ. ಜನಾಭಿಪ್ರಾಯದ ಪ್ರಕಾರ, ಮುಜರಾಯಿ ಇಲಾಖೆಯ ನಿರ್ವಹಣೆಗೆ ಒಳಪಟ್ಟ ಬಹಳಷ್ಟು ದೇವಾಲಯಗಳಲ್ಲಿ ಸುಧಾರಣೆ ಆಗಬೇಕಿರುವ ಸಂಗತಿಗಳು ಸಾಕಷ್ಟಿವೆ.

- ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ವೈಟ್‌ಹೌಸ್ ಪ್ರವೇಶ!

ಅಮೆರಿಕ ಅಧ್ಯಕ್ಷರ ಶ್ವೇತಭವನದ 'ಗೃಹಪ್ರವೇಶ'ದ ಕುರಿತಂತೆ ಶಿಶಿರ್ ಹೆಗಡೆಯವರು ತಮ್ಮ 'ಶಿಶಿರಕಾಲ' ಅಂಕಣದಲ್ಲಿ (ಜ.24)ಬಹಳ ವಿಸ್ತೃತವಾಗಿ ಮಾಹಿತಿ ಒದಗಿಸಿದ್ದಾರೆ. ಅಲ್ಲಿನ ಸರಕಾರ ಈ ಕಾರ್ಯಕ್ರಮಕ್ಕೆ ನೀಡುವ ಗರಿಷ್ಠ ಮಹತ್ವ, ಅದಕ್ಕಾಗಿ ವಿನಿಯೋಗಿಸುವ ಸಮಯ, ವಹಿಸುವ ಕಾಳಜಿ, ಅದಕ್ಕೇ ಅಂತಲೇ ನಿಗದಿಪಡಿಸಿದ ಸಿಬ್ಬಂದಿಯ ಜವಾಬ್ದಾರಿ ಇತ್ಯಾದಿ ವಿವರಗಳು ಆಪ್ತವಾಗಿ ಮೂಡಿಬಂದಿವೆ. ಹೊಸದಾಗಿ ಭವನ ಸೇರುವ ಅಧ್ಯಕ್ಷರ ಅಭಿರುಚಿಗೆ ತಕ್ಕಂತೆ ಒಂದೊಂದು ಸಣ್ಣ ವಿಚಾರ ಮತ್ತು ವಿಷಯಕ್ಕೂ ಎಷ್ಟೆಲ್ಲಾ ಆದ್ಯತೆ ನೀಡಲಾಗುವುದು ಎಂಬುದು ತಿಳಿದು, ಇದು ಅಪರೂಪ ಎನಿಸಿತು. ಏನೇ ಆದರೂ, ಜಗತ್ತಿಗೇ ದೊಡ್ಡಣ್ಣ (!) ಅಂತ ಕರೆಸಿಕೊಳ್ಳುವ ದೇಶದ ಮುಖ್ಯಸ್ಥರ ಪ್ರತಿಯೊಂದು ಸುದ್ದಿಯೂ ಅಷ್ಟೇ ವಿಶೇಷ. ಅಪರೂಪದ ವಿಷಯದ ಬಗ್ಗೆ ಲೇಖನ ಬರೆದ ಅಂಕಣಕಾರರಿಗೆ ಧನ್ಯವಾದಗಳು.

- ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಮುನಿಸು ತರವೇ?

ಸುಷ್ಮಾ ಸ್ವರಾಜ್ ಅವರ 'ಮಾನಸ ಪುತ್ರರು' ಎನಿಸಿಕೊಂಡಿದ್ದ, ಒಂದು ಕಾಲಕ್ಕೆ ಬಳ್ಳಾರಿಯ ರಾಜಕೀಯ ಲೆಕ್ಕಾಚಾರವನ್ನೇ ಬದಲಿಸಿದ್ದ, ಬಿಜೆಪಿಯ ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ಸುದ್ದಿಯಲ್ಲಿದ್ದಾರೆ. ಈ 'ಆಪ್ತಮಿತ್ರರ' ನಡುವೆ ಏಕಾಏಕಿ ವೈಮನಸ್ಸು ಹುಟ್ಟಿಕೊಂಡು ತಾರಕಕ್ಕೆ ಏರುತ್ತಿರುವುದನ್ನು ಗಮನಿಸಿದರೆ, ಮಾಮಲಾ ಗಂಭೀರವಾದದ್ದೇ ಎಂಬುದರಲ್ಲಿ ಸಂಶಯವಿಲ್ಲ. ರಾಜ್ಯ ಬಿಜೆಪಿಯ ಪ್ರಸಕ್ತ ದುಸ್ಥಿತಿಗೆ ಇದು ತನ್ನದೇ ಆದ ಕೊಡುಗೆ ನೀಡುವುದೇ ಎಂಬುದನ್ನು ಕಾದುನೋಡಬೇಕಿದೆ.

- ಶಂಕರನಾರಾಯಣ ಭಟ್, ಮಾಡಗೇರಿ

ಭಟ್ಟರ್ ಸ್ಕಾಚ್

- **ನಂದೀಶ ಕಾಮತ, ಹುಬ್ಬಳ್ಳಿ**
ಭಟ್ರೇ, ಹೆಂಗಸಿಗೆ ಜೀವನದಲ್ಲಿ ಮೂರೇ ಸಂಗತಿಗಳು ಬೇಕಂತೆ?
– **ಹೂಂ.. ಆಹಾರ, ನೀರು ಮತ್ತು ಬಾಯ್ತುಂಬ ಹೊಗಳಿಕೆ!**

- **ಶೇಖರ ಸ್ವಾಮಿ, ಬೆಂಗಳೂರು**
ಭಟ್ರೇ, ಜಗದ್ಗುರುಗಳು ತಪ್ಪುಗಳನ್ನೇ ಮಾಡುವುದಿಲ್ಲವಾ?
– **ಮಾಡುತ್ತಾರೆ, ಆದರೆ ಅದನ್ನು ಕೆಲವರು ಆಶೀರ್ವಾದ ಅಂತ ಭಾವಿಸುತ್ತಾರೆ!**

- **ವನಿತಾ, ಮೈಸೂರು**
ಭಟ್ರೇ, ಹೆಂಡತಿ ಜೋಕುಗಳನ್ನು ಸಹಿಸುವುದಿಲ್ಲ ಅಂತ ಹೇಳ್ತಾರಲ್ಲ?
– **ಆಕೆ ಗಂಡನನ್ನು ಸಹಿಸದಿರುವುದಕ್ಕೂ ಅದೇ ಕಾರಣ!**

- **ಶ್ರೀಪತಿ ಹೆಗಡೆ, ಸಿದ್ದಾಪುರ**
ಭಟ್ರೇ, ಆದರ್ಶ ದಾಂಪತ್ಯ ಜೀವನದ ರಹಸ್ಯವೇನು?
– **ಗಂಡ ಕಿವುಡನಾಗಿರಬೇಕು!**

- **ಕಿರಣ್ ಶೆಟ್ಟಿ, ಬೆಳಗಾವಿ**
ಭಟ್ರೇ, ಮದುವೆ ಮನುಷ್ಯನ ದೊಡ್ಡ ಆವಿಷ್ಕಾರ ಅಂತಾರಲ್ಲ?
– **ನಿಜ, ಸೈಕಲ್ ಮತ್ತು ಪಂಪ್‌ಸೆಟ್ ಕೂಡ ದೊಡ್ಡ ಆವಿಷ್ಕಾರಗಳೇ!**

- **ವಿರೂಪಾಕ್ಷ ಹಿರೇಮಠ, ಗೋಕಾಕ**
ಭಟ್ರೇ, ಯಾರಾದರೂ ಎಲ್ಲಿಗಾದರೂ ಹೊರಟಾಗ ಎಲ್ಲಿಗೆ ಅಂತ ಕೇಳಬಾರದು ಎಂದು ಹಿರಿಯರು ಹೇಳುತ್ತಾರೆ ಯಾಕೆ?
– **ತಕ್ಷಣ ಹಾಗೆ ಕೇಳಿದರೆ, ಏನು ಸುಳ್ಳು ಹೇಳಬೇಕು ಅಂತ ಗೊತ್ತಾಗುವುದಿಲ್ಲವಲ್ಲ, ಅದಕ್ಕೆ!**

- **ವಿನಾಯಕ ವಿ.ಸಿ., ಧಾರವಾಡ**
ಭಟ್ರೇ, ಮದುವೆಯಾಗಿ ಮೂವತ್ತು ವರ್ಷಗಳ ಬಳಿಕ ಹೆಂಡತಿಯನ್ನು ಮುದ್ದಿಸಬಹುದಾ?
– **ಮುದ್ದಿಸಬಹುದು, ಆದರೆ ಅವರು ಯಾರ ಹೆಂಡತಿ ಎಂಬುದನ್ನು ಅವಲಂಬಿಸಿರುತ್ತದೆ!**

- **ಅಶೋಕ ಪತ್ತಿ, ಕೆಂಗೇರಿ**
ಭಟ್ರೇ, ವಿಶ್ವವಾಣಿಗೆ ಹತ್ತು ತುಂಬಿತು ಅಂತ ಕೇಳಿದೆ, ಏನು ವಿಶೇಷ?
– **ಇಪ್ಪತ್ತೈದು ನಂತರವೂ ನೀನು ಹೀಗೆ ಕೇಳ್ತೀಯಾ ಅಂತ ಗೊತ್ತು!**

- **ವೀರೇಶ ಕಮತಗಿ, ಅಡಗೂರು**
ಭಟ್ರೇ, ಶಾಪಿಂಗ್ ಮಾಲ್‌ನಲ್ಲಿ ಗಂಡ ಹೆಂಡತಿ ಕೈ ಹಿಡಿದುಕೊಂಡಿರುತ್ತಾನಲ್ಲ?
– **ಬಿಟ್ಟರೆ ಹೆಂಡತಿ ಶಾಪಿಂಗ್ ಹೋಗ್ತಾಳಲ್ಲ?!**

- **ಕಪಿಲ್ ಕೆ., (ಇಮೇಲ್ ಮೂಲಕ)**
ಭಟ್ರೇ, ದಾಂಪತ್ಯ ಬಹಳ ಸರಳ ಅಂತಾರಲ್ಲ?
– **ಹೂಂ.. ಪ್ರೀತಿ ಕೊಟ್ರೆ ಪ್ರೀತಿ ವಾಪಸ್ ಬರುತ್ತೆ!**

ಪ್ರಶಸ್ತಿ, ಪ್ರಶಸ್ತಿ! ಕೊಡುವುದು ಯಾವಾಗ?

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್

dhyapaa@gmail.com

ಪ್ರಶಸ್ತಿ... ಪ್ರಶಸ್ತಿ... ಪ್ರಶಸ್ತಿ...! ಕರ್ನಾಟಕದ ಪಾಲಿಗೆ ಈ ವಾರ ಪ್ರಶಸ್ತಿಗಳ ಸುರಿಮಳೆ. ಒಂದು ಕಡೆ ಕೇಂದ್ರ ಸರಕಾರ ಪದ್ಮ ಪ್ರಶಸ್ತಿಗಳನ್ನು ಘೋಷಿಸಿದರೆ, ಅದಕ್ಕೂ ನಾಲ್ಕು ದಿನ ಮೊದಲು 2019ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿಯ ಘೋಷಣೆ ಆಯಿತು. ಅದರ ಬೆನ್ನಲ್ಲೇ ಕನ್ನಡದ ಹೆಸರಾಂತ ನಟ ಕಿಚ್ಚ ಸುದೀಪ್ ಅವರು ತಮಗೆ ಒಲಿದಿದ್ದ ಅತ್ಯುತ್ತಮ ನಟ ಪ್ರಶಸ್ತಿಯನ್ನು ನಯವಾಗಿಯೇ ನಿರಾಕರಿಸಿದರು. ಎಕ್ಸ್ (ಟ್ವಿಟರ್)ನಲ್ಲಿ ಅವರು ತಮ್ಮ ಮನದ ಮಾತನ್ನು ಹಂಚಿಕೊಂಡಿದ್ದಾರೆ.

''ಗೌರವಾನ್ವಿತ ಕರ್ನಾಟಕ ಸರಕಾರ ಮತ್ತು ತೀರ್ಪುಗಾರರೇ, ಅತ್ಯುತ್ತಮ ನಟ ವಿಭಾಗದಲ್ಲಿ ರಾಜ್ಯ ಪ್ರಶಸ್ತಿಯನ್ನು ಪಡೆಯುವುದು ನಿಜಕ್ಕೂ ಒಂದು ಸೌಭಾಗ್ಯ. ಈ ಗೌರವಕ್ಕಾಗಿ ತೀರ್ಪುಗಾರರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು. ಆದರೆ ನಾನು ಹಲವಾರು ವರ್ಷಗಳಿಂದ ಪ್ರಶಸ್ತಿ ಪಡೆಯುವುದನ್ನು ನಿಲ್ಲಿಸಲು ನಿರ್ಣಯಿಸಿದ್ದೇನೆ. ವಿವಿಧ ವೈಯಕ್ತಿಕ ಕಾರಣಗಳಿಂದಾಗಿ ನಾನು ಈ ನಿರ್ಧಾರವನ್ನು ತೆಗೆದುಕೊಂಡಿದ್ದೇನೆ. ಕಲೆಗಾಗಿ ತಮ್ಮ ಹೃದಯವನ್ನೇ ಧಾರೆ ಎರೆದ ಅನೇಕ ನಟರಿದ್ದಾರೆ ಮತ್ತು ಅವರು ನನಗಿಂತಲೂ ಹೆಚ್ಚು ಅರ್ಹರಾಗಿದ್ದಾರೆ. ಅಂಥವರಲ್ಲಿ ಯಾರಾದರೂ ಒಬ್ಬರು ಈ ಪ್ರಶಸ್ತಿ ಸ್ವೀಕರಿಸುವುದನ್ನು ನೋಡುವುದು ನನಗೆ ಇನ್ನೂ ಹೆಚ್ಚಿನ ಸಂತೋಷವನ್ನು ನೀಡುತ್ತದೆ. ನಾನು ಯಾವುದೇ ಪ್ರಶಸ್ತಿಗಳ ನಿರೀಕ್ಷೆಯಿಲ್ಲದೆ ಜನರನ್ನು ರಂಜಿಸುವ ಕೆಲಸ ಮಾಡಿದ್ದೇನೆ. ತೀರ್ಪುಗಾರರು ನನ್ನ ಅಭಿನಯಕ್ಕೆ ನೀಡಿರುವ ಮನ್ನಣೆ, ನಾನು ಇನ್ನಷ್ಟು ಶ್ರಮಿಸಲು ಉತ್ತೇಜನ ನೀಡುತ್ತದೆ. ನನ್ನನ್ನು ಆಯ್ಕೆ ಮಾಡಿದ್ದಕ್ಕಾಗಿ ಪ್ರತಿಯೊಬ್ಬ ತೀರ್ಪುಗಾರರಿಗೂ ನಾನು ಕೃತಜ್ಞನಾಗಿದ್ದೇನೆ. ನನ್ನ ನಿರ್ಧಾರ ಉಂಟುಮಾಡಬಹುದಾದ ಯಾವುದೇ ನಿರಾಸೆಗಾಗಿ ನಾನು ತೀರ್ಪುಗಾರರ ಮತ್ತು ರಾಜ್ಯ ಸರಕಾರದ ಕ್ಷಮೆ ಯಾಚಿಸುತ್ತೇನೆ. ಹಾಗೆಯೇ, ನೀವು ನನ್ನ ನಿರ್ಧಾರವನ್ನು ಗೌರವಿಸುತ್ತೀರಿ ಮತ್ತು ನನ್ನ ಹಾದಿಯಲ್ಲಿ ನನ್ನನ್ನು ಬೆಂಬಲಿಸುತ್ತೀರಿ ಎಂದು ನಂಬುತ್ತೇನೆ'' ಎಂದು ತಮ್ಮ ಅನಿಸಿಕೆಯನ್ನು, ನಿರ್ಣಯವನ್ನು ಹಂಚಿಕೊಂಡಿದ್ದಾರೆ.

ಪ್ರಶಸ್ತಿಗಳನ್ನು ಸ್ವೀಕರಿಸುವುದಿಲ್ಲ ಎಂದು ಸುದೀಪ್ ಈ ಮೊದಲೇ ಹೇಳಿದ್ದರೇ? ಗೊತ್ತಿಲ್ಲ. ಏಕೆಂದರೆ ಬಹುತೇಕ ಪ್ರಶಸ್ತಿಗಳಿಗಾಗಿ ಅರ್ಜಿ ಸಲ್ಲಿಸಬೇಕಾಗುತ್ತದೆ. ಪ್ರಶಸ್ತಿ ಪಡೆಯಲು ಅರ್ಜಿ ಸಲ್ಲಿಸುವಂಥ ದುರ್ದೈವ ಇನ್ನೊಂದಿಲ್ಲ. ಬಿಡಿ, ಪ್ರಶಸ್ತಿ ಬೇಡ ಎನ್ನುವವರು ಅರ್ಜಿಯನ್ನಂತೂ ಸಲ್ಲಿಸಿರಲಿಕ್ಕಿಲ್ಲ. ಆದರೆ ಸುದೀಪ್ ಹೇಳಿದ ಮಾತಿನಿಂದ ಕೆಲವರಾದರೂ ಪಾಠ ಕಲಿಯಬಹುದು ಎಂದು ನಂಬುತ್ತೇನೆ. ಕೆಲವು ಜನರನ್ನು ನೋಡಬೇಕು, ಯಾರೋ ಮಾಡಿದ್ದನ್ನು ತಾವೇ ಮಾಡಿದ್ದು ಎಂದು ಹೇಳಿಕೊಳ್ಳುತ್ತಾ, ಪ್ರಶಸ್ತಿಗಾಗಿ ಯಾರದ್ದೋ ಮುಂದೆ ಕೈಮುಗಿದು, ಶಿರ ಬಾಗಿಸಿ, ಮಂಡಿಯೂರಿ ಕುಳಿತುಕೊಳ್ಳುತ್ತಾರೆ. ಬೆಣ್ಣೆ ಹೊಸೆದು, ಹಲ್ಲು ಕಿಸಿದು, ಶರಣಾಗತರಾಗುತ್ತಾರೆ. ಅಥವಾ ಹಿಂದೆ ಮುಂದೆ ಸುತ್ತಿ, ಕಾಡಿ-ಬೇಡಿ ಯಾದರೂ ಪ್ರಶಸ್ತಿ-ಸನ್ಮಾನದ ಭಿಕ್ಷೆ ಗಿಟ್ಟಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿರುತ್ತಾರೆ. ''ನಾನು ಅಂಥವನು, ಇಂಥವನು, ಸಂತೆಯಲ್ಲಿ ಮಂತೆ ಕದ್ದವನು'' ಎಂದು ಬಡಾಯಿ ಕೊಚ್ಚಿಕೊಳ್ಳುತ್ತಾರೆ. ಅವರ ಮಾತನ್ನು ಕೇಳಿದರೆ, ಈ ಪ್ರಪಂಚ ನಡೆಯುತ್ತಿರುವುದೇ ಅವರಿಂದ ಎನ್ನುವಂತಿರುತ್ತದೆ. ಅವರೇನಾದರೂ ಹುಟ್ಟದಿದ್ದರೆ ಪ್ರಾಯಶಃ ಈ ಭೂಮಿಯೂ ಸುತ್ತುತ್ತಿರಲಿಲ್ಲ ಎನ್ನುವಂತೆ ಮಾತನಾಡುತ್ತಾರೆ. ಆ ಕಾರಣಕ್ಕಾಗಿ ತಮಗೆ ಪ್ರಶಸ್ತಿ ಕೊಡಿ ಎಂದು ಗೋಗರೆಯುತ್ತಾರೆ. 'ತಾವು ಮಾಡುವ ಕೆಲಸ ಮಾತನಾಡಬೇಕೇ ವಿನಾ ಮಾತನಾಡುವುದೇ ಕೆಲಸವಾಗಬಾರದು' ಎನ್ನುವ ಲವಮಾತ್ರದ ಅರಿವೂ ಇಂಥವರಿಗೆ ಇರುವುದಿಲ್ಲ. ಯಾರಾದರೂ ಈ ರೀತಿಯ ಮಾತನ್ನಾಡಿದರೆ, ಅಲ್ಲಿಯೇ ಅವರನ್ನು ಪ್ರಶಸ್ತಿ-ಸನ್ಮಾನಗಳಿಗೆ ಅನರ್ಹರೆಂದು ಪರಿಗಣಿಸಬೇಕು. ಅಥವಾ, ಪ್ರಶಸ್ತಿ-ಸನ್ಮಾನ ನೀಡುವ ಸಂಸ್ಥೆಯವರು 'ಸನ್ಮಾನ ಬಯಸುವವರಿಗಾಗಿ ಸನ್ಮಾನ', 'ಪ್ರಶಸ್ತಿ ಬಯಸುವವರಿಗಾಗಿ ಪ್ರಶಸ್ತಿ' ಎಂಬ ಪ್ರತ್ಯೇಕ ವಿಭಾಗ ಇಟ್ಟುಕೊಂಡು, ಆ ವಿಭಾಗದ ಅಡಿಯಲ್ಲಿ ಅಂಥವರಿಗೆ ಸನ್ಮಾನ ಮಾಡಬೇಕು, ಪ್ರಶಸ್ತಿ ನೀಡಬೇಕು. ಇವರಿಗೆಲ್ಲ ತಾವು ಮಾಡಿದ್ದಕ್ಕಿಂತಲೂ ಹತ್ತು ಪಟ್ಟು ಹೆಚ್ಚು ಕೆಲಸ ಬೇರೆಯವರು ಮಾಡಿದ್ದಾರೆ ಎನ್ನುವ ಸಣ್ಣ ಕಲ್ಪನೆಯೂ ಇರುವುದಿಲ್ಲ. ತಾವು ಮಾಡಿದ್ದೇ ಶ್ರೇಷ್ಠ ಎನ್ನುವ ತಪ್ಪು ಕಲ್ಪನೆಯಲ್ಲಿಯೋ ಅಥವಾ ಧಿಮಾಕಿನಲ್ಲಿಯೋ ಮುಳುಗಿರುತ್ತಾರೆ. ಇಂಥವರ ಪರಿಚಯದಲ್ಲಿ ಎಲ್ಲೆಲ್ಲಿ, ಯಾವಾಗ, ಎಷ್ಟೆಷ್ಟು ಪ್ರಶಸ್ತಿ-ಸನ್ಮಾನ ದೊರಕಿದೆ ಎಂಬ ವಿಷಯ ಅಗಾಧವಾಗಿ ತುಂಬಿಕೊಂಡಿರುತ್ತದೆಯೇ ವಿನಾ ಆ ಪ್ರಶಸ್ತಿಗಳೆಲ್ಲ ಯಾವ ಕೆಲಸಕ್ಕಾಗಿ ದೊರಕಿದ್ದು ಎಂಬುದರ ಕಿಂಚಿತ್ ಮಾಹಿತಿಯೂ ಇರುವುದಿಲ್ಲ. ಸಮಸ್ಯೆ ಎಂದರೆ, ಇಂಥವರು ಕಣ್ಣು ಬಿಟ್ಟು ತಮ್ಮ ಅಕ್ಕ-ಪಕ್ಕದಲ್ಲಿ ಆಗುತ್ತಿರುವುದನ್ನು ಗಮನಿಸುವುದೇ ಇಲ್ಲ. ಒಮ್ಮೆ ಕಣ್ಣು ತೆರೆದು ನೋಡಿದರೆ ಅವರಿಗೆ ತಾವು ಎಷ್ಟು ಕುಬ್ಜರು ಎಂಬ ಅರಿವಾಗಬಹುದು. ಆಗ ಆ ಸನ್ಮಾನಗಳಿಗೆಲ್ಲ ತಾವು ಅರ್ಹರಲ್ಲ ಎಂಬುದರ ಅರಿವೂ ಆಗಬಹುದು.

ಇರಲಿ, ಇಂಥ ಪ್ರಶಸ್ತಿಗೆಲ್ಲ ಯಾರು ಅರ್ಹರು, ಯಾರು ಅರ್ಹರಲ್ಲ ಎಂಬುದರ ಕುರಿತಾಗಿ ಈಗ ಇಲ್ಲಿ ಚರ್ಚೆ ಬೇಡ. ಸದ್ಯಕ್ಕೆ ನಮ್ಮ ಮುಂದಿರುವ ವಿಷಯ ಬೇರೆ. ರಾಜ್ಯ ಸರಕಾರದ ಪ್ರಶಸ್ತಿಯನ್ನು ಈಗಾಗಲೇ ಘೋಷಿಸಿ ಆಗಿದೆ. ಅದು 2019ರ ರಾಜ್ಯ ಚಲನಚಿತ್ರ ಪ್ರಶಸ್ತಿ. ಅದೂ ಬರೋಬ್ಬರಿ ಐದು ವರ್ಷದ ನಂತರ ಘೋಷಣೆಯಾಗಿದೆ. ನಡುವೆ ಎರಡು ವರ್ಷ ಕೋವಿಡ್ ಮಹಾಮಾರಿಯಿಂದಾಗಿ ವಿಳಂಬವಾಯಿತು ಎಂದು ಹೇಳಿದರೂ, ಪ್ರಶಸ್ತಿಯನ್ನು ಘೋಷಿಸುವುದಕ್ಕೆ ಯಾವ ಅಡೆ-ತಡೆಯೂ ಇರಲಿಲ್ಲ. ಪ್ರಶಸ್ತಿ ಪ್ರದಾನ ಮಾಡುವುದಕ್ಕೆ ಮಾತ್ರ ಆ ಸಂದರ್ಭದಲ್ಲಿ ತೊಂದರೆಯಾಗಿತ್ತು. ಇದನ್ನು ಯಾಕೆ ಹೇಳುತ್ತಿದ್ದೇನೆ ಎಂದರೆ, 2018ರ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭವೇ ಇನ್ನೂ ನಡೆದಿಲ್ಲ. ಹಾಗಿರುವಾಗ, 2019ರ ಪ್ರಶಸ್ತಿ ಪ್ರದಾನ ಯಾವಾಗ ಆಗುತ್ತದೆಯೋ ದೇವರೇ ಬಲ್ಲ! ಇನ್ನು ನಂತರದ 2020, 21, ... ಹೀಗೆ ಇನ್ನೂ ಐದು ವರ್ಷಗಳ ಪ್ರಶಸ್ತಿಗಳ ಘೋಷಣೆ ಆಗುವುದರ ಜತೆಗೆ, ಅದರ ವಿತರಣೆಯೂ ಆಗಬೇಕಾಗಿದೆ.

ಕುಮಾರಸ್ವಾಮಿಯವರು ರಾಜ್ಯದ ಮುಖ್ಯಮಂತ್ರಿಯಾಗಿರುವಾಗಲೇ 2018ರ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಬೇಕಾಗಿತ್ತು. ಆದರೆ ಸಮಾರಂಭ ನಡೆಯಬೇಕಾದ ದಿನವೇ ಮಂಡ್ಯದಲ್ಲಿ ಒಂದು ದುರ್ಘಟನೆ ನಡೆದಿತ್ತು. ಆ ದುರ್ಘಟನೆಯಲ್ಲಿ ಸಾಕಷ್ಟು ಸಾವು ನೋವುಗಳೂ ಆಗಿದ್ದವು. ಆದ್ದರಿಂದ ಸಮಾರಂಭ ಮುಂದೂಡಲ್ಪಟ್ಟಿತ್ತು. ಇಡೀ ರಾಜ್ಯವೇ ದುಃಖದಲ್ಲಿರುವ ಸಂದರ್ಭದಲ್ಲಿ ಸಭೆ-ಸಮಾರಂಭಗಳನ್ನು ಮಾಡುವುದು ಸರಿಯಲ್ಲ ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ ಪ್ರಶಸ್ತಿ ವಿತರಣೆಗೆ ಕಳೆದ ಆರು ವರ್ಷದಲ್ಲಿ ಒಂದು ದಿನವೂ ಸಿಗಲಿಲ್ಲವೇ? ಅಥವಾ ಇದರ ವಿತರಣೆ ಅಷ್ಟು ಅವಶ್ಯಕ ಎಂದು ಯಾರಿಗೂ ಅನಿಸಲಿಲ್ಲವೇ? ಅವಶ್ಯಕ ಅಲ್ಲವಾಗಿದ್ದರೆ ಇಂಥ ಪ್ರಶಸ್ತಿಗಳನ್ನು ಘೋಷಿಸಿಯಾದರೂ ಏನು ಪ್ರಯೋಜನ? ಒಮ್ಮೆ ಯೋಚಿಸಿ, ಆರು ವರ್ಷದ ಹಿಂದೆ ಉತ್ತಮ ಬಾಲನಟ, ನಟಿ ಪ್ರಶಸ್ತಿ ಪಡೆದವರು ಇಂದು ಯುವಕರಾಗಿ ಕಾಲೇಜು ಮುಗಿಸಿರಲಿಕ್ಕೂ ಸಾಕು. ಅತ್ಯುತ್ತಮ ನಾಯಕ-ನಾಯಕಿ ಪ್ರಶಸ್ತಿ ಪಡೆದವರು ಬಹುಶಃ ಈಗ ಪೋಷಕ ಪಾತ್ರ ಮಾಡುತ್ತಿರಬಹುದು. ಉತ್ತಮ ಪೋಷಕ ಪಾತ್ರ ಪ್ರಶಸ್ತಿಗೆ ಭಾಜನರಾದವರು ಇಂದು ಪ್ರಶಸ್ತಿ ಸ್ವೀಕರಿಸುವ ಸ್ಥಿತಿಯಲ್ಲಿ ಇದ್ದಾರೋ-ಇಲ್ಲವೋ, ಕೊನೆ ಪಕ್ಷ ಅವರಲ್ಲಿ ನಡೆದಾಡುವ ತ್ರಾಣವಾದರೂ ಇದೆಯೋ ಗೊತ್ತಿಲ್ಲ. ಇದರಲ್ಲಿ ಜೀವಮಾನದ ಸಾಧನೆಗಾಗಿ ನೀಡುವ ಪ್ರಶಸ್ತಿಯೂ ಸೇರಿರುತ್ತದೆ. ಪ್ರಶಸ್ತಿ ಘೋಷಿಸಿದ ನಂತರ, ಪಡೆಯಬೇಕಾದವರು ಶಿವನಪಾದ ಸೇರುವುದಕ್ಕಿಂತ ಮುಂಚೆ ವಿತರಣೆ ಆಗಬೇಕಲ್ಲವೇ? ಇಲ್ಲವಾದರೆ ಆ ಪ್ರಶಸ್ತಿಗೂ ಸಂತೆಯಲ್ಲಿರುವ ತರಕಾರಿಗೂ ಏನು ವ್ಯತ್ಯಾಸ? ಎಲ್ಲರಿಗೆ ಅಲ್ಲದಿದ್ದರೂ, ಕೆಲವರಿಗಾದರೂ ಪ್ರಶಸ್ತಿಯ ಜತೆಗೆ ಸಿಗುವ ಹಣದ ಅವಶ್ಯಕತೆ ಇರುತ್ತದೆ. ಅದನ್ನು ಅವರು ಪುನಃ ತೊಡಗಿಸಿಕೊಳ್ಳಬಹುದು ಅಥವಾ ಅವರ ಮುಂದಿನ ಜೀವನಕ್ಕೆ ಅದು ಯಾವುದೋ ಒಂದು ರೀತಿಯಲ್ಲಿ ಉಪಯೋಗವಾಗಬಹುದು. ಈ ಹಣ ಸರಕಾರದ ಬಳಿಯೇ ಐದು-ಆರು ವರ್ಷ ಉಳಿದುಕೊಂಡರೆ, ಪ್ರಶಸ್ತಿ ಪಡೆದವನಿಗೆ ಏನು ಲಾಭ?

ಇದು ಕೇವಲ ಚಲನಚಿತ್ರ ಪ್ರಶಸ್ತಿಗೆ ಸೀಮಿತವಲ್ಲ. 2015-16ರ ಕರಕುಶಲ ಅಭಿವೃದ್ಧಿ ನಿಗಮದ ಪ್ರಶಸ್ತಿಯನ್ನು ಈಗ ಒಂದು ವರ್ಷದ ಹಿಂದೆ ನೀಡಲಾಯಿತು. ಈ ಪ್ರಶಸ್ತಿ ಪ್ರದಾನ ಸಮಾರಂಭ ಎರಡೋ-ಮೂರೋ ಬಾರಿ ನಿಗದಿಯಾಗಿ ಮುಂದೂಡಲ್ಪಟ್ಟಿತ್ತು. ಇನ್ನೂ ಎಷ್ಟು ಪ್ರಶಸ್ತಿಗಳು ಇದೇ ಸ್ಥಿತಿಯಲ್ಲಿ ಇವೆಯೋ ಯಾರಿಗೆ ಗೊತ್ತು? ರಾಜ್ಯದಲ್ಲಿ ಇಂದು ಹುಡುಕಿದರೆ, ಬೇರೆ ವಿಭಾಗದಲ್ಲಿಯೂ ಇಂಥ ಅಪಸವ್ಯ ಕಂಡುಬರಬಹುದು. ಕೆಲವು ವರ್ಷಗಳ ನಂತರ ಪ್ರಶಸ್ತಿಯನ್ನು ಘೋಷಿಸುತ್ತಾರೆ, ಆದರೆ ಸಮಯಕ್ಕೆ ಸರಿಯಾಗಿ ಅದನ್ನು ಅವರಿಗೆ ತಲುಪಿಸುವುದಿಲ್ಲ. ಸಮಾರಂಭಕ್ಕಾಗಿ ಕಾಯಿಸುತ್ತಾರೆ. ಸಮಾರಂಭವನ್ನು ಏರ್ಪಡಿಸಿ, ಪ್ರಶಸ್ತಿ ಪ್ರದಾನ ಮಾಡಿದರೆ ಒಳ್ಳೆಯದೇ. ಆದರೆ ಅನಿವಾರ್ಯ ಕಾರಣಗಳಿಂದ ಮುಂದೂಡಲ್ಪಟ್ಟರೆ, 3 ತಿಂಗಳ ಒಳಗೋ, 6 ತಿಂಗಳ ಒಳಗೋ ಅದನ್ನು ಹೇಗಾದರೂ ವಿತರಿಸಿದರೆ ಒಳ್ಳೆಯದು. ಇಲ್ಲವಾದರೆ, ಸಂಬಂಧಪಟ್ಟ ಕಚೇರಿಯಲ್ಲಿಯೇ, ಅಲ್ಲೇ ಇರುವ ಗಣ್ಯರನ್ನು ಕರೆದು, ಪ್ರಶಸ್ತಿಯನ್ನು ಯಾಕೆ ವಿತರಿಸುವುದಿಲ್ಲ ಎಂದು ಅರ್ಥವಾಗುವುದಿಲ್ಲ. ಸಮಾರಂಭಗಳಿಗೆ ಅಂಥ ಖರ್ಚು ಹಾಕಲು ಆಗುವುದಿಲ್ಲವೆಂದೋ, ಮುಖ್ಯಮಂತ್ರಿಯವರನ್ನೋ, ಸಂಬಂಧಪಟ್ಟ ಮಂತ್ರಿಗಳನ್ನೋ, ತಮಗೆ ಇಷ್ಟವಾದವರನ್ನೋ ಕರೆಸಿ ಅವರ ಜತೆ ತಾವೂ ವೇದಿಕೆಯಲ್ಲಿ ಕುಳಿತು, ಅವರ ಮುಂದೆ ತಾವೂ ಮೆರೆಯಲು ಆಗುವುದಿಲ್ಲವೆಂದೋ, ಸರಕಾರಿ ಖರ್ಚಿನಲ್ಲಿ ಒಂದು ಊಟ ಮಾಡಲು ಆಗುವುದಿಲ್ಲ ಎಂಬ ಕಾರಣಕ್ಕೋ ಗೊತ್ತಿಲ್ಲ. ಇದಕ್ಕೆ ಉತ್ತರವನ್ನು ಸಂಬಂಧಪಟ್ಟವರೇ ಹೇಳಬೇಕು.

ಕೋವಿಡ್ ಮಹಾಮಾರಿಯ ನಂತರ 2-3 ವರ್ಷದ ಪ್ರಶಸ್ತಿಯನ್ನು ಒಟ್ಟಾಗಿ ಸೇರಿಸಿ ಕೊಟ್ಟ ಉದಾಹರಣೆ ಇದೆ. ಆ ಸಂದರ್ಭ ಹಾಗಿತ್ತು ಬಿಡಿ, ಅದಾಗಿ ಈಗ 3 ವರ್ಷ ಕಳೆಯಿತಲ್ಲ? ಈಗಲೂ ಯಾಕೆ ಹೀಗೆ? 2020ರ ನಂತರದ ಪ್ರಶಸ್ತಿಗಳ ಘೋಷಣೆ, ವಿತರಣೆ ಯಾವಾಗ? ಇನ್ನು ಇದನ್ನೆಲ್ಲ ಒಟ್ಟೊಟ್ಟಿಗೆ ಸೇರಿಸಿ ಕೊಡುತ್ತಾರೆಯೇ? ಕೋವಿಡ್ ಸಂದರ್ಭದಲ್ಲಾದರೆ ಸರಿ, ಈಗ?

ಇತ್ತೀಚೆಗಿನ ಕೆಲವು ಪ್ರಶಸ್ತಿಗಳನ್ನು ನೀವು ನೋಡಿದರೆ ಇಂಥ ಪ್ರಶಸ್ತಿ-ಸನ್ಮಾನಗಳು ಅರ್ಥವಿಲ್ಲದ್ದು ಎಂದು ನಿಮಗೆ ಅರ್ಥವಾಗುತ್ತದೆ. 100-200 ಜನರನ್ನು ಆಯ್ಕೆ ಮಾಡುವುದು, ಅವರನ್ನೆಲ್ಲ ಒಟ್ಟಿಗೆ ಕೂರಿಸಿ, ಒಬ್ಬರು ಶಾಲು ಹಾಕುವುದು, ಒಬ್ಬರು ಟೋಪಿ ತೊಡಿಸುವುದು, ಇನ್ನೊಬ್ಬರು ಮಾಲೆ ಹಾಕುವುದು, ಮತ್ತೊಬ್ಬರು ಸ್ಮರಣಿಕೆ ನೀಡುವುದು. ಇದೇನು ಪ್ರಶಸ್ತಿ ಪ್ರದಾನ ಸಮಾರಂಭವೇ ಅಥವಾ ಸಾಮೂಹಿಕ ವಿವಾಹವೇ? ಕೊಟ್ಟಿಗೆಯಲ್ಲಿ ಕಟ್ಟಿದ ದನಕ್ಕೆ ಹುಲ್ಲು ಹಾಕುವಂತೆ ಪ್ರಶಸ್ತಿಗಳನ್ನು ನೀಡುತ್ತಾ ಹೋದರೆ, ಅದಕ್ಕೆ ಯಾವ ಬೆಲೆ ಇರುತ್ತದೆ? ಅದನ್ನು ಸನ್ಮಾನ ಎನ್ನುವುದಕ್ಕಿಂತ ಅವಮಾನ ಎನ್ನುವುದೇ ಸರಿ. ಅಷ್ಟಕ್ಕೂ ಈ ರೀತಿಯ ಪ್ರಶಸ್ತಿ-ಸನ್ಮಾನಗಳನ್ನು ನೀಡುವುದು ಯಾಕಾಗಿ? ಅವರವರು ತಮ್ಮ ಕ್ಷೇತ್ರದಲ್ಲಿ ಮಾಡಿದ ಕೆಲಸವನ್ನು ಗುರುತಿಸಿ ಪ್ರಶಂಸಿಸಲು, ಹಾಗೆಯೇ ಅವರನ್ನೂ ಸೇರಿದಂತೆ ಇನ್ನಷ್ಟು ಜನರಿಗೆ ಇದರಿಂದ ಸ್ಫೂರ್ತಿ ಬರುವಂತಾಗಲಿ ಎಂದು. ಪ್ರಶಸ್ತಿ ಪಡೆದವರು ತಮ್ಮ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಉತ್ಸಾಹದಿಂದ ಕೆಲಸ ಮಾಡಿ, ಇನ್ನೊಂದಿಷ್ಟು ಸೇವೆ ಸಲ್ಲಿಸಲಿ ಎನ್ನುವ ಕಾರಣಕ್ಕಾಗಿ, ಅಲ್ಲವೇ? ಸಮಯಕ್ಕೆ ಸರಿಯಾಗಿ ಆ ಪ್ರಶಸ್ತಿಯನ್ನು ಕೊಡದೇ ಇದ್ದರೆ, ಪ್ರಶಸ್ತಿ ಕೊಡುವ ಉದ್ದೇಶ ಈಡೇರಿದಂತಾಗುತ್ತದೆಯೇ? ಒಂದು ಸಿನಿಮಾ ಮಾಡಿ 5-6 ವರ್ಷ ಖಾಲಿ ಕುಳಿತಿದ್ದ ನಂತರ, ಆ ನಿರ್ದೇಶಕನಿಗೂ ನಿರ್ಮಾಪಕನಿಗೂ ಪ್ರಶಸ್ತಿ ಕೊಟ್ಟು, ಅವನ ವಯಸ್ಸು ಹೆಚ್ಚಾಗಿ, ಉತ್ಸಾಹ ಕುಗ್ಗಿದಾಗ ಅವನಲ್ಲಿ ಯಾವ ರೀತಿಯ ಸ್ಫೂರ್ತಿಯನ್ನು ಪುನಃ ತುಂಬಬಹುದು? ಆತ ಮಾನಸಿಕವಾಗಿ ಸಿದ್ಧನಾಗಿರಬಹುದಾದರೂ ದೇಹ ಸಹಕರಿಸುತ್ತದೆಯೇ?

ಸಿನಿಮಾ, ಪುಸ್ತಕ, ಇವೆಲ್ಲ ಬಿಸಿಬಿಸಿ ದೋಸೆಯಂತೆ. ದೋಸೆಯನ್ನು ಹೇಗೆ ಬಿಸಿ ಇರುವಾಗಲೇ ತಿನ್ನಬೇಕೋ, ಸಿನಿಮಾ ಹಾಗೂ ಪುಸ್ತಕಗಳನ್ನೂ ಬಿಡುಗಡೆಯಾದಾಗಲೇ ನೋಡಬೇಕು, ಕೊಳ್ಳಬೇಕು, ಓದಬೇಕು. ಬಿಡುಗಡೆಯಾಗಿ 6 ತಿಂಗಳು, ಒಂದು ವರ್ಷದವರೆಗೆ ಜನ ಅದರ ಕಡೆಗೆ ಮುಖ ಮಾಡಬಹುದು. ಅದನ್ನು ಬಿಟ್ಟು, 5-6 ವರ್ಷದ ನಂತರ ಪ್ರಶಸ್ತಿ ಬಂದಿದೆ ಎಂಬ ಕಾರಣಕ್ಕೆ ಹಳೆಯ ಸಿನಿಮಾವನ್ನು ಹುಡುಕಿಕೊಂಡು ಜನ ಎಲ್ಲಿ ಹೋಗಬೇಕು? ಹಳೆಯ ಪುಸ್ತಕವನ್ನು ಹುಡುಕಿಕೊಂಡು ಜನ ಎಲ್ಲಿ ಅಲೆಯಬೇಕು? ಬಿಸಿಬಿಸಿ ಚಹಾ, ಕಾಫಿ ಕುಡಿಯಲು ಬಯಸುವವನು, ಆರಿಹೋದ ಉಪ್ಪಿಟ್ಟನ್ನೇ ತಿನ್ನಲು ಬಯಸದವನು, ಸ್ಮೃತಿಪಟಲದಿಂದ ಹಾರಿಹೋದ ಚಲನಚಿತ್ರವನ್ನು ಪುನಃ ನೋಡಲು ಬಯಸುತ್ತಾನೆಯೇ?

ಪ್ರಶಸ್ತಿ-ಸನ್ಮಾನಗಳು ಊಟಕ್ಕಿಲ್ಲದ ಉಪ್ಪಿನಕಾಯಿಯಾಗಬಾರದು!

ದುಡ್ಡು-ಕಾಸು

ಸುರೇಶ್ ಬಾಲಚಂದ್ರನ್

ಬಜೆಟ್ ಮಂಡನೆಯೆಂಬ ಬೃಹತ್ ಕಸರತ್ತು

ಕೇಂದ್ರದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರವರಿ 1ರಂದು 2025-26ನೇ ಸಾಲಿನ ಬಜೆಟ್ ಮಂಡಿಸಲಿದ್ದಾರೆ. ಬಜೆಟ್ ಎಂದ ಕೂಡಲೆ ತೆರಿಗೆದಾರರು, ಉದ್ಯಮಿಗಳು, ಹೂಡಿಕೆದಾರರು, ಸಂಘ-ಸಂಸ್ಥೆಗಳವರು ಹಲವಾರು ನಿರೀಕ್ಷೆಗಳನ್ನು ಇಟ್ಟುಕೊಂಡಿರುತ್ತಾರೆ. ವಾಣಿಜ್ಯ ಮಂಡಳಿಗಳು, ಒಕ್ಕೂಟಗಳು ಮತ್ತು ವೃತ್ತಿಪರ ಸಂಘಟನೆಗಳು ತಂತಮ್ಮ ಕ್ಷೇತ್ರಗಳ ಅಭಿವೃದ್ಧಿಗೆ ಅಗತ್ಯವಿರುವ ಯೋಜನೆಗಳು, ಹಣಕಾಸು, ಬಂಡವಾಳ ಮತ್ತು ತೆರಿಗೆ ಮಾರ್ಪಾಟು, ನೀತಿ ನಿಯಮಾವಳಿಗಳ ಬದಲಾವಣೆಯ ನಿರೀಕ್ಷೆ ಮತ್ತು ಶಿಫಾರಸುಗಳನ್ನು ವಿತ್ತ ಸಚಿವಾಲಯಕ್ಕೆ ಸಲ್ಲಿಸಿರುತ್ತವೆ ಹಾಗೂ ಈ ಶಿಫಾರಸುಗಳಿಂದ ಏನೆಲ್ಲಾ ಒಳಿತಾಗುತ್ತವೆ ಎಂಬುದನ್ನೂ ತಿಳಿಸಿರುತ್ತವೆ.

ಭಾರತದಂಥ ಬೃಹತ್ ದೇಶದ ಬಜೆಟ್ ಸಿದ್ಧವಾಗುವ ಪರಿಯ ಬಗ್ಗೆ ಎಲ್ಲರಿಗೂ ಕುತೂಹಲ ಇರುವುದು ಸಹಜ. ವಿತ್ತ ಸಚಿವರು, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಚುನಾಯಿತ ಪ್ರತಿನಿಧಿಗಳೊಂದಿಗೆ ಆಯ್ದ ಪ್ರಮುಖ ವಿಷಯಗಳನ್ನು ಚರ್ಚಿಸಿ, ಸೂಕ್ತ ದಾಖಲೆಗಳನ್ನು ಸಂಗ್ರಹಿಸಿ, ತೆರಿಗೆ ಕಾನೂನಿಗೆ ಮತ್ತು ಅಭಿವೃದ್ಧಿಗೆ ಬೇಕಾದ ನಿಯಮಾವಳಿಗಳನ್ನು ರೂಪಿಸುತ್ತಾರೆ. ಬಜೆಟ್ ಮಂಡನೆಯ ಕಸರತ್ತೆಂಬುದು ಪ್ರತಿಕ್ರಿಯೆಯನ್ನು ಆಧರಿಸಿರುವಂಥದ್ದು. ಪ್ರಧಾನ ಮಂತ್ರಿಗಳ ಕಾರ್ಯಾಲಯ, ಎಲ್ಲಾ ಸಚಿವಾಲಯಗಳ ಉನ್ನತಾಧಿಕಾರಿಗಳು, ಇಲಾಖೆಗಳು ಮತ್ತು ಕೇಂದ್ರ ತೆರಿಗೆ ಮಂಡಳಿ, ಕೇಂದ್ರ ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್ ಮಂಡಳಿಯ ಅಧ್ಯಕ್ಷರುಗಳ ಜತೆಗಿನ ಸತತ ಸಮಾಲೋಚನೆಯ ನಂತರವಷ್ಟೇ ಮುಂಗಡ ಪತ್ರದ ಕರಡನ್ನು ಸಿದ್ಧಪಡಿಸಲಾಗುತ್ತದೆ. ಆ ವೇಳೆ ಹೊಮ್ಮಿದ ಎಲ್ಲಾ ಶಿಫಾರಸುಗಳನ್ನು ಪರಿಗಣಿಸಿ, ಅಳೆದು-ತೂಗಿ, ಪ್ರಸ್ತುತ ದೇಶದ ಅಭಿವೃದ್ಧಿಗೆ ಬೇಕಾದ ಮತ್ತು ಪೂರಕವಾದ ಪ್ರಸ್ತಾವನೆಗಳನ್ನು ಮುಂಗಡ ಪತ್ರದ ಮೂಲಕ ಸಂಸತ್ತಿನ ಸಮ್ಮುಖದಲ್ಲಿ ಮಂಡಿಸಲಾಗುತ್ತದೆ. ತೆರಿಗೆಸ್ನೇಹಿ ನೀತಿ-ನಿಯಮಾವಳಿಗಳನ್ನು ರಚಿಸಲು ಪ್ರತಿವರ್ಷದ ಬಜೆಟ್‌ನಲ್ಲಿ ಸಾಕಷ್ಟು ಪ್ರಯತ್ನಗಳು ಆಗುತ್ತವೆ. ಪ್ರಸ್ತಾವಿತ ಬಜೆಟ್ ಬದಲಾವಣೆಗಳ ಪರಿಣಾಮ ಮತ್ತು ಆದಾಯದ ಕುರಿತು ಸಂಬಂಧಪಟ್ಟ ಕಾರ್ಯದರ್ಶಿಗಳೊಂದಿಗೆ ಚರ್ಚೆ ನಡೆಸಲಾಗುತ್ತದೆ. ತೆರಿಗೆದಾರರ ಹಿತದೃಷ್ಟಿಗೆ ಮತ್ತು ಉದ್ಯಮಕ್ಕೆ ಅನುಗುಣವಾಗಿ ತೆರಿಗೆ ಕಾನೂನಿನ ತಿದ್ದುಪಡಿ ಅತ್ಯವಶ್ಯಕ. ಈ ಹಿನ್ನೆಲೆಯಲ್ಲಿ ಪ್ರತಿ ವರ್ಷದ ಬಜೆಟ್ ಅನ್ನು ಅನುಮೋದಿಸುವ ಮೊದಲು ವಿತ್ತ ಸಚಿವಾಲಯವು ನಾಲ್ಕೈದು ತಿಂಗಳ ಮೊದಲಿನಿಂದಲೇ ಅದಕ್ಕೆ ತಕ್ಕ ಪೂರ್ವತಯಾರಿಯನ್ನು ಅತ್ಯಂತ ಗೌಪ್ಯವಾಗಿ ಮಾಡಿಕೊಳ್ಳುತ್ತದೆ ಹಾಗೂ ನಂತರವಷ್ಟೇ ಬಜೆಟ್ ಅನ್ನು ಮಂಡಿಸಲಾಗುತ್ತದೆ.

ಬಜೆಟ್‌ನ ಪ್ರಸ್ತಾವನೆಗಳನ್ನು ಅಂತರ-ಸಚಿವಾಲಯದ ಸಮಾಲೋಚನೆಗೂ ಒಳಪಡಿಸಲಾಗುತ್ತದೆ. ಉದಾಹರಣೆಗೆ, ರಫ್ತುಗಳನ್ನು ಹೆಚ್ಚಿಸುವ ಗುರಿಯನ್ನು ಯಾವುದಾದರೂ ಸಚಿವಾಲಯವು ಹೊಂದಿದ್ದರೆ, ಈ ವಿಷಯವನ್ನು ಮೊದಲು ವಾಣಿಜ್ಯ ಸಚಿವಾಲಯದೊಂದಿಗೆ ಚರ್ಚಿಸಿ, ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಹಾಗೂ ತತ್ಸಂಬಂಧಿ ನಿರ್ದಿಷ್ಟ ಪ್ರಸ್ತಾವನೆಗಳನ್ನು ವಿತ್ತ ಸಚಿವಾಲಯಕ್ಕೆ ತಿಳಿಸಬಹುದು. ವಿತ್ತ ಸಚಿವರು ಸಂಸತ್ತಿನಲ್ಲಿ ಮಂಡಿಸುವ ಬಜೆಟ್ ಭಾಷಣದಲ್ಲಿ ಪ್ರಮುಖವಾಗಿ, ವಲಯ ಮತ್ತು ಕ್ಷೇತ್ರವಾರು ಹಣ ಹಂಚಿಕೆ, ಕ್ಷೇತ್ರವಾರು ನಿಯಮಾವಳಿಗಳ ಘೋಷಣೆ, ತೆರಿಗೆ ಪ್ರಸ್ತಾವನೆಗಳೊಂದಿಗಿನ ವಿವರವಾದ ದಾಖಲೆಗಳು ಮತ್ತು ಸರಕಾರದ ವಿತ್ತ ಯೋಜನೆಗಳನ್ನು ವಿಸ್ತೃತವಾಗಿ ತಿಳಿಸಲಾಗುತ್ತದೆ. ಆ ವರ್ಷದ ವಿತ್ತ ವಿಧೇಯಕದಲ್ಲಿನ ಅನುಬಂಧಗಳನ್ನು ವಿವರವಾಗಿ ತಿಳಿಸಿ, ತೆರಿಗೆ ನೀತಿಯಲ್ಲಿನ ತಿದ್ದುಪಡಿಯ ಅವಶ್ಯಕತೆ, ಅಗತ್ಯ ಮತ್ತು ಸ್ಪಷ್ಟೀಕರಣದ ಸಮೇತ ವಿವರಿಸಲಾಗುತ್ತದೆ. ನೀತಿ ನಿಯಮಾವಳಿಗಳು, ಕಾನೂನುಗಳು ಮತ್ತು ಕಾರ್ಯವಿಧಾನಗಳಲ್ಲಿನ ಕರಡು ತಿದ್ದುಪಡಿಗಳಿಗೆ ಅನುಮೋದನೆಯನ್ನು, ಹಣಕಾಸು ವಿಧೇಯಕದಲ್ಲಿ ಸೇರ್ಪಡೆಗೊಳ್ಳುವ ಮೊದಲು ಕಾನೂನು ಸಚಿವಾಲಯದ ಪರಿಶೀಲನೆಗೆ ಕಳುಹಿಸಿದ ನಂತರವಷ್ಟೇ ಸಂಸತ್ತಿನ ಅನುಮೋದನೆಗೆ ತೆಗೆದುಕೊಳ್ಳಲಾಗುವುದು.

ಸಂಸತ್ತಿನಲ್ಲಿ ಬಜೆಟ್ಟನ್ನು ವಿತ್ತ ಸಚಿವರು ಭಾಷಣದ ಮೂಲಕ ಅನುಮೋದಿಸುತ್ತಾರೆ. ಈ ಭಾಷಣವನ್ನು ಸಚಿವಾಲಯದ ಸಲಹೆಗಾರರು ಮತ್ತು ತಜ್ಞರ ತಂಡ ರಚಿಸುತ್ತದೆ. ಅರ್ಥಶಾಸ್ತ್ರ ಪಂಡಿತರು/ವಿಶ್ಲೇಷಕರು ಮತ್ತು ವೃತ್ತಿಪರರ ಸಲಹೆಯನ್ನು ಪಡೆದ ನಂತರ ಕೊನೆಯಲ್ಲಿ ವಿತ್ತ ಸಚಿವರು ತಮ್ಮ ಅಭಿಪ್ರಾಯವನ್ನು ಭಾಷಣದಲ್ಲಿ ಸೇರಿಸುವುದು ವಾಡಿಕೆ. ಬಜೆಟ್ ಭಾಷಣವನ್ನು ಮುಂಚಿತವಾಗಿ ಸಿದ್ಧಪಡಿಸಿ, ಸರಿಯಾದ ಅರ್ಥಕೊಡುವ ಸರಳ ಭಾಷೆಗೆ, ಸ್ಪಷ್ಟತೆಗೆ ಒತ್ತುಕೊಡಲಾಗುವುದು. ಬಜೆಟ್ ಭಾಷಣದ ವೇಳೆ ವಿತ್ತ ಸಚಿವರು ಒಂದಷ್ಟು ಆಸಕ್ತಿಕರ ಉಲ್ಲೇಖಗಳನ್ನು ಸೇರಿಸುವುದುಂಟು. ಉದಾಹರಣೆಗೆ, ಉಪನಿಷತ್, ಅರ್ಥಶಾಸ್ತ್ರದಿಂದ ಆಯ್ದ ವಿಚಾರಗಳು, ಬಸವಣ್ಣ, ತಿರುವಳ್ಳುವರ್ ಮುಂತಾದ ಮಹಾಪುರುಷರ ಸೂಕ್ತಿಗಳನ್ನು ಉಲ್ಲೇಖಿಸಿ ಬಜೆಟ್ ಬಗೆಗೆ ಜನರ ಆಸಕ್ತಿ ಕೆರಳಿಸುವುದು ಕಾಣಸಿಗುತ್ತದೆ. ಬಜೆಟ್ ಭಾಷಣವು ಸಾಮಾನ್ಯವಾಗಿ ದೇಶದ ಆರ್ಥಿಕತೆ, ಆದಾಯ ಮತ್ತು ವೆಚ್ಚದ ಯೋಜನೆಗಳು, ತೆರಿಗೆ ಪ್ರಸ್ತಾವನೆಗಳು, ಸಾಲ ನಿರ್ವಹಣಾ ನೀತಿಗಳು, ವಲಯವಾರು ಹಣ ಹಂಚಿಕೆ, ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿನ ದೀರ್ಘಾವಧಿಯ ಪ್ರಸ್ತಾವನೆಗಳನ್ನು ಒಳಗೊಂಡಿರುತ್ತದೆ.

ವಿತ್ತ ಸಚಿವರು ತಮ್ಮ ಭಾಷಣದಲ್ಲಿ, ತೆರಿಗೆ ದರಗಳು, ವಿನಾಯಿತಿಗಳು, ರಿಯಾಯಿತಿಗಳು, ಸೆಸ್ ಮತ್ತು ಇತರ ತೆರಿಗೆ ಸಂಬಂಧಿತ ಕ್ರಮಗಳಿಗಾಗಿನ ಬದಲಾವಣೆಗಳನ್ನು ಘೋಷಿಸುವ ಕಡೆ ಗಮನಹರಿಸುತ್ತಾರೆ. ಇಂಥ ಪ್ರಸ್ತಾವನೆಗಳು ವೈಯಕ್ತಿಕ ಹಣಕಾಸು, ಹೂಡಿಕೆ ನಿರ್ಧಾರಗಳು, ವ್ಯಾಪಾರ-ವ್ಯವಹಾರ ಕಾರ್ಯಾಚರಣೆಗಳು ಮತ್ತು ಒಟ್ಟಾರೆ ಆರ್ಥಿಕ ಚಟುವಟಿಕೆಗಳ ಮೇಲೆ ತಕ್ಷಣದ ಪರಿಣಾಮಗಳನ್ನು ಹೊಂದಿರುತ್ತವೆಯಾದ್ದರಿಂದ, ಅವು ಹೆಚ್ಚಿನ ಆಸಕ್ತಿಯನ್ನು ಉಂಟುಮಾಡುತ್ತವೆ. ಬಜೆಟ್‌ನ ಅನುಮೋದನೆಯ ನಂತರ, ವಿವರಿಸಿದ ಆದ್ಯತೆಗಳ ಆಧಾರದ ಮೇಲೆ ಸರಕಾರವು ನಿರ್ದಿಷ್ಟ ಇಲಾಖೆ ಮತ್ತು ಕಾರ್ಯಕ್ರಮಗಳಿಗೆ ಹಣವನ್ನು ನಿಗದಿಪಡಿಸುತ್ತದೆ. ಇದು ಪ್ರತಿ ಇಲಾಖೆಯ ಅಗತ್ಯಗಳು ಮತ್ತು ಉದ್ದೇಶಗಳಿಗೆ ಅನುಗುಣವಾಗಿ ಮಾಡಲಾಗುವ ಯೋಜನೆ ಹಾಗೂ ಹಣದ ವಿತರಣೆಯ ವಿವರಗಳನ್ನು ಒಳಗೊಂಡಿರುತ್ತದೆ. ಬಜೆಟ್ ಭಾಷಣವು ಸರಕಾರದ ಹಣಕಾಸು ಯೋಜನೆಯ ವಿಶಾಲ ರೂಪರೇಷೆಯನ್ನು ಹಾಕಿಕೊಡುತ್ತದೆ. ಉದ್ದೇಶಗಳನ್ನು ಪೂರೈಸಲು ಸಂಪನ್ಮೂಲಗಳನ್ನು ಸಮರ್ಥವಾಗಿ ಮತ್ತು ಪರಿಣಾಮಕಾರಿಯಾಗಿ ನಿಯೋಜಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು, ಇಲಾಖಾವಾರು ಹಂಚಿಕೆಗಳನ್ನು ನಂತರದ ಹಂತದಲ್ಲಿ ಅಂತಿಮಗೊಳಿಸಲಾಗುತ್ತದೆ. ಒಟ್ಟಾರೆ ಹೇಳುವುದಾದರೆ, ಪ್ರತಿವರ್ಷದ ಬಜೆಟ್ ಮಂಡನೆಯು ಅತೀವ ನೈಪುಣ್ಯದಿಂದ ಕೂಡಿದ ಒಂದು ಕಸರತ್ತು ಎನ್ನಲಡ್ಡಿಯಿಲ್ಲ. ದೇಶದ ಅಭಿವೃದ್ಧಿಗೆ ಪೂರಕವಾದ ಪ್ರಸ್ತಾವನೆಗಳನ್ನು, ವಲಯವಾರು ಆದಾಯ ಮತ್ತು ಖರ್ಚು ಸಂಬಂಧಿತ ಹಾಗೂ ತೆರಿಗೆಯ ನೀತಿ ನಿಯಮಾವಳಿಗಳನ್ನು ರೂಪಿಸುವ ಬೃಹತ್ಕಾರ್ಯವಿದು. ಒಂದು ಸತ್ಯಸಂಗತಿಯೆಂದರೆ, ಬಜೆಟ್ ಪ್ರಸ್ತಾವನೆಗಳಿಂದ ಎಲ್ಲರನ್ನೂ ಸಂತುಷ್ಟಗೊಳಿಸಲಾಗದು, ಅದರಲ್ಲೂ ವಿಪಕ್ಷಗಳನ್ನು ತೃಪ್ತಿಪಡಿಸುವುದು ಅಸಾಧ್ಯ!

(ಲೇಖಕರು ಚಾರ್ಟರ್ಡ್ ಅಕೌಂಟೆಂಟ್)

ಅವರದ್ದು ಏನಿದ್ರೂ ಅಮೆರಿಕ ಫಸ್ಟ್.. ಬಾಕಿ ಎಲ್ಲ ನೆಕ್ಸ್ಟ್!

ಭಾರತ ಮತ್ತು ಅಮೆರಿಕದ ನಡುವಿನ ಸಂಬಂಧವು 'ಅತ್ಯಾಪ್ತ' ಎನಿಸುವ ಛಾಯೆಯನ್ನು ಹೊಂದಿದ್ದರೂ, ಇದಕ್ಕೆ ಹಲವು ಮಜಲುಗಳಿವೆ ಎಂಬುದನ್ನು ನಾವು ಮರೆಯಬಾರದು. ಸ್ವಂತ ಶಕ್ತಿ-ಸಾಮರ್ಥ್ಯದಿಂದಾಗಿ ಜಗತ್ತಿನ ಪ್ರಬಲ ರಾಷ್ಟ್ರಗಳಲ್ಲೊಂದಾಗಿ ಹೊಮ್ಮಿರುವ ಭಾರತವು, ತನ್ನ ಅಲಿಪ್ತನೀತಿಯ ಬಿಗಿಯನ್ನು ಸಡಿಲಿಸುತ್ತಿದ್ದರೂ, ಯಾರನ್ನು ಆಪ್ತವಾಗಿ ಅಪ್ಪಿಕೊಂಡಿದೆ ಎಂಬ ಗುಟ್ಟು ಬಿಟ್ಟುಕೊಡುತ್ತಿಲ್ಲ!

ಟ್ರಂಪಾಯಣ

ಜಿ.ಪ್ರತಾಪ್ ಕೊಡಂಚ

vveditoped@gmail.com

ಜಗದಗಲವೂ ಈಗ 'ಅಬ್ ಕೀ ಬಾರ್, ಟ್ರಂಪ್ ಸರ್ಕಾರ್' ಕುರಿತ ಸುದ್ದಿಗಳೇ ಹರಿದಾಡುತ್ತಿವೆ. ಕಳೆದ ಬಾರಿಯ ಸೋಲು, ಸೋಲನೊಪ್ಪಿಕೊಳ್ಳದ ನಡೆ-ನುಡಿ, ತದನಂತರ ಎದುರಿಸಬೇಕಾಗಿ ಬಂದ ಹಲವು ಕಾನೂನು ಹೋರಾಟಗಳಿಂದ ನೆಲಕಚ್ಚಿಯೇ ಬಿಟ್ಟರು ಎಂದು ಹಲವರು ಭಾವಿಸಿದ್ದ ಟ್ರಂಪ್, 'ಜನತಾ ಜನಾರ್ದನ'ರ ಕೃಪೆಯಿಂದ ಪುಟಿದೆದ್ದಿದ್ದಾರೆ, ಒಂದು ಅವಧಿಯ ಹಿನ್ನಡೆಯ ನಂತರ ಅಮೆರಿಕದ 47ನೇ ಅಧ್ಯಕ್ಷರಾಗಿ ಈ ಬಾರಿ ಸ್ವಲ್ಪ ಹೆಚ್ಚೇ ಸೆಟೆದು ನಿಂತಿದ್ದಾರೆ!

ವೃತ್ತಿಪರ ರಾಜಕಾರಣಿಯಲ್ಲದವರು ರಾಜಕೀಯ ವ್ಯೂಹದಲ್ಲಿ ಸೆಣಸಿ ಪ್ರಬಲರಾಗಿ ನೆಲೆಗೊಂಡ ಉದಾಹರಣೆಗಳು ಬಹಳಷ್ಟಿಲ್ಲ. ಆ ನೆಲೆಯಲ್ಲಿನ ಸಾಧನೆಯಿಂದಾಗಿ ಟ್ರಂಪ್ ಅಭಿನಂದನಾರ್ಹರು. ಆಡಳಿತಾರೂಢ ಸರಕಾರಗಳ, ರಾಜಕೀಯ ಮತ್ತು ಉದ್ಯಮ ಜಗತ್ತಿನ ಸ್ಥಾಪಿತ ಹಿತಾಸಕ್ತಿಗಳ ಎದುರು ಸೆಣಸಿ ಅವರು ದಕ್ಕಿಸಿಕೊಂಡ ಗೆಲುವು ಪ್ರಜಾಪ್ರಭುತ್ವದ ಗೆಲುವು ಕೂಡ. ಅಧಿಕಾರ ವಹಿಸಿಕೊಳ್ಳುತ್ತಲೇ ಟ್ರಂಪ್, ನಿರೀಕ್ಷೆಯಂತೆ ಸುಮಾರು 32 ಕಾರ್ಯನಿರ್ವಾಹಕ ಆದೇಶಗಳನ್ನು ಹೊರಡಿಸಿದ್ದಾರೆ, ಮತ್ತಷ್ಟು ಹೊಮ್ಮುವ ನಿರೀಕ್ಷೆಯಿದೆ. ಭಾರತದಲ್ಲಿನ ಕೇಂದ್ರ ಮತ್ತು ರಾಜ್ಯ ಸರಕಾರಗಳು ಕೆಲ ಸಂದರ್ಭಗಳಲ್ಲಿ ಹೊರಡಿಸುವ ಸುಗ್ರೀವಾಜ್ಞೆಗಳಿಗೆ ಸಮನಾದ ಆದೇಶಗಳಿವು. ಸಾಂವಿಧಾನಿಕ ಅಧಿಕಾರ ಬಳಸಿ ಅಧ್ಯಕ್ಷರು ಹೊರಡಿಸಿದ ಈ ಆದೇಶಗಳು, ಸೂಚಿತ ದಿನದಿಂದ ಜಾರಿಗೊಳ್ಳುತ್ತವೆ. ಇವನ್ನು ನ್ಯಾಯಾಲಯಗಳಲ್ಲಿ ಪ್ರಶ್ನಿಸುವ ಮತ್ತು ಪರಿಪೂರ್ಣ ಕಾಯ್ದೆಯಾಗಿಸುವ ಮುನ್ನ, ನಿಗದಿತ ಸಮಯದೊಳಗೆ ಅಮೆರಿಕದ ಸಂಸತ್ತು ಚರ್ಚಿಸಿ, ಉಭಯ ಸದನಗಳ ಬೆಂಬಲ ಪಡೆಯುವುದು ಅವಶ್ಯಕ. ಇಂಥ ಆದೇಶಗಳನ್ನು ಹಿಂಪಡೆಯುವ ಅಧಿಕಾರ ಅಧ್ಯಕ್ಷರಿಗೆ ಮಾತ್ರವಿದ್ದರೂ, ಅಮೆರಿಕದ ಶಾಸಕಾಂಗ ಮತ್ತು ನ್ಯಾಯಾಂಗಗಳಿಗೆ ಕಾರ್ಯಾಂಗದ ಆದೇಶಗಳ ಅನುಷ್ಠಾನವನ್ನು ತಿದ್ದಿತೀಡುವ ಅವಕಾಶಗಳಿವೆ.

ಟ್ರಂಪ್ ಸಾಹೇಬರು ಈ ಬಾರಿ ಹೊರಡಿಸಿದ ಬಹುತೇಕ 'ಅಧ್ಯಕ್ಷೀಯ' ಆದೇಶಗಳು, ಚುನಾವಣಾ ಪ್ರಣಾಳಿಕೆಯ ಬತ್ತಳಿಕೆಯಲ್ಲಿದ್ದ ಗಡಿಭದ್ರತೆ, ಅಕ್ರಮ ವಲಸೆ ತಡೆ, ಭಯೋತ್ಪಾದನೆ ನಿಗ್ರಹ, ವಿಶ್ವಸಂಸ್ಥೆಯೆಡೆಗಿನ ಸಹಾಯಗಳ ಮರುಪರಿಶೀಲನೆ, ಪೌರತ್ವದ ಅರ್ಥ ಮತ್ತು ಮೌಲ್ಯ ಸಂರಕ್ಷಣೆ, ಶಕ್ತಿ ಸಂಪನ್ಮೂಲಗಳ ಉದಾರ ಬಳಕೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂಥವು. ಮಿಕ್ಕವು, ಹಿಂದಿನ ಅಧ್ಯಕ್ಷರು ತಮ್ಮ ಅಧಿಕಾರಾವಧಿಯ ಕೊನೆ ದಿನದ ತನಕ ಹೊರಡಿಸುತ್ತಲೇ ಇದ್ದ ಅಧ್ಯಕ್ಷೀಯ ಆದೇಶಗಳ ಹಿಂಪಡೆಯುವಿಕೆ ಅಥವಾ ಮರುವಿಮರ್ಶೆಗೆ ಸಂಬಂಧಿಸಿದ್ದು. ಸರಕಾರವು ನಾಳೆಗೆ ಕೊನೆಯಾಗುತ್ತಿದೆ ಎಂಬುದು ಖಚಿತವಾದ ಮೇಲೆ, ಕೊನೆಯ ಗಳಿಗೆಯಲ್ಲಿ, ಯಾವ್ಯಾವುದೋ ಒತ್ತಡದಲ್ಲಿ (?!) ಕಡತಗಳಿಗೆ ಮುದ್ರೆ ಒತ್ತಿ ಆದೇಶ ಹೊರಡಿಸುವ 'ಕಾರ್ಯತತ್ಪರ' ನಾಯಕರು ಭಾರತದಲ್ಲಿ ಮಾತ್ರವಲ್ಲ, ಅಂತಾರಾಷ್ಟ್ರೀಯ ಮಟ್ಟದಲ್ಲೂ ಇದ್ದಾರೆ ಎಂಬುದನ್ನು ಅಮೆರಿಕದ ನಿಕಟಪೂರ್ವ ಅಧ್ಯಕ್ಷ ಜೋ ಬೈಡೆನ್ ಜಗಜ್ಜಾಹೀರು ಮಾಡಿದ್ದಾರೆ. ಎಲ್ಲರಂತೆಯೇ ಅಧಿಕಾರಾವಧಿಯ ಕೊನೆಯ ದಿನಗಳಲ್ಲಿ ಅವರಿಗೂ 'ಸರಕಾರದ ಕೆಲಸ, ದೇವರ ಕೆಲಸ' ಎಂಬುದು ಮನದಟ್ಟಾಗಿರಬೇಕು, ಪಾಪ!

ಭಾರತ ಮತ್ತು ಅಮೆರಿಕದ ನಡುವಿನ ಸಂಬಂಧವು 'ಅತ್ಯಾಪ್ತ' ಎನಿಸುವ ಛಾಯೆಯನ್ನು ಹೊಂದಿದ್ದರೂ, ಇದಕ್ಕೆ ಹಲವು ಮಜಲುಗಳಿವೆ, ಸಂಕೀರ್ಣತೆಗಳಿವೆ ಎಂಬುದನ್ನು ನಾವು ಮರೆಯಬಾರದು. ಸ್ವಂತ ಶಕ್ತಿ-ಸಾಮರ್ಥ್ಯದಿಂದಾಗಿ ಜಗತ್ತಿನ ಪ್ರಬಲ ರಾಷ್ಟ್ರಗಳಲ್ಲೊಂದಾಗಿ ಹೊಮ್ಮಿರುವ ಭಾರತವು, ತನ್ನ ಅಲಿಪ್ತನೀತಿಯ ಬಿಗಿಯನ್ನು ಸಡಿಲಿಸುತ್ತಿದ್ದರೂ, ಯಾರನ್ನು ಆಪ್ತವಾಗಿ ಅಪ್ಪಿಕೊಂಡಿದೆ ಎಂಬ ಗುಟ್ಟು ಬಿಟ್ಟುಕೊಡುತ್ತಿಲ್ಲ!

ಅಮೆರಿಕ ಹಿಂದಿನಿಂದಲೂ ವ್ಯಾಪಾರಿ ಮನೋಭಾವದ ಮೂಲಕ ಲಾಭ ಪಡೆಯುತ್ತಾ, ಜಗದಗಲ ತನ್ನ ಪ್ರಾಬಲ್ಯ ಹೆಚ್ಚಿಸಿಕೊಳ್ಳಲು ಮತ್ತು ಇತ್ತೀಚೆಗೆ ಅದನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿರುವ ಸ್ವಘೋಷಿತ ದೊಡ್ಡಣ್ಣ! ವಲಸಿಗರು ಮತ್ತು ವಲಸೆಯ ಬುನಾದಿಯಿಂದಲೇ ಬೆಳೆದು ನಿಂತ ಅಮೆರಿಕದಲ್ಲಿ, ಭಾರತೀಯರು ಮತ್ತು ಭಾರತ ಮೂಲದ ವಲಸಿಗರ ಸಂಖ್ಯೆ ಗಣನೀಯವಾಗಿದೆ. ಒಂದು ಅಂದಾಜಿನ ಪ್ರಕಾರ, 55 ಲಕ್ಷ ಭಾರತೀಯ ಮೂಲದವರು ಅಮೆರಿಕದಲ್ಲಿದ್ದಾರೆ. ಪ್ರಾಯಶಃ, ಮೆಕ್ಸಿಕನ್ ಮೂಲದ ಅಮೆರಿಕ ನಿವಾಸಿಗಳ ಪ್ರಮಾಣ ಮೊದಲನೇ ಸ್ಥಾನದಲ್ಲಿದ್ದರೆ, ಎರಡನೇ ಸ್ಥಾನದಲ್ಲಿರುವುದು ಅಮೆರಿಕದಲ್ಲಿರುವ ಭಾರತೀಯರು. ಇವರ ಪೈಕಿ ಶೇ.48ರಷ್ಟು ಮಂದಿ ಮಾತ್ರವೇ ಅಮೆರಿಕದ ಪೌರತ್ವವನ್ನು ಪಡೆದುಕೊಂಡವರು. ಉಳಿದವರು ಬಹುತೇಕವಾಗಿ ಉದ್ಯೋಗ ವೀಸಾ ಆಧಾರದಲ್ಲಿ ಅಮೆರಿಕದಲ್ಲಿ ತತ್ಕಾಲದ ಬದುಕು ಕಟ್ಟಿಕೊಳ್ಳುತ್ತಿರುವ ಕುಶಲ ವಲಸಿಗರು. ಇವರಿಗೂ ಪೌರತ್ವ ಪಡೆಯುವ ಮಾರ್ಗಗಳಿವೆಯಾದರೂ, ಅದು ಕ್ಷಿಪ್ರವಾಗಿ ತಲುಪಬಲ್ಲ ಗಮ್ಯವಲ್ಲ. ಅಮೆರಿಕದಲ್ಲಿರುವ ಅಕ್ರಮ ವಲಸಿಗರಲ್ಲಿ ಸುಮಾರು 3.75 ಲಕ್ಷದಷ್ಟು (ಅಂದರೆ ಶೇ.3ರಷ್ಟು) ಭಾರತೀಯರು ಎಂಬುದು ಕೂಡ ಅಚ್ಚರಿಯ ವಿಷಯ. ಹುಟ್ಟಿನಿಂದ ಪೌರತ್ವ ಕೊಡುವ ಪ್ರಪಂಚದ ಸುಮಾರು 33 ದೇಶಗಳಲ್ಲಿ ಅಮೆರಿಕವೂ ಒಂದು. ಈ ಹಕ್ಕು ಅಕ್ರಮ ವಲಸಿಗರ ಮಕ್ಕಳಿಗೂ ಲಭ್ಯ. ಹಾಗಾಗಿ, ಉದ್ಯೋಗ ನಿಮಿತ್ತ ಅಮೆರಿಕದಲ್ಲಿರುವ ವಲಸಿಗರನ್ನು ಬಿಡಿ, ಅಕ್ರಮ ವಲಸಿಗರೂ ಇಲ್ಲಿ ಹೆತ್ತು, ತಮ್ಮ ಮಕ್ಕಳಿಗೆ ಅಮೆರಿಕದ ಪೌರತ್ವ ಕೊಡಿಸಿ, ತನ್ಮೂಲಕ ಮುಂದೊಮ್ಮೆ ತಾವು ಅಮೆರಿಕನ್ನರಾಗುವ ಕನಸನ್ನು ನನಸು ಮಾಡಿಕೊಳ್ಳುವ ತವಕದಲ್ಲಿಯೇ ಬರುತ್ತಾರೆಂಬುದು ಬಹುಪಾಲು ನಿಜ. ಅದಕ್ಕಾಗಿಯೇ ಅಮೆರಿಕ ಸೇರಿಕೊಳ್ಳುವುದಕ್ಕೆ 'ಜನನ ಪ್ರವಾಸೋದ್ಯಮ' (ಬರ್ತ್ ಟೂರಿಸಂ) ಎಂದು ಕೂಡ ಹೇಳಲಾಗುತ್ತದೆ. ಈ ಬಾರಿಯ ಚುನಾವಣೆಯಲ್ಲಿ ಅಕ್ರಮ ವಲಸೆ ತಡೆದು, ದೇಶವನ್ನು ಸುಭದ್ರ-ಸುರಕ್ಷಿತವಾಗಿಸುತ್ತೇವೆ ಎಂಬ ಆಶ್ವಾಸನೆಗಳೊಂದಿಗೆ ಚುನಾವಣೆ ಎದುರಿಸಿದ್ದ ಟ್ರಂಪ್, ಗದ್ದುಗೆ ಏರುತ್ತಲೇ ಹೊರಡಿಸಿದ ಅಧ್ಯಕ್ಷೀಯ ಆದೇಶಗಳಲ್ಲೊಂದು- 'ಅಮೆರಿಕ ಪೌರತ್ವದ ಅರ್ಥ ಮತ್ತು ಮೌಲ್ಯವರ್ಧನೆಯ' ಆದೇಶ. ಇದರಲ್ಲಿ, ಜನನದಿಂದ ಅಮೆರಿಕದ ಪೌರತ್ವ ಪಡೆದುಕೊಳ್ಳುವ ಅವಕಾಶವನ್ನೇ ಟ್ರಂಪ್ ಇಲ್ಲವಾಗಿಸಿದ್ದಾರೆ. ಫೆಬ್ರವರಿ 20ರಿಂದ ಅನ್ವಯವಾಗಲಿರುವ ಈ ಆದೇಶವನ್ನು ಪ್ರಶ್ನಿಸಿ ಈಗಾಗಲೇ ಸುಮಾರು 22 ರಾಜ್ಯಗಳಲ್ಲಿ ಮೊಕದ್ದಮೆ ಹೂಡಲಾಗಿದೆ. ಪ್ರಸ್ತುತ ಸಿಯಾಟಲ್ ನ್ಯಾಯಾಲಯವೊಂದರಲ್ಲಿ ತಾತ್ಕಾಲಿಕ ತಡೆಯಾಜ್ಞೆಯೂ ದೊರಕಿದೆ. ಇದು ಭಾರತೀಯ ಮೂಲದ ಕ್ರಮಬದ್ಧ ವಲಸಿಗರ ವಲಯದಲ್ಲಿ ಆತಂಕ ಮೂಡಿಸಿದೆ. ಆದೇಶ ಜಾರಿಗೊಂಡರೆ ಉಂಟಾಗಬಹುದಾದ ಹಲವು ಕೊರತೆಗಳ ಕುರಿತು ವ್ಯಾಪಕ ಚರ್ಚೆಗಳು ನಡೆಯುತ್ತಿವೆ. 'ಇದು ಭಾರತೀಯರಿಗೆ ಟ್ರಂಪ್ ನೀಡಿದ ಮರ್ಮಾಘಾತ' ಎಂಬರ್ಥದ ವಿಶ್ಲೇಷಣೆಗಳು ಭಾರತೀಯ ಮಾಧ್ಯಮಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಅಡ್ಡಿ-ಆತಂಕಗಳನ್ನು ಬದಿಗಿಟ್ಟು ಆದೇಶದ ಮೂಲದತ್ತ ಇಣುಕಿದರೆ, ಕಳೆದ ಬಾರಿಯ ಟ್ರಂಪ್ ಆಡಳಿತದಲ್ಲಿ ಅಕ್ರಮ ವಲಸಿಗರನ್ನು ಹೊರದಬ್ಬುವ ಪ್ರಯತ್ನಗಳಿಗಾದ ಹಿನ್ನಡೆಯಿಂದ ತಪ್ಪಿಸಿಕೊಳ್ಳುವ ಯತ್ನವಿದು ಎನಿಸುತ್ತಿದೆ. ಕಳೆದ ಬಾರಿ ಟ್ರಂಪ್ ಅಮೆರಿಕದ ಅಧ್ಯಕ್ಷರಾಗಿದ್ದಾಗಲೂ ವಲಸೆ ನೀತಿಯನ್ನು ಬಿಗಿಪಡಿಸಿ, ಅಕ್ರಮ ವಲಸಿಗರನ್ನು ಹೊರದಬ್ಬುವ ಪ್ರಯತ್ನ ಮಾಡಿದ್ದರು. ಅಕ್ರಮ ವಲಸಿಗರಾಗಿದ್ದರೂ ಇಲ್ಲಿ ಜನಿಸಿದ ಮಗುವಿನ ಪೋಷಕರಾಗಿದ್ದರಿಂದ ಅವರನ್ನು ದೇಶದಿಂದಾಚೆ ಕಳಿಸಿದರೆ ಮಕ್ಕಳನ್ನು ಪೋಷಕರಿಂದ ಬೇರ್ಪಡಿಸಿದಂತಾಗುತ್ತದೆ ಎಂಬ ಅಂಶವು ಅಂದಿನ ಪ್ರಯತ್ನಕ್ಕೆ ತೊಡಕಾಗಿತ್ತು. ಇಂಥ ಊರುಗೋಲಿನಿಂದ ಅಕ್ರಮ ವಲಸಿಗರನ್ನು ಹೊರದಬ್ಬಲಾಗದ ಪರಿಸ್ಥಿತಿ ಬರದಂತೆ ತಡೆಯಲು ಟ್ರಂಪ್ ಆಡಳಿತ ಈ ಹಾದಿ ಹಿಡಿದಿರಬೇಕು. ವಿಧಿಬದ್ಧ ಕಾಗದಪತ್ರಗಳಿಲ್ಲದಿದ್ದರೂ ಅಮೆರಿಕ ಬಿಡಲೊಪ್ಪದ, ಅಮೆರಿಕದತ್ತ ನುಸುಳಲಿರುವ ವಲಸಿಗರನ್ನು ನಿರಾಸೆಗೊಳಿಸಿ ಬಾರದಂತೆ ತಡೆಯುವ ಉಪಾಯವಿರಬೇಕು ಇದು. ವಿಧಿಬದ್ಧ ವಲಸಿಗರಿಗೂ ಸಮಸ್ಯೆ ಉಂಟಾದರೂ, ಗುರಿ ಅವರಾಗಿರಲಿಕ್ಕಿಲ್ಲ ಎಂಬುದೊಂದು ವಾದವಿದೆ. ಹಾಗಿದ್ದರೆ ಅಕ್ರಮ ವಲಸಿಗರಿಗೆ ಮಾತ್ರ ಇದನ್ನು 'ಲಾಗು' ಮಾಡಬಹುದಿತ್ತಲ್ಲ ಎನಿಸುವುದು ಸಹಜ. ಹೇಗೆ ಮಾಡಿದರೂ ನ್ಯಾಯಾಲಯದ ಮೆಟ್ಟಿಲು ಏರುವ ನಿರೀಕ್ಷೆ ಇದ್ದುದರಿಂದಲೇ, ಸಾರಾಸಗಟಾಗಿ ಜನ್ಮದತ್ತ ಪೌರತ್ವವನ್ನು ತೊಡೆದುಹಾಕುವ ಪ್ರಯತ್ನ ಮಾಡಲಾಗಿದೆ ಎಂಬ ಮಾತುಗಳಿವೆ. ಅದಾಗಲೇ ವಿವಿಧ ರಾಜ್ಯಗಳ ನ್ಯಾಯಾಲಯಗಳಲ್ಲಿ ಪ್ರಶ್ನಿಸಲ್ಪಟ್ಟ ಆದೇಶವು ಸುಪ್ರೀಂಕೋರ್ಟಿನ ಮೆಟ್ಟಿಲೇರುವುದು ಬಹುತೇಕ ಖಚಿತ. ವಾದ-ಪ್ರತಿವಾದಗಳು ನಡೆದು, 'ಆದೇಶವೇನಿದ್ದರೂ ವಿಧಿಬದ್ಧವಲ್ಲದ ಅಕ್ರಮ ವಲಸಿಗರಿಗೆ ಸೀಮಿತ' ಎನ್ನುವಂಥ ತೀರ್ಪು ಬರುವ ಲಕ್ಷಣಗಳಿವೆ. ಒಂದು ವರ್ಗಕ್ಕಷ್ಟೇ ಅನ್ವಯವಾಗುವ ಆದೇಶವಾಗಿದ್ದರೆ, ನ್ಯಾಯಾಲಯದಲ್ಲಿ ಹಿನ್ನಡೆ ಕಂಡು ಮೂಲೆಗುಂಪಾಗುವ ಬದಲು, ಬಯಸಿದ್ದಕ್ಕಿಂತ ಹೆಚ್ಚಿನ ವ್ಯಾಪ್ತಿಯ ಆದೇಶ ಹೊರಡಿಸಿ, ಅಕ್ರಮ ವಲಸಿಗರಿಗೆ ಮಾತ್ರ ಅನ್ವಯಗೊಳ್ಳಬಲ್ಲ ಪರಿಮಿತ ಆದೇಶಗಳನ್ನು ಕೋರ್ಟಿನ ಮೂಲಕವೇ ಜಾರಿಗೊಳಿಸುವ ಚಾಕಚಕ್ಯತೆಯನ್ನು ಕೂಡ ಅಲ್ಲಗಳೆಯುವಂತಿಲ್ಲ.

ಹೇಳಿ ಕೇಳಿ ವ್ಯಾವಹಾರಿಕ ನೈಪುಣ್ಯ, ಚರ್ಚೆ, ಸಂಧಾನಗಳ ಮೂಲಕ ತಮಗೆ ಬೇಕಾದ್ದನ್ನು ಗಳಿಸಿಕೊಳ್ಳುವ ಚಾಕಚಕ್ಯತೆ ಪ್ರದರ್ಶಿಸಿದಂಥ ಅಸಾಮಾನ್ಯ ವ್ಯಕ್ತಿ ಟ್ರಂಪ್! ಕಳೆದ ಬಾರಿಯೂ ತಮ್ಮ ಆಡಳಿತಕ್ಕಾದ ತೊಡಕುಗಳನ್ನು ನೆನಪಿಟ್ಟು, ಪುನಃ ಅಲ್ಲಿಯೇ ಎಡವದಂತೆ ನೋಡಿಕೊಳ್ಳುವ ಎಚ್ಚರದಲ್ಲಿ ಅವರಿದ್ದಂತಿದೆ. ನೇರಾನೇರ ಮಾತುಗಳಿಂದ ತಮಾಷೆಗೀಡಾದರೂ ತಲೆಕೆಡಿಸಿಕೊಳ್ಳದೆ, 'ಆನೆ ನಡೆದದ್ದೇ ದಾರಿ' ಎಂಬಂತೆ ಮುನ್ನುಗ್ಗುವ ಟ್ರಂಪ್ ಪ್ರವೃತ್ತಿಯು ಅಧಿಕಾರಿಶಾಹಿಯನ್ನೂ, ರಾಜಕೀಯ ವಲಯವನ್ನೂ, ಉದ್ಯಮ ಜಗತ್ತನ್ನೂ ತಳಮಳಗೊಳಿಸಿದೆ. ಈ ನಡುವೆ, 'ಟ್ರಂಪ್ ಅವರು ಮೋದಿಯವರ ಆತ್ಮೀಯ, ಭಾರತದ ಸ್ನೇಹಿತ; ಹೀಗಿದ್ದೂ ಇದೇಕೆ?' ಎಂಬ ಚರ್ಚೆಗಳಿವೆ. ಅದೇನೇ ಇದ್ದರೂ, ತಮ್ಮ ಮತ್ತು ಅಮೆರಿಕದ ಹಿತಾಸಕ್ತಿಯೇ ಟ್ರಂಪ್‌ರ ಆದ್ಯತೆ. ಇವೆರಡರಲ್ಲಿ ಯಾವುದು ಮೊದಲು, ಯಾವುದು ನಂತರದ್ದು? ಎಂಬ ಗೊಂದಲಗಳಿದ್ದರೂ, ಅವರ ಬಾಕಿ ಎಲ್ಲ ಸ್ನೇಹ-ಸಂಬಂಧಗಳು ತದನಂತರದ್ದು!

'ಏಲಿಯನ್ಸ್' (ಅನ್ಯಗ್ರಹ ಜೀವಿಗಳು) ಎಂಬುದು ಅಮೆರಿಕದ ವಲಸಿಗರಿಗೆ ಬಳಸುವ ಶಬ್ದ! ಅಮೆರಿಕ ಮೂಲದವರಲ್ಲದ ಎಲ್ಲರೂ ಇವರಿಗೆ ಅನ್ಯಗ್ರಹ ಜೀವಿಗಳೇ! ಇದು 'ವಿಧಿಬದ್ಧ' ಮತ್ತು 'ಅಕ್ರಮ' ವಲಸಿಗರಿಬ್ಬರಿಗೂ ಅನ್ವಯಗೊಳ್ಳುವ ಪರಿಭಾಷೆ! ಹೀಗಿರುವಾಗ, ಅನ್ಯಗ್ರಹದ ಮಿತ್ರತ್ವದ ಚಿಂತೆ ಅವರಿಗೇಕೆ ಇರಬೇಕು ಹೇಳಿ? ವ್ಯಾಪಾರ, ಸ್ವಹಿತಾಸಕ್ತಿಗೆ ಮೀರಿದ ಆಸಕ್ತಿ ಅಮೆರಿಕಕ್ಕಿಲ್ಲ. ಸದ್ಯಕ್ಕೆ ಭಾರತವೂ ಬಲಶಾಲಿ ರಾಷ್ಟ್ರವಾಗಿ ನಿಂತಿರುವುದರಿಂದ, ಭಾರತ ಮತ್ತು ಭಾರತೀಯರನ್ನು ಅಮೆರಿಕ ಅಧ್ಯಕ್ಷರು ಸಂಪೂರ್ಣವಾಗಿ ಕಡೆಗಣಿಸುವಂತಿಲ್ಲ. ಉಪಯೋಗವಿದ್ದರೆ ಮಣೆ ಹಾಕುತ್ತಾರೆ, ಇಲ್ಲದಿದ್ದರೆ ಕಡೆಗಣಿಸುತ್ತಾರೆ. ಅವರದ್ದು ಏನಿದ್ದರೂ 'ಅಮೆರಿಕ ಫಸ್ಟ್... ಬಾಕಿ ಎಲ್ಲ ನೆಕ್ಸ್ಟ್'....

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 263

ಸಮಾಚಾರ ಸಣ್ಣದಲ್ಲ

ಸುಡಾನ್ ಆಸ್ಪತ್ರೆಗೆ ದಾಳಿ: 70 ಸಾವು

ಖಾರ್ಟೂಮ್: ಸುಡಾನ್ ದೇಶದ ಎಲ್ ಫಾಶರ್ ನಗರದಲ್ಲಿನ ಸೇವಾಕಾರ್ಯ ನಿರತ ಏಕೈಕ ಆಸ್ಪತ್ರೆ ಮೇಲೆ ಬಂಡುಕೋರರು ದಾಳಿ ನಡೆಸಿದ್ದು, ರೋಗಿಗಳು, ವೈದ್ಯಕೀಯ ಸಿಬ್ಬಂದಿ ಸೇರಿದಂತೆ 70 ಜನರು ಮೃತಪಟ್ಟಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ(ಡಬ್ಲ್ಯುಎಚ್) ಮುಖ್ಯಸ್ಥ ಟೆಡ್ರೋಸ್ ಅಧನೋಂ ಘೆಬ್ರೆಯೆಸಿಸ್ ತಿಳಿಸಿದ್ದಾರೆ. ಸೌದಿ ಟೀಚಿಂಗ್ ಮೆಟರ್ನಲ್ ಆಸ್ಪತ್ರೆ ಮೇಲೆ ಬಂಡುಕೋರರ ಕ್ಷಿಪ್ರಪಡೆಗಳು ದಾಳಿ ನಡೆಸಿವೆ ಎಂದು ಸ್ಥಳೀಯ ಅಧಿಕಾರಿಗಳು ಆರೋಪಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಆಫ್ರಿಕನ್ ರಾಷ್ಟ್ರಗಳಲ್ಲಿನ ಅಂತಃಕಲಹ ಉಲ್ಬಣಗೊಂಡಿದ್ದು, ಈ ದಾಳಿ ಅದರ ಭಾಗವಾಗಿದೆ ಎನ್ನಲಾಗಿದೆ.

ವಿಜ್ಞಾನಿ ಮೋಹನ್‌ಗೆ ಎಲ್‌ಪಿಎಸ್‌ಸಿ ಸಾರಥ್ಯ

ಶ್ರೀಹರಿಕೋಟ: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ(ಇಸ್ರೊ) ಪ್ರಮುಖ

ಅಂಗಸಂಸ್ಥೆ 'ಲಿಕ್ವಿಡ್ ಪ್ರೊಪಲ್ಷನ್ ಸಿಸ್ಟಂ ಸೆಂಟರ್' (ಎಲ್‌ಪಿಎಸ್‌ಸಿ) ನೂತನ ನಿರ್ದೇಶಕರಾಗಿ ಹಿರಿಯ ವಿಜ್ಞಾನಿ ಎಂ. ಮೋಹನ್ ಅವರನ್ನು ನೇಮಕಗೊಳಿಸಿ ಭಾನುವಾರ ಆದೇಶ ಹೊರಡಿಸಲಾಗಿದೆ. ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಈ ಆದೇಶ ಹೊರಡಿಸಿದ್ದಾರೆ. ಇದಕ್ಕೂ ಮುನ್ನ ನಾರಾಯಣನ್ ಎಲ್‌ಪಿಎಸ್‌ಸಿ ನಿರ್ದೇಶಕರಾಗಿದ್ದರು. ಅವರು ಇಸ್ರೋ ನಿರ್ದೇಶಕರಾದ ಬಳಿಕ ಆ ಹುದ್ದೆ ಖಾಲಿಯಾಗಿತ್ತು. ಕೇರಳದ ಅಲಪ್ಪುಳ ಮೂಲದವರಾದ ಮೋಹನ್, 20 ವರ್ಷಗಳಿಗೂ ಹೆಚ್ಚು ಸಮಯದಿಂದ ಇಸ್ರೊದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಕುಡುಕ ಪತಿಯರ ಬಿಟ್ಟು ಪತ್ನಿಯರಿಬ್ಬರ ವಿವಾಹ

ಗೋರಖ್‌ಪುರ: ಉತ್ತರ ಪ್ರದೇಶದ ಗೋರಖ್ ಪುರದಲ್ಲಿ ಪತಿಯರಿಬ್ಬರ ಕುಡಿತದ ಚಟಕ್ಕೆ ಬೇಸತ್ತ ಪತ್ನಿಯರಿಬ್ಬರು ಮನೆ ತೊರೆದು ಪರಸ್ಪರ ಮದುವೆಯಾಗಿದ್ದಾರೆ. ಚೋಟಿ ಕಾಶಿ ಎಂದೇ ಹೆಸರಾಗಿರುವ ಡಿಯೋರಿಯಾದ ಶಿವ ದೇವಾಲಯದಲ್ಲಿ ಕವಿತಾ ಮತ್ತು ಗುಂಜಾ ಅಲಿಯಾಸ್ ಬಬ್ಲು ವಿಧಿವತ್ತಾಗಿ ವಿವಾಹವಾಗಿದ್ದಾರೆ. ಇದಕ್ಕೂ ಮೊದಲು ಇನ್‌ಸ್ಟಾಗ್ರಾಮ್‌ನಲ್ಲಿ ಪರಿಚಯವಾಗಿದ್ದರು. ತಮ್ಮ ಗಂಡಂದಿರ ಮದ್ಯವ್ಯಸನ ಬಗ್ಗೆ ಹೇಳಿಕೊಂಡು ಕಷ್ಟ-ಸುಖ ಹಂಚಿಕೊಳ್ಳುತ್ತಿದ್ದರು. ಇಬ್ಬರದ್ದೂ ಒಂದೇ ಪರಿಸ್ಥಿತಿ ಇದ್ದ ಕಾರಣ ಬಲುಬೇಗ ಆಪ್ತ ಗೆಳತಿಯರಾದರು. ಕಡೆಗೆ ಇಬ್ಬರೂ ಮಾತನಾಡಿಕೊಂಡು ಮನೆ ತೊರೆದು ದೇಗುಲದಲ್ಲಿ ಮದುವೆಯಾದರು. ಗುಂಜಾ ವರನಾದರೆ ಕವಿತಾ ವಧುವಾದರು. ಪರಸ್ಪರ ಹಾರ ಬದಲಿಸಿಕೊಂಡು ಸಪ್ತಪದಿ ತುಳಿದರು. ಗಂಡಂದಿರ ಕುಡಿತ ಚಟ-ನಮ್ಮ ಮೇಲೆ ನಡೆಸುತ್ತಿದ್ದ ದೌರ್ಜನ್ಯದಿಂದ ಬೇಸರಗೊಂಡಿದ್ದೆವು. ಗೋರಖ್‌ಪುರ ತೊರೆದು ಬೇರೆ ಊರಿನಲ್ಲಿ ಮನೆ ಬಾಡಿಗೆಗೆ ಪಡೆದು ಹೊಸ ಜೀವನ ಕಟ್ಟಿಕೊಳ್ಳಬೇಕೆಂದು ನಿರ್ಧರಿಸಿದ್ದೇವೆ ಎಂದು ಗುಂಜಾ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ್ದಾರೆ.

ಏ.1ರಿಂದ ಏಕೀಕೃತ ಪಿಂಚಣಿ ಜಾರಿ

ದೆಹಲಿ: ಕೇಂದ್ರದ ಸರಕಾರಿ ನೌಕರರಿಗೆಂದು ರೂಪಿಸಿರುವ 'ಏಕೀಕೃತ ಪಿಂಚಣಿ ಯೋಜನೆ' (ಯುಪಿಎಸ್) ಏ.1ರಿಂದ ಜಾರಿಗೆ ಬರಲಿದೆ ಎಂದು ಕೇಂದ್ರ ಸರಕಾರದ ಪ್ರಕಟಣೆ ತಿಳಿಸಿದೆ. ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಯಡಿ ಕೇಂದ್ರ ಸರಕಾರದ ನೌಕರರಿಗೆ 'ಯುಪಿಎಸ್' ಮೌಲ್ಯವರ್ಧಿತ ಆಯ್ಕೆಯಾಗಿ ಪರಿಚಯಿಸಲು ಸರಕಾರ ಹಿಂದೆಯೇ ನಿರ್ಧರಿಸಿತ್ತು. ಈ ಸಂಬಂಧ ಶನಿವಾರ ಅಧಿಸೂಚನೆ ಹೊರಡಿಸಿದೆ. ಸರಕಾರಿ ಉದ್ಯೋಗಿ ಈಗಿನ ಅಥವಾ ಭವಿಷ್ಯದ ಏಕೀಕೃತ ಪಿಂಚಣಿ ಯೋಜನೆ ಆಯ್ಕೆ ಮಾಡಿಕೊಂಡರೆ ಮರಳಿ 'ಎನ್‌ಪಿಎಸ್' ಆಯ್ಕೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ ಎಂದೂ ಅಧಿಸೂಚನೆಯಲ್ಲಿ ಹೇಳಲಾಗಿದೆ. ರಾಜ್ಯ ಸರಕಾರಗಳು ಕೂಡ ಈ ಯೋಜನೆ ಜಾರಿಗೆ ತರಬಹುದು ಎಂದು ಸೂಚಿಸಿದೆ. 2024ರ ಮಾ.31ರಲ್ಲಿ ಇರುವಂತೆ ದೇಶದಲ್ಲಿ 26 ಲಕ್ಷ ಕೇಂದ್ರ ಸರಕಾರದ ನೌಕರರಿದ್ದರೆ, ರಾಜ್ಯ ಸರಕಾರದ 66 ಲಕ್ಷ ನೌಕರರು ಎನ್‌ಪಿಎಸ್‌ಗೆ ಕೊಡುಗೆ ನೀಡುತ್ತಿದ್ದರು. ಎನ್‌ಪಿಎಸ್‌ನಡಿ 11.7 ಲಕ್ಷ ಕಾರ್ಪಸ್‌ನಲ್ಲಿ ರಾಜ್ಯ ಮತ್ತು ಕೇಂದ್ರ ಸರಕಾರದ ನೌಕರರು 9 ಲಕ್ಷ ಕೋಟಿ ರು. ಪಾಲು ಮೊತ್ತ ಹೊಂದಿದ್ದಾರೆ.

34 ಬೆಸ್ತರ ಬಂಧಿಸಿದ ಶ್ರೀಲಂಕಾ ನೌಕಪಡೆ

ರಾಮನಾಥಪುರ: ಅಂತಾರಾಷ್ಟ್ರೀಯ ಸಮುದ್ರ ಗಡಿರೇಖೆ ದಾಟಿ ಶ್ರೀಲಂಕಾ ಭಾಗದ ಕಡಲಿನಲ್ಲಿ ಮೀನುಗಾರಿಕೆ ನಡೆಸುತ್ತಿದ್ದ ಆರೋಪದಡಿ ತಮಿಳುನಾಡು ರಾಮನಾಥಪುರಂ ಜಿಲ್ಲೆಯ 34 ಭಾರತೀಯ ಮೀನುಗಾರರನ್ನು ಶ್ರೀಲಂಕಾ ನೌಕಾಪಡೆ ಭಾನುವಾರ ನಸುಕಿನಲ್ಲಿ ಬಂಧಿಸಿದೆ. ಅಲ್ಲದೇ 3 ಯಾಂತ್ರೀಕೃತ ಮೀನುಗಾರಿಕಾ ದೋಣಿಗಳನ್ನೂ ವಶಪಡಿಸಿಕೊಂಡಿದೆ. ಬಳಿಕ ಬಂಧಿತರನ್ನು ಲಂಕಾದ ದ್ವೀಪ ಪ್ರದೇಶ ಇರನತೀವುಗೆ ಕರೆದೊಯ್ದು, ಮುಂದಿನ ಕಾನೂನು ಕ್ರಮಗಳಿಗಾಗಿ ಕಿಲಿನೊಚ್ಚಿಯ ಸಹಾಯಕ ಮೀನುಗಾರಿಕೆ ನಿರ್ದೇಶನಾಲಯಕ್ಕೆ ಹಸ್ತಾಂತರಿಸಲಾಗಿದೆ. ತಮಿಳುನಾಡಿನ ರಾಮೇಶ್ವರಂ ತೀರದಿಂದ 400ಕ್ಕೂ ಹೆಚ್ಚು ಮೀನುಗಾರಿಕಾ ದೋಣಿಗಳು ಶನಿವಾರ ಸಮುದ್ರಕ್ಕೆ ಇಳಿದಿದ್ದು, ಅಂತಾರಾಷ್ಟ್ರೀಯ ಸಮುದ್ರ ಗಡಿ ರೇಖೆ ಬಳಿ ಮೀನುಗಾರಿಕೆ ನಡೆಸುತ್ತಿದ್ದವು. ಆಗ 3 ದೋಣಿಗಳು ಲಂಕಾ ಕಡಲಭಾಗ ಪ್ರವೇಶಿಸಿವೆ ಎನ್ನಲಾಗಿದೆ. 2025ರಲ್ಲಿ ಈವರೆಗೂ ಭಾರತದವರ 6 ಮೀನುಗಾರಿಕೆ ದೋಣಿಗಳನ್ನು ವಶಕ್ಕೆ ಪಡೆದಿರುವ ಲಂಕಾ ನೌಕಾಪಡೆ ಒಟ್ಟು 52 ತಮಿಳುನಾಡಿನ ಮೀನುಗಾರರನ್ನು ಬಂಧಿಸಿದೆ.

ದೆಹಲಿಯ ಕರ್ತವ್ಯಪಥದಲ್ಲಿ 76ನೇ ಗಣರಾಜ್ಯೋತ್ಸವದ ಭಾರೀ ಸಂಭ್ರಮ । ಮೂರೂ ಸೇನಾಪಡೆಗಳ ಶಕ್ತಿ-ಸಾಮರ್ಥ್ಯ, ಕೌಶಲ, ಸಮರಾಸ್ತ್ರ ಅನಾವರಣ
ಬ್ರಹ್ಮೋಸ್, ಪ್ರಳಯ ಸೇರಿದಂತೆ ಅತ್ಯಂತ ಶಕ್ತಿಶಾಲಿ ಕ್ಷಿಪಣಿಗಳ ಪ್ರದರ್ಶನ । ಕಣ್‌ಮನ ಸೆಳೆದ ಸೇನಾಪಡೆಗಳ ಪರೇಡ್, ಚಿತ್ತಾಕರ್ಷಕ ವೈಮಾನಿಕ ಸಾಹಸ
17 ರಾಜ್ಯ, ಕೇಂದ್ರಾಡಳಿತ, ಸಚಿವಾಲಯಗಳ ವರ್ಣಮಯ 31 ಸ್ಥಬ್ಧಚಿತ್ರ। ಗಮನ ಸೆಳೆದ ಇಂಡೋನೇಷ್ಯಾ ಸೇನಾತುಕಡಿ ಪರೇಡ್, ಬ್ಯಾಂಡ್ ವಾದನ

ಸಶಕ್ತ್ ಔರ್ ಸುರಕ್ಷಿತ್ ಭಾರತ್ ಶಕ್ತಿ ಪ್ರದರ್ಶನ

ರಾಷ್ಟ್ರಪತಿ ದ್ರೌಪದಿ ಮುರ್ಮು, ಮುಖ್ಯ ಅತಿಥಿ ಇಂಡೋನೇಷ್ಯಾ ಅಧ್ಯಕ್ಷ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ದಂಪತಿ, ಪ್ರಧಾನಿ ನರೇಂದ್ರ ಮೋದಿ

76ನೇ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಗಮನ ಸೆಳೆದ ಸಂವಿಧಾನದ ಮಹತ್ವ ಸಾರುವ ಸ್ತಬ್ಧಚಿತ್ರ

ಭಾರತೀಯ ಸೇನೆಯ ಕ್ಷಿಪಣಿ ದಾಳಿ ಸಮರಾಸ್ತ್ರ

ದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯ ಕರ್ತವ್ಯಪಥದಲ್ಲಿ 76ನೇ ಗಣರಾಜ್ಯೋತ್ಸವದ ಸಂಭ್ರಮಾಚರಣೆಯ ದಿನವಾದ ಭಾನುವಾರ ಬೆಳಗ್ಗೆ ಭಾರತದ ಮೂರೂ ಸೇನಾಪಡೆಗಳ ಶಕ್ತಿಯ ಅದ್ಭುತ ಪ್ರದರ್ಶನವಾಯಿತು. ಮೂರೂ ಸೇನಾಪಡೆಗಳನ್ನು ಪ್ರತಿನಿಧಿಸಿದ ಸ್ತಬ್ಧಚಿತ್ರಗಳಲ್ಲಿ 'ಸಶಕ್ತ್ ಔರ್ ಸುರಕ್ಷಿತ್ ಭಾರತ್' (ಬಲಿಷ್ಠ ಮತ್ತು ಸುರಕ್ಷಿತ ಭಾರತ) ಸಂದೇಶವನ್ನು ವಿಶ್ವಕ್ಕೆ ರವಾನಿಸಲಾಯಿತು.

ಕರ್ತವ್ಯಪಥದಲ್ಲಿ ಭಾನುವಾರ ಬೆಳಗ್ಗೆ 10.30ರಿಂದ ಅಪರಾಹ್ನದವರೆಗೂ ಪ್ರದರ್ಶನಗೊಂಡಿದ್ದು ಭಾರತೀಯ ಸೇನಾಪಡೆಗಳ ಪ್ರಾತಿನಿಧಿಕ ಸಣ್ಣ ತುಣಕಷ್ಟೇ ಆಗಿದ್ದರೂ ಭಾರತೀಯ ಸೇನೆ, ವಾಯುಪಡೆ, ನೌಕಾದಳದ ಒಟ್ಟಾರೆ ಶಕ್ತಿ-ಸಾಮರ್ಥ್ಯದ ಸ್ಪಷ್ಟಚಿತ್ರಣವನ್ನು ನೀಡುವಂತಹುದಾಗಿತ್ತು. ಅರ್ಜುನ್ ಸಮರ ಟ್ಯಾಂಕ್, ತೇಜಸ್ ಯುದ್ಧ ವಿಮಾನ, ಅತ್ಯಾಧುನಿಕ ಲಘು ಹೆಲಿಕಾಪ್ಟರ್, ಬ್ಯಾಲಿಸ್ಟಿಕ್ ಮಿಸೈಲ್, ಅತ್ಯಂತ ಶಕ್ತಿಶಾಲಿ ಕ್ಷಿಪಣಿಗಳು ಕರ್ತವ್ಯಪಥದಲ್ಲಿ ಪ್ರದರ್ಶನಗೊಂಡು ಜನಮನ ಸೂರೆಗೊಂಡವು.

ಮಹಿಳಾ ಸಿಆರ್‌ಪಿಎಫ್

ಪರೇಡ್‌ನಲ್ಲಿ ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) 148 ಸದಸ್ಯೆಯರ ಅರೆಸೇನಾಪಡೆ ಮಹಿಳಾ ತುಕಡಿಯ ಹೂಂಕಾರ, ಬೂಟುಗಾಲಿನ ಹೆಜ್ಜೆಯ ಸದ್ದು ಪ್ರೇಕ್ಷಕರಿಂದ ಚಪ್ಪಾಳೆ, ಜೈಕಾರ ಹೊರಡುವಂತೆ ಮಾಡಿತು. ಸಹಾಯಕ ಕಮಾಂಡೆಂಟ್ ಐಶ್ವರ್ಯಾ ಜಾಯ್ ಎಂ. ನೇತೃತ್ವದಲ್ಲಿ ಅರೆಸೇನಾಪಡೆಯ ಮಹಿಳಾ ತುಕಡಿಯು ಶಿಸ್ತು ಮತ್ತು ಸಬಲೀಕರಣದ ಸಂದೇಶ ಸಾರಿತು.

ವೈಮಾನಿಕ ಪ್ರದರ್ಶನ: ಕರ್ತವ್ಯಪಥದಲ್ಲಿ ಭಾರತೀಯ ವಾಯುಪಡೆ-ನೌಕಾಪಡೆಯ 40 ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳು ಸೇರಿದಂತೆ ಬಹುಬಗೆಯ 'ಹಾರಾಟ-ಪಥ' ಸಂಚಲನ, ಪೈಲಟ್‌ಗಳ ಕೌಶಲ ಪ್ರದರ್ಶನ ಪ್ರೇಕ್ಷಕರನ್ನು ರೋಮಾಂಚನಗೊಳಿಸಿತು. 22 ಯುದ್ಧ ವಿಮಾನಗಳು, 11 ಪ್ರಯಾಣಿಕ ವಿಮಾನಗಳು ಮತ್ತು ಭಾರತೀಯ ವಾಯುಪಡೆಯ 7 ಹೆಲಿಕಾಪ್ಟರ್‌ಗಳು ಸಾಹಸ-ಕೌಶಲ ಪ್ರದರ್ಶನ ತೋರುವ ಮೂಲಕ ಪ್ರೇಕ್ಷಣ ಗಣ 'ವಾವ್' ಎನ್ನುವಂತೆ ಮಾಡಿದವು. ಫ್ರಾನ್ಸ್ ನಿರ್ಮಿತ ರಫೇಲ್ 6 ಯುದ್ಧ ವಿಮಾನಗಳು ಆಕಾಶದಲ್ಲಿ ಗರ್ಜಿಸುತ್ತಾ ಬಾಣದ ಆಕಾರದಲ್ಲಿ ಸಾಗಿಬಂದಾಗಲಂತೂ ಪ್ರೇಕ್ಷಕಗಣ ಕಣ್ಣೆವೆ ಇಕ್ಕದೇ ವೀಕ್ಷಿಸಿ ಹರ್ಷದ ಉದ್ಗಾರ ತೆಗೆಯಿತು.

ರಷ್ಯಾ ಸಹಭಾಗಿತ್ವದಲ್ಲಿ ಭಾರತದಲ್ಲೇ ನಿರ್ಮಾಣಗೊಂಡ ಸು-30 ಯುದ್ಧ ವಿಮಾನದ ಕೌಶಲ ಪ್ರದರ್ಶನವೂ ಜನಮನ ಸೆಳೆಯಿತು. ಜಾಗ್ವಾರ್, ಸಿ -130, ಸಿ -295, ಸಿ -17, ಎಡಬ್ಲ್ಯುಎಸಿಎಸ್, ಡಾರ್ನಿಯರ್-228, ಮತ್ತು ಆನ್-32 ವಿಮಾನಗಳು ಹಾಗೂ ಅಪಾಚೆ ಮತ್ತು ಮಿ -17 ಹೆಲಿಕಾಪ್ಟರ್‌ಗಳು ಆಕಾಶದಲ್ಲಿ ಕೌಶಲ ಪ್ರದರ್ಶಿಸಿದವು. ಧ್ವಜ್, ಅಜಯ್, ಸತ್ಲೆಜ್, ರಕ್ಷಕ, ಅರ್ಜನ್, ನೇತ್ರ, ಭೀಮ್, ಅಮೃತ್, ವಜ್ರಾಂಗ, ತ್ರಿಶೂಲ್ ಮತ್ತು ವಿಜಯ್ ಯುದ್ಧವಿಮಾನ-ಹೆಲಿಕಾಪ್ಟರ್‌ಗಳು ರೋಮಾಂಚನಕಾರಿ ಪ್ರದರ್ಶನ ನೀಡಿದವು. 130ಜೆ ಸೂಪರ್ ಹರ್ಕ್ಯುಲಸ್, ಸಿ-275, ಸಿ-17 ಗ್ಲೋಬ್ ಮಾಸ್ಟರ್, ಪಿ-8ಐ, ಮಿಗ್-29 ಮತ್ತು ಸುಖೋಯ್-30 ಮತ್ತಿತರ ವಿಮಾನಗಳಿಂದಲೂ ಆಕರ್ಷಕ ಪ್ರದರ್ಶನ ನಡೆಯಿತು.

ಫ್ಲೈಪಾಸ್ಟ್‌ನಲ್ಲಿ ವಾಯುಪಡೆ 40 ವಿಮಾನಗಳು ಮತ್ತು 3 ಡಾರ್ನಿಯರ್ ವಿಮಾನಗಳು ಭಾಗಿಯಾಗಿದ್ದವು. ಸಶಸ್ತ್ರ ಸೇನಾಪಡೆಗಳಲ್ಲಿ ಜಂಟಿ ಮತ್ತು ಏಕೀಕರಣ ಪರಿಕಲ್ಪನಾ ದೃಷ್ಟಿಕೋನ ಪ್ರದರ್ಶಿಸುವ ಮೂರೂ ಸೇನಾಪಡೆಗಳ ಸ್ತಬ್ಧಚಿತ್ರಗಳು, ಸೇನೆ, ನೌಕಾಪಡೆ ಮತ್ತು ವಾಯುಪಡೆಗಳ ನಡುವೆ ಸಂಪರ್ಕಜಾಲ ಮತ್ತು ಸಂವಹನವನ್ನು ಸುಗಮಗೊಳಿಸುವ ಜಂಟಿ ಕಾರ್ಯಾಚರಣೆಯನ್ನು ತೋರಿಸಿದವು.

ಖಂಡಾಂತರ ಕ್ಷಿಪಣಿಯಾದ ಪ್ರಳಯ್.

ರಾಷ್ಟ್ರಪತಿ ಮುರ್ಮು ಧ್ವಜಾರೋಹಣ

ದೆಹಲಿ: ದೆಹಲಿಯ ಕರ್ತವ್ಯಪಥದಲ್ಲಿ 76ನೇ ಗಣರಾಜ್ಯೋತ್ಸವದ ಸಂಭ್ರಮದ ನಡುವೆ ಮುಖ್ಯ ಅತಿಥಿ ಇಂಡೋನೇಷ್ಯಾ ಅಧ್ಯಕ್ಷ ಪ್ರಬೊವೊ ಸುಬಿಯಾಂಟೊ ಅವರ ಜತೆಗೂಡಿ ಸಾರೋಟಿನಲ್ಲಿ ಮೆರವಣಿಗೆಯಲ್ಲಿ ಸಾಗಿಬಂದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಮೊದಲಿಗೆ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು. ರಾಷ್ಟ್ರಪತಿಗಳಿಗೆ ಈ ಕಾರ್ಯದಲ್ಲಿ ಭಾರತೀಯ ನೌಕಾಪಡೆ ಅಧಿಕಾರಿ ಲೆಫ್ಟಿನೆಂಟ್ ಶುಭಂ ಕುಮಾರ್ ಮತ್ತು ಲೆಫ್ಟಿನೆಂಟ್ ಯೋಗಿತಾ ಸೈನಿ ನೆರವಾದರು. ಉಪ ರಾಷ್ಟ್ರಪತಿ ಜಗದೀಪ್ ಧನಕರ್, ಪ್ರಧಾನಿ ನರೇಂದ್ರ ಮೋದಿ ಸಾಥ್ ನೀಡಿದರು. ಧ್ವಜಾರೋಹಣದ ಬೆನ್ನಲ್ಲೇ ರಾಷ್ಟ್ರಪತಿಗಳಿಗೆ 21 ಕುಶಾಲು ತೋಪಿನ ಗೌರವ ಸಲ್ಲಿಸಲಾಯಿತು.

ಆ ಬಳಿಕ ಗಣರಾಜ್ಯೋತ್ಸವದ ಪರೇಡ್ ಆರಂಭವಾಯಿತು. ದೆಹಲಿ ಪ್ರದೇಶದ ಪರೇಡ್ ಕಮಾಂಡರ್ ಮತ್ತು ಜನರಲ್ ಆಫೀಸರ್ ಕಮಾಂಡಿಂಗ್ ಲೆಫ್ಟಿನೆಂಟ್ ಜನರಲ್ ಭಾವನೀಶ್ ಕುಮಾರ್ ಮೆರವಣಿಗೆ ನೇತೃತ್ವವಹಿಸಿದ್ದರು. ಪ್ರಧಾನ ಕಚೇರಿ ದೆಹಲಿ ಪ್ರದೇಶದ ಮುಖ್ಯಸ್ಥ ಮೇಜರ್ ಜನರಲ್ ಸುಮಿತ್ ಮೆಹ್ತಾ ಪರೇಡ್‌ನ 2ನೇ ಕಮಾಂಡ್ ಆಗಿದ್ದರು. ಪರಮವೀರ ಚಕ್ರ ಪುರಸ್ಕೃತ ಸುಬೇದಾರ್ ಮೇಜರ್(ಗೌರವ ಕ್ಯಾಪ್ಟನ್) ಯೋಗೇಂದ್ರ ಸಿಂಗ್ ಯಾದವ್ (ನಿವೃತ್ತ) ಮತ್ತು ಸುಬೇದಾರ್ ಮೇಜರ್ ಸಂಜಯ್ ಕುಮಾರ್ (ನಿವೃತ್ತ), ಮತ್ತು ಅಶೋಕ ಚಕ್ರ ವಿಜೇತ ಲೆಫ್ಟಿನೆಂಟ್ ಕರ್ನಲ್ ಜಸ್ ರಾಮ್ ಸಿಂಗ್ (ನಿವೃತ್ತ) ಮತಿತರರು ಪರೇಡ್ ಕಮಾಂಡರ್ ಜತೆ ಸಾಗಿದರು. ವಿವಿಧ ಕಲಾಪ್ರಕಾರಗಳು, ಸ್ತಬ್ಧಚಿತ್ರಗಳು, ಸೇನಾ ತುಕಡಿಗಳು, ಭದ್ರತಾ ಪಡೆಗಳ ವಿವಿಧ ವಿಭಾಗಗಳು ಮತ್ತು ಬ್ಯಾಂಡ್‌ಗಳ ಭವ್ಯ ಮೆರವಣಿಗೆ ಆರಂಭವಾಯಿತು. ಇಂಡೋನೇಷ್ಯಾದ ಸೇನಾತುಕಡಿ ಮತ್ತು ಬ್ಯಾಂಡ್ ತಂಡವೂ ಪರೇಡ್‌ನಲ್ಲಿ ಸಾಗಿ ಜನಮೆಚ್ಚುಗೆ ಗಳಿಸಿತು.

ಕರ್ತವ್ಯಪಥ ಎಂದು ಮರುನಾಮಕರಣಗೊಂಡ ಬಳಿಕ ಈ ಮಾರ್ಗದಲ್ಲಿ ಜರುಗುತ್ತಿರುವ 3ನೇ ಗಣರಾಜ್ಯೋತ್ಸವ ಪರೇಡ್ ಇದಾಗಿದೆ. ಈ ಬಾರಿಯ ಗಣರಾಜ್ಯೋತ್ಸವದಲ್ಲಿ 'ಜನ್ ಭಾಗಿದಾರಿ'(ಜನರ ಭಾಗವಹಿಸುವಿಕೆ) ವಿಷಯವನ್ನೊಳಗೊಂಡಿದೆ. ಹಾಗಾಗಿಯೇ 10 ಸಾವಿರಕ್ಕೂ ಅಧಿಕ ಜನಸಾಮಾನ್ಯರು ವಿಶೇಷ ಅತಿಥಿಗಳಾಗಿ ಆಗಮಿಸಿದ್ದಾರೆ.

ಸೇನಾ ಪರೇಡ್‌ನಲ್ಲಿ ಇಬ್ಬರು ಪರಮವೀರ ಚಕ್ರ ಪದಕ ಪುರಸ್ಕೃತರು, ಕಾರ್ಗಿಲ್ ಯುದ್ಧ ವೀರರು ಹಾಗೂ ಒಬ್ಬರು ಅಶೋಕ ಚಕ್ರ ಪುರಸ್ಕೃತರು ಭಾಗಿಯಾಗಿದ್ದಾರೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೇಂದ್ರ ಸಚಿವರುಗಳು, ಭಾರತ ಮತ್ತು ಇಂಡೋನೇಷ್ಯಾದ ಉನ್ನತ ಸೇನಾಧಿಕಾರಿಗಳು, ವಿದೇಶಿ ರಾಜತಾಂತ್ರಿಕರು ಮತ್ತು ಹಿರಿಯ ಅಧಿಕಾರಿಗಳು ಕರ್ತವ್ಯಪಥದ ಕಾರ್ಯಕ್ರಮದಲ್ಲಿದ್ದರು.

ಇಂಡಿಯ ಗೇಟ್‌ನಿಂದ ಕೆಂಪುಕೋಟೆವರೆಗೆ

ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾದ ಪಥಸಂಚಲನ ಬೆಳಗ್ಗೆ 10.30ಕ್ಕೆ ಆರಂಭವಾಯಿತು. ವಿಜಯ್ ಚೌಕ್‌ನಲ್ಲಿ ಪ್ರಾರಂಭವಾಗಿ ಕರ್ತವ್ಯ ಪಥದಲ್ಲಿ ಮುಂದುವರೆಯಿತು. ಬಳಿಕ ಇಂಡಿಯಾ ಗೇಟ್ ಮೂಲಕ ಸಾಗಿ ಕೆಂಪುಕೋಟೆಯಲ್ಲಿ ಮುಕ್ತಾಯಗೊಂಡಿತು. ಈ ಬಾರಿಯ 76ನೇ ಗಣರಾಜ್ಯೋತ್ಸವದ ಮುಖ್ಯ ಸಂದೇಶವೆಂದರೆ 'ಸ್ವರ್ಣಿಮ್ ಭಾರತ್: ವಿರಾಸತ್ ಔರ್ ವಿಕಾಸ್'(ಸುವರ್ಣ ಭಾರತ; ಪರಂಪರೆ ಮತ್ತು ಅಭಿವೃದ್ಧಿ) ಎಂಬುದಾಗಿದೆ. ಭಾರತೀಯ ಸಂವಿಧಾನ ಜಾರಿಗೆ ಬಂದ ನಂತರದ 75ನೇ ವರ್ಷದ ಆಚರಣೆ(ಅಮೃತ ಮಹೋತ್ಸವ) ಪೂರ್ಣಗೊಂಡ ನಿಮಿತ್ತ 'ಸ್ವರ್ಣಿಮ್ ಭಾರತ್: ವಿರಾಸತ್ ಔರ್ ವಿಕಾಸ್' ಎಂಬ ಪರಿಕಲ್ಪನೆ ನೀಡಲಾಗಿದೆ.

ಮಹಿಳಾ ಯೋಧರ ಆಕರ್ಷಕ ಪಥಸಂಚಲನ

ಮೋದಿ ವಿಶಿಷ್ಟ ಪೇಟ ಆಕರ್ಷಣೆ

ದೆಹಲಿ: ಪ್ರತಿ ವರ್ಷದಂತೆ ಈ ಬಾರಿಯೂ ಪ್ರಧಾನಿ ನರೇಂದ್ರ ಮೋದಿ ಅವರ ಪೇಟ ಜನರ, ಮಾಧ್ಯಮಗಳ ಕ್ಯಾಮೆರಾಗಳ ಗಮನಸೆಳೆದಿದೆ. ಪ್ರಧಾನಿ ಮೋದಿ ಈ ಬಾರಿ ಭಾರತದ ವೈವಿಧ್ಯತೆ ಸಂಕೇತಿಸುವ ಹಳದಿ ಮತ್ತು ಕೆಂಪು ಬಣ್ಣಗಳನ್ನು(ಕರ್ನಾಟಕ ಧ್ವಜದ ಬಣ್ಣಗಳು) ಒಳಗೊಂಡ ರಾಜಸ್ಥಾನಿ ಬಂಧನಿ ಪೇಟವನ್ನು ಬೆನ್ನಮೇಲೆ ಸೊಂಟದವರೆಗೂ ಇಳಿಬೀಳುವಂತೆ ಧರಿಸಿದ್ದಾರೆ. ಜತೆಗೆ ಬಿಳಿ ಕುರ್ತಾ, ಕಂದು ಬಣ್ಣದ ಜಾಕೆಟ್ ಮತ್ತು ಕಪ್ಪು ಬೂಟು ಧರಿಸಿದ್ದಾರೆ. ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವ ಸಂದರ್ಭಗಳಲ್ಲಿ ಪ್ರಧಾನಿ ಮೋದಿ ಉಡುಗೆ ವಿಭಿನ್ನವಾಗಿದ್ದು, ಎಲ್ಲರ ಗಮನ ಸೆಳೆಯುತ್ತದೆ.

ತ್ರಿಶೂಲ ಪ್ರದರ್ಶನ

ಗ್ರೂಪ್ ಕ್ಯಾಪ್ಟನ್, ಶೌರ್ಯಚಕ್ರ ಪದಕ ಪುರಸ್ಕೃತ ಮನೀಶ್ ಅರೋರಾ, ವಿಂಗ್ ಕಮಾಂಡರ್ ಕುನಾಲ್ ಕಾಮ್ರಾ, ಅಭಿಮನ್ಯು ಸಿಂಗ್ ಪೈಲಟ್‌ಗಳಾಗಿದ್ದ ಮೂರು ಸುಖೋಯ್-30 ಎಂಕೆಐ ಯುದ್ಧ ವಿಮಾನಗಳು ಆಕಾಶದಲ್ಲಿ ಹಾರಾಟ ನಡೆಸುತ್ತಲೇ ವಿಮಾನಗಳಿಂದ ಹೊಗೆಯುಗುಳುವಂತೆ ಮಾಡಿ 'ತ್ರಿಶೂಲ'ದ ಆಕಾರ ರಚನೆಯಾಗುವಂತೆ ಮಾಡಿದ್ದು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು. ಬಳಿಕ, ಗಂಟೆಗೆ 900 ಕಿಮೀ ವೇಗದಲ್ಲಿ ಸಾಗಿಬಂದ ರಫೇಲ್ 6 ಯುದ್ಧ ವಿಮಾನಗಳು ಗರ್ಜಿಸುತ್ತಾ ಸಾಗಿಬಂದಿದ್ದು ಪ್ರೇಕ್ಷಕಗಣದಲ್ಲಿ ರೋಮಾಂಚನ ಉಂಟು ಮಾಡಿತು.

ವಾಯುಪಡೆಯ ಶಕ್ತಿಶಾಲಿ ರಫೇಲ್ ಯುದ್ಧವಿಮಾನ

ಗೂಗಲ್ ಡೂಡಲ್

ಭಾರತದ 76ನೇ ಗಣರಾಜ್ಯೋತ್ಸವ ಸಂದರ್ಭಕ್ಕೆ ತಕ್ಕದಾಗಿಯೇ ಗೂಗಲ್ ಕಂಪನಿ ಈ ಬಾರಿ ವಿಶೇಷ ಡೂಡಲ್ ರಚಿಸಿದೆ. ಭಾರತದ ಜೀವ ವೈವಿಧ್ಯದ ಶ್ರೀಮಂತಿಕೆಯನ್ನು ಪ್ರದರ್ಶಿಸುವ ಪ್ರಯತ್ನ ಮಾಡಿದೆ. ವಿವಿಧತೆಯಲ್ಲಿ ಏಕತೆ ಸಾರಿದೆ. ಡೂಡಲ್‌ನಲ್ಲಿ ಲಡಾಕಿ ಉಡುಪಿನಲ್ಲಿರುವ ಹಿಮ ಚಿರತೆ, ಧೋತಿ-ಕುರ್ತಾ ಧರಿಸಿರುವ ಹುಲಿ ಮತ್ತು ಭಾರತದ ವಿವಿಧ ಭಾಗಗಳಿಗೆ ಸಂಬಂಧಿಸಿದ ಇತರ ವನ್ಯಜೀವಿಗಳ ಚಿತ್ರಗಳನ್ನು ಒಳಗೊಂಡಿದೆ. ಈ ಎಲ್ಲಾ ಪ್ರಾಣಿಗಳು ದೇಶದ ವಿವಿಧ ಪ್ರದೇಶಗಳನ್ನು ಮತ್ತು ಅದರ ವೈವಿಧ್ಯತೆಯನ್ನು ಪ್ರತಿನಿಧಿಸುತ್ತವೆ.

ಲಕ್ಕುಂಡಿ ಶಿಲ್ಪಕಲೆ: ಕರ್ನಾಟಕ ಸ್ತಬ್ಧ ಚಿತ್ರ

ಗಣರಾಜೋತ್ಸವ ಪರೇಡ್‌ನಲ್ಲಿ 17 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ವಿವಿಧ ಸಚಿವಾಲಯಗಳಿಂದ ಒಟ್ಟು 31 ಸ್ತಬ್ಧಚಿತ್ರಗಳು ಪ್ರದರ್ಶನಗೊಂಡಿವೆ. ಐತಿಹಾಸಿಕ ನಗರ ಲಕ್ಕುಂಡಿಯ ವೈಶಿಷ್ಟ್ಯಪೂರ್ಣ ಹಾಗೂ ಕಲಾತ್ಮಕ ದೇವಾಲಯಗಳನ್ನು ಈ ಬಾರಿಯ ಸ್ತಬ್ಧಚಿತ್ರದಲ್ಲಿ ಒಡಮೂಡಿಸಲಾಗಿದೆ. ಲಕ್ಕುಂಡಿಯ ಕಲಾವೈಭವದ ಪ್ರತಿಕೃತಿ ಕರ್ತವ್ಯಪಥದಲ್ಲಿ ಜನರ ಗಮನ ಸೆಳೆದಿದೆ.
ಅಹಿಂಸಾವಾದಿಯ ನೆಲೆವೀಡು ಲಕ್ಕುಂಡಿ ಶಿಲ್ಪಕಲೆಯ ತೊಟ್ಟಿಲೂ ಹೌದು. ಲಕ್ಕುಂಡಿಯಲ್ಲಿ ಶೈವ, ಜೈನ ಮತ್ತು ವೈಷ್ಣವ ದೇವಾಲಯಗಳ ಸಮ್ಮಿಲನವಿದೆ. ಕಲಾತ್ಮಕತೆಯಿಂದ ಕಂಗೊಳಿಸುವ ಇಲ್ಲಿನ ದೇವಾಲಯಗಳು ಸ್ತಬ್ಧಚಿತ್ರದಲ್ಲಿ ಯಥಾರೀತಿ ಮೂಡಿಬಂದಿವೆ.
ಸ್ತಬ್ಧಚಿತ್ರದ ಮುಂಭಾಗ ಶ್ರೀ ಮಹಾವೀರ ಅವರಿಗೆ ಅರ್ಪಿತವಾದ ಪುರಾತನ ದೇವಾಲಯವಾದ ಬ್ರಹ್ಮ ಜಿನ ದೇವಾಲಯದ ಬ್ರಹ್ಮ ಪ್ರತಿಮೆ ಪ್ರದರ್ಶಿಸಲಾಗಿದೆ. ನಂತರ, ಬ್ರಹ್ಮ ಜಿನ ದೇವಾಲಯದ ಬಯಲು ಕಂಬಗಳ ಮಂಟಪ ಸ್ತಬ್ಧಚಿತ್ರವೂ ಇದ್ದಿತು.
ಸ್ತಬ್ಧಚಿತ್ರದ ಮುಖ್ಯ ಭಾಗದಲ್ಲಿ ಅದ್ದೂರಿ ಹಾಗೂ ಕಲಾತ್ಮಕ ಕಾಶಿ ವಿಶ್ವನಾಥ ದೇವಾಲಯ ಹಾಗೂ ಶಿವನಿಗೆ ಮುಡಿಪಾಗಿರುವ ನನ್ನೇಶ್ವರ ದೇವಾಲಯಗಳ ಪ್ರದರ್ಶನವಾಗಿದೆ. ಲಕ್ಕುಂಡಿಯಲ್ಲಿ ಚಾಲುಕ್ಯರು ಸುಂದರ ದೇವಾಲಯಗಳನ್ನೂ, ಕಲ್ಯಾಣಿಗಳನ್ನೂ ನಿರ್ಮಿಸಿದ್ದಾರೆ. 10-12ನೇ ಶತಮಾನದಲ್ಲಿ ಸಾಂಸ್ಕೃತಿಕ ಹಿರಿಮೆಯ ಲಕ್ಕುಂಡಿ ಬೃಹತ್ ನಗರ ಹಾಗೂ ವಾಣಿಜ್ಯ ತಾಣವೂ ಆಗಿತ್ತು.
ಉತ್ತರ ಪ್ರದೇಶದ ಸ್ತಬ್ಧಚಿತ್ರ ಮಹಾಕುಂಭದ ಭವ್ಯತೆ ಪ್ರದರ್ಶಿಸಿದರೆ, ಮಧ್ಯಪ್ರದೇಶದಿಂದ ಚಿರತೆಗಳ ಐತಿಹಾಸಿಕ ಮರಳುವಿಕೆ ಪ್ರದರ್ಶನವಾಯಿತು. 5,000 ಕಲಾವಿದರು, 45 ನೃತ್ಯ ಪ್ರಕಾರಗಳು, ಸಾಂಸ್ಕೃತಿಕ ಪ್ರದರ್ಶನ ಕರ್ತವ್ಯಪಥವನ್ನು ವರ್ಣಮಯಗೊಳಿಸಿದವು.

ಕರ್ತವ್ಯ ಪಥದಲ್ಲಿದ್ದ 'ಕಸ' ತೆಗೆದ ಮೋದಿ

ದೆಹಲಿ: ದೆಹಲಿಯ ಕರ್ತವ್ಯಪಥದಲ್ಲಿ ನಡೆದ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾನುವಾರ ಬೆಳಗ್ಗೆ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದ್ದರು. ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಬರಮಾಡಿಕೊಳ್ಳುವ ಸಂದರ್ಭ ಕರ್ತವ್ಯಪಥದಲ್ಲಿ ಬಿದ್ದಿದ್ದ ಕಸವನ್ನು ಗಮನಿಸಿದ ಪ್ರಧಾನಿ ಮೋದಿ, ಸ್ವತಃ ಬಗ್ಗಿ ಕಸವನ್ನು ಹೆಕ್ಕಿದರು. ಬಳಿಕ ಅದನ್ನು ತಮ್ಮ ಸಿಬ್ಬಂದಿ ಕೈಗೆ ಕೊಟ್ಟು ಕಸದ ತೊಟ್ಟಿಗೆ ಹಾಕಲು ಹೇಳಿದರು. ಈ ದೃಶ್ಯಗಳು ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ವೈರಲ್ ಆಗಿವೆ. ನುಡಿಯಲ್ಲಷ್ಟೇ ಅಲ್ಲ, ತಮ್ಮ ನಡೆಯಿಂದಲೂ ಪ್ರಧಾನಿ ಮೋದಿ 'ಸ್ವಚ್ಛ ಭಾರತ' ಅಭಿಯಾನದ ಮಹತ್ವ ಸಾರಿದ್ದಾರೆ. ಜನರಲ್ಲಿ ಸ್ವಚ್ಛತೆ ಅರಿವು ಮೂಡಿಸುತ್ತಲೇ ಇದ್ದಾರೆ ಎಂಬ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. 2014ರ ಅ.2ರಂದು ಸ್ವಚ್ಛ ಭಾರತ ಅಭಿಯಾನಕ್ಕೆ ರಾಜಪಥದಲ್ಲೇ ಮೋದಿ ಚಾಲನೆ ನೀಡಿದ್ದರು.

ವಾಯು ಮಾಲಿನ್ಯ ತಗ್ಗಿಸಲು ಇ-ವೆಹಿಕಲ್‌ಗೆ ಉತ್ತೇಜನ: ಬಜೆಟ್ 2025 ಆದ್ಯತೆ?

ಇವಿ, ಎಐ ಸಂಶೋಧನೆ: ವಾಹನೋದ್ಯಮ ನಿರೀಕ್ಷೆ



ದೆಹಲಿ: 2025ರ ಕೇಂದ್ರ ಬಜೆಟ್ ಮಂಡನೆಗೆ ಇನ್ನು 5 ದಿನಗಳಷ್ಟೇ ಬಾಕಿ ಇವೆ. ಫೆ.1ರ ಬೆಳಗ್ಗೆ 11ಕ್ಕೆ ಲೋಕಸಭೆಯಲ್ಲಿ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ಮೋದಿ ನೇತೃತ್ವದ 3.0 ಸರಕಾರದ ಮೊದಲ ಹಾಗೂ ಒಟ್ಟಾರೆ ಎನ್‌ಡಿಎ ಸರಕಾರದ 14ನೇ ಮತ್ತು ವೈಯಕ್ತಿಕವಾಗಿ 8ನೇ ಬಜೆಟ್ ಮಂಡಿಸಲಿದ್ದಾರೆ.

ರಾಷ್ಟ್ರ ರಾಜಧಾನಿ ದೆಹಲಿ ಮಹಾ ನಗರ ಹಿಂದೆಂದೂ ಇಲ್ಲದಷ್ಟು ಪ್ರಮಾಣದಲ್ಲಿ ಈ ಬಾರಿ ವಾಯು ಮಾಲಿನ್ಯದಿಂದ ತತ್ತರಿಸಿ ಹೋಗಿದೆ. ಉಸಿರಾಟವೇ ಕಷ್ಟವಾಗಿ ವಾರಗಟ್ಟಲೆ ಪ್ರಾಥಮಿಕ ಶಾಲೆಗಳಿಗೆ ರಜೆ ಘೋಷಿಸಬೇಕಾಯಿತು. ಇನ್ನೊಂದೆಡೆ ಡೀಸೆಲ್ ವಾಹನಗಳ ನಗರ ಪ್ರವೇಶ ನಿರ್ಬಂಧಿಸಲಾಯಿತು. ಎಲೆಕ್ಟ್ರಿಕ್ ಮತ್ತು ಸಿಎನ್‌ಜಿ ವಾಹನಗಳಿಗಷ್ಟೇ ರಸ್ತೆಗಿಳಿಯಲು ಅವಕಾಶ ಕೊಡಲಾಯಿತು. ಪೆಟ್ರೋಲ್-ಡೀಸೆಲ್ ವಾಹನಗಳಿಂದಾಗುವ ವಾಯು ಮಾಲಿನ್ಯ ಮತ್ತು ಅದು ಮನುಷ್ಯರ ಆರೋಗ್ಯದ ಮೇಲೆ ಬೀರುವ ಪ್ರಭಾವವನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿರುವ ಕೇಂದ್ರ ಸರಕಾರ, ಈ ವರ್ಷವೂ ಕೇಂದ್ರ ಬಜೆಟ್‌ನಲ್ಲಿ ಎಲೆಕ್ಟ್ರಿಕ್ ವಾಹನಗಳಿಗೇ ಹೆಚ್ಚು ಒತ್ತು ನೀಡಲಿದೆ. ಮೊದಲು ಮಾಡಿದಂತೆಯೇ ಟ್ಯಾಕ್ಸ್ ಕ್ರೆಡಿಟ್ ನೀಡಲಿದೆ ಎಂದು ನಿರೀಕ್ಷಿಸಲಾಗುತ್ತಿದೆ.

ಅಷ್ಟೇ ಅಲ್ಲದೇ, ವಿದ್ಯುಚ್ಚಾಲಿತ ಸ್ಕೂಟರ್, ಆಟೊ, ಕಾರುಗಳ ತಯಾರಿಕೆ ಹೆಚ್ಚುವಂತೆ ಮಾಡಲು 'ಇವಿ ಎಕೊಸಿಸ್ಟಂ'ಗೆ ಉತ್ತೇಜನ ನೀಡಲಿದೆ. ಹೊಸ ತಲೆಮಾರಿನ ವಿದ್ಯುನ್ಮಾನ ವಾಹನಗಳ ಅಭಿವೃದ್ಧಿಗಾಗಿ 'ಗ್ರೀನ್ ಟೆಕ್ನಾಲಜಿ' ಸಂಶೋಧನೆ-ಅಭಿವೃದ್ಧಿಗೆ ಹೆಚ್ಚಿನ ಆರ್ಥಿಕ ನೆರವು ದೊರಕುವಂತೆ ಮಾಡಲಿದೆ ಎಂಬುದು ಎಲೆಕ್ಟ್ರಿಕ್ ವಾಹನಗಳ ತಯಾರಿಕಾ ಕಂಪನಿಗಳ ನಿರೀಕ್ಷೆಯಾಗಿದೆ.

ವಾಹನಗಳ ಉದ್ಯಮ ಕ್ಷೇತ್ರದಲ್ಲಿ ವಿದೇಶಗಳಲ್ಲಿ 'ಕೃತಕ ಬುದ್ಧಿಮತ್ತೆ'(ಎಐ) ತಂತ್ರಜ್ಞಾನದ ಅಳವಡಿಕೆ ಹೆಚ್ಚುತ್ತಲೇ ಇದೆ. ಚಾಲಕ ರಹಿತ ಕಾರುಗಳ ತಯಾರಿಕೆ ಸೇರಿದಂತೆ ಹೊಸ ಪೀಳಿಗೆ ವಾಹನಗಳ ತಯಾರಿಕೆಯೂ ನಡೆಯುತ್ತಿವೆ. ಭಾರತದ ವಾಹನ ಮಾರುಕಟ್ಟೆಯನ್ನೂ ಆ ದಿಶೆಯಲ್ಲಿ ಸಜ್ಜುಗೊಳಿಸಬೇಕಿರುವುದು ಸರಕಾರದ ಜವಾಬ್ದಾರಿ. ಇಂಥ ವಿಶಿಷ್ಟ ವಾಹನೋದ್ಯಮ ಕ್ಷೇತ್ರ ಅಭಿವೃದ್ಧಿಗೆ ಅತ್ಯಗತ್ಯವಾದ ಸಂಶೋಧನಾ ವಲಯ ಮತ್ತು ಮೂಲ ಸೌಕರ್ಯವನ್ನು ಒದಗಿಸಲು ಈ ಬಾರಿಯ ಬಜೆಟ್‌ನಲ್ಲಿ ಗಮನ ಹರಿಸಬೇಕಿದೆ ಎನ್ನುತ್ತಿದ್ದಾರೆ ವಾಹನ ತಯಾರಿಕಾ ಕ್ಷೇತ್ರದ ಉದ್ಯಮಿಗಳು. ವಾಹನ ತಯಾರಿಕಾ ಉದ್ಯಮ ಗರಿಗೆದರಿದರೆ ವಾಹನಗಳ ಸಂಖ್ಯೆ ಹೆಚ್ಚುತ್ತದೆ ಎಂಬುದು ಒಂದೆಡೆಯಾದರೆ, ಇನ್ನೊಂದೆಡೆ ಉದ್ಯೋಗ ಅವಕಾಶಗಳೂ ಹೆಚ್ಚಳವಾಗುತ್ತವೆ ಎಂಬುದನ್ನೂ ಸರಕಾರ ಅರ್ಥ ಮಾಡಿಕೊಳ್ಳಬೇಕಿದೆ ಎನ್ನುತ್ತಾರೆ ಗೋ ಮೆಕಾನಿಕ್ ಕಂಪನಿ ಸಿಇಒ ಹಿಮಾಂಶು ಅರೋರಾ.



ಪ್ರಯಾಗ್‌ರಾಜ್‌ನಲ್ಲಿ ನಡೆದಿರುವ ಮಹಾಕುಂಭಮೇಳದಲ್ಲಿ ಜುನಾ ಅಖಾಡಾದ ಮಹಾಮಂಡಲೇಶ್ವರ ಆಚಾರ್ಯಶ್ರೀ ಸ್ವಾಮಿ ಅವಧೇಶಾನಂದಗಿರಿ ಅವರ ಆಶ್ರಮದಲ್ಲಿ ಆದಿಗುರು ಶ್ರೀಶಂಕರಾಚಾರ್ಯರಿಗೆ ಗೌರವ ನಮನ ಸಲ್ಲಿಸಿದ ಕರ್ನಾಟಕದ ವಚನಾನಂದ ಸ್ವಾಮೀಜಿ. ವಡ್ಕಲ್ ಲಕ್ಷ್ಮಿನಾರಾಯಣ ಪರಂಪರೆಯ ರಾಕೇಶಪ್ರಸಾದ ಮಹಾರಾಜ್, ಹಿಂದು ಆಚಾರ್ಯ ಮಹಾಸಭಾ ಸಂಯೋಜಕ ಸ್ವಾಮಿ ಪರಮಾರ್ಥಾನಂದ, ಬಹ್ಮೇಶ್ವರಾನಂದ ಆಚಾರ್ಯ, ಸ್ವಾಮಿ ಮಾಧವಪ್ರಿಯ ದಾಸ್‌ಜಿ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಜಿಲ್ಲಾಡಳಿತ ಭವನದಲ್ಲಿ ಹುತಾತ್ಮ ದಿನಾಚರಣೆ

ಗದಗ: ಹುತಾತ್ಮಕ ದಿನಾಚರಣೆ ಅಂಗವಾಗಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಭಾವಚಿತ್ರಕ್ಕೆ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಚ್.ಕೆ.ಪಾಟೀಲ ಅವರು ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲನಲ್ಲಿ ಪುಷ್ಪನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಅಕ್ಬರಸಾಬ ಬಬರ್ಚಿ, ಜಿಲ್ಲಾಧಿಕಾರಿ ಸಿ ಎನ್ ಶ್ರೀಧರ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಭರತ್ ಎಸ್, ಪೊಲೀಸ್ ವರಿಷ್ಠಾಧಿಕಾರಿ ಬಿ ಎಸ್ ನೇಮಗೌಡ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಎ.ಸಿ ಗಂಗಪ್ಪ ಗಣ್ಯರಾದ ವಾಸಣ್ಣ ಕುರಡಗಿ, ಬಿ.ಬಿ.ಅಸೂಟಿ, ಅಶೋಕ ಮಂದಾಲಿ, ಬಸವರಾಜ ಕಡೇಮನಿ ಹಾಜರಿದ್ದರು.

ಮಾದರಿ ಹೆಸ್ಕಾಂ ನಿರ್ಮಿಸೋಣ: ಅಜೀಮ್‌ಪೀರ್ ಖಾದ್ರಿ

ಹುಬ್ಬಳ್ಳಿ: ಈ ರಾಜ್ಯಕ್ಕಾಗಿ, ಈ ಭಾಗದ ರೈತರಿಗಾಗಿ ಹಾಗೂ ಬಡವರ ಶ್ರೇಯೋಭಿವೃದ್ಧಿಗಾಗಿ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡೋಣ ಎಂದು ಹೆಸ್ಕಾಂಭಿನ ಅಧ್ಯಕ್ಷರಾದ ಸೈಯದ್ ಅಜೀಮ್‌ಪೀರ್ ಎಸ್ ಖಾದ್ರಿ ಅವರು ಹೇಳಿದರು. ನವನಗರದ ಹೆಸ್ಕಾಂ ನಿಗಮ ಕಚೇರಿಯಲ್ಲಿ ಗಣರಾಜ್ಯೋತ್ಸವದ ನಿಮಿತ್ತ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಬೆಳಕು ನೀಡುವಂತಹ ಮಹತ್ತರವಾದ ಇಲಾಖೆಯ ಜವಾಬ್ದಾರಿಯನ್ನು ಸರ್ಕಾರದಿಂದ ನನಗೆ ವಹಿಸಿದ್ದಾರೆ. ಹೆಸ್ಕಾಂನ ಎಲ್ಲ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ ಎಲ್ಲರೂ ಸೇರಿ ಪರಸ್ಪರ ಸಹಕಾರದೊಂದಿಗೆ ಜನಪರ ಹಾಗೂ ಜನಸ್ನೇಹಿ ಕೆಲಸ ಮಾಡುವ ಮೂಲಕ ಹೆಸ್ಕಾಂನ್ನು ಮಾದರಿ ಇಲಾಖೆಯನ್ನಾಗಿ ಮಾಡಲು ಶ್ರಮಿಸೋಣ ಎಂದು ಹೇಳಿದರು. ಡಾ. ಬಿ.ಆರ್ ಅಂಬೇಡ್ಕರ್ ಸೇರಿದಂತೆ ಸಂವಿಧಾನ ರಚನೆಗೆ ಶ್ರಮಿಸಿದ ಗಣ್ಯರನ್ನು ಇಂದು ಸ್ಮರಿಸೋಣ. ಭಾರತಕ್ಕೆ ಡಾ. ಬಿ.ಆರ್ ಅಂಬೇಡ್ಕರ್ ಅವರು ನೀಡಿರುವ ಕೊಡುಗೆಯನ್ನು ಇಡೀ ಜಗತ್ತೇ ಕೊಂಡಾಡುತ್ತಿದೆ. ಇಂದು ಬಹಳಷ್ಟು ರಾಷ್ಟ್ರಗಳು ಭಾರತವನ್ನು ಅತ್ಯಂತ ಗೌರವದಿಂದ ನೋಡುತ್ತೀವೆ. ಇದಕ್ಕೆ ಕಾರಣ ಭಾರತದ ಸಂವಿಧಾನ. ಇಂತಹ ಶ್ರೇಷ್ಠವಾದ ಸಂವಿಧಾನವನ್ನು ಗೌರವಿಸೋಣ, ಹಾಗೂ ಪ್ರತಿಯೊಬ್ಬರಿಗೂ ತಮ್ಮ ಹಕ್ಕುಗಳು ತಲುಪಿಸಲು ನಾವೆಲ್ಲ ಜೊತೆಯಾಗಿ ಕೆಲಸ ಮಾಡೋಣ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಹೆಸ್ಕಾಂಭಿಯಂತರ ವ್ಯವಸ್ಥಾಪಕ ನಿರ್ದೇಶಕರಾದ ವೈಶಾಲಿ ಎಂ.ಎಲ್, ತಾಂತ್ರಿಕ ನಿರ್ದೇಶಕರಾದ ಎಸ್.ಜಗದೀಶ, ಹಣಕಾಸು ನಿರ್ದೇಶಕರಾದ ಪ್ರಕಾಶ್ ಪಾಟೀಲ್, ಪ್ರಧಾನ ವ್ಯವಸ್ಥಾಪಕರಾದ ವಿನಾಯಕ ಪಾಲನಕರ್ ಸೇರಿದಂತೆ ಹೆಸ್ಕಾಂನ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಪ್ರಜಾಪ್ರಭುತ್ವ ಗಟ್ಟಿಯಾಗಲು ಮತದಾರ ಮುಖ್ಯ: ಮಹೇಶ

ಧಾರವಾಡ: ಪ್ರಜಾಪ್ರಭುತ್ವ ಗಟ್ಟಿಯಾಗಿ ನಿಲ್ಲಬೇಕಾದರೆ ದೇಶದ ಮತದಾರರ ಪಾತ್ರ ಬಹಳ ಮುಖ್ಯ. ಸಂವಿಧಾನ ನೀಡಿರುವ ಮತದಾನದ ಹಕ್ಕನ್ನು ಚುನಾವಣೆಯಲ್ಲಿ ಚಲಾಯಿಸುವದು ಪ್ರತಿಯೊಬ್ಬರ ಹಕ್ಕಾಗಿದೆ ಎಂದು ಕರ್ನಾಟಕ ವಿಶ್ವವಿದ್ಯಾಲಯ ಸಿಂಡಿಕೇಟ್ ಸದಸ್ಯರಾದ ಮಹೇಶ ಹುಲೆಣ್ಣವರ ಅಭಿಪ್ರಾಯಪಟ್ಟರು. ಕರ್ನಾಟಕ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ, ಕರ್ನಾಟಕ ಕಲಾ ಕಾಲೇಜು, ರಾಜ್ಯಶಾಸ್ತ್ರ ವಿಭಾಗ ಮತ್ತು ಕಾಲೇಜಿನ ಎನ್.ಎಸ್.ಎಸ್ ಘಟಕಗಳ ಸಹಯೋಗದಲ್ಲಿ ಕಾಲೇಜಿನ ಫ್ಯಾರನ್ ಸಭಾಂಗಣದಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆಯ ಅಂಗವಾಗಿ ಆಯೋಜಿಸಿದ ಕಾರ್ಯಕ್ರಮನ್ನು ಉದ್ಘಾಟಿಸಿ ಮಾತನಾಡಿದರು. ಜಿಮಖಾನದ ಉಪಾಧ್ಯಕ್ಷರಾದ ಡಾ.ಐ.ಸಿ. ಮುಳಗುಂದ ಮಾತನಾಡಿ, ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ಹೆಚ್ಚು ಯುವ ಮತದಾರರನ್ನು ಪ್ರೋತ್ಸಾಹಿಸುವ ಸಲುವಾಗಿ, ಭಾರತ ಸರಕಾರ ರಾಷ್ಟ್ರೀಯ ಮತದಾರರ ದಿನವಾಗಿ ಪ್ರತಿ ವರ್ಷ ಜನವರಿ 25ರಂದು ಆಚರಿಸಲು ನಿರ್ಧರಿಸಿದೆ ಎಂದರು. ಪ್ರಾಚಾರ್ಯರಾದ ಡಾ.ಡಿ.ಬಿ.ಕರಡೋಣಿ ಮಾತನಾಡಿದರು. ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆಯ ಅಂಗವಾಗಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಕಾರ್ಯಕ್ರಮದಲ್ಲಿ ಅಕಾಡೆಮಿಕ್ ಡೀನ್ ಡಾ.ಮುಕುಂದ ಲಮಾಣಿ, ರಾಜ್ಯಶಾಸ್ತ್ರದ ಮುಖ್ಯಸ್ಥರಾದ ಡಾ.ಎಂ.ಬಿ.ದಳಪತಿ, ಡಾ.ಸುರೇಶ ಹುಲ್ಲಣ್ಣವರ, ಡಾ.ಸತೀಶ್ ಜಾಧವ, ಡಾ.ಎಸ್.ಎ.ಕೊಳೂರ, ಡಾ.ವೀರೇಶ ಸುಣಗಾರ, ಡಾ.ಎಸ್.ಎಸ್. ಶ್ರೀಗಿರಿ ಸೇರಿದಂತೆ ಇದ್ದರು.

ಎಲ್ಲ ಜಿಲ್ಲೆಗಳಲ್ಲಿ ಸಂಭ್ರಮದ ಗಣರಾಜ್ಯೋತ್ಸವ

ಸಂವಿಧಾನವನ್ನು ಪ್ರತಿಯೊಬ್ಬರೂ ಓದಬೇಕು: ಸಚಿವ ಸಂತೋಷ ಲಾಡ್

ಧಾರವಾಡ: ಭಾರತದ ಸಂವಿಧಾನವನ್ನು ಪ್ರತಿಯೊಬ್ಬರು ಓದಬೇಕು. ಸಂವಿಧಾನ ಪೀಠಿಕೆಯಲ್ಲಿ ಹೇಳಿರುವ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ದೇಶದ ಅಭಿವೃದ್ಧಿಗೆ ವಿಶೇಷವಾಗಿ ಯುವ ಸಮೂಹ ತೊಡಗಿಸಿಕೊಳ್ಳಬೇಕೆಂದು ಕಾರ್ಮಿಕ ಇಲಾಖೆ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಎಸ್.ಲಾಡ್ ಅವರು ಹೇಳಿದರು.

ಆರ್.ಎನ್.ಶೆಟ್ಟಿ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದಿಂದ ಆಯೋಜಿಸಿದ್ದ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರ ಧ್ವಜಾರೋಹಣ ನೇರವೆರಿಸಿ ಸಾರ್ವಜನಿಕರನ್ನು ಉದ್ದೇಶಿಸಿ, ಮಾತನಾಡಿದ ಸಚಿವರು, ಭಾರತ ದೇಶವು ಎಲ್ಲ ಧರ್ಮದವರಿಗೂ ಸೇರಿದ್ದು, ಯಾವುದೇ ಪಕ್ಷ, ಧರ್ಮಗಳಿಗೆ ಮೀಸಲಾಗಿಲ್ಲ. ಡಾ. ಬಿ.ಆರ್. ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನವು ಪ್ರತಿಯೊಬ್ಬರ ಸಮಗ್ರ ಅಭಿವೃದ್ಧಿಗೆ ಮತ್ತು ಸಮಾಜದ ಹಿತಕ್ಕೆ ಪೂರಕವಾದ ಅಂಶಗಳನ್ನು ನೀಡಿದೆ. ಪ್ರತಿಯೊಬ್ಬರು ಪ್ರತಿದಿನ ಸಂವಿಧಾನ ಪೀಠಿಕೆಯನ್ನು ಓದುಬೇಕು. ಪಿಠೀಕೆಯಲ್ಲಿ ಇರುವ ಮೌಲ್ಯಗಳನ್ನು ಅರ್ಥೈಸಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಸಚಿವ ಸಂತೋಷ ಲಾಡ್ ಅವರು ತಿಳಿಸಿದರು.

ನಾವು ಸಂವಿಧಾನವನ್ನು ಗೌರವಿಸಬೇಕು. ಅದರಲ್ಲಿ ಇರುವ ನಿಯಮಗಳನ್ನು ಅನುಸರಿಸಬೇಕು. ದೇಶದ ಪ್ರಜೆಗಳಿಗೆ ಮೂಲಭೂತ ಹಕ್ಕುಗಳಿರುವಂತೆ ಮೂಲಭೂತ ಕರ್ತವ್ಯಗಳು ಸಹ ಇರುತ್ತವೆ. ಭಾರತ ದೇಶವನ್ನು ಇನ್ನಷ್ಟು ಅಭಿವೃದ್ಧಿಯತ್ತ ಸಾಗಿಸೋಣ. ಆರ್ಥಿಕವಾಗಿ ಅಭಿವೃದ್ಧಿ ಹೊಂದುವುದು ಮಾತ್ರವಲ್ಲದೆ ಸಾಮಾಜಿಕ ಸಾಮರಸ್ಯ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯಲ್ಲಿ ಬೆಳೆಯುತ್ತಿರುವ ಭಾರತಕ್ಕಾಗಿ ಕೆಲಸ ಮಾಡಲು ನಾವು ಇಂದು ಪ್ರತಿಜ್ಞೆ ಮಾಡೋಣ ಎಂದು ಸಚಿವ ಸಂತೋಷ ಲಾಡ್ ತಿಳಿಸಿದರು.

ಜಿಲ್ಲಾಡಳಿತದಿಂದ ನಗರದ ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ, ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆ ಮತ್ತು ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಸಮವಸ್ತದಲ್ಲಿ ಶಿಸ್ತುಬದ್ದವಾಗಿ ಪಥಸಂಚಲನ ಮಾಡುವದರೊಂದಿಗೆ ಅತಿಥಿಗಳಿಗೆ ಗೌರವ ವಂದನೆ ಸಲ್ಲಿಸಿ, ಕಾರ್ಯಕ್ರಮದಲ್ಲಿ ನೆರೆದ ಸಾರ್ವಜನಿಕರ ಗಮನ ಸೆಳೆದರು.

ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾರತ

ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ ನಡೆದ ಗಣರಾಜ್ಯೋತ್ಸವದಲ್ಲಿ ಮಾತನಾಡಿದ ಸಚಿವ ಲಾಡ್.

ಸಂವಿಧಾನದ ಶ್ರೇಷ್ಠತೆಯನ್ನು ಸಾರುವ ಸಂವಿಧಾನ ಪೀಠಿಕೆಯ ಸಾಮೂಹಿಕ ವಾಚನ ಜರುಗಿತು. ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಅವರು ಗಣರಾಜ್ಯೋತ್ಸವ ಕಾರ್ಯಕ್ರಮದ ಅತಿಥಿಗಳಿಗೆ, ಜಿಲ್ಲಾ ಹಾಗೂ ತಾಲೂಕಾ ಮಟ್ಟದ ಅಧಿಕಾರಿ ಹಾಗೂ ಸಿಬ್ಬಂದಿಗೆ, ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಸಂವಿಧಾನ ಪೀಠಿಕೆಯನ್ನು ಬೋಧಿಸಿದರು.ತೀ ಸಮದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನಿಸಿ, ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ಸಭಾಪತಿ ವೀರಣ್ಣ ಮತ್ತಿಗಟ್ಟಿ, ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶಾಕೀರ್ ಸನದಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಎಸ್.ಆರ್.ಪಾಟೀಲ, ಜಿಲ್ಲಾಧಿಕಾರಿ ದಿವ್ಯ ಪ್ರಭು, ಮಹಾನಗರ ಪೊಲೀಸ್ ಆಯುಕ್ತರಾದ ಎನ್.ಶಶಿಕುಮಾರ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಗೋಪಾಲ ಬ್ಯಾಕೋಡ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಾರಾಯಣ ಬರಮನಿ, ಉಪಪೊಲೀಸ್ ಆಯುಕ್ತರಾದ ರವೀಶ ಸಿ.ಆರ್., ಮತ್ತು ಮಾನಿಂಗ ನಂದಗಾವಿ, ಅಪರ ಜಿಲ್ಲಾಧಿಕಾರಿ ಗೀತಾ.ಸಿ.ಡಿ., ಉಪವಿಭಾಗಾಧಿಕಾರಿ ಶಾಲಂ ಹುಸೇನ್, ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ಬಿ.ಎಸ್. ಮೂಗನೂರಮಠ, ಮುಖ್ಯ ಯೋಜನಾ ನಿರ್ದೇಶಕ ದೀಪಕ ಮಡಿವಾಳರ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ

> ಗಣರಾಜ್ಯೋತ್ಸವ ಭಾರತದ ಒಂದು ರಾಷ್ಟ್ರೀಯ ಹಬ್ಬ. ದೇಶಕ್ಕೆ ಪ್ರಜಾಪ್ರಭುತ್ವದ ಆಡಳಿತ ಪದ್ಧತಿಯನ್ನು ಅಳವಡಿಸಿಕೊಂಡ ಸಂಭ್ರಮದ ದಿನವಾಗಿದೆ. ಡಾ. ಬಿ. ಆರ್. ಅಂಬೇಡ್ಕರ್ ಅವರನ್ನು ಭಾರತ ಸಂವಿಧಾನದ ಪಿತಾಮಹ ಎನ್ನುತ್ತಾರೆ. ನಮ್ಮ ಸ್ವಾತಂತ್ರ್ಯ ಹೋರಾಟಗಾರರು, ನಮ್ಮ ನಾಯಕರು ಮತ್ತು ನಮ್ಮ ಸಂವಿಧಾನದ ರಚನೆಗೆ ಕೊಡುಗೆ ನೀಡಿದ ಪ್ರತಿಯೊಬ್ಬ ವ್ಯಕ್ತಿಯನ್ನು ನೆನಪಿಸಿಕೊಳ್ಳಲು ಈ ಅವಕಾಶವನ್ನು ಬಳಸಿಕೊಳ್ಳೋಣ.
>
> -ಸಂತೋಷ ಲಾಡ್
> ಸಚಿವ

ಅಜೀಜ ದೇಸಾಯಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಶಶಿ ಪಾಟೀಲ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎಸ್.ಎಸ್.ಕೆಳದಿಮಠ, ಧಾರವಾಡ ತಹಸೀಲ್ದಾರ ಡಿ.ಎಚ್.ಹೂಗಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಮಂಜುನಾಥಸ್ವಾಮಿ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿ ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ನಗರದ 150ಕ್ಕೂ ಹೆಚ್ಚು ವಿವಿಧ ಶಾಲಾ ಕಾಲೇಜು ವಿದ್ಯಾರ್ಥಿಗಳು, ಇತರ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಹಲವು ಕ್ಷೇತ್ರದ ಸಾಧಕರಿಗೆ ಸನ್ಮಾನ

ಗದಗ: ಗದುಗಿನ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ರವಿವಾರ ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ.ಪಾಟೀಲ ಅವರು 76ನೇ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಸಾರ್ವಜನಿಕ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ವಿವಿಧ ದಳಗಳ ವೀಕ್ಷಣೆ ಮಾಡಿದರು.

ಆಕರ್ಷಕ ಪಥಸಂಚಲನದ ನೇತೃತ್ವವನ್ನು ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಪರೇಡ ಕಮಾಂಡರ್ ಶಂಕರಗೌಡ ಚೌದ್ರಿ ಇವರು ನೇತೃತ್ವವನ್ನು ಅವರು ವಹಿಸಿದ್ದರು. ಜಿಲ್ಲಾ ಸಶಸ್ತ್ರ ಮೀಸಲು ಪೊಲೀಸ್ ಪಡೆಯ ನೇತೃತ್ವವನ್ನು ವಿಜಯಕುಮಾರ್ ಜಿ ವಹಿಸಿದ್ದರು. ನಾಗರಿಕ ಪೊಲೀಸ್ ಪಡೆಯ ನೇತೃತ್ವವನ್ನು ಗದಗ ಗ್ರಾಮೀಣ ಘಟಕದ ಪಿಎಸ್‌ಐ ಕಿರಣಕುಮಾರ್, ಗೃಹ ರಕ್ಷಕ ದಳದ ನೇತೃತ್ವವನ್ನು ಎಂ.ಎನ್. ವಸ್ತದ, ಅಬಕಾರಿ ದಳದ ನೇತೃತ್ವವನ್ನು ವಿಜಯಲಕ್ಷ್ಮೀ, ಅಗ್ನಿಶಾಮಕ ಪಡೆಯ ನೇತೃತ್ವವನ್ನು ಲೋಕೇಶ ಜಿ.ಕೆ, ಅರಣ್ಯ ರಕ್ಷಕ ಪಡೆಯ ನೇತೃತ್ವವನ್ನು ಡೆಪ್ಯೂಟಿ ಆರ್.ಎಫ್.ಓ ಸಚಿನ ಬಿಸನಳ್ಳಿ, ಎನ್.ಸಿ.ಸಿ. ಬಾಯ್ಸ್ ದಳದ ನೇತೃತ್ವವನ್ನು ಹುಲಕೋಟಿಯ ರಾಜರಾಜೇಶ್ವರಿ ಪ್ರೌಢಶಾಲೆಯ ರಿಯಾನ್ ಅಹ್ಮದ್, ಸಾಮಾನ್ಯ ವಿಭಾಗದ ನೇತೃತ್ವವನ್ನು ವಿ.ಡಿ.ಎಸ್.ಟಿ.ಸಿ. ಬಾಲಕಿಯರ ಪ್ರೌಢಶಾಲೆಯ ನೀಲಮ್ಮ, ಭಾರತ ಸೇವಾ ದಳದ ನೇತೃತ್ವವನ್ನು ಎಸ್.ಎಂ.ಕೃಷ್ಣಾ ನಗರದ ಸರ್ಕಾರಿ ಹಿರಿಯ ಹೆಣ್ಣು ಮಕ್ಕಳ ಪ್ರಾಥಮಿಕ ಶಾಲೆಯ ಕುಮಾರಿ ಸ್ನೇಹಾ, ಬೆಟಗೇರಿಯ ಸೇಂಟ್‌ಜಾನ್ ಪ್ರೌಢಶಾಲೆಯ ಸಾಮಾನ್ಯ ವಿಭಾಗದ ನೇತೃತ್ವವನ್ನು ಕುಮಾರ ಸೋಮಶೇಖರ, ಮಾಜಿ ಸೈನಿಕರ ತಂಡದ ನೇತೃತ್ವವನ್ನು ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಬಸಲಿಂಗಪ್ಪ ಮುಂಡರಗಿ, ಎನ್.ಸಿ.ಸಿ.ಗರ್ಲ್ಸ ತಂಡದ ನೇತೃತ್ವವನ್ನು ನಗರದ ಸಿ.ಎಸ್.ಪಾಟೀಲ ಪ್ರೌಢಶಾಲೆಯ ಕು. ದಿವ್ಯಾ, ಶಾಲೆಯ ಸ್ಕೌಟ್ಸ್ ವಿಭಾಗದ ನೇತೃತ್ವನ್ನು ನಗರದ ಕೆ.ಎಲ್.ಇ. ಸಿ.ಬಿ.ಎಸ್.ಇ ಪ್ರಾಥಮಿಕ ಕು. ಸಾಯಿ ಸಮರ್ಥ, ಸೇವಾದಳದ ನೇತೃತ್ವವನ್ನು ಎಸ್.ಎಂ.ಕೃಷ್ಣಾ ನಗರದ ಸರಕಾರಿ ಹೆಣ್ಣು ಮಕ್ಕಳ ಪ್ರೌಢಶಾಲೆಯ ಚೈತ್ರಾ, ಸಾಮಾನ್ಯ ತಂಡದ ನೇತೃತ್ವವನ್ನು ನಗರದ ಸಿ.ಎಸ್.ಪಾಟೀಲ ಬಾಲಕಿಯರ ಪ್ರೌಢಶಾಲೆಯ ರಜಿಯಾಬೇಗಂ, ಕೆ.ಎಸ್.ಆರ್.ಟಿ.ಸಿ. ನೇತೃತ್ವನವನ್ನು ಹುಬ್ಬಳ್ಳಿ ವಾ.ಕ.ರ.ಸಾ. ಭದ್ರತಾ ಹಾಗೂ ಜಾಗೃತದಳದ ಎನ್.ಕೆ.ಲಮಾಣಿ ಅವರುಗಳು ವಹಿಸಿದ್ದರು. ಪಥ ಸಂಚಲನದಲ್ಲಿ ಪಾಲ್ಗೊಂಡು ಉತ್ತಮ ಪ್ರದರ್ಶನ ನೀಡಿದ ತಂಡಗಳಿಗೆ ಸಚಿವರು ಸನ್ಮಾನಿಸಿದರು.

76ನೇಯ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರನ್ನು ಗುರುತಿಸಿ ಜಿಲ್ಲಾಡಳಿತದಿಂದ ಸನ್ಮಾನಿ ಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ. ಪಾಟೀಲ ಸೇರಿದಂತೆ ಇತರೆ ಗಣ್ಯರು ಸನ್ಮಾನ ಸಮಾರಂಭದಲ್ಲಿ ಪಾಲ್ಗೊಂಡರು.

ಮಾಧ್ಯಮ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದಕ್ಕಾಗಿ, ಸಾಮಾಜಿಕ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದಕ್ಕಾಗಿ ಹಲವರನ್ನು ಸನ್ಮಾನಿಸಲಾಯಿತು.

ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸಲಾಯಿತು.

ಧಾರವಾಡ ಜಿಲ್ಲಾಧಿಕಾರಿಗಳ ಕಾರ್ಯಾಲಯದ ನೂತನ ಸಭಾಭವನದಲ್ಲಿ ಆಯೋಜಿಸಿದ್ದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಪುಣ್ಯಸ್ಮರಣೆಯಲ್ಲಿ ಅಂಬೇಡ್ಕರ್ ಕುರಿತ ಹಾಡಿಗೆ ಕಾರ್ಮಿಕ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಅವರು, ಡೋಲು ಬಾರಿಸಿ ಗಮನ ಸೆಳೆದರು.

ಸಂವಿಧಾನದ ಮಹತ್ವ ಹೇಳಿದ ಈರೇಶ ಅಂಚಟಗೇರಿ

ಧಾರವಾಡ: ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾದ ಪ್ರಾಂಗಣದಲ್ಲಿ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು.

ಸಂಸ್ಥೆಯ ಕಾರ್ಯಾಧ್ಯಕ್ಷರಾದ, ಹಾಗೂ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಪೂರ್ವ ಮಹಾಪೌರರಾದ ಈರೇಶ ಅಂಚಟಗೇರಿಯವರು ಧ್ವಜಾರೋಹಣವನ್ನು ನೆರವೇರಿಸಿ, ಅವರು ಭಾರತದ ಗಣರಾಜ್ಯೋತ್ಸವ ಮತ್ತು ಸಂವಿಧಾನದ ಮಹತ್ವವನ್ನು ಹೇಳುತ್ತಾ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಸದಸ್ಯರು ಹಾಗೂ ಕಾರ್ಯದರ್ಶಿ ಮತ್ತು ವಿಭಾಗಗಳ ಮುಖ್ಯಸ್ಥರು ಸಂಸ್ಥೆಯ ಸಿಬ್ಬಂದಿಯವರು ಮತ್ತು ಶಾಲಾ ಮಕ್ಕಳು ಈ ಸಮಯದಲ್ಲಿ ಉಪಸ್ಥಿತರಿದ್ದರು.

ಈ ಕಾರ್ಯಕ್ರಮದಲ್ಲಿ ದೀಪಾ ಕಟ್ಟಿಯವರ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯಕಾರಿಣಿ ಸಮಿತಿ ಸದಸ್ಯರಾದ ಬಸವರಾಜ ತಾಳಿಕೊಟಿ, ಜಿ. ಜಿ. ಹಿರೇಮಠ , ಡಾ. ಉಮಾ ಚವ್ಹಾಣ ಹಾಗೂ ಸಂಸ್ಥೆಯ ಕಾರ್ಯದರ್ಶಿಗಳಾದ ಎಸ್. ರಾಧಾಕೃಷ್ಣನ್ ಸಹ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಎಲ್ಲಾ ಶಾಲಾ-ಕಾಲೇಜುಗಳ ಮುಖ್ಯಸ್ಥರು, ಶಿಕ್ಷಕರು, ಸಿಬ್ಬಂದಿಯವರು ಮತ್ತು ಶಾಲಾ ಮಕ್ಕಳು ಈ ಸಮಯದಲ್ಲಿ ಉಪಸ್ಥಿತರಿದ್ದರು.

ಡಾ.ರಾಜಕುಮಾರ ನಾಯಕ ಹಾಗೂ ಪ್ರಾಚಾರ್ಯರಾದ ಡಾ. ವಿ.ಬಿ ಪೂಜಾರ ಹಾಜರಿದ್ದರು.

ಜಾತ್ಯಾತೀಯತೆಯನ್ನು ಎತ್ತಿ ಹಿಡಿಯುವುದು ಭಾರತೀಯರ ಕರ್ತವ್ಯ

ಗಜೇಂದ್ರಗಢ: ಭಾರತದ ಮಾತೃ ಸ್ವರೂಪಿ ಯಾಗಿರುವ ಸಂವಿಧಾನದ ಆಶಯಗಳನ್ನು ಗೌರವಿಸುವುದರ ಜೊತೆಗೆ ಜಾತ್ಯಾತೀತತೆಯನ್ನು ಎತ್ತಿ ಹಿಡಿಯುವುದು ಭಾರತೀಯರ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ದೇಶದ ಸಂವಿಧಾನ ವಿರುದ್ಧ ಸುಳ್ಳು ಹೇಳಿಕೆ ನೀಡುವ ಕಿಡಿಗೇಡಿಗಳ ಮಾತಿಗೆ ಯುವ ಸಮೂಹ ಕಿವಿಗೊಡದಿರಿ ಎಂದು ರಾಜ್ಯ ಖನಿಜ ಅಭಿವೃದ್ಧಿ ನಿಗಮ ಅಧ್ಯಕ್ಷ, ಶಾಸಕ ಜಿ.ಎಸ್. ಪಾಟೀಲ ಹೇಳಿದರು.

ಪಟ್ಟಣದ ಎಸ್.ಎಂ ಭೂಮರಡ್ಡಿ ಕಾಲೇಜು ಮೈದಾನದಲ್ಲಿ ಗಜೇಂದ್ರಗಡ ತಾಲೂಕಾಡಳಿತ ವತಿಯಿಂದ ರವಿವಾರ ನಡೆದ 76ನೇ ಗಣರಾಜ್ಯೋತ್ಸವ ಪ್ರಯುಕ್ತ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಮಾಜದಲ್ಲಿ ತುಳಿತಕ್ಕೊಳಗಾದ ಶೋಷಿತ ಜನರನ್ನು ಮೇಲೆತ್ತುವ ಕಾರ್ಯವೇ ಪ್ರಜಾತಂತ್ರ ಮೂಲ ಮಂತ್ರವಾಗಿದೆ. ಸಂವಿಧಾನದ ಆಶಯಗಳು ಸಹ ಇವೆ ಆಗಿವೆ. ಸಮಾಜದಲ್ಲಿ ಅಶಾಂತಿ ಕದಡುವ ನಿಟ್ಟಿನಲ್ಲಿ ನಡೆಯುವ ಯಾವುದೇ ಕ್ರೀಯೆಗಳಿಗೆ ಆಸ್ಪದ ನೀಡಬಾರದು. ಡಾ. ಬಿ,ಆರ್ ಅಂಬೇಡ್ಕರ್, ಡಾ. ರಾಜೇಂದ್ರ ಪ್ರಸಾದರ ನೇತೃತ್ವದ ಸಂವಿಧಾನ ರಚನಾ ಸಮಿತಿಯ ಪ್ರಮುಖರು ಅಂದು ವಿವಿಧ ದೇಶಗಳ ಸಂವಿಧಾನಗಳನ್ನು ಅಧ್ಯಯನ ಮಾಡಿ ಜಾಗತಿಕ ಬಲಿಷ್ಠ ಪ್ರಜಾಪ್ರಭುತ್ವ ರಾಷ್ಟ್ರ ಭಾರತವೆಂಬುದನ್ನು ಸಂವಿಧಾನ ರಚನೆಯ ಮೂಲಕ ತೋರಿಸಿಕೊಟ್ಟು ವಿವಿಧತೆಯಲ್ಲಿ ಏಕತೆಯನ್ನು ಪ್ರತಿಪಾದಿಸಿದರು ಎಂದರು.

ಇತ್ತಿಚಿಗೆ ಕೆಲವರು ಯುವ ಸಮೂಹವನ್ನು ದಾರಿ ತಪ್ಪಿಸುವ ನಿಟ್ಟಿನಲ್ಲಿ ಸಂವಿಧಾನದ ಬಗೆಗೆ ಸುಳ್ಳು ಇತಿಹಾಸ ಸೃಷ್ಟಿ ಮಾಡುತ್ತಿದ್ದಾರೆ. ಇದಕ್ಕೆ ಯುವ ಸಮೂಹ ಕಿವಿಗೊಡಬೇಡಿ ಎಂದ ಅವರು, ಗಜೇಂದ್ರಗಡ ತಾಲೂಕಾ ಕೇಂದ್ರವಾದ ಬಳಿಕ ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿದ್ದು, ಈಗಾಗಲೇ 10ಕೋಟಿ ವೆಚ್ಚದಲ್ಲಿ ನ್ಯಾಯಾಲಯ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ. ಇದಲ್ಲದೇ ಪ್ರಜಾ ಸೌಧ, ಹಾಗೂ ತಾಲೂಕಾ ಕ್ರೀಡಾಂಗಣ ನಿರ್ಮಾಣಕ್ಕೆ ಜಾಗೆ ಗುರ್ತಿಸಲಾಗಿದ್ದು, ರು. 10ಕೋಟಿ ಅನುದಾನ ಮಂಜೂರಾಗಿದ್ದು, ಶೀಘ್ರದಲ್ಲೇ ಕಾಮಗಾರಿ ಪ್ರಾರಂಭಿಸಲಾಗುವುದು ಎಂದರು.

ತಹಸೀಲ್ದಾರ ಕಿರಣಕುಮಾರ ಕುಲಕರ್ಣಿ ಮಾತನಾಡಿ, ಭಾರತದಲ್ಲಿನ ಗಣತಂತ್ರ ವ್ಯವಸ್ಥೆ ವಿಶ್ವಕ್ಕೆ ಮಾದರಿಯಾಗಿದೆ. ಇಲ್ಲಿನ ವಿಭಿನ್ನ ಜಾತಿ, ಮತ, ಭೇಧಗಳಿಗೆ ಎಲ್ಲ ರೀತಿಯಲ್ಲಿಯೂ ಆಧ್ಯತೆ ನೀಡಲಾಗಿದೆ. ಭಾರತ ಎಲ್ಲ ಜನಾಂಗವನ್ನು ಒಳಗೊಂಡ ತುಂಬು ಕುಟುಂಬಾಗಿದ್ದು, ಅದರಲ್ಲಿ ಸಂವಿಧಾನವು ಕುಟುಂಬ ನಡೆಯುವ ಗುರುವಂತಿದೆ. ಶಿಸ್ತು, ಸಂಯಮ ಜೊತೆ ಪ್ರಜಾತಂತ್ರ ಮೂಲ ಉದ್ದೇಶ ಸಫಲಗೊಳಿಸುವ ನಿಟ್ಟಿನಲ್ಲಿ ತಲ್ಲಿನರಾಗಬೇಕಾಗಿದೆ.

ದೇಶ ಪ್ರೇಮ, ಕರ್ತವ್ಯ ನಿಷ್ಠೆ, ತ್ಯಾಗ ಮನೋಭಾವ, ಉಧಾತ್ತ ಮೌಲ್ಯಗಳನ್ನು ಅಳವಡಿಸಿಕೊಂಡು ಇಂದಿನ ಯುವ ಶಕ್ತಿ ಭಾರತದ ಏಕತೆ ಮತ್ತು ಸಾರ್ವಭೌಮ ಶಕ್ತಿಯನ್ನು ಬಲಪಡಿಸಬೇಕಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಶಾಸಕ ಜಿ.ಎಸ್. ಪಾಟೀಲ ಅವರು ತೆರೆದ ವಾಹನದಲ್ಲಿ ಸಂಚರಿಸಿ, ಶಾಲಾ ವಿದ್ಯಾರ್ಥಿಗಳಿಂದ ಗೌರವ ವಂದನೆ ಸ್ವೀಕರಿಸಿದರು. ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಮಂಜುಳಾ ಹಕಾರಿ, ಪುರಸಭೆ ಅಧ್ಯಕ್ಷ ಸುಭಾಸ ಮ್ಯಾಗೇರಿ, ಉಪಾಧ್ಯಕ್ಷೆ ಸವಿತಾ ಬಿದರಳ್ಳಿ, ಸ್ಥಾಯಿ ಸಮಿತಿ ಚೇರಮನ್ ಮುದಿಯಪ್ಪ ಮುಧೋಳ, ಸಿದ್ದಪ್ಪ ಬಂಡಿ, ಸದಸ್ಯರಾದ ಮುರ್ತುಜಾ ಡಾಲಾಯತ್, ರಾಜು ಸಾಂಗ್ಲಿಕಾರ, ವೆಂಕಟೇಶ ಮುದಗಲ್ಲ, ರುಪ್ಲೇಶ ರಾಠೋಡ, ಯು.ಆರ್. ಚನ್ನಮ್ಮನವರ, ಶರಣಪ್ಪ ಉಪ್ಪಿನಬೆಟಗೇರಿ, ವಿಜಯಾ ಮಳಗಿ, ದ್ರಾಕ್ಷಾಯಣಿ ಚೋಳಿನ, ಕೌಸರಬಾನು ಹುನಗುಂದ, ಮುತ್ತಣ್ಣ ಮ್ಯಾಗೇರಿ, ಶ್ರೀಧರ ಬಿದರಳ್ಳಿ, ವಿ.ಬಿ. ಸೋಮನಕಟ್ಟಿಮಠ, ಶ್ರೀಧರ ಗಂಜಿಗೌಡರ, ಮುಖ್ಯಾಧಿಕಾರಿ ಬಸವರಾಜ ಬಳಗಾನೂರ, ಪಿಎಸ್‌ಐ ಸೋಮನಗೌಡ ಗೌಡರ, ಶಿರಸ್ತೇದಾರ ಪಿ.ಬಿ. ಶಿಂಗ್ರಿ, ಉಮೇಶ ಅರಳಿಗಿಡದ, ಶಬ್ಬೀರ ನಿಶಾನದಾರ, ಗಣೇಶ ಕೊಡಕೇರಿ, ರಾಘವೇಂದ್ರ ಮಂತಾ, ಶಿವಕುಮಾರ ಇಲ್ಲಾಳ ಸೇರಿದಂತೆ ಇನ್ನಿತರರು ಇದ್ದುರ.

ಗಜೇಂದ್ರಗಢ ಪಟ್ಟಣದ ಎಸ್.ಎಂ. ಭೂಮರಡ್ಡಿ ಕಾಲೇಜು ಮೈದಾನದಲ್ಲಿ ತಾಲೂಕಾಡಳಿತ ವತಿಯಿಂದ 75ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಶಾಸಕ ಜಿ.ಎಸ್. ಪಾಟೀಲ ಮಾತನಾಡಿದರು.

ಹಲವು ಕಾರ್ಯಕ್ರಮದಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಭಾಗಿ

ಧಾರವಾಡ: ಕಾರ್ಮಿಕ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ್ ಲಾಡ್ ಅವರು, ಜಿಲ್ಲೆಯ ವಿವಿದೇಡೆ ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಭೂಮಿ ಪೂಜೆ ನೇರವೇರಿಸಿದರು.

ಲೋಕೋಪಯೋಗಿ ಇಲಾಖೆಯಿಂದ 450.00ಲಕ್ಷಗಳಲ್ಲಿ ಮಂಜೂರಾದ ಜಿ. ಬಸವನಕೊಪ್ಪ ಗ್ರಾಮದಿಂದ ವಯಾ ಕಳಸನಕೊಪ್ಪ, ಗಳಗಿಹುಲಕೊಪ್ಪ ರಸ್ತೆ ನಿರ್ಮಾಣ ಕಾಮಗಾರಿಯ ಭೂಮಿ ಪೂಜೆ ನೆರವೇರಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ 140.00ಲಕ್ಷಗಳಲ್ಲಿ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಮಂಜೂರಾದ ನೀರಸಾಗರ. ಕನ್ನೇನಾಯ್ಕನಕೊಪ್ಪ, ಡೊಂಬರಿಕೊಪ್ಪ ರಸ್ತೆಗಳ ನಿರ್ಮಾಣ ಕಾಮಗಾರಿಯ ಭೂಮಿ ಪೂಜೆ ನಡೆಸಿದರು.

ಸಣ್ಣ ನೀರಾವರಿ ಇಲಾಖೆಯಿಂದ 320.00 ರು. ಲಕ್ಷಗಳಲ್ಲಿ ಜಿ.ಬಸವನಕೊಪ್ಪ ಮತ್ತು ನೀರಸಾಗರ ಮಧ್ಯದಲ್ಲಿ ಸೇತುವೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಅಳ್ನಾವರ ಪಟ್ಟಣ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಪೌರ ಕಾರ್ಮಿಕರಿಗೆ ಪಟ್ಟಣ ಪಂಚಾಯತ್ ಮಾಲ್ಕಿಯ ಆಸ್ತಿ ನಂ 3125/2 ರಲ್ಲಿ ಜಿ+3 ಮಾದರಿಯ ಮನೆಗಳ ನಿರ್ಮಾಣ ಉದ್ಘಾಟನೆಯಲ್ಲಿ ಸಚಿವ ಸಂತೋಷ್ ಲಾಡ್ ಭಾಗವಹಿಸಿದರು.

ಮತದಾನ ಪ್ರತಿಯೊಬ್ಬರ ಹಕ್ಕು

ನರಗುಂದ: ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ದೇಶ ನಮ್ಮದು, 18ವರ್ಷ ಮೇಲ್ಪಟ್ಟ ಎಲ್ಲರೂ ಮತದಾನ ಮಾಡುವ ಹಕ್ಕನ್ನು ಹೊಂದಿದ್ದು ಮತವನ್ನು ಹಣಕ್ಕೆ ಮಾರಿಕೊಳ್ಳದೆ ಯೋಗ್ಯರಿಗೆ ಮತದಾನ ಮಾಡುವ ಮೂಲಕ ನಿಮ್ಮ ಹಕ್ಕನ್ನು ಚಲಾಯಿಸಿ, ಪ್ರಜಾಪ್ರಭುತ್ವವನ್ನು ಉಳಿಸಿ ಎಂದು ಜೆಎಂಎಫ್‌ಸಿ ದಿವಾಣಿ ನ್ಯಾಯಾಧೀಶ ಜೀನಪ್ಪ ಚೌಗಲಾ ಹೇಳಿದರು.

ಇಲ್ಲಿನ ಸಿದ್ದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಲ್ಲಿ ನಡೆದ 15ನೆ ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿ ಮತದಾನದಿಂದ ದೂರ ಉಳಿಯದೆ ಮತದಾನ ಮಾಡಿ ಅದು ನಿಮ್ಮ ಹಕ್ಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ತಹಸೀಲ್ದಾರ ಶ್ರೀಶೈಲ ತಳವಾರ ಮಾತನಾಡಿ, 2011ಜ.25ರಿಂದ ಪ್ರತಿ ವರ್ಷ ರಾಷ್ಟ್ರೀಯ ಮತದಾನ ದಿನಾಚರಣೆಯನ್ನು ಆಚರಿಸಿಕೊಂಡು ಬರಲಾಗುತ್ತಿದೆ. 1950-51ರಲ್ಲಿ ದೇಶದಲ್ಲಿ ಮೊಟ್ಟ ಮೊದಲು ಸಾರ್ವತ್ರಿಕ ಚುನಾವಣೆ ಜರುಗಿತು.

ಆಗ ಮತದಾನದ ವಯಸ್ಸು 21 ಇತ್ತು, ನಂತರ 1988ರಲ್ಲಿ 18 ವಯಸ್ಸಿಗೆ ಮತದಾನ ಮಾಡುವ ಹಕ್ಕನ್ನು ನೀಡಲಾಯಿತು. 2011ರ ಜನಗಣತಿ ಪ್ರಕಾರ 91.02ಕೋಟಿ ಮತದಾರರನ್ನು ಹೊಂದಿತ್ತು.

ಮತದಾರರ ನೋಂದಣಿ ಹೆಚ್ಚಿಸುವ ಉದ್ದೇಶದಿಂದ ಪ್ರತಿ ವರ್ಷ ಮತದಾರರ ದಿನಾಚರಣೆ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳೊಂದಿಗೆ ಮತದಾರರ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಶೃತಿ ಭೋವಿ ಉಪನ್ಯಾಸ ನೀಡಿದರು, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಎಸ್. ಕೆ.ಇನಾಮದಾರ, ಸಿದ್ದೇಶ್ವರ ಪ್ರಥಮ ದರ್ಜೆ ಕಾಲೇಜು ಪ್ರಾಚಾರ್ಯ ಎ. ಎಸ್.ಲಾಲಸಂಗಿ, ವಕೀಲರಾದ ಎಸ್. ಕೆ.ಹರಪನಹಳ್ಳಿ, ಎಫ್.ವೈ.ದೊಡಮನಿ, ಜಗದೀಶ ತಳವಾರ ಹಾಗೂ ಕಾಲೇಜು ಸಿಬ್ಬಂದಿಗಳು ಇದ್ದರು.

ನರಗುಂದ ಸಿದ್ದೇಶ್ವರ ಕಾಲೇಜಲ್ಲಿ ನಡೆದ ರಾಷ್ಟ್ರೀಯ ಮತದಾರರ ದಿನಾಚರಣೆಯಲ್ಲಿ ನ್ಯಾಯಾಧೀಶ ಜೀನಪ್ಪ ಚೌಗಲಾ ಮಾತನಾಡಿದರು.

ದೇಶಿಯ ಆಟವಾಡಿ ಬಾಲ್ಯ ನೆನಪಿಸಿಕೊಂಡ ಪಾಲಕರು

ನರಗುಂದ: ಬಾಲ್ಯದಲ್ಲಿ ಆಡಿದ ದೇಶಿಯ ಆಟಗಳನ್ನು ಆಡುವ ಮೂಲಕ ಮಕ್ಕಳ ಪಾಲಕರು ತಮ್ಮ ಬಾಲ್ಯದಲ್ಲಿ ಆಡಿದ ಆಟೋಟಗಳಲ್ಲಿ ಪಾಲ್ಗೊಂಡು ಸಂತಸ ವ್ಯಕ್ತಪಡಿಸಿದರು.

ಇಲ್ಲಿನ ರೋಟ್ಯಾಕ್ಟ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಏರ್ಪಡಿಸಲಾಗಿದ್ದ ಮಕ್ಕಳ ಪಾಲಕರ ಕ್ರೀಡಾಕೂಟದಲ್ಲಿ ಎರಡನೂರು ಮಹಿಳೆಯರು, ಪುರುಷರು ಪಾಲ್ಗೊಂಡಿದ್ದು ಗಮನ ಸೆಳೆಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಕಾರ್ಯದರ್ಶಿ ರಾಜು ಕಲಾಲ ಮಾತನಾಡಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲಕರು ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಕ್ರೀಡಾಕೂಟದಲ್ಲಿ ಭಾಗವಹಿಸಿದ್ದು ಖುಷಿ ಕೊಟ್ಟಿದೆ ರುಣಾನುಬಂಧ ಇಲ್ಲದೆ ಸಂಬಂಧಗಳು ಬೆಳೆಯೋದಿಲ್ಲ, ಇದೇ ರೀತಿ ನಮ್ಮ ನಿಮ್ಮ ಸಂಬಂಧ ನಿರಂತರವಾಗಿರಲಿ, ನಾವು ಬಾಲ್ಯದಲ್ಲಿ ಆಡಿದಂತ ದೇಶಿಯ ಆಟಗಳು ಈಗ ಕಣ್ಮರೆಯಾಗಿವೆ ಅಂತ ಆಟಗಳನ್ನ ನೀವು ಇಲ್ಲಿ ಆಡಿ ನಿಮ್ಮ ಬಾಲ್ಯವನ್ನು ಮತ್ತೆ ನೆನಪಿಸಿಕೊಳ್ಳಿ ಎಂದು ಹೇಳಿದರು.

ಪಾಲಕರಾದ ಶಾಂತ ಗುದ್ದಲಿ ಅವರು ಮಾತನಾಡಿ, ಈ ಶಾಲೆಯಲ್ಲಿ ಇಂತಹ ವಿಶೇಷವಾದ ಕಾರ್ಯಕ್ರಮಗಳು ನಡೆಯುತ್ತಾ ಇರುತ್ತವೆ ಈ ಶಾಲೆ ಎಂದರೆ ನಮಗೆ ತುಂಬಾ ಹೆಮ್ಮೆಎಂದು ಹೇಳಿದರು.

ನವೀನ್ ಕಾಲ್ ಚಟ್ಟಿ ಅವರು ಮಾತನಾಡಿ ನಾವು ಕಲಿಯುವಾಗ ಶಾಲೆ ಚಿಕ್ಕದಾಗಿದ್ದು ಕಡಿಮೆ ವಿದ್ಯಾರ್ಥಿಗಳಿದ್ದರು, ಈಗ ಶಾಲೆಯು ದೊಡ್ಡದಾಗಿದೆ ಮತ್ತು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಶಾಲೆಯಲ್ಲಿ ಕಲಿತ ಅನೇಕ ವಿದ್ಯಾರ್ಥಿಗಳು ಉನ್ನತ ಹುದ್ದೆಯಲ್ಲಿ ಇದ್ದು ಶಾಲೆ ಉನ್ನತ ಹೆಸರು ಮಾಡಲಿ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯರಾದ ಪಿ ವಿ ಕೆಂಚನಗೌಡ್, ಎಫ್ ವಿ ಶಿರುಂದಮಠ, ಸಂಯೋಜಕರಾದ ಬಿ ಎಸ್ ಕಬಾಡ್ ಮತ್ತು ಶಾಲೆಯ ಗುರುಗಳು, ಗುರು ಮಾತೆಯರು ಹಾಗೂ ಪಾಲಕರು ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಕಾರ್ಯಕ್ರಮವನ್ನು ಶೈಲಾ ಜಗತಾಪ್ ನಿರೂಪಿಸಿದರು, ವೈ.ಆರ್. ತಳವಾರ್ ಸ್ವಾಗತಿಸಿದರು.

ಆರಾಮ

ವಿಶ್ವವಾಣಿ

ಸೋಮವಾರ 27 | 01 | 2025

ಚಿತ್ತ ವಿಹಾರ

ಸ್ವಾಭಾವಿಕ ಅಸ್ವಾಭಾವಿಕಗಳ ವಿವೇಕ

ಸಾಮಾನ್ಯವಾಗಿ ಪ್ರತಿದಿನ ನಮಗೆ ಎದುರಾಗುವ ಸ್ನೇಹಿ ತರು, ಬಂಧುಗಳು ಎಲ್ಲರನ್ನೂ 'ಚೆನ್ನಾಗಿದ್ದೀರಾ? ಹೇಗಿದ್ದೀರಿ?' ಎಂದು ಕೇಳುವ ಸಂಪ್ರದಾಯ ವಿದೆ. ಇದು ಸುಸಂಸ್ಕೃತ ನಡವಳಿಕೆ ಸಹ. ಹೀಗೆ ಕೇಳಿದಾಗ ಅವರಿಂದ ಬರುವ ಉತ್ತರ, ಬೇಸರ ದಲ್ಲಿದ್ದೇನೆ, ಮನಸ್ಸು ಸರಿಯಾಗಿಲ್ಲ, ಎನ್ನುವು ದಾಗಿದ್ದರೆ ನಮ್ಮ ಪ್ರತಿಕ್ರಿಯೆ ಹೇಗಿ ರುತ್ತದೆ ಎಂಬುದನ್ನು ಒಮ್ಮೆ ಗಮನಿ ಸೋಣ. 'ಯಾಕೆ ಬೇಸರ?' ಎಂದು ಪ್ರಶ್ನಿ ಸುತ್ತೇವೆ. ಸಾಧ್ಯವಾ ದಷ್ಟು ಅವರ ಮನ ಸ್ಸನ್ನು ಸಮಾಧಾನ ಗೊಳಿಸಲು ಪ್ರಯತ್ನಿಸುತ್ತೇವೆ. ಹಲವು ಬಾರಿ ಹಲವರ ಮನಸ್ಸಿನ ದುಗುಡ ಕಳೆಯಲು ಸಹ ಕಾರಣರಾಗಿರುತ್ತೇವೆ. ಆದರೆ ನಮ್ಮ ಮನಸ್ಸು ಸರಿ ಇಲ್ಲ ಎನಿಸಿದಾಗ, ಖಿನ್ನವಾದಾಗ ನಮ್ಮದೇ ಮನದೊಂದಿಗೆ ಕೆಲವು ಸಮಯ ಮಾತನಾ ಡಲು ವ್ಯವಧಾನ ತೋರದೆ ಇರುವುದು ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಇನ್ನೊಬ್ಬರನ್ನು ಸಂತೈಸುವ ಸಾಮರ್ಥ್ಯ ನಮ್ಮಲ್ಲಿದೆ ಎಂದಾದ ಮೇಲೆ, ನಮ್ಮನ್ನು ಸಂತೈಸಿಕೊಳ್ಳುವ ಕ್ಷಮತೆ ನಮ್ಮಲ್ಲಿ ಖಂಡಿತ ಇದೆ. ನಮ್ಮ ಮನಸ್ಸನ್ನು ಬೇಸರ ಆವರಿಸಿದಾಗ ಸಾವಧಾನವಾಗಿ ಬೇಸರಕ್ಕೆ ಕಾರಣ ಕೇಳಿಕೊಳ್ಳ ಬೇಕು. ಅವರು ಅವಮಾನಿಸಿದರು, ಇವರು ಉದಾಸಿನ ಮಾಡಿದರು ಎಂದೋ, ಕೆಟ್ಟದಾಗಿ ಮಾತನಾಡಿದರು ಎಂದೋ ಮರು ಉತ್ತರ ಬಂದಾಗ, ಮನಸ್ಸನ್ನು ಸಮಾಧಾನಗೊಳಿಸಿ, ಅವರ ಭಾವ ಅವರದ್ದು, ಅದು ಅವರ ಸ್ವಭಾವ, ಅವರು ಪಡೆದ ಸಂಸ್ಕಾರ. ಅದರಿಂದ ನನಗೇನೂ ಆಗದು. ನನ್ನ ಸಂತೋಷಕ್ಕೆ ಯಾವುದೇ ಧಕ್ಕೆ ಬಾರದು ಎಂಬ ಸಾಂತ್ವನ ನೀಡಿದರೆ, ಮನಸ್ಸು ಕೆಲವು ನಿಮಿಷಗಳಲ್ಲಿ ಸಹಜ ಸ್ಥಿತಿಗೆ ಮರಳುತ್ತದೆ. ಯಾರದ್ದೋ ಮಾತಿಗೆ ಕೆರಳದೆ, ದ್ವೇಷ ಸಾಧಿಸುವ ಹುನ್ನಾರ ಮಾಡದೆ, ಶಾಂತವಾಗಿ ತನ್ನ ಕೆಲಸ, ತನ್ನ ಗುರಿಯೆಡೆಗೆ ಹೊರಳು ತ್ತದೆ. ಇದಕ್ಕೆ ವಿರುದ್ಧ ವಾಗಿ ಬೇರೊಬ್ಬರ ಮಾತನ್ನು ನಡವಳಿಕೆಯನ್ನು ತೀವ್ರವಾಗಿ ಪರಿಗಣಿಸಿ, ನಮ್ಮ ಸುಪ್ತ ಮನಸ್ಸಿ ನಲ್ಲಿ ಅವರ ಬಗ್ಗೆ ದ್ವೇಷದ, ತಿರಸ್ಕಾರದ ಭಾವ ವನ್ನು ಬಿತ್ತಿದರೆ, ಅದೇ ಬೆಳೆದು ಹೆಮ್ಮರವಾ ಗುತ್ತದೆ. ಅವರು ದ್ವೇಷಕ್ಕೇ ಅರ್ಹರು, ಅವ ರನ್ನು ದ್ವೇಷಿಸುವುದೇ ಸ್ವಾಭಾವಿಕ ಎಂದು ಮನಸ್ಸಿನಲ್ಲಿ ಮುದ್ರಿಸಿ ಬಿಟ್ಟರೆ, ಅದೇ ಛಾಪು ಉಳಿದು, ಮನವು ದ್ವೇಷಿಸುವ ಕೆಲಸವನ್ನು ಪ್ರಾರಂಭಿಸಿಬಿಡುತ್ತದೆ. ಶಾಂತವಾಗಿ, ಸಮ ಚಿತ್ತದಿಂದ ಎಲ್ಲವನ್ನೂ ಸ್ವೀಕರಿಸುವುದು ಸ್ವಾಭಾ ವಿಕ ಮತ್ತು ಆರೋಗ್ಯಕರ ಮನಸ್ಸಿನ ಲಕ್ಷಣ. ದ್ವೇಷಿ ಸುವ, ದೂಷಿಸುವ ಗುಣಗಳು ಅಸ್ವಾಭಾ ವಿಕ ಮತ್ತು ಅನಾರೋಗ್ಯಕರ ಮನಸ್ಸಿನ ಲಕ್ಷಣ. ಅಸ್ವಾಭಾವಿಕವಾದುದನ್ನೇ ಸ್ವಾಭಾವಿಕ ಎಂದು ಸುಪ್ತ ಮನಸ್ಸಿಗೆ ಮತ್ತೆ ಮತ್ತೆ ಹೇಳುತ್ತಾ ಹೋದಾಗ, ಅದು ಅಸ್ವಾಭಾ ವಿಕ ವಾಗಿಯೇ ವರ್ತಿಸಲು ಪ್ರಾರಂಭಿಸುತ್ತದೆ. ವಿವೇಚ ನೆಯಿಂದ ಮನಸ್ಸನ್ನು ಸಂತೈಸಿದರೆ, ಕೆಲವೇ ನಿಮಿಷಗಳಲ್ಲಿ ಮನದ ಕಹಿಯನ್ನೆಲ್ಲ ಕಳೆದು ಬಿಡಬಹುದು. ಇನ್ನೂ ಮುಂದುವರೆದು ಬೇರೊಬ್ಬರು ನಮ್ಮನ್ನು ಅಪಮಾನಗೊಳಿಸುವ ಮಾತನಾಡಿದಾಗ, ನಮ್ಮ ಸುಪ್ತ ಮನಸ್ಸಿಗೆ, ನೀನಿರುವುದೇ ಹೀಗೆ, ನಿನ್ನನ್ನು ಜನ ಹೀಗೆಯೇ ನಡೆಸಿಕೊಳ್ಳುತ್ತಾರೆ ಎಂಬ ಭಾವ ನೀಡಿದರೆ, ಅದು ನಿರಂತರ ಕುಗ್ಗುತ್ತಾ, ಕೀಳ ರಿಮೆ ಎಡೆಗೆ ಸಾಗಿಬಿಡುತ್ತದೆ. ಪ್ರಾರಂಭದಲ್ಲಿ ವಿವೇಕದಿಂದ ವರ್ತಿಸಿದರೆ ಮುಂದಿನ ಅನಾಹುತಗಳನ್ನು ತಪ್ಪಿಸಬಹುದು.

• ಮಾಯಾ ಬಾಲಚಂದ್ರ

ಸಾಧನೆಗೆ ಮುದಿತನ ಅಡ್ಡವೇ?

• ಡಾ. ಎನ್ ಜಯರಾಮ ಶೆಟ್ಟಿ

ಮನುಷ್ಯ ದೀರ್ಘಾಯುಷಿಯಾಗಲು ಪ್ರಯತ್ನಿಸುತ್ತಾನೆ, ಪ್ರಾರ್ಥಿಸುತ್ತಾನೆ, ಆದರೆ ಮುದುಕನಾಗಲು ಇಷ್ಟಪಡುವುದಿಲ್ಲ! ಮುದುಕನೆಂದು ಪರೋಕ್ಷವಾಗಿಯಾದರೂ ಸಂಬೋಧಿಸಲ್ಪಟ್ಟಾಗ ಆತ ಸಿಡಿಯುತ್ತಾನೆಅಲ್ಲಒಳಗೊಳಗೆ ಭಯದಿಂದ ಕಂಪಿಸುತ್ತಾನೆ! ಮೊದಲ ಬಿಳಿಗೂದಲು ಗೋಚರಿಸಿದಾಗ ಸಣ್ಣ ಆಘಾತಕ್ಕೆ ಒಳಗಾಗುತ್ತಾನೆ. ಪ್ರಾಯ ಸಂದಂತೆ ತನ್ನ ಜೀವಮಾನವೇ ಮುಗಿಯಿತೆಂದು ಅರ್ಥೈಸಿಕೊಂಡು ಕ್ಷಣ ಕ್ಷಣಕ್ಕೂ ಸವೆಯುತ್ತಾನೆ, ಸಾಯುತ್ತಾನೆ! ತಾನು ಮುದುಕನಲ್ಲ, ತನಗೆ ಪ್ರಾಯವಾಗಿಲ್ಲವೆಂದು ತೋರಿಸಿಕೊಳ್ಳಲು ಕೃತಕ ವಸ್ತುಗಳ ಮುಖವಾಡಕ್ಕೆ ಮೊರೆಹೋಗುವುದು ಅದಕ್ಕೆ ತಾನೆ?



ಮುಪ್ಪು ಬವಣೆಯಲ್ಲ, ಬದಲಾವಣೆಯ ಇನ್ನೊಂದು ಘಟ್ಟ.

ಜೀವನವೆಂದರೆ ಬೆಳೆಯುತ್ತಾ, ಬೆಳಗುತ್ತಾ ಮುನ್ನಡೆಯುವುದು. ಜನ್ಮ ತಾಳಿದ್ದೇ ಒಂದು ಬದಲಾವಣೆ, ಬೆಳವಣಿಗೆ. ಅನೇಕ ಹಂತಗಳನ್ನು ದಾಟುವುದೇ ಜೀವನದ ಪರಿಯಾಗಿರುವಾಗ, ಮನುಷ್ಯ ಮುದುಕನಾಗಲು ಮುದುಡುವುದು ವಿಪರ್ಯಾಸವೇ ಸರಿ. ಪ್ರಾಯದ ಬಗ್ಗೆ ಗೌರವ ಮತ್ತು ಎಚ್ಚರಿಕೆಯಿರಬೇಕೇ ಹೊರತು ಭಯವಲ್ಲ! ಕೆಲವರು ತಾವು ಅಜ್ಜಿಯೆಂದು ಹೇಳಿಸಿಕೊಳ್ಳಲು ಸಹಿಸರು. ಮೊಮ್ಮಕ್ಕಳು ಅವರನ್ನು ದೊಡ್ಡಮ್ಮ, ಅಮ್ಮಮ್ಮ ಎಂದು ಕರೆಯಬೇಕಂತೆ! 'ಅಜ್ಜಿ' ಎನ್ನಬಾರದು ಎಂಬ ಭಾವ ಕೆಲವರಲ್ಲಿ. ಇಂತಹ ಮುಚ್ಚುಮರೆ ನಡವಳಿಕೆ ವ್ಯಕ್ತಿಯನ್ನು ಇನ್ನಷ್ಟು ಹಿಂಸಿಸದೆ ಬಿಡದು. ಅತ್ತೆ-ಸೊಸೆ ಜಗಳ ಈಗ ಹೊಸತೇನಲ್ಲ. ಅತ್ತೆಯ ಆಕ್ರೋಶಕ್ಕೆ ಮನೋವಿಜ್ಞಾನ ಉತ್ತರ ಹುಡುಕಿದೆ. ಸೊಸೆಯಾಗಿ ಬಂದಾಗ ತಾನು ನವಯೌವನೆಈಗ ಏನೂ ಅಲ್ಲಈ ಭಾವನೆ ಅವಳನ್ನು ಜಗಳಗಂಟಿ, ಕೆಟ್ಟ ಅತ್ತೆಯನ್ನಾಗಿ ಪರಿವರ್ತಿಸದಿರದೆ?

ಬದುಕು ಬಳಕೆಯಲ್ಲಿದೆ

ವಿಜ್ಞಾನಿ ಎಡಿಸನ್‌ರನ್ನು ಒಬ್ಬ ಸಂದರ್ಶಕ ಹೀಗೆ ಪ್ರಶ್ನಿಸಿದ್ದರು, 'ವಿದ್ಯುತ್ ಅಂದರೇನು?' ಎಡಿಸನ್ ಕೊಟ್ಟ ಉತ್ತರವೇನು ಗೊತ್ತೆ? 'ವಿದ್ಯುತ್ ಏನೆಂಬುದನ್ನು ಅದರ ವಿವಿಧ ಬಳಕೆಯಲ್ಲೇ ಕಾಣಬೇಕು'. ಜೀವನವೆಂದರೇನು? ಇದಕ್ಕೂ ಉತ್ತರ ಹಾಗೆಯೇ ಇರಬೇಕು. ಜೀವನವನ್ನು ಜೀವಿಸುವುದರಲ್ಲೇ ಅರ್ಥೈಸಿಕೊಳ್ಳಬೇಕು. ಕ್ಷಣ ಕ್ಷಣಕ್ಕೂ ಜೀವನ ಎದುರಾಗುತ್ತಿರುತ್ತದೆ. ಮುಪ್ಪು ಜೀವನ ವೃತ್ತದ ಒಂದು ಅವಿಭಾಜ್ಯ ಅಂಗವಾಗಿರುವಾಗ, ಆ ಹಂತವನ್ನು ಪ್ರೀತಿಯಿಂದ, ಗೌರವದಿಂದ ಅಪ್ಪಿಕೊಳ್ಳುವುದೇ ಸೂಕ್ತವಲ್ಲವೆ? ಚಿಗುರು ಮೊಗ್ಗಾಗಿ, ಮೊಗ್ಗು ಹೂವಿನಿಂದ ಹಣ್ಣಾಗಿ ಬೆಳವಣಿಗೆಯ ಪೂರ್ಣ ವೃತ್ತವನ್ನು ನಲಿಯುತ್ತಾ ಪ್ರಕೃತಿ ತೋರಿಸಿಕೊಳ್ಳುತ್ತದೆ. ಹೂ ನಲಿಯದಿದ್ದರೆ, ಅರಳದಿದ್ದರೆ ನೀವೇನನ್ನುವಿರಿ? ಅಂತೆಯೇ ಮುಪ್ಪಿನಲ್ಲಿ ನಾವು ಕದಡಿದರೆ, ಮುದುಡಿದರೆ ನಾವು ನಮ್ಮ ಸಹಜ ಪ್ರಕೃತಿಯನ್ನು ತಿರುಚಿ ವಿಕೃತಿಗೊಳಿಸಿದಂತೆ. ಜೀವನದಲ್ಲಿ ಮುಪ್ಪನ್ನು ಹಣ್ಣನ್ನು ಪಡೆಯುವ ಹಬ್ಬವನ್ನಾಗಿ ಆಚರಿಸಬೇಕು. ಮುಂದೊಂದು ದಿನ ನಿಮ್ಮನ್ನು 'ಹಣ್ಣು' ಮುದುಕನೆಂದು ಕರೆದರೆ, ನೀವೂ ಪ್ರಕೃತಿನಿಯಮದ ಹಣ್ಣನ್ನು ಪಡೆದ ಜಯಶಾಲಿಗಳೆಂದು ಸಂಭ್ರಮಿಸಿರಿ, ಹೆಮ್ಮೆಯಿಂದ ಬೀಗಿರಿ, ಧನ್ಯತೆಯಿಂದ ಬಾಗಿರಿ. ವೈಜ್ಞಾನಿಕ ಸಂಶೋಧನೆಗಳು, ಕಲೆ, ಕೃತಿಗಳು ಎಪ್ಪತ್ತರ ವಯಸ್ಸನ್ನು ದಾಟಿದ 'ಮುದುಕ' ರಿಂದ ಸಾಧ್ಯವಾಗಿವೆ. ಚಟುವಟಿಕೆ ಮತ್ತು ಲವಲವಿಕೆಯಿಂದಿರುವವರೆಲ್ಲರು 'ಯುವಕರು'! ನಮ್ಮ ಮಿದುಳಿಗೆ ಮುಪ್ಪೆಂದರೇನೆಂದು ತಿಳಿಯದು. ಮಿದುಳಿಗೆ ಮುಪ್ಪಿಲ್ಲ, ಉತ್ಸಾಹಕ್ಕೆ ಕೊನೆಯೆಂಬುದಿಲ್ಲ. ಮನುಷ್ಯ ಆಶಾವಾದ ಮತ್ತು ಸಾಧನಾ ಪ್ರಜ್ಞೆಯಿಂದಲೇ ಜೀವನ ಪರ್ಯಂತ ಯುವಕನಾಗಿರಲು ಸಾಧ್ಯ. ಜೀವನವೇ ಯೌವನ, ಮುಪ್ಪಿರುವುದು ಮನಸ್ಸಿನಲ್ಲಿ ಮಾತ್ರ! ನೀವು ಏನಾಗಿದ್ದೀರಿ, ಅದೇ ಸ್ಥಿತಿಯನ್ನು ಅಪ್ಪಿಕೊಳ್ಳುವುದೇ ಶ್ರೇಷ್ಠ ಪ್ರಾರ್ಥನೆಯೆನ್ನುವ ರಮಣ ಮಹರ್ಷಿಗಳ ಸಂದೇಶ ಮುಪ್ಪನ್ನು ದ್ವೇಷಿಸುವವರಿಗೆ, ಮುಪ್ಪಿಗೆ ಹೆದರುವವರಿಗೆ ಧೈರ್ಯತುಂಬಬಹುದೇನೊ?

ಸಾವಿನ ಭಯದಿಂದ ಎಲ್ಲವೂ ಕ್ಷಯ

ಪ್ರತಿದಿನ ನಾವು ನಿದ್ದೆಗೆ ಹೋಗುತ್ತೇವೆ. ಪುನ: ಏಳುತ್ತೇವೆಯೆನ್ನುವ ಅಚಲ ವಿಶ್ವಾಸ ಗಾಢ ನಿದ್ರೆಯನ್ನು ತರುತ್ತದೆ. ಸಂಶಯ ಮತ್ತು ಆತಂಕ ನಮ್ಮನ್ನು ಎಚ್ಚರಿಕೆಯಿಂದಿರಿಸಬಹುದು. ಆದರೆ ಗಮನಿಸಿ ಅಂತಹ ಎಚ್ಚರಿಕೆ ಅತೀವ ಬಳಲಿಕೆಗೆ ಸಮಾನ! ಅಂತಹ ಸಮಯದಲ್ಲಿ ನಿದ್ರೆ ತರುವ ಸುಖಕ್ಕೆ ಸಮಾನವಾದುದು ಬೇರಾವುದು? ಸಾವಿನ ಕಲ್ಪನೆ, ಮುಪ್ಪಿನ ಚಿಂತೆ ಅನಾವಶ್ಯಕ, ಹಿಂಸಿಸುವ ಎಚ್ಚರಿಕೆಯ ಸ್ಥಿತಿ ಯಾರಿಗೆ ಬೇಕು ಹೇಳಿ? ನಾವು ಕೈಗೆತ್ತಿಕೊಳ್ಳುವ ಕೆಲಸ ಕಾರ್ಯಗಳಲ್ಲಿ ಉತ್ಸಾಹ ತುಂಬಿಸಿಕೊಳ್ಳುವುದರಿಂದಲೇ ಕೆಲಸ ಸಾಗುತ್ತದೆ, ಬದುಕು ಹಸನಾಗುತ್ತದೆ. ಆ ಸ್ಥಿತಿಯಲ್ಲಿ ಬದುಕು ಸಾಗಿದಾಗ ಮುಪ್ಪು ನಮ್ಮನ್ನು ಪೀಡಿಸದು. ಯಾರು ಸದಾ ಕೆಲಸದಲ್ಲಿ 'ಮುಳುಗಿರುತ್ತಾರೊ' ಅವರು ಎಂದೂ ಉಸಿರುಗಟ್ಟಿ ಸಾಯುವುದಿಲ್ಲ. ಮುಪ್ಪು ಮತ್ತು ಸಾವು ನಾಚಿ ಆಚೆಗೆ ಸರಿಯುವಂತಿರಬೇಕು.

ಹವ್ಯಾಸ ಗಳ ಸಹವಾಸ

ಉತ್ತಮ ಹವ್ಯಾಸಗಳು ನಮ್ಮದಾಗಿರಲಿ. ಅವುಗಳಲ್ಲಿ ಓದು ಮತ್ತು ಬರಹ ಜೀವನ ಸಂಗಾತಿಗಳಾಗಿರಲಿ. ಪುಸ್ತಕ ಪ್ರೀತಿ ಬೆಳೆಸಿಕೊಂಡವರನ್ನು ನೋಡಿ. ಸಮಯವನ್ನು ಸದುಪಯೋಗಪಡಿಸಿಕೊಂಡು ಎತ್ತರದಿಂದ ಎತ್ತರಕ್ಕೆ ಬೆಳೆಯಬಲ್ಲರು ಅವರು. ಇಂತಹವರಿಗೆ ಮುದುಕರಾಗಲು ಸಮಯ ಎಲ್ಲಿದೆ? ಬರವಣಿಗೆ ಕೆಲವರಿಗೆ ಫಲಿಸುವ ಯೋಗ. ಬರಹಗಾರರಿಗೆ ನಿವೃತ್ತಿ ಇಲ್ಲವೇ ಇಲ್ಲ. ಪ್ರಾಯ ಸಂದಂತೆ ಅನುಭವದಲ್ಲಿ ಪಕ್ವತೆ, ಮತ್ತು ಪ್ರಯತ್ನದಲ್ಲಿ ನಿರಂತರತೆ ಈ ಎರಡನ್ನೂ ನಾವು ಗುರುತಿಸಬಹುದು. ಇಂತಹ ಯಾವುದಾದರೂ ಹವ್ಯಾಸ ಬೆಳೆಸಿಕೊಂಡರೆ, ಮುಪ್ಪು ಅದನ್ನು ಕಂಡು ಹೆದರಿ ಓಡುತ್ತದೆ. ಜೀವನ ವರುಷಗಳ ಓಟವಲ್ಲ, ಹೆಜ್ಜೆ ಹೆಜ್ಜೆಗೂ ಹೊಸ ಅರಿವಿನ ನಾಂದಿ. ಯೌವನದಲ್ಲಿ ಗೋಚರವಾಗದ ಅದೆಷ್ಟೋ ವಿಚಾರಗಳು ಮುಪ್ಪಿನಲ್ಲಿ ಎದುರಾಗಬಹುದು. ಮುಪ್ಪು ಬವಣೆಯಲ್ಲ, ಬದಲಾವಣೆಯ ಇನ್ನೊಂದು ಘಟ್ಟ.

ಸಂತೋಷವೇ ಶಕ್ತಿ

ಜೀವನದುದ್ದಕ್ಕೂ ಸಂತಸದಿಂದ ಬದುಕುವುದು ಅಸಾಧ್ಯವೇನಲ್ಲ. ಸಂತೋಷದಿಂದಿರುವುದು ನಮ್ಮ ಮೂಲ, ಸಹಜ ಗುಣ. ಆದರೆ, ನಾವು ಸಂತೋಷದ ಹುಡುಕಾಟದ ಭರಾಟೆಯಲ್ಲಿ ನಮ್ಮ ಮೂಲ ಎಳೆಗಳನ್ನು ಹರಿದುಕೊಳ್ಳುತ್ತಿರುತ್ತೇವೆ. ಈ ಕ್ಷಣ ವನ್ನು ಮಾತ್ರ ಬದುಕುವುದು ಎಷ್ಟು ಕಷ್ಟ ನಿಮಗೇ ತಿಳಿದಿದೆ. ನಮ್ಮ ಗೆಲುವಿಗೆ, ಸಂತಸಕ್ಕೆ ಕ್ರಿಯಾಶೀಲತೆ ಮತ್ತು ಪ್ರಯತ್ನಶೀಲತೆಯೊಂದೇ ಸಾಕು.

• ನಿವೇದಿತಾ ಎಚ್



ಇತ್ತೀಚೆಗೆ ಪ್ರಕಟವಾದ 'ತತ್ರಾಣಿ' ಕಾದಂಬರಿಯು ಗತ ಶತಮಾನದ ಉತ್ಕ್ರಾಂತಿಯ ಕತೆ ಎಂಬ ಟ್ಯಾಗ್ ಲೈನ್ ನೊಂದಿಗೆ ಅಂಕಿತ ಪುಸ್ತಕದಿಂದ ಪ್ರಕಟವಾಗಿದೆ. ದೀಪ ಜೋಶಿ ಅವರ ಈ ಕಾದಂಬರಿ, ಕಳೆದ ಶತಮಾನದ ಪೂರ್ವಾರ್ಧದಲ್ಲಿ ಆರಂಭವಾಗಿ ಉತ್ತರಾರ್ಧದಲ್ಲಿ ಕೊನೆಗೊಳ್ಳುವ ವಿಶಾಲ ಹರಹಿನ ಕೃತಿ.

ಸುಖವಾದ ಜೀವನವನ್ನು ನಡೆಸುತ್ತಿದ್ದ ಹುಚ್ಚಾಚಾರ್ಯರ ಸಾವಿನೊಂದಿಗೆ ಸುಂದರಾಬಾಯಿ, 14 ವರ್ಷದ ಹಿರಿಯ ಮಗ ಭುಜಂಗಾಚಾರ್ಯ ಮತ್ತು ಅವನ ಪುಟ್ಟ ಪುಟ್ಟ ಸೋದರ ಸೋದರಿಯರ ಜೀವನದ ಗತಿಯೇ ಬದಲಾಗಿ ಹೋಗುತ್ತದೆ.

ಗತ ಶತಮಾನದ ಸಂಕಷ್ಟದ ಕಥನ

ಅಂದಿನ ಕಾಲದಲ್ಲಿಯೇ ಬದರಿ ಯಾತ್ರೆ ಮಾಡಿದ ಆ ಸಂಸಾರದ ವೈಭವ ದಿನಗಳು ಹೇಳ ಹೆಸರಿಲ್ಲದಂತೆ ಮಾಯವಾಗಿ ತುತ್ತು ಕೂಳಿಗೂ ಪರದಾಡುವಂತಹ ಸಂದರ್ಭದಲ್ಲಿ ಭುಜಂಗಾಚಾರ್ಯರ ಒಪ್ಪತ್ತಿನ ಊಟದ ಶಪಥದೊಂದಿಗೆ ಅವರ ಬದುಕು ಆರಂಭವಾದರೆ, ಓದುಗರಿಗೆ ಬದುಕಿನ ನಿಜಾರ್ಥದ, ಸಾರ್ಥಕ್ಯದ ಪಾಠ ಆರಂಭವಾಗುತ್ತದೆ ಎಂದೇ ಹೇಳಬಹುದು.

ಬ್ರಿಟಿಷ್ ಆಡಳಿತ, ಬಿಜಾಪುರದ ಅರಸೊತ್ತಿಗೆಯ ಅಳಿವಿನ ಕಾಲದಲ್ಲಿ ತೆರೆದುಕೊಳ್ಳುವ ಕಾದಂಬರಿ ಇಂದಿನ ಕಾಲದ ಓದುಗರಾದ ನಮಗೆ, ನಾವು ನಿಂತಿರುವ ಈ ಕಾಲಘಟ್ಟದ ವರೆಗಿನ ಪಯಣವನ್ನು ಕಾದಂಬರಿ ಮಾಡಿಸುತ್ತದೆ. ಆಧುನಿಕತೆಗೆ ಆಗಿನ್ನು ತೆರೆದುಕೊಳ್ಳುತ್ತಿದ್ದ ಆ ಕಾಲಮಾನದ ಪೀಳಿಗೆ ಅನುಭವಿಸಿದ ಕಷ್ಟ ಕಾರ್ಪಣ್ಯಗಳು, ಜೀವನಶೈಲಿ, ರಕ್ತಗತವಾಗಿ ಬಂದಿದ್ದಂತಹ ಮೌಲ್ಯಗಳು, ಮಾನವೀಯತೆ, ಕಂದಾಚಾರ, ಶಿಷ್ಟಾಚಾರ, ನಂಬಿಕೆಗಳು, ಧಾರ್ಮಿಕತೆ, ಸ್ವಾರ್ಥ-ನಿಸ್ವಾರ್ಥಗಳು,ಬಲವಾದ ಸಂಬಂಧಗಳ ಬಂಧನ, ಕಷ್ಟ ಸಹಿಷ್ಣುತೆ ಹೀಗೆ ಎಲ್ಲವನ್ನೂ ಕಾದಂಬರಿ ಬಹಳ ಸಶಕ್ತವಾಗಿ ಕಟ್ಟಿಕೊಡುತ್ತದೆ.

ಇಲ್ಲಿ ಸಂಬಂಧಗಳು ಕೇವಲ ನಾಮಕಾವಸ್ತೆಗಾಗಿ ಅಲ್ಲ. ಎಲ್ಲರೂ ಎಲ್ಲರಿಗಾಗಿ ಮಿಡಿಯುತ್ತಾರೆ. ಅತಿಯಾದ ಕಟ್ಟುನಿಟ್ಟಾದ ಜಾತಿ ಕಟ್ಟಳೆಗಳನ್ನು ರೂಢಿಸಿಕೊಂಡು ಕರ್ಮಠರಾಗಿ ಬಂದಿದ್ದರೂ, ಎಲ್ಲಿಯೂ ಇನ್ನೊಬ್ಬರ ಮನಸ್ಸನ್ನು ಘಾಸಿಗೊಳಿಸುವ ರೂಕ್ಷತೆ ಇಲ್ಲದ ಸಹೃದಯಿಗಳು. ಇದು ನಮಗೆ ಭುಜಂಗಾಚಾರ್ಯರ ಸಂಪರ್ಕದಲ್ಲಿದ್ದ , ಗೌರವ್ವ ಹುಸೇನಿ ಇವರುಗಳನ್ನು ಅವರು ನಡೆಸಿಕೊಳ್ಳುವುದಲ್ಲಿ ತಿಳಿಯುತ್ತದೆ. ಹುಚಾಚ್ಚಾರ್ಯರು ಹುಗಿದಿಟ್ಟ ದಾಗೀನಗಳೆಡೆ ತಾಯಿ ಮಗ ಇಬ್ಬರೂ ಬೆಳೆಸಿಕೊಳ್ಳುವ ತಾಟಸ್ಥ್ಯ ಭಾವ ನಮಗೆಲ್ಲಾ ಪಾಠವಾಗಬೇಕು. ಭಗವದ್ಗೀತೆ ಹೇಳುವ ಹಲವು ಬದುಕಿನ ಪಾಠಗಳನ್ನು ನಿರಾಯಾಸವಾಗಿ ತಮ್ಮ ಬದುಕುವ ರೀತಿಯಿಂದ ಹೃದ್ಗತ ಮಾಡಿಕೊಂಡಿಕೊಂಡಿರುವ ಭುಜಂಗಾ ಚಾರ್ಯ, ಸುಂದರಾಬಾಯಿ, ವಿಜಯಾಬಾಯಿ, ವೆಂಕೂ, ಶಾಂತಾಬಾಯಿ ಇವರುಗಳು ಕಾಡುತ್ತಾರೆ. 'ಡಿಗ್ನಿಟಿ ಆಫ್ ಲೇಬರ್' ನಲ್ಲಿ ನಂಬಿಕೆಯಿಟ್ಟ ಕರ್ಮಠ ಸಹೃದಯಿ ಚಿಂತನಾಶೀಲ ಭುಜಂಗಚಾರ್ಯರ ವ್ಯಕ್ತಿತ್ವ ಓದುಗರನ್ನು ಆವರಿಸಿಕೊಳ್ಳುವುದರಲ್ಲಿ ಸಂದೇಹವೇ ಇಲ್ಲ.

ಇದಲ್ಲದೆ ಕಾದಂಬರಿ, ಇಂದು ನಾವು ಅಭ್ಯಾಸ ಮಾಡಿಕೊಂಡಿರುವ ಜೀವನಶೈಲಿ, ಆಹಾರದ ಅಭ್ಯಾಸಗಳು ಆ ಕಾಲದಲ್ಲಿ ಅಂಬೆಗಾಲಿಟ್ಟ ಬಗೆಯನ್ನು ತಿಳಿಸುವುದು ಸ್ವಾರಸ್ಯಕರವಾಗಿದೆ. ಚಹಾ ಇಂದು ನಮಗೆ ಅತಿಸಾಮಾನ್ಯ. ಆದರೆ ಅವು ಮೊದಲು ಕಾಲಿಟ್ಟಾಗ ಉಂಟಾದ ಕ್ಲೇಷ, ಹೊತ್ತಿದ ಕ್ರಾಂತಿಯ ಕಿಡಿಗಳನ್ನು ಓದುವಾಗ ನಮಗೆ ಸೋಜಿಗವೆನಿಸುತ್ತದೆ. ಪ್ಯಾಂಟು, ವಾಚು, ಗ್ರಾಫೋನು, ರೇಡಿಯೋ, ಮೈಕ್ ಸೆಟ್ಟು ಇವುಗಳ ಪರಿಚಯ ಜೀವನದಲ್ಲಿ ತಂದ ಬದಲಾವಣೆಗಳು ಆಗು ಮಾಡಿದ ಏರುಪೇರುಗಳನ್ನು ಓದುವುದೇ ಬೆರಗು.

ಬೇಷರತ್ ಭಕ್ತಿ

ಕೇದಾರ ಬದರೀ ಯಾತ್ರೆಗಳ ಬಗೆಗೆ ಓದುವಾಗ ಅಂದಿನವರ ಜೀವನ ಪ್ರೀತಿ, ದೇವರೆಡೆಗಿನ ಬೇಷರತ್ ಭಕ್ತಿ ನಂಬಲ ಸಾಧ್ಯವೆನಿಸುತ್ತವೆ. 336 ಪುಟಗಳ ಈ ಬೃಹತ್ ಕಾದಂಬರಿ ಗಿರಕಿ ಹೊಡೆಯುವುದೇ ಭುಜಂಗಾಚಾರ್ಯ ಮತ್ತು ಸುಂದರಾ ಬಾಯಿಯವರ ಸುತ್ತ.ಯಾರಲ್ಲಿಯೂ ಕೈಚಾಚದೆ 'ಬಂದದ್ದೆಲ್ಲಾ ಬರಲಿ ಗೋವಿಂದನ ದಯೆಯಿರಲಿ' ಎನ್ನುತ್ತಾ, ಸ್ವಾಭಿಮಾನದಿಂದ ಆತ್ಮ ಗೌರವದಿಂದ ಸಾಗಿಸಲು ಈ ಇಬ್ಬರೂ ಅಹರ್ನಿಶಿ ತಮ್ಮನ್ನು ತಾವೇ ಸಮರ್ಪಿಸಿಕೊಂಡಿರುವ ಬಗೆಯನ್ನು ಓದುತ್ತಿದ್ದರೆ ನಾವೆಲ್ಲ ಈಗ ಬಯಸುವ ವೈಯಕ್ತಿಕ ಸುಖದಂತಹ ಪದಗಳು ಅರ್ಥವನ್ನೇ ಕಳೆದುಕೊಂಡು, ನಾವೆಷ್ಟು ಸ್ವಾರ್ಥಿಗಳು ಎಂಬ ಯೋಚನೆ ಮೂಡಿ ಅಪರಾಧೀ ಪ್ರಜ್ಞೆ ಕಾಡತೊಡಗುತ್ತದೆ. ಸಾಕಷ್ಟು ಪಾತ್ರಗಳು, ಮೂರು ತಲೆಮಾರುಗಳು ಜೊತೆಗೆ ಚಿಗುರೊಡೆಯುತ್ತಿರುವ ನಾಲ್ಕನೇ ತಲೆಮಾರಿನ ಕತೆಯನ್ನು ದೀಪಾ ಜೋಶಿ ಸಾಕಷ್ಟು ಸಾವಧಾನವಾಗಿ ಎಲ್ಲಿಯೂ ಹಳಿ ತಪ್ಪದಂತೆ, ಕೊಂಡಿ ಕಳಚದಂತೆ ಹೇಳುತ್ತಾ ಸಾಗಿದ್ದಾರೆ.

ಮಧ್ಯದಲ್ಲಿ ಸ್ಥಿರವಾಗಿರುವಿಕೆ

ಅಸಮತೋಲ ಸ್ಥಿತಿಯಲ್ಲಿದ್ದವನಿಗೆ (ಆಯುಕ್ತ) ಬುದ್ಧಿ ಹಾಗೂ ಭಾವ ಇವುಗಳ ಕೊರತೆ ಇರುತ್ತದೆ. ಇದರ ಪರಿಣಾಮವಾಗಿ ಅವನಿಗೆ ಶಾಂತಿ ಸಿಗುವುದಿಲ್ಲ, ಆನಂದವೂ ಇರುವುದಿಲ್ಲವೆಂದು ಕೃಷ್ಣ ಹೇಳುತ್ತಾನೆ.(2.66) ಅವನು ಸಮಚಿತ್ತದ ಮೇಲೆ ಒತ್ತು ಕೊಡುತ್ತಾನೆ (2.38 2.48). ಈ ಸ್ತೋತ್ರವು ಕೂಡ ಅದನ್ನೇ ಬೇರೆ ದೃಷ್ಟಿಕೋನದಿಂದ ಹೇಳುತ್ತದೆ.

ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ವ್ಯಕ್ತಿಯು ತನ್ನನ್ನು ಮಧ್ಯದಲ್ಲಿ ಸ್ಥಿರಗೊಳಿಸಿಕೊಳ್ಳುವವರೆಗೆ ಮಿತ್ರರು, ಶತ್ರುಗಳು, ಕೆಲಸ, ಹೆಂಡತಿ, ಮಕ್ಕಳು, ಹಣ, ಸುಖ, ಅಧಿಕಾರ , ಆಸ್ತಿ ಮುಂತಾದವುಗಳಿಗೆ ಭದ್ರವಾಗಿರುತ್ತಾನೆ. ಇದು ಅಸಮತೋಲಿತ ವ್ಯಕ್ತಿಯ ಗುರುತು ಆಗಿರುತ್ತದೆ. ಯಾರಾದರೂ ಹಣದ ಬಗ್ಗೆಯೇ ಕೇಂದ್ರೀಕೃತವಾಗಿದ್ದರೆ ಅವನ ಎಲ್ಲ ಯೋಜನೆಗಳು ಕಾರ್ಯಗಳು ಉಳಿದೆಲ್ಲ ವಿಷಯಗಳಾದ ಸಂಬಂಧ, ಆರೋಗ್ಯ ಮುಂತಾದವು ಹಾನಿಯಾದರೂ ಸಂಪತ್ತನ್ನು ಹೆಚ್ಚಿಸುವತ್ತ ಸುತ್ತುತ್ತಿರುತ್ತವೆ. ಅವನಿಗೆ ಸಂತೋಷವೇ ಮುಖ್ಯವಾಗಿದ್ದರೆ ಅವನು ಇತರರಿಗೆ ಮೋಸ ಮಾಡಲು ಅಥವಾ ಇನ್ನಾವುದನ್ನಾಗಲಿ ಮಾಡಲು ಹೇಸುವುದಿಲ್ಲ. ಹೆಂಡತಿಯೇ ಮುಖ್ಯವಾಗಿರುವ ಮನುಷ್ಯನು ಜಗತ್ತು ತನ್ನ ಹೆಂಡತಿಯನ್ನು ಹೇಗೆ ನೋಡಿಕೊಳ್ಳುತ್ತದೆ ಎಂಬುದರ ಬಗ್ಗೆ ಯೋಚಿಸುತ್ತಿರುತ್ತಾನೆ. ಶತ್ರುವಿನ ಬಗ್ಗೆ ಯೋಚಿಸುವ ವ್ಯಕ್ತಿಯು ತನಗೆ ಹಾನಿಯಾದರೂ ಇತರ ಶತ್ರುವಿಗೆ ಹಾನಿ ಉಂಟುಮಾಡುವ ವಿಚಾರದಲ್ಲಿಯೇ ಇರುತ್ತಾನೆ.

ನಾವು ಸಂಪೂರ್ಣ ಇತರರ ಮೇಲೆ ಅವಲಂಬಿತವಾಗಿದ್ದರೆ ನಮ್ಮ ಶಾಂತಿ, ನೆಮ್ಮದಿ ಅವರ ಕೈಯಲ್ಲಿರುತ್ತದೆ. ಇದರಿಂದ ನಾವು ಪರಾವಲಂಬಿಗಳಾಗುತ್ತೇವೆ. ಆದ್ದರಿಂದಲೇ ನಾವು ಮಧ್ಯದಲ್ಲಿದ್ದು ಸಮ ಚಿತ್ತರಾಗಿದ್ದರೆ ಅದೇ ಅಂತಿಮ ಸ್ವಾತಂತ್ರ್ಯ (ಮೋಕ್ಷ) ಎಂದು ಕೃಷ್ಣ ತಿಳಿಸುತ್ತಾನೆ. ಕೃಷ್ಣ ಭಾವ ಎಂಬ ಶಬ್ದವನ್ನು ನಮ್ಮ ಉತ್ಕಟ ಅನಿಸಿಕೆಗಳಿಗೆ ಸಮನಾಗಿ ಉಪಯೋಗಿಸುತ್ತಾನೆ. ಯಾವುದೇ ವ್ಯಕ್ತಿ ಅಥವಾ ವಸ್ತು ನಮಗೆ ಅಂಟಿಕೊಂಡಿದ್ದರೆ ಉತ್ಕಟ ಭಾವನೆ ನಮ್ಮಲ್ಲಿ ಉಂಟಾಗುತ್ತದೆ. ಇಲ್ಲದಿದ್ದರೆ ಅವರು ನಮ್ಮ ಹೃದಯಸ್ಪರ್ಶಿಯಾಗಲಾರರು. ಇದರ ಅರ್ಥ ನಮ್ಮೆಲ್ಲ ಉತ್ಕಟ ಭಾವನೆಗಳು ವೈಯಕ್ತಿಕ ಆದರೆ ಕೃಷ್ಣನ ಪ್ರಕಾರ ಭಾವ ಸಮಚಿತ್ತದಿಂದ ಉದ್ಭವವಾಗುತ್ತದೆ. ಇದು 'ನನ್ನ' ಎಂಬುದನ್ನು ಒಳಗೊಂಡಿರಲಿ, ಬಿಡಲಿ. ನಮ್ಮ ಪರಿಸರ ಅಸಹ್ಯವಾಗಿರಲಿ, ಅವ್ಯವಸ್ಥಿತವಾಗಿರಲಿ ಹಾಗೂ ಗೊಂದಲಮಯವಾಗಿರಲಿ ಮಧ್ಯದಲ್ಲಿದ್ದು ಆಂತರಿಕ ಸಾಮರಸ್ಯ ಹೊಂದಿದವನ ಮೇಲೆ ಅವು ಯಾವ ಪರಿಣಾಮ ಮಾಡಲೂ ಸಾಧ್ಯವಿಲ್ಲ. ಇದನ್ನೇ ಕೃಷ್ಣ ಶಾಂತಿ ಹೊಂದುವಿಕೆ ಎಂದು ಹೇಳುತ್ತಾನೆ. ಇದು ಅಂತಿಮವಾಗಿ ಆನಂದವನ್ನುಂಟು ಮಾಡುತ್ತದೆ.

ಸಿರಿಧಾನ್ಯಗಳ ಕಲಾತ್ಮಕ ಪ್ರದರ್ಶನ!

• ಹೊಸ್ಮನೆ ಮುತ್ತು

ಪೌಷ್ಟಿಕಾಂಶಗಳ ಆಗರವಾದ ಸಿರಿಧಾನ್ಯಗಳು ನಮ್ಮ ಆರೋಗ್ಯಕ್ಕೆ ತುಂಬಾ ಒಳ್ಳೆಯದು. ಸಿರಿಧಾನ್ಯಗಳು ನಮ್ಮ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತವೆ. ಪ್ರೋಟೀನ್, ವಿಟಮಿನ್‌ಗಳು, ಖನಿಜಗಳು, ಆಂಟಿಆಕ್ಸಿಡೆಂಟ್‌ಗಳು ಹಾಗೂ ನಾರಿನಂಶದಿಂದ ಸಮೃದ್ಧವಾಗಿರುವ ಸಿರಿಧಾನ್ಯಗಳು ದೀರ್ಘಕಾಲದ ರೋಗಗಳನ್ನು ತಡೆಯುವುದಲ್ಲದೇ, ಮಧುಮೇಹ, ಹೃದಯರೋಗ, ಕ್ಯಾನ್ಸರ್‌ನಂತಹ ರೋಗಗಳ ಅಪಾಯವನ್ನು ಕಡಿಮೆ ಮಾಡುತ್ತವೆಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಸಿರಿಧಾನ್ಯಗಳಲ್ಲಿರುವ ನಾರಿನಂಶ ಜೀರ್ಣಕ್ರಿಯೆಗೆ ಸಹಾಯ ಮಾಡಿ, ಮಲಬದ್ಧತೆಯ ಸಮಸ್ಯೆಯನ್ನು ನಿವಾರಿಸುತ್ತದೆ. ಇದು ಆರೋಗ್ಯಕರ ತೂಕವನ್ನು ಕಾಪಾಡಿಕೊಳ್ಳಲು ಸಹಾಯಕ.

ಹೆಚ್ಚು ಪೌಷ್ಟಿಕಾಂಶಗಳನ್ನು, ಹೇರಳ ನಾರಿನಂಶವನ್ನು ಹೊಂದಿರುವ, ನಿಸರ್ಗಕ್ಕೆ ಹಾನಿ ಮಾಡದಂತೆ ಬೆಳೆಯುವ ಸಿರಿಧಾನ್ಯಗಳ ಬಳಕೆ ಹೆಚ್ಚಿಸಲು, ಜನರಲ್ಲಿ ಸಿರಿಧಾನ್ಯಗಳ ಕುರಿತು ಜಾಗೃತಿ ಮೂಡಿಸಲು ಮತ್ತು ಸಾವಯವ ಕೃಷಿ ಉತ್ತೇಜಿಸಲು ಇತ್ತೀಚೆಗೆ ಬೆಂಗಳೂರಿನಲ್ಲಿ ಮೂರು ದಿನಗಳ ಸಾವಯವ ಮತ್ತು ಸಿರಿಧಾನ್ಯದ ಅಂತರರಾಷ್ಟ್ರೀಯ ವಾಣಿಜ್ಯ ಮೇಳ ಆಯೋಜಿಸಲಾಗಿತ್ತು. ಈ ಪ್ರದರ್ಶನದಲ್ಲಿ ಸಂಪೂರ್ಣವಾಗಿ ಸಿರಿಧಾನ್ಯಗಳನ್ನೇ ಬಳಸಿ ಸಿದ್ಧಪಡಿಸಿದ ಆಕರ್ಷಕ ವಿನ್ಯಾಸದ ಕೆಲವು ಚಿತ್ರಗಳು, ರಂಗೋಲಿಗಳು ವೀಕ್ಷಕರ ಮೆಚ್ಚುಗೆಗೆ ಪಾತ್ರವಾದವು. ಈ ಚಿತ್ರವು ಕಲಾತ್ಮಕವಾಗಿ ತುಂಬಾ ಸುಂದರವಾಗಿದ್ದು, ವಿವಿಧ ಬಣ್ಣಗಳು ಮತ್ತು ವಿನ್ಯಾಸಗಳು ಚಿತ್ರಕ್ಕೆ ಅದ್ಭುತವಾದ ನೋಟವನ್ನು ನೀಡಿವೆ. ಈ ಚಿತ್ರದಲ್ಲಿ ಬಳಸಲಾದ ವಿವಿಧ ಬಗೆಯ ಸಿರಿಧಾನ್ಯಗಳು ತಮ್ಮದೇ ಆದ ವಿಶಿಷ್ಟ ಬಣ್ಣ ಮತ್ತು ರಚನೆಯನ್ನು ಹೊಂದಿವೆ. ಈ ವೈವಿಧ್ಯತೆಯನ್ನು ಬಳಸಿಕೊಂಡು ಕಲಾಕಾರರು ಚಿತ್ರ ರಚಿಸಿದ್ದಾರೆ. ಪ್ರತಿಯೊಂದು ಬಿಂದು, ರೇಖೆ ಮತ್ತು ಆಕಾರವು ಸಿರಿಧಾನ್ಯಗಳ ಸಹಾಯದಿಂದ ಸೃಷ್ಟಿಯಾಗಿದೆ. ಚಿತ್ರದಲ್ಲಿನ ವಿವಿಧ ಅಂಶಗಳು ನಮ್ಮ ಗ್ರಾಮೀಣ ಜೀವನ ಮತ್ತು ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ಗೋವು, ಹಸುರು ಹೊಲಗಳು, ನೃತ್ಯ ಮಾಡುವ ಮಹಿಳೆಯರು, ಕೆರೆ ಇವೆಲ್ಲವೂ ನಮ್ಮ ದೈನಂದಿನ ಜೀವನದ ಒಂದು ಭಾಗವಾಗಿದೆ. ಸಿರಿಧಾನ್ಯಗಳನ್ನು ಬಳಸಿಕೊಂಡು ಅತ್ಯಂತ ಸರಳ ಹಾಗೂ ಸುಂದರವಾಗಿ ಮಾಡಿದ ಈ ಚಿತ್ರವು ನಮ್ಮ ಸಂಸ್ಕೃತಿ ಮತ್ತು ಪರಿಸರದೊಂದಿಗಿನ ನಮ್ಮ ನಂಟನ್ನು ಪ್ರತಿಬಿಂಬಿಸುವ ಒಂದು ಅರ್ಥಪೂರ್ಣ ಕಲಾಕೃತಿಯಾಗಿದೆ.

ಭಕ್ತಿಯಿಂದ ಸಮರ್ಪಿಸಿಕೊಂಡಾಗ ಮುಕ್ತಿ ನೀಡುವ ಭಗವಂತ

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಒಮ್ಮೆ ಪುರಂದರದಾಸರು ಶೌಚ ಮುಗಿಸಿ ಬಂದು, ಕಾಲು ತೊಳೆಯಲು ನೀರು ಕೇಳಿದರೆ ಮಗನು ಬಂದು ವಿಠಲನ ಪೂಜೆಗೆ ಇಟ್ಟಿದ್ದ ಚಿನ್ನದ ತಂಬಿಗೆಯಲ್ಲಿದ್ದ ನೀರು ತಂದು ಕೊಡುವನು.

ಅದನ್ನು ಕಂಡು ಕೋಪಗೊಂಡು, 'ದೇವರ ತಂಬಿಗೆಯಲ್ಲಿ ನೀರು ತಂದೆಯಾ?' ಎಂದು ಬಾಲಕನ ತಲೆಗೆ ಜೋರಾಗಿ ಮಟ್ಟಿದರು. ಬಾಲಕ ಅಳುತ್ತಾ ಹೋದ.

ಇದಾಗಿ ಕೆಲವು ದಿನಗಳ ನಂತರ ಗುಡಿಯಲ್ಲಿ ವಿಠಲನ ರತ್ನಕಂಕಣ ಕಾಣೆಯಾಗಿತ್ತು. ಎಲ್ಲರೂ ಹುಡುಕುತ್ತಿರಲು ಗುಡಿಗೆ ವಿಠಲನ ದರ್ಶನಕ್ಕೆ ಬಂದ ವೇಶ್ಯೆಯ ಕೈಯಲ್ಲಿ ಕಂಕಣ ಕಂಡಿತು.

ಅವಳನ್ನು ಕರೆಸಿ ಪ್ರಶ್ನೆ ಮಾಡಲು 'ನನಗೆ ಎಲ್ಲಿಂದ ಬರಬೇಕು ಸ್ವಾಮಿ ಈ ರತ್ನಕಂಕಣ? ಪುರಂದರ ದಾಸರೇ ಕೊಟ್ಟದ್ದು' ಎಂದು ಹೇಳಿದಳು.

ಅದನ್ನು ಕೇಳಿ ದಾಸರನ್ನು ಕಳ್ಳತನದ ಆರೋಪದ ಮೇಲೆ ಕಂಬಕ್ಕೆ ಕಟ್ಟಿ ಛಡಿ ಏಟು ಶಿಕ್ಷೆ ಕೊಡಿಸಿದರು.

ಆಗ ದಾಸರು, 'ಯಾವ ಪಾಪಕ್ಕೆ ಈ ಶಿಕ್ಷೆ ವಿಠಲಾ?' ಎಂದು ಕಣ್ಣು ಮುಚ್ಚಿ ವಿಠಲನ ಧ್ಯಾನಿಸುವರು.

ವಿಠಲನು ನಿನ್ನ ಕಾಲಿಗೆ ನನ್ನ ಚಿನ್ನದ ಗಿಂಡಿಯಲ್ಲಿ ನೀರು ತಂದು ಕೊಟ್ಟರೆ ನನಗೇ ತಲೆಗೆ ಮಟ್ಟಿದೆಯಲ್ಲ ಆ ಏಟಿಗೆ ಈ ಸೇಡು. ನಾನೇ ವೇಶ್ಯೆಯ ಮನೆಗೆ ಹೋಗಿ ನಿನ್ನ ಸೋಗಿನಲ್ಲಿ ನನ್ನ ರತ್ನ ಕಂಕಣ ಕೊಟ್ಟು ಬಂದೆ ಎಂದು ತಿಳಿಸಿದ ಮೇಲೆ ದಾಸರು ಈ ರೀತಿ ಅವನ ಕೀರ್ತನೆ ರಚಿಸಿ ಹಾಡುವರು ..

ಮುಯ್ಯಕ್ಕೆ ಮುಯ್ಯಿ ತೀರಿತು, ಜಗದಯ್ಯ ವಿಜಯ್ಯ ಸಾಹಯ್ಯ ಪಂಢರಿರಾಯ ॥

ಸಣ್ಣವನೆಂದು ನಾ ನೀರು ತಾರೆಂದರೆ
ಬೆಣ್ಣೆಕಳ್ಳ ಕೃಷ್ಣ ಮರವೆ ಮಾಡಿ
ಚಿನ್ನದ ಗಿಂಡಿಲಿ ನೀರು ತಂದಿಟ್ಟರೆ
ಕಣ್ಣು ಕಾಣದೆ ನಾ ಠೊಣೆದೆ ಪಂಢರಿರಾಯ ॥
ಎನ್ನ ಪೆಸರು ಮಾಡಿ ಸೂಳೆಗೆ ಕಂಕಣವನ್ನು
ನೀನಿತ್ತೆ ನಿಜರೂಪದಿ
ಎನ್ನ ಪೀಡಿಸಿ ಪರಮ ಬಂಡನ ಮಾಡಿ
ನಿನ್ನ ಮುಯ್ಯಕ್ಕೆ ಮುಯ್ಯಿ ತೀರಿಸಿಕೊಂಡ್ಯಯ್ಯ ॥
ಭಕ್ತವತ್ಸಲನೆಂಬ ಬಿರುದು ಬೇಕಾದರೆ
ಭಕ್ತರಾಧೀನನಾಗಿರಬೇಡವೆ?
ಯುಕ್ತಿಯಲಿ ನಿನ್ನಂಥ ದೇವರ ನಾ ಕಾಣೆ
ಮುಕ್ತೀಶ ಪುರಂದರವಿಠಲ ಪಂಢರಿರಾಯ ॥

ಇದರಿಂದ ಪ್ರೀತನಾದ ವಿಠಲ ಅಲ್ಲೇ ಇದ್ದ ಭಕ್ತನೊಬ್ಬನ, ಮೈಮೇಲೆ ಬಂದು ದಾಸರ ತಪ್ಪೇನೂ ಇಲ್ಲವೆಂದೂ, ಅವರ ಕಳಂಕ ತಾನೇ ಅಳಿಸಿದನಂತೆ. ತನ್ನ ಭಕ್ತರ ಸಹಾಯಕ್ಕೆ ತಾನು ಇದ್ದೇನೆ ಅವರ ಹಿಂದೆ ಮುಂದೆ ಬೆಂಬಿಡದೆ ಓಡಾಡುತ್ತಾ ಕಾಪಾಡುತ್ತೇನೆ ಎಂದು ವಿಠಲ ನೀಡಿದ ಭರವಸೆ ಇದು. ಕಾಯುವ ವನೂ ನಾನೇ, ಕಳೆವವನೂ ನಾನೇ ಎಂದು ಬ್ರಹ್ಮಾಂಡ ದೊಡೆಯ ಮುಕ್ತೀಶ ಹೀಗೆ ತೋರಿದ ಲೀಲೆಯಿದು. ಈ ಕಥೆ ಹಲವು ರೀತಿಯಲ್ಲಿ ಪ್ರತೀತಿಯಲ್ಲಿ ಇದೆ, ಆದರೆ ತಾತ್ಪರ್ಯ ಇಷ್ಟೇ ತಪ್ಪು ಮಾಡಿದಾಗ ಭಗವಂತ ತಾನು ನೀಡುವ ಶಿಕ್ಷೆಗಳನ್ನು, ಪ್ರಾಮಾಣಿಕ ಪಶ್ಚಾತ್ತಾಪಕ್ಕೆ ತಾನೇ ಕರಗಿ ಪರಿಹರಿಸುತ್ತಾನೆ. ಅವನಲ್ಲಿ ಅಪರಿಮಿತವಾದ ನಂಬಿಕೆ, ಭಕ್ತಿ ಭಾವ ಸದಾ ಇರಬೇಕಷ್ಟೇ.

ಇಂದಿನ ದಿನಗಳಲ್ಲಿ ಒಂದು ಚಿಕ್ಕ ಕಷ್ಟ ಎದುರಾ ದರೂ ಕೂಡ ನಾವು ಆತ್ಮವಿಶ್ವಾಸವನ್ನ, ಆತ್ಮಸ್ಥೈರ್ಯ ವನ್ನು ಕಳೆದುಕೊಂಡು ಬಿಡುತ್ತೇವೆ. ಇನ್ನು ಮುಂದೆ ದಾರಿಯೇ ಇಲ್ಲ ಎಂದು ಖಿನ್ನತೆಗೆ ಒಳಗಾಗುತ್ತೇವೆ. ವೈದ್ಯರು ಆಪ್ತ ಸಮಾಲೋಚಕರು ಯಾರು ಎಷ್ಟೇ ನಮಗೆ ಸಹಾಯ ಮಾಡಿದರೂ, ನಮ್ಮೊಳಗೆ ಆತ್ಮ ವಿಶ್ವಾಸ, ಆತ್ಮಸ್ಥೈರ್ಯ ಮೂಡದೆ ಇದ್ದರೆ ನಾವು ಆ ಮನಸ್ಥಿತಿಯಿಂದ ಹೊರಬರಲು ಸಾಧ್ಯವಿಲ್ಲ. ಇದಕ್ಕೆ ಅಪರಿಮಿತವಾದ ಭಕ್ತಿ ಮತ್ತು ಭಗವಂತನಲ್ಲಿ ನಂಬಿಕೆ ಇರಬೇಕು. ನಮ್ಮನ್ನು ನಾವು ಅವನಿಗೆ ಸಮರ್ಪಿಸಿ ಕೊಂಡು ಎಲ್ಲವನ್ನು ನೀನು ನಿಭಾಯಿಸು ಎಂದು ಎಲ್ಲ ಭಾರವನ್ನು ಅವನಿಗೆ ಹಾಕಿ ನಮ್ಮ ಬದುಕನ್ನು ಎದುರಿಸಲು ಪ್ರಾರಂಭಿಸಿದಾಗ ಭಗವಂತ ಯಾವುದಾ ದರೂ ರೂಪದಲ್ಲಿ ಬಂದು ನಮಗೆ ಸಹಾಯ ಮಾಡಿಯೇ ಮಾಡುತ್ತಾನೆ. ನಂಬಿ ಕೆಟ್ಟವರಿಲ್ಲವೋ ಶ್ರೀಹರಿ, ನಿನ್ನ ನಂಬಿ ಕೆಟ್ಟವರಿಲ್ಲವೋ..!

ಪ ದ ಬಂ ಧ



ಎಡದಿಂದ ಬಲಕ್ಕೆ

1. ಕಾಟ ಅಥವಾ ತೊಂದರೆಗೆ ಮತ್ತೊಂದು ಹೆಸರು (4)
3. ಮೊದಲಿಗೆ ಮಾಡಿದ ಹೀಯಾಳಿಕೆ (4)
5. ಸ್ವರ್ಗದ ವಿರುದ್ಧ ಪದ (3)
7. ವಿನೋದಕ್ಕೆ ಮತ್ತೊಂದು ಹೆಸರು (3)
9. ಮರದ ಮೆಟ್ಟು (3)
11. ಮನದಲ್ಲಿನ ಉತ್ಸುಕತೆ (3)
13. ಶಾಂತಿಗೆ ಪರ್ಯಾಯವಾಗಿ ಬಳಸುವ ಪಕ್ಷಿ (4)
14. ಗೌರವಕ್ಕೆ ಪಾತ್ರನಾದವನು, ಶ್ರೇಷ್ಠ (4)
16. ಹಣವನ್ನು ಖರ್ಚು ಮಾಡಲು ಹಿಂಜರಿಯುವ ಲೋಭಿ (3)
18. ಇರುಳು ಕಂಡ ಸ್ವಪ್ನ (3)
20. ಜೈನರ ದೇವಾಲಯ (3)
22. ಉಗ್ರತೆಯಿಂದ ಕೂಡಿದ್ದು, ಭಯಂಕರವಾದುದು (3)
24. ಉಪವಾಸಕ್ಕೆ ಇನ್ನೊಂದು ಹೆಸರು (4)
25. ಮಹತ್ತರವಾದ ಕಾರ್ಯಕ್ಕಾಗಿ ನೀಡುವ ಆಹುತಿ (4)

ಮೇಲಿನಿಂದ ಕೆಳಕ್ಕೆ

1. ಕಿಟಾರನೆ ಕಿರುಚಿದ ಬೇಡ (3)
2. ನೀರು ಬರುವನಲ್ಲಿ ತಿರುಗಿದೆ (2)
3. ಮಾತು ಬಾರದವನು (2)
4. ವಸ್ತುಗಳ ಹರಾಜು ಅಥವಾ ಏಲಂ (3)
6. ಶಬ್ದ ಮಾಡುವ ಎಂದರ್ಥ (3)
8. ಮಾರಿಗೊಂದರಂತೆ ಸಿಕ್ಕಿದ ನಮೂನೆ (3)
10. ನೆರವಿಗೆ ಬಂದ ಮಿತ್ರ (3)
11. ಗೊಡವೆ ಅಥವಾ ಜಾಗರೂಕತೆ (3)
12. ಮಣ ಭಾರದ ಗಂಡ (3)
13. ಪಾಕ ಮಾಡಲು ಬೇಕಾದ ಬೆಂಕಿ (3)
15. ಸಾರಹೀನವಾದದ್ದು (3)
17. ಗದ್ದಲ, ತಕರಾರು (3)
19. ಎರಡೂ ಕಡೆಯಿಂದ ನೋಡಿದರೂ ಹೊಸದು (3)
21. ದಿನವೂ ಬಂದ ಮಂತ್ರಿ (3)
22. ಚತುರೋಪಾಯಗಳಲ್ಲಿ ಒಂದು, ಕೊಡುಗೆಯೂ ಹೌದು (2)
23. ತಿರುಗಿ ಬಂದ ಗುಂಪು (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ
2.ಅಪಖ್ಯಾತಿ 5. ರಣಾಂಗಣ 6. ಪರಾಜಯ 8. ಭರತ 10. ಪಾವತಿ 12. ಮತಹಿ 14. ಲಕ್ಷ್ಮಣ 17. ಸಾವಧಾನ 20. ತಲೆದೂಗು 21. ಣವಾರಿಹ

ಮೇಲಿನಿಂದ ಕೆಳಕ್ಕೆ
1. ವಿಲಾಪ 2. ಅನುಜ 3. ತಿರಸ್ಕಾರ 4. ತಗಡು 7. ರಾಜೀವ 8. ಭರಣ 9. ತಮ 11. ತಿಲ 13. ತವಂಧಾ 15. ಕ್ಷಮಾಗುಣ 18. ವರಹ 19. ನಜರು.

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ಸಮಾಚಾರ ಸಣ್ಣದಲ್ಲ

ತ್ರೈಮಾಸಿಕ ಕೆಡಿಪಿ ಸಭೆ ಇಂದು

ಹೊಸಪೇಟೆ: ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯನ್ನು ಜನವರಿ 27 ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಸತಿ, ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೊಹಮ್ಮದ್ ಅಲಿ ಅಕ್ರಮ್ ಷಾ ತಿಳಿಸಿದ್ದಾರೆ.

ಹಂಪಿ ಉತ್ಸವ ಸಿದ್ಧತೆ ಪೂರ್ವಭಾವಿ ಸಭೆ 27ಕ್ಕೆ

ಹೊಸಪೇಟೆ: ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಅಧ್ಯಕ್ಷತೆಯಲ್ಲಿ ಜ.27 ರಂದು ಹಂಪಿ ಉತ್ಸವದ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ. ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಶುಕ್ರವಾರ ಅವರು ಮಾತನಾಡಿ, ಫೆ 28, ಮಾ.1, 2 ರಂದು ಜರುಗಲಿರುವ ಐತಿಹಾಸಿಕ ವಿಶ್ವವಿಖ್ಯಾತ ಹಂಪಿ ಉತ್ಸವದ ಪೂರ್ವಭಾವಿ ಸಭೆಯನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಜ.27 ರಂದು ಮಧ್ಯಾಹ್ನ 2 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಸಭೆಯ ಅಧ್ಯಕ್ಷತೆಯನ್ನು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ರವರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ.28ರಂದು ಸಂಘ ಸಂಸ್ಥೆಗಳೊಂದಿಗೆ ಸಭೆ

ಹೊಸಪೇಟೆ: ವಿಶ್ವವಿಖ್ಯಾತ ಹಂಪಿ ಉತ್ಸವ ಹಿನ್ನಲೆಯಲ್ಲಿ ಜ.28ರಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಸಂಘ-ಸಂಸ್ಥೆಗಳ ಪದಾಧಿಕಾ ರಿಗಳು ಮತ್ತು ಸದಸ್ಯರುಗಳೊಂದಿಗೆ ಸಭೆಯನ್ನ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ. ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಚ್.ಆರ್.ಗವಿಯಪ್ಪರವರ ಉಪಸ್ಥಿತಿಯಲ್ಲಿ ಸಭೆ ನಿಗದಿಪಡಿಸಿದ್ದು, ಎಲ್ಲಾ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಮತ್ತು ಸದಸ್ಯರುಗಳು ತಪ್ಪದೆ ಸಭೆಗೆ ಹಾಜರಾಗಿ ಸಲಹೆಗಳನ್ನು ನೀಡಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧೆಡೆ ವಿದ್ಯುತ್ ವ್ಯತ್ಯಯ ನಾಳೆ

ಹೊಸಪೇಟೆ: ಹೊಸಪೇಟೆಯ ನಗರದ 110/11 ಕೆವಿ ಉಪ ವಿಭಾಗ-1ರ 11ಕೆವಿ ಸಂಕ್ಲಾಪುರ ಉಪಕೇಂದ್ರದ ವಿದ್ಯುತ್ ಮಾರ್ಗದಲ್ಲಿ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜ.28 ರಂದು ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಜೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ. ಜ.28 ರಂದು ಬೆ.9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ 11 ಕೆವಿ ಫೀಡರ್‌ಗಳಾದ ಟಿಎಸ್‌ಪಿ ಫೀಡರ್ ಮತ್ತು ವಿಜಯನಗರ ಫೀಡರ್‌ಗಳಲ್ಲಿ ಹಾಗೂ ನಗರ ಉಪ ವಿಭಾಗ-1ರ ವ್ಯಾಪ್ತಿಗೆ ಒಳಪಡುವ ಸುತ್ತಮುತ್ತಲಿನ ಪ್ರದೇಶಗಳಾದ ಡ್ಯಾಂ ರಸ್ತೆ, ಪೊಲೀಸ್ ಅಧೀಕ್ಷಕರು ಜಿಲ್ಲಾ ಪೊಲೀಸ್‌ರವರ ಕಚೇರಿ, ಟಿಎಸ್‌ಪಿ ಏರಿಯಾ, ವಿದ್ಯಾರಣ್ಯ ನಗರ, ವಿದ್ಯಾನಗರ, ಇಂದಿರಾ ನಗರ, ಗೋಕುಲ್ ನಗರ, ಪಿಎಲ್‌ಸಿ ಏರಿಯಾ, ಬಿಟಿಆರ್ ನಗರ, ಸೋನಿಯಾ ನಗರ, ರಾಯರಕೇರಿ, ಇವಿ ಕ್ಯಾಂಪ್, ನಿಶಾನಿ ಕ್ಯಾಂಪ್, ಡ್ರೆಸೆಸ್ ಕ್ಯಾಂಪ್, ಶನಿ ಮಹಾತ್ಮ ಗುಡಿ ಹತ್ತಿರ ಹಾಗೂ ನಗರಸಭೆ ವ್ಯಾಪ್ತಿಗೆ ಒಳಪಡುವ ಎಲ್ಲಾ ಕುಡಿಯುವ ನೀರು ಸರಬರಾಜು ಮಾಡುವ ಘಟಕಗಳು(ಚಿತ್ತವಾಡ್ಗಿ ಪಂಪ್ ಹೌಸ, ರಾ ವಾಟರ್) ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಗ್ರಾಹಕರು ಮತ್ತು ಸಾರ್ವಜನಿಕರು ಸಹಕರಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆ.28ರಿಂದ ಪುಸ್ತಕ ಮೇಳ ಮಾ.3ರವರೆಗೆ

ಬಳ್ಳಾರಿ: ಕರ್ನಾಟಕ ವಿಧಾನ ಸಭೆ ಸಚಿವಾಲಯದ ವತಿಯಿಂದ ಫೆ.28 ರಿಂದ ಮಾ.03 ರ ವರೆಗೆ ಒಟ್ಟು ನಾಲ್ಕು ದಿನಗಳ ಕಾಲ ಪುಸ್ತಕ ಮೇಳ'ವನ್ನು ವಿಧಾನಸೌಧ ಆವರಣದಲ್ಲಿ ಆಯೋಜಿಸುತ್ತಿದ್ದು, ಮೇಳಕ್ಕೆ ಸಂಬಂಧಿಸಿದ ಲಾಂಛನವನ್ನು ವಿನ್ಯಾಸಗೊಳಿ ಸಲು ಉದ್ದೇಶಿಸಿದ್ದು, ಅದನ್ನು ವಿನ್ಯಾಸಗೊಳಿಸಲು ಸಾರ್ವಜನಿಕರಿಗೆ ಮುಕ್ತ ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ವಿಧಾನ ಸಭೆ ಸಚಿವಾಲಯದ ನಿರ್ದೇಶಕ ಬಿ.ಎಸ್.ಮಹಾಲಿಂಗೇಶ್ ತಿಳಿಸಿದ್ದಾರೆ. ಆಸಕ್ತರು ಈ ಕಾರ್ಯಕ್ರಮಕ್ಕೆ ಸರಿಹೊಂದುವ ಲಾಂಛನವನ್ನು ವಿನ್ಯಾಸಗೊಳಿಸಿ ತಮ್ಮ ಅಂಚೆ ವಿಳಾಸ, ದೂರವಾಣಿ ಸಂಖ್ಯೆ, ಮುಂತಾದ ವಿವರಗಳೊಂದಿಗೆ ಫೆ.3ರೊಳಗಾಗಿ ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ ಸಚಿವಾಲಯ, ಕೊಠಡಿ ಸಂಖ್ಯೆ:121, ಮೊದಲನೇ ಮಹಡಿ, ವಿಧಾನ ಸೌಧ, ಬೆಂಗಳೂರು-560001 ಇವರಿಗೆ ಕಳುಹಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ಸತೀಶ್ ಜಾರಕಿಹೊಳಿ} ಸಚಿವ

ಮೈಕ್ರೋ ಫೈನಾನ್ಸ್ ಹಾವಳಿಯ ಬಗ್ಗೆ ಪ್ರಾಥಮಿಕವಾಗಿ ಪೊಲೀಸರು ತನಿಖೆ ನಡೆಸಬೇಕು. ಯಮಕನಮರಡಿ, ಗೋಕಾಕ ಹಾಗೂ ಹುಕ್ಕೇರಿಯಲ್ಲಿ ಸಾಕಷ್ಟು ಜನ ಮೈಕ್ರೋ ಫೈನಾನ್ಸ್ ದವರು ಕಿರುಕುಳ ನೀಡಿದ್ದಾರೆ. ಸಂಬಂಧ ಪಟ್ಟ ಪೊಲೀಸ್ ಠಾಣೆಗೆ ದೂರು ನೀಡಿದರೆ ಕ್ರಮ ಜರುಗಿಸಲಾಗುವುದು.

ಸಂವಿಧಾನದ ಆಶಯಗಳಿಂದ ಸಮಾನತೆ ಸಾಧ್ಯವಾಗಿದೆ: ವಸತಿ ಸಚಿವ ಜಮೀರ್ ಅಹ್ಮದ್ ಖಾನ್

76ನೇ ಗಣರಾಜ್ಯೋತ್ಸವ ಸಂಭ್ರಮಾಚರಣೆ

ಜಿಲ್ಲಾಡಳಿತದಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಜ. 26 ರಂದು ನಡೆದ 76ನೇ ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜಾರೋಹಣವನ್ನು ಗಣ್ಯರು ನೆರವೇರಿಸಿದರು.

ಹೊಸಪೇಟೆ: ದೇಶದಲ್ಲಿ ಸಂವಿಧಾನ ರಚನೆಯಿಂದಾಗಿ ಸಮಾನತೆ ನಿರ್ಮಾಣ ಸಾಧ್ಯವಾಗಿದೆ. ನಾವೆಲ್ಲ ಸಂವಿಧಾನದ ಆಶಯ ಈಡೇರಿಸಲು ಪ್ರಾಮಾಣಿಕವಾಗಿ ಪ್ರಯತ್ನದ ಮೂಲಕ ಡಾ. ಬಿ.ಆರ್.ಅಂಬೇಡ್ಕರ್‌ರವರ ಕನಸು ನನಸು ಮಾಡಬೇಕಾಗಿದೆ ಎಂದು ವಸತಿ, ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವ ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದರು.

ಜಿಲ್ಲಾಡಳಿತದಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಜ. 26 ರಂದು ನಡೆದ 76ನೇ ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಸಂವಿಧಾನದ ಮೂಲ ಆಶಯ ಸಾಮಾಜಿಕ ನ್ಯಾಯವಾಗಿದೆ. ಪ್ರಪಂಚದಲ್ಲೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ನಮ್ಮ ದೇಶ ಪ್ರಜಾತಂತ್ರ ಗಣತಂತ್ರ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದೆ. ಇದಕ್ಕಾಗಿ ಭಾರತದ ಸಂವಿಧಾನ ಶಿಲ್ಪಿ ಮಹಾನ್ ಮಾನವತವಾದಿ ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಸ್ಮರಿಸಲೇಬೇಕು ಎಂದರು.

> **ರಾಜ್ಯ ಸರಕಾರದಿಂದ ಬಡವರಿಗೆ, ಮಹಿಳೆಯರಿಗೆ, ಯುವಕರ ಹಿತದೃಷ್ಟಿಯಿಂದ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಲಾಗಿದೆ. ಈಗಾಗಲೇ ಯಶಸ್ವಿಯಾಗಿ ಯೋಜನೆಗಳು ಅನುಷ್ಟಾನವಾಗುತ್ತಿದ್ದು ರಾಜ್ಯ ಸರಕಾರ ಅಭಿವೃದ್ಧಿಗೆ ಆದ್ಯತೆ ನೀಡಿ ಎಲ್ಲಾ ಜಿಲ್ಲೆಗಳಿಗೆ ಹೆಚ್ಚಿನ ಅನುದಾನಗಳನ್ನು ನೀಡಲಾಗಿದೆ.**
> **-ಜಮೀರ್ ಅಹ್ಮದ್ ಖಾನ್,** ಸಚಿವ

ದೇಶದ ಇತಿಹಾಸದಲ್ಲೇ ಜನವರಿ 26 ಅತ್ಯಂತ ಮಹತ್ವದ ದಿನವಾಗಿದ್ದು, ದೇಶಕ್ಕೆ ಪ್ರಜಾಪ್ರಭುತ್ವದ ಆಡಳಿತ ಪದ್ಧತಿಯನ್ನು ಅಳವಡಿಸಿಕೊಂಡ ಈ ಸಂಭ್ರಮದ ಐತಿಹಾಸಿಕ ದಿನದಂದು ಗಣತಂತ್ರ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದರ ಮೂಲಕ ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಹುಡಾ ಅಧ್ಯಕ್ಷ ಎಚ್.ಎನ್.ಎಫ್.ಇಮಾಮ್ ನಿಯಾಜಿ, ನಗರಸಭೆ ಅಧ್ಯಕ್ಷರಾದ ರೂಪೇಶ್ ಕುಮಾರ್, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮೊಹಮದ್ ಅಲಿ ಅಕ್ರಮ್ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ, ಸಹಾಯಕ ಆಯುಕ್ತ ವಿವೇಕಾನಂದ, ತಹಸೀಲ್ದಾರ್ ಎಂ.ಶೃತಿ ಇನ್ನಿತರರು ಉಪಸ್ಥಿತರಿದ್ದರು.

ಪೊಲೀಸ್ ಇಲಾಖೆ, ಗೃಹಕ ರಕ್ಷಕದಳ, ಎನ್‌ಸಿಸಿ, ಸ್ಕೌಟ್ಸ್ ಮತ್ತು ಗೈಡ್ಸ್, ಸೇವಾದಳ, ಪೌರಕಾರ್ಮಿಕರ ತುಕಡಿಗಳಿಂದ ಆಕರ್ಷಕ ಪಥಸಂಚಲನ ನಡೆಯಿತು.

ತಹಸೀಲ್ದಾರ್ ಕಚೇರಿಯ ಭೂಮಿ ಕೇಂದ್ರದ ಅತ್ಯುನ್ನತ ಸೇವೆ ಗುರುತಿಸಿ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಗೌರವಿಸಿ ಸನ್ಮಾನಿಸಲಾಯಿತು. ಬಳಿಕ ನಗರದ ವಿವಿಧ ಶಾಲಾ, ಕಾಲೇಜುಗಳ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಅಭಿವೃದ್ಧಿಯತ್ತ ಸಾಗಿದೆ ಭಾರತ

ಹರಪನಹಳ್ಳಿ ಪಟ್ಟಣದ ಸ್ಟೇಡಿಯಂ ನಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶಾಸಕಿ ಎಂ.ಪಿ.ಲತಾ ಧ್ವಜವಂದನೆ ಸ್ವೀಕರಿಸಿದರು.

ಹರಪನಹಳ್ಳಿ: ಸಂವಿಧಾನದ ಚೌಕಟ್ಟಿನಲ್ಲಿ ನಾವೆಲ್ಲರೂ ಬದುಕು ಸಾಗಿಸಿ ಅಭಿವೃದ್ಧಿ ಹೊಂದಬೇಕು ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಹೇಳಿದರು.

ಅವರು ಪಟ್ಟಣದ ಸ್ಟೇಡಿಯಂನಲ್ಲಿ ತಾಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ 76 ನೇ ಗಣರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಭಾನುವಾರ ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಬೇರೆ ಬೇರೆ ದೇಶಗಳನ್ನು ಸುತ್ತಿ ಅಧ್ಯಯನ ಮಾಡಿ ನಮ್ಮ ದೇಶಕ್ಕೆ ಅನುಗುಣವಾದ ಸಂವಿಧಾನವನ್ನು ರೂಪಿಸಿದ್ದಾರೆ, ಆ ಸಂವಿಧಾನದ ಮೂಲಕ ನಮ್ಮ ದೇಶ ಸದೃಢವಾಗಿ ಮುನ್ನಡೆಯುತ್ತಲಿದೆ ಎಂದು ತಿಳಿಸಿದರು.

ವಿವಿಧತೆಯಲ್ಲಿ ಏಕತೆ ಹೊಂದಿರುವ ಭಾರತ ಎಂತಹ ಸವಾಲನ್ನು ಸಹ ಎದುರಿಸಿ ಅಭಿವೃದ್ಧಿಯತ್ತ ಸಾಗಿದೆ ಎಂದು ನುಡಿದರು.

ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಕಂದಾಯ ಉಪವಿಭಾಗಾಧಿಕಾರಿ ಚಿದಾನಂದಗುರುಸ್ವಾಮಿ ಅವರು ಸಂವಿಧಾನ ಜಾರಿಗೆ ಬಂದ ದಿನವನ್ನು ನಾವು ಗಣರಾಜ್ಯೋತ್ಸವ ಎಂದು ರಾಷ್ಟ್ರೀಯ ಹಬ್ಬವಾಗಿ ಆಚರಣೆ ಮಾಡುತ್ತೇವೆ ಎಂದು ತಿಳಿಸಿದರು.

ಜಗತ್ತಿನಲ್ಲಿ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಭಾರತ ಯಶಸ್ವಿಯಾಗಿ ನಡೆಯುತ್ತಲಿದೆ ಎಂದರು.

> **ಇಡೀ ದೇಶಕ್ಕೆ ಅನುಗುಣವಾದಂತಹ ಸಂವಿಧಾನವನ್ನು ರಚಿಸಿ ಕಾನೂನನ್ನು ಅಂಬೇಡ್ಕರ್ ನೀಡಿದ್ದಾರೆ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಉತ್ತಮವಾಗಿ ಕೆಲಸ ಮಾಡೋಣ.**
> **-ಎರಗುಡಿ ಶಿವಕುಮಾರ್,** ಮುಖ್ಯಾಧಿಕಾರಿ

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರನ್ನು ಈ ಸಂದರ್ಭದಲ್ಲಿ ಮಾತನಾಡಿದರು. ವಿವಿಧ ಶಾಲೆಗಳ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.

ಪುರಸಭಾ ಅಧ್ಯಕ್ಷ ಎಂ.ಪಾತೀಮಾಬಿ, ಉಪಾಧ್ಯಕ್ಷ ಎಚ್.ಕೊಟ್ರೇಶ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಪುರಸಭಾ ಸದಸ್ಯರುಗಳಾದ ಅಬ್ದುಲ್ ರಹಿಮಾನ್, ಉದ್ದಾರ ಗಣೇಶ, ಲಾಟಿದಾದಾಪೀರ, ಮಂಜುನಾಥ ಇಜಂತಕರ್, ಜಾಕೀರ ಹುಸೇನ್, ಡಿವೈಎಸ್ಪಿ ವೆಂಕಟಪ್ಪ ನಾಯಕ, ಸಿಪಿಐ ನಾಗರಾಜ ಎಂ.ಕಮ್ಮಾರ, ಸುವರ್ಣ ಮಹೋತ್ಸವ ರಾಜ್ಯ ಪ್ರಶಸ್ತಿ ಪುರಸ್ಕೃತ ಡಾ.ಟಿ.ಎಂ.ಚಂದ್ರಶೇಖರಯ್ಯ, ಸುಮಾ ಜಗದೀಶ್, ಕವಿತಾ ಸುರೇಶ, ತಹಸೀಲ್ದಾರ ಬಿ.ವಿ.ಗಿರೀಶಬಾಬು, ಬಿಇಒ ಲೇಪಾಕ್ಷಪ್ಪ, ತಾ.ಪಂ ಇಒ ಚಂದ್ರಶೇಖರ, ಪುರಸಭಾ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್, ಬಿಸಿಎಂ ಅಧಿಕಾರಿ ಭೀಮಪ್ಪ, ಪಿಎಸ್‌ಐ ಎಸ್ ಸಿ.ಹಿರೇಮಠ ಇದ್ದರು.

ಪುರಸಭೆಯಲ್ಲಿ ಗಣರಾಜ್ಯೋತ್ಸವ

ಹರಪನಹಳ್ಳಿ ಪುರಸಭೆಯಲ್ಲಿ ಶಾಸಕಿ ಎಂ.ಪಿ.ಲತಾ ಅವರು ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಹಾತ್ಮಗಾಂಧಿ, ಅಂಬೇಡ್ಕರ್ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಗೈದರು.

ಹರಪನಹಳ್ಳಿ: ಪಟ್ಟಣದ ಪುರಸಭೆಯಲ್ಲಿ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಭಾನುವಾರ ಆಚರಿಸಲಾಯಿತು.

ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಧ್ವಜಾರೋಹಣ ನೆರವೇರಿಸಿ ಮಾತನಾಡಿ ಗಣರಾಜ್ಯೋತ್ಸವದ ಮಹತ್ವವನ್ನು ತಿಳಿದು ಪ್ರತಿಯೊಬ್ಬರೂ ಪಾಲ್ಗೊಳ್ಳಬೇಕು, ಅದರಲ್ಲೂ ಯುವ ಜನತೆ ಗಣರಾಜ್ಯೋತ್ಸವ ದಿನ ರಜಾ ದಿನವೆಂದು ಪ್ರವಾಸಕ್ಕೆ ಹೋಗುತ್ತಿರುವುದು ಸಲ್ಲ ಎಂದರು. ನಾಡು, ನುಡಿ ಬಗ್ಗೆ ದೇಶಾಭಿಮಾನ ಹೊಂದಬೇಕು ಎಂದು ಹೇಳಿದರು.

ಪುರಸಭಾ ಅಧ್ಯಕ್ಷ ಎಂ.ಪಾತೀಮಾಬಿ, ಉಪಾಧ್ಯಕ್ಷ ಕೊಟ್ರೇಶ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ ಪುರಸಭಾ ಸದಸ್ಯರು, ಆರೋಗ್ಯ ನಿರೀಕ್ಷಕ ಮಂಜುನಾಥ ಹಾಜರಿದ್ದರು.

ಹೊಸಪೇಟೆ ನಗರದ ನೆಹರು ಕಾಲೋನಿ ಉದ್ಯಾನದಲ್ಲಿ ಯೋಗಾಸನ, ರಾಮ ಭಜನೆ, ಅಗ್ನಿಹೋತ್ರ ಕಾರ್ಯ, ಮಹಿಳೆಯರಿಂದ ಗಾನ ಮತ್ತು ನೃತ್ಯ ಆಚರಿಸಿ ಸಿಹಿ ಹಂಚಿದರು.

ಅದ್ದೂರಿ ಅಯ್ಯಪ್ಪ ಸ್ವಾಮಿ ರಥೋತ್ಸವ

ಹರಪನಹಳ್ಳಿ: ಅಪಾರ ಭಕ್ತ ಸಮೂಹದ ನಡುವೆ ಪಟ್ಟಣದ ಮೇಗಳಪೇಟೆಯ ಸಮೀಪದಲ್ಲಿರುವ ಭಾರತಿ ನಗರದ ಅಯ್ಯಪ್ಪ ಸ್ವಾಮಿ ಸನ್ನಿಧಿಯಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ನಾಲ್ಕನೇ ವರ್ಷದ ರಥೋತ್ಸವ, 16ನೇ ವರ್ಷದ ದೀಪಾರಾಧನೆ, ಮಹಾ ಮಂಗಳಾರತಿ ಹಾಗೂ ಧರ್ಮಸಭೆ ಅದ್ದೂರಿಯಾಗಿ ಜರುಗಿತು. ಪಟ್ಟಣದ ಮಟೇರ ಪ್ರಕಾಶ್ ಅವರು ಐದು ಸಾವಿರದ ಒಂದು ರುಪಾಯಿಗೆ ಅಯ್ಯಪ್ಪ ಸ್ವಾಮಿಯ ರುದ್ರಾಕ್ಷಿ ಮಾಲೆನ್ನು ಮತ್ತು ಮೇಗಳಪೇಟೆ ನಿವಾಸಿ ಸುಂಕದಲ್ಲು ಕೊಟ್ರೇಶ್ ಅವರು ಮೂರು ಸಾವಿರದ ಒಂದು ರುಪಾಯಿಗೆ ಪಟಾಕ್ಷಿಯನ್ನು ತಮ್ಮದಾಗಿಸಿಕೊಂಡರು. ಈ ಬಾರಿಯ ಅಯ್ಯಪ್ಪಸ್ವಾಮಿ ಪ್ರಶಸ್ತಿಯನ್ನು ಅಯ್ಯಪ್ಪ ಸ್ವಾಮಿ ಸೇವಾ ಸಮಿತಿಯ ಕಾರ್ಯದರ್ಶಿ ಕೆ.ವಿಶ್ವನಾಥ ಅವರಿಗೆ ನೀಡಿ ಗೌರವಿಸಲಾಯಿತು. ದಾನ ಚಿಂತಾಮಣಿ ಹೆಚ್.ಎಂ.ಲಲಿತಮ್ಮ ಸೋಮಲಿಂಗಯ್ಯ ಅವರು ಭಕ್ತರಿಗೆ ಪ್ರಸಾದ ಸೇವೆ ಮಾಡಿದರು. ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಪುರಸಭೆ ಅಧ್ಯಕ್ಷೆ ಪಾತಿಮಾ ಬಿ, ಪುರಸಭೆ ಸದಸ್ಯ ಅಬ್ದುಲ್ ರಹಿಮಾನ್ ಸಾಬ್, ಪುರಸಭೆ ಮಾಜಿ ಸದಸ್ಯ ಬಂಗ್ಲಿ ಸೋಮಶೇಖರ್, ಪಿ.ಬಿ.ಗೌಡ, ಅಯ್ಯಪ್ಪ ಸ್ವಾಮಿ ಸೇವಾ ಸಮಿತಿ ಉಪಾಧ್ಯಕ್ಷ ಕೆ.ಆರ್.ಗಿರೀಶ್, ಖಜಾಂಚಿ ಕೌಟಿ ಮಂಜುನಾಥ, ಆಟೋ ಕೌಟಿ ಮಂಜುನಾಥ, ದಾವಣಗೆರೆ ನಾಗರಾಜ್, ಶಿಕ್ಷಕರಾದ ಎ.ಎಂ.ಗುಪ್ರಸಾದ್, ಬಣಕಾರ್ ರಾಜಶೇಖರ್, ರವಿ, ಸತೀಶ್, ಹುಚ್ಚಪ್ಪ, ವೀರಾಗಾಸೆ ಕಲಾವಿದ ಜಿ.ಮಲ್ಲಿಕಾರ್ಜುನ, ಕಾಶಿಮಠದ ಶಾಸ್ತ್ರಿ ಬಸಯ್ಯ ಸೇರಿದಂತೆ ಮತ್ತಿತರರು ಇದ್ದರು.

ಸಮಾನ ಹಕ್ಕು, ಅವಕಾಶ ನೀಡಿದೆ ನಮ್ಮ ಸಂವಿಧಾನ

ಹೂವಿನಹಡಗಲಿ: ಜಾತ್ಯಾತೀತ ಮತ್ತು ಸಮಾನ ಹಕ್ಕು ನೀಡಿದ ನಮ್ಮ ಸಂವಿಧಾನದಲ್ಲಿ ಸ್ವತಂತ್ರವಾದ ಪರಮಾಧಿಕಾರ ನೀಡಲಾಗಿದೆ ಎಂದು ತಹಸೀಲ್ದಾರ್ ಸಂತೋಷಕುಮಾರ್ ಹೇಳಿದರು.

> **ಭಾರತದ ಸಂವಿಧಾನ ಸಮಬಾಳು ಬದುಕಿಗೆ ಬುನಾದಿಯಾಗಿದೆ ನಾವು ಧನ್ಯರಾಗಿದ್ದೇವೆ ಎಂದರು. ಜಗತ್ತಿನ ಎಲ್ಲಾ ರಾಷ್ಟ್ರಗಳಿಗೆ ನಮ್ಮ ದೇಶ ಮಾದರಿಯಾಗಿದೆ, ಇಂತಹ ಸಂವಿಧಾನವನ್ನು ನಮಗೆ ನೀಡಿದ ಮಹಾನ್ ನಾಯಕರನ್ನು ನಾವು ಸ್ಮರಿಸಬೇಕಾಗಿದೆ ಎಂದರು. ನಮಗೆ ನೀಡಿರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಉಳಿಸಿಕೊಂಡು ಹೋಗಬೇಕಾಗಿದೆ.**
> **-ಕೃಷ್ಣಾನಾಯ್ಕ,** ಶಾಸಕ

ಪಟ್ಟಣದ ತಾಲೂಕು ಕ್ರಿಡಾಂಗಣದಲ್ಲಿ ತಾಲೂಕು ಆಡಳಿತ ಹಮ್ಮಿಕೊಂಡಿದ್ದ 76ನೇ ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ನೆರವೇರಿಸಿ ಅವರು ಮಾತನಾಡಿದರು. ಜಾತ್ಯಾತೀತ ಮಾದರಿಯ ಸರಕಾರ ವ್ಯವಸ್ಥೆ ಹೊಂದಿದ್ದು, ಪರಿಹಾರಕ್ಕೆ ನಮ್ಮ ಶ್ರೇಷ್ಠ ಸಂವಿಧಾನವೇ ಅಂತಿಮವಾಗಿದೆ ಎಂದರು.

ರಾಜಪ್ರಭುತ್ವ ಇದ್ದಾಗ ಯಾರಿಗೂ ಸ್ವಾತಂತ್ರವಿಲಿಲ್ಲ, ಪ್ರಜಾಪ್ರಭುತ್ವ ನಮಗೆ ಎಲ್ಲಾರೀತಿಯ ಸ್ವಾತಂತ್ರ್ಯವನ್ನು ನೀಡಿದೆ ಎಂದರು.

ಭಾರತ ಕೆಲವೇ ವರ್ಷಗಳಲ್ಲಿ ಬಲಿಷ್ಠ ರಾಷ್ಟ್ರವಾಗುವುದರಲ್ಲಿ ಯಾವುದೇ ಅನುಮಾನಗಳಿಲ್ಲ ಎಂದರು.

ಹೂವಿನಹಡಗಲಿಯ ಕ್ರಿಡಾಂಗಣದಲ್ಲಿ ನಡೆದ 76ನೇ ಗಣರಾಜ್ಯೋತ್ಸವದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಶಾಸಕ ಕೃಷ್ಣಾನಾಯ್ಕ ಸನ್ಮಾನಿಸಿದರು.

ಶಿಕ್ಷಣ, ಆರೋಗ್ಯ, ನೀರಾವರಿಗಳಿಗೆ ಆದ್ಯರೆ ನೀಡಿ ಅಭಿವೃದ್ಧಿಪಡಿಸುವುದು ನನ್ನ ಗುರಿಯಾಗಿದೆ, ಇನ್ನು ಒಂದು ವರ್ಷದಲ್ಲಿ ತಾಲ್ಲೈಕು ಕ್ರೀಡಾಂಗಣವನ್ನು ಮಾದರಿ ಕ್ರೀಡಾಂಗಣವನ್ನಾಗಿ ಮಾಡುತ್ತೇನೆ ಎಂದರು.

ಗಣರಾಜ್ಯೋತ್ಸವ ಪ್ರಯುಕ್ತ ತಾಲೂಕು ಆಡಳಿತದಿಂದ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಡಗಲಿಯ ಎಚ್.ಎಂ.ಚನ್ನವೀರಯ್ಯ, ತಿಪ್ಪೇಸ್ವಾಮಿ, ಮಂಜುಳಾ, ಹನುಮಂತಪ್ಪ, ಪತ್ರಕರ್ತ ಎಸ್.ಎಂ. ಬಸವರಾಜ, ಕೆ.ಮಂಜುನಾಥ, ಮೈಲಾರಪ್ಪ, ಬಾಲಚಂದ್ರ, ಲಕ್ಯಾನಾಐಕ, ಮಹೇಶ್ ಪೂಜಾರ್, ಪ್ರಸಾಧ, ವೆಂಕಟೇಶ್‌ನಾಯ್ಕರವರನ್ನು ತಾಲೂಕು ಆಡಳಿತದಿಂದ ಸನ್ಮಾನಿಸಿ ಗೌರವಿಸಲಾಯಿತು.

ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ ಮಾತನಾಡಿದರು. ಮುಖಂಡರಾದ ಎಂ.ಪರಮೇಶ್ವರಪ್ಪ, ತಾ.ಪಂ. ಕಾರ್ಯನಿರ್ವಾಕಾಧಿಕಾರಿ ಉಮೇಶ್, ಪುರಸಭೆ ಸದಸ್ಯರಾದ ವಾರದ ಗೌಸ್‌ಮೋಹಿದ್ದೀನ್, ಚಂದ್ರನಾಯ್ಕ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಕೊಟ್ರಗೌಡ, ಪುರಸಭೆ ಮುಖ್ಯಾಧಿಕಾರಿ ಇಮಾಮ್ ಸಾಬ್, ಸಿಡಿಪಿಒ ರಾಮನಗೌಡ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಎಂ.ಪಿ.ಎಂ.ಅಶೋಕ ಸ್ವಾಗತಿಸಿದರು. ಶಿಕ್ಷಕ ದ್ವಾರಕೇಶರೆಡ್ಡಿ ನಿರೂಪಿಸಿದರು. ನಂತರ ಶಾಲಾ ಮಕ್ಕಳಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಜನಮನ ಸೆಳೆದವು.

ಮತದಾನ ಪ್ರಜಾಪ್ರಭುತ್ವದ ಒಂದು ಪ್ರಬಲ ಅಸ್ತ್ರ

ಪಟ್ಟಣದ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲರೂ ಮತದಾರರ ಪ್ರತಿಜ್ಞಾ ವಿಧಿ ತೆಗೆದುಕೊಂಡರು.

ಹರಪನಹಳ್ಳಿ: ಪಟ್ಟಣದ ಅಂಬ್ಲಿ ದೊಡ್ಡ ಭರ್ಮಪ್ಪ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಯಿತು.

ಐ.ಕ್ಯೂ.ಎ.ಸಿ.ಸಂಯೋಜಕರಾದ ಡಾ.ಗೋವರ್ಧನ ಜಿ.ವೈ ಅವರು ಅತಿಥಿಗಳನ್ನು ಸ್ವಾಗತಿಸಿ ರಾಷ್ಟ್ರೀಯ ಮತದಾರರ ದಿನದ ಹಿನ್ನೆಲೆ ಮತ್ತು ಪ್ರಾಮುಖ್ಯತೆಯನ್ನು ಹೇಳಿ ದೇಶದಲ್ಲಿ ನಡೆಯುವ ಪ್ರತಿ ಚುನಾವಣೆಯಲ್ಲಿ ಜಾತಿ, ಧರ್ಮ, ಭಾಷೆ ಮತ್ತು ಇತರೆ ತಾರತಮ್ಯಗಳ ಮನಸ್ಥಿತಿ ಇಲ್ಲದೆ ಮತದಾನ ಮಾಡುವುದು ಅಗತ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎನ್.ಎಸ್.ಎಸ್. ಅಧಿಕಾರಿಗಳಾದ ಡಾ.ಎ.ಎಂ. ರಾಜಶೇಖರಯ್ಯ ಮಾತನಾಡಿ ಮತದಾನ ಎಂಬುದು ಪ್ರಜಾಪ್ರಭುತ್ವ ದೇಶದಲ್ಲಿ ಸಿಗುವಂತಹ ಒಂದು ಪ್ರಮುಖವಾದ ಅಸ್ತ್ರ ಅದನ್ನು ಸದುಪಯೋಗಪಡಿಸಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ ಎಂದು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿದರು. ಎನ್.ಸಿ.ಸಿ. ಅಧಿಕಾರಿ ಬಸಲಿಂಗಪ್ಪನವರು ಯುವಜನತೆ ಹೆಚ್ಚೆಚ್ಚು ಮತದಾನದಲ್ಲಿ ಭಾಗವಹಿಸಿ ಉತ್ತಮ ಜನ ಪ್ರತಿನಿಧಿಗಳನ್ನು ಆರಿಸುವ ಅನಿವಾರ್ಯತೆಯನ್ನು ವಿವರಿಸಿದರು. ಕ್ರೀಡಾ ವಿಭಾಗದ ಮುಖ್ಯಸ್ಥ ನವಾಜ್ ಬಾಷ ಸಿ. ಅವರು ಪ್ರತಿ ಮತದಾನದ ಪ್ರಕ್ರಿಯೆಯಲ್ಲಿ ನಡೆಯುವ ವಿವಿಧ ಹಂತಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ ವಂದನಾರ್ಪಣೆ ಮಾಡಿದರು. ನಂತರ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲರೂ ಮತದಾರರ ಪ್ರತಿಜ್ಞಾವಿಧಿಯನ್ನು ತೆಗೆದುಕೊಂಡರು. ಕಾರ್ಯಕ್ರಮದಲ್ಲಿ ಕಾಲೇಜಿನ ಬೋಧಕ-ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೂಲ ಸೌಕರ್ಯ ಕಲ್ಪಿಸಲು ಒತ್ತಾಯ

ಹೂವಿನಹಡಗಲಿ: ತಾಲೂಕಿನ ನಂದಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೂರು ಗ್ರಾಮಗಳಿಗೆ ಮೂಲ ಸೌಕರ್ಯ ಕಲ್ಪಿಸಬೇಕು ಎಂದು ಗ್ರಾ.ಪಂ. ಅಧ್ಯಕ್ಷೆ ಸೈನಾಜ್ ಬೀ, ಉಪಾಧ್ಯಕ್ಷ ಬಿ.ರವಿಕುಮಾರ್ ಒತ್ತಾಯಿಸಿದ್ದಾರೆ. ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿ ಎಂ. ಉಮೇಶರವರಿಗೆ ಮನವಿ ಸಲ್ಲಿಸಿ, ಸಮಸ್ಯೆಗಳಿಗೆ ಸ್ಪಂದಿಸುವಂತೆ ಮನವಿ ಮಾಡಿದರು. ಗ್ರಾ.ಪಂ ವ್ಯಾಪ್ತಿಯ ನಂದಿಹಳ್ಳಿ, ಹುಗಲೂರು, ಮುದೇನೂರು ಗ್ರಾಮಗಳಲ್ಲಿ ಬೇಸಿಗೆ ಆರಂಭಕ್ಕೂ ಮುನ್ನವೇ ಕುಡಿಯುವ ನೀರಿನ ಸಮಸ್ಯೆ ತಲೆದೋರುವ ಲಕ್ಷಣಗಳು ಗೋಚರಿಸಿವೆ. ಚರಂಡಿಗಳನ್ನು ಸ್ವಚ್ಛಗೊಳಿಸದೇ ನೈರ್ಮಲ್ಯ ಹಾಳಾಗಿದೆ. ಬೀದಿದೀಪ ಸಮಸ್ಯೆಯೂ ಇದೆ ಎಂದು ಹೇಳಿದರು. ಮೂರು ಗ್ರಾಮಗಳ ಸಾರ್ವಜನಿಕರು ಚುನಾಯಿತ ಸದಸ್ಯರಿಗೆ ತರಾಟೆ ತೆಗೆದುಕೊಳ್ಳುತ್ತಿದ್ದಾರೆ. ಕೆಲವು ದಿನಗಳಿಂದ ಪಂಚಾಯಿತಿಗೆ ಕಾಯಂ ಪಿಡಿಒ ನಿಯೋಜಿಸದೇ ಇರುವುದೇ ಇದಕ್ಕೆ ಕಾರಣವಾಗಿದ್ದು, ತಕ್ಷಣ ಪಿಡಿಒ ನಿಯೋಜಿಸಿ ಎಲ್ಲ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಮನವಿ ಮಾಡಿದ್ದಾರೆ. ಗ್ರಾಮಗಳಿಗೆ ಮೂಲ ಸೌಕರ್ಯ ಕಲ್ಪಿಸಬೇಕು ಎಂದು ಗ್ರಾ.ಪಂ. ಅಧ್ಯಕ್ಷೆ ಸೈನಾಜ್ ಬೀ, ಉಪಾಧ್ಯಕ್ಷ ಬಿ.ರವಿಕುಮಾರ್ ಒತ್ತಾಯಿಸಿ ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿ ಎಂ.ಉಮೇಶರಗೆ ಮನವಿ ಸಲ್ಲಿಸಿದರು.

ಹರಪನಹಳ್ಳಿ: ತಾಲೂಕಿನ ದಡಿಗಾರನಹಳ್ಳಿ ಗ್ರಾಮದಲ್ಲಿ ಶುಕ್ರವಾರ ಸಂಭವಿಸಿದ ಆಕಸ್ಮಿಕ ಅಗ್ನಿ ಅವಗಢದಿಂದಾಗಿ ಎರಡು ಮಾಳಿಗೆ ಮನೆಗಳು ಬೆಂಕಿಗೆ ಆಹುತಿಯಾಗಿದ್ದು ಯಾವುದೇ ಪ್ರಾಣ ಹಾನಿಯಾಗಿಲ್ಲ. ವಿಷಯ ತಿಳಿದು ಅವಗಢ ನಡೆದ ಸ್ಥಳ ಭೇಟಿ ನೀಡಿದ ಪುರಸಭೆ ಮಾಜಿ ಅಧ್ಯಕ್ಷ ಹರಾಳು ಹೆಚ್.ಎಂ.ಅಶೋಕ್ ಅವರು ಹಾನಿಗೊಳಗಾದ ಕುಟುಂಬಗಳಿಗೆ ಸಾಂತ್ವನ ಹೇಳಿ ಗೃಹಬಳಕೆ ವಸ್ತುಗಳನ್ನು ನೀಡಿ ಮಾನವೀಯತೆ ಮೆರೆದಿದ್ದಾರೆ.

ಡಿಸಿ ಕಚೇರಿಯಲ್ಲಿ ಗಣರಾಜ್ಯೋತ್ಸವ

ಹೊಸಪೇಟೆ: ಹೊಸಪೇಟೆಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜನವರಿ 26 ರಂದು ಗಣರಾಜ್ಯೋತ್ಸವ ಆಚರಿಸಲಾಯಿತು. ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿದರು. ಈ ವೇಳೆಯಲ್ಲಿ ಜಿಲ್ಲಾ ಪಂಚಾಯಿತಿ ಸಿಇಒ ನೋಂಗ್ಜಾಯ್ ಮೊಹಮದ್ ಅಲಿ ಅಕ್ರಮ್ ಷಾ, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು. ಸಂವಿಧಾನ ಶಿಲ್ಪಿ ಮಹಾನ್ ಮಾನವತವಾದಿ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಸ್ಮರಿಸಲೇಬೇಕು ಎಂದರು. ದೇಶದ ಇತಿಹಾಸದಲ್ಲೇ ಜನವರಿ 26 ಅತ್ಯಂತ ಮಹತ್ವದ ದಿನವಾಗಿದೆ. ಗಣರಾಜ್ಯೋತ್ಸವ ನಿಮಿತ್ತ ಜಿಲ್ಲಾಧಿಕಾರಿಗಳು ಹೊಸಪೇಟೆಯ ಜೋಳದರಾಶಿಯ ಗುಡ್ಡದ ಮೇಲೆ ಇಲಾಖೆಯ ಅಧಿಕಾರಿಗಳೊಂದಿಗೆ ಧ್ವಜಾರೋಹಣ ನೆರವೇರಿಸಿದರು. ಅದೇ ರೀತಿ ಜಿಲ್ಲಾಧಿಕಾರಿಗಳ ಗೃಹ ಕಚೇರಿಯಲ್ಲಿ ಸಹ ಗಣರಾಜ್ಯೋತ್ಸವ ಆಚರಿಸಲಾಯಿತು. ಹೊಸಪೇಟೆಯ ತಾಲೂಕು ಆಡಳಿತದಿಂದ ತಹಸೀಲ್ದಾರ ಕಚೇರಿಯಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ತಹಸೀಲ್ದಾರರಾದ ಎಂ. ಶೃತಿಯವರು ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ತಾಲೂಕು ಕಚೇರಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು. ಹೊಸಪೇಟೆಯ ತಾಲೂಕು ಆಡಳಿತದಿಂದ ತಹಸೀಲ್ದಾರ ಕಚೇರಿ ಇನ್ನು ಮುಂತಾದ ಕಚೇರಿಗಳಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು.

ಸಮಾಚಾರ ಸಣ್ಣದಲ್ಲ

ಚಿನ್ನದ ಪದಕ ಗೆದ್ದ ಜ್ಯೋತಿ ಯರ್ರಾಜಿ

ಪ್ಯಾರಿಸ್: ಭಾರತದ ತಾರಾ ಸ್ಪ್ರಿಂಟ್ ತಾರೆ ಜ್ಯೋತಿ ಯರ್ರಾಜಿ ಅವರು ವರ್ಷದ ಮೊದಲ ಕ್ರೀಡಾಕೂಟದಲ್ಲೇ ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನದ ಪದಕದ ಗೆದ್ದ ಸಾಧನೆ ಮಾಡಿದ್ದಾರೆ. ಭಾನುವಾರ ಫ್ರಾನ್ಸ್‌ನಲ್ಲಿ ನಡೆದ ಎಲೈಟ್ ಇಂಡೋರ್ ಟೂರ್ನಿಯ 60 ಮೀ ಹರ್ಡಲ್ಸ್‌ನಲ್ಲಿ 8.04 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಚಿನ್ನದ ಪದಕ್ಕೆ ಕೊರಳೊಡ್ಡಿದರು. ಇದೇ ವೇಳೆ 8.07 ಸೆಕೆಂಡ್ ಮತ್ತು 8.12 ಸೆಕೆಂಡ್‌ನ ತನ್ನದೇ ಆದ ಎರಡು ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿದರು. ಇತ್ತೀಚೆಗೆ ಯರ್ರಾಜಿ ಪ್ರತಿಷ್ಠಿತ ಕ್ರೀಡಾ ಪ್ರಶಸ್ತಿಗಳಲ್ಲಿ ಒಂದಾಗ ಅರ್ಜುನ ಪ್ರಶಸ್ತಿ ಪಡೆದಿದ್ದರು. 100 ಮೀಟರ್ ಹರ್ಡಲ್ಸ್‌ನಲ್ಲಿ 12.78 ಸೆಕೆಂಡುಗಳ ರಾಷ್ಟ್ರೀಯ ದಾಖಲೆಯನ್ನು ಹೊಂದಿದ್ದಾರೆ. 2023 ರಲ್ಲಿ ಹ್ಯಾಂಗ್‌ಝೌನಲ್ಲಿ ನಡೆದಿದ್ದ ಏಷ್ಯನ್ ಗೇಮ್ಸ್‌ನಲ್ಲಿ 12.91 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಬೆಳ್ಳಿ ಪದಕವನ್ನು ಗೆದ್ದಿದ್ದರು.

ಪ್ರೋತ್ಸಾಹಧನ ತಿರಸ್ಕಾರ: ಕ್ರೀಡಾಳುಗಳ ಸ್ಪಷ್ಟನೆ

ಬೆಂಗಳೂರು: ಖೋ ಖೋ ವಿಶ್ವಕಪ್ ಗೆದ್ದ ಭಾರತೀಯ ತಂಡಗಳ ಸದಸ್ಯರಾಗಿದ್ದ ಬೆಂಗಳೂರಿನ ಎಂ.ಕೆ. ಗೌತಮ್ ಹಾಗೂ ಮೈಸೂರಿನ ಬಿ.ಚೈತ್ರಾ ಅವರಿಗೆ ರಾಜ್ಯ ಸರ್ಕಾರ ತಲಾ 5 ಲಕ್ಷ ರು. ಪ್ರೋತ್ಸಾಹಧನ ಘೋಷಿಸಿತ್ತು. ಆದರೆ ಈ ಬಹುಮಾನವನ್ನು ಉಭಯ ಕ್ರೀಡಾಪಟುಗಳು ತಿರಸ್ಕರಿಸುವುದಾಗಿ ಹೇಳಿದ್ದಾರೆ. ಇದೇ ವೇಳೆ ರಾಜ್ಯ ಖೋ ಖೋ ಸಂಸ್ಥೆಯ ಅಧ್ಯಕ್ಷ ಲೋಕೇಶ್ವರ್ ಕೂಡ ರಾಜ್ಯದ ಕ್ರೀಡಾಪಡುಗಳ ಸಾಧನೆಯನ್ನು ಸರ್ಕಾರ ಅವಮಾನಿಸಿದೆ ಎಂದು ಆರೋಪಿಸಿದ್ದಾರೆ. ಸರಕಾರವು ನಮ್ಮನ್ನು ನಡೆಸಿಕೊಂಡ ರೀತಿಯಿಂದ ತುಂಬಾ ನೋವಾಗಿದೆ. ಈಗ ಪ್ರಕಟಿಸಿರುವ 5 ಲಕ್ಷ ಪ್ರೋತ್ಸಾಹಧನವನ್ನು ತಿರಸ್ಕರಿಸಿದ್ದೇವೆ ಎಂದು ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗೌತಮ್ ಮತ್ತು ಚೈತ್ರಾ ಬೇಸರ ವ್ಯಕ್ತಪಡಿಸಿದರು. ಮಹಾರಾಷ್ಟ್ರ, ಉತ್ತರ ಪ್ರದೇಶ ಸೇರಿ ಬೇರೆ ರಾಜ್ಯದ ಆಟಗಾರರಿಗೆ ದೊಡ್ಡ ಮೊತ್ತದ ಬಹುಮಾನ ಘೋಷಿಸುವ ಜತೆಗೆ 'ಎ' ದರ್ಜೆಯ ಸರಕಾಹುದ್ದೆಯ ಭರವಸೆ ನೀಡಲಾಗಿದೆ. ಆದರೆ ನಮಗೆ ಆ ರೀತಿಯ ಯಾವ ಸೌಲಭ್ಯ ಕೊಡದೆ ಇರುವುದು ಸಂಕಟವಾಗಿದೆ ಎಂದೂ ಇಬ್ಬರು ಹೇಳಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಸತತ 2ನೇ ಬಾರಿಗೆ ಪ್ರಶಸ್ತಿ ಗೆದ್ದ ಯಾನಿಕ್ ಸಿನ್ನರ್ | ಅಲೆಕ್ಸಾಂಡರ್ ಜ್ವೆರೆವ್‌ಗೆ ಮತ್ತದೇ ನಿರಾಸೆ

ಆಸ್ಟ್ರೇಲಿಯನ್ ಓಪನ್: ಸಿನ್ನರ್‌ಗೆ ಪ್ರಶಸ್ತಿ

ಮೆಲ್ಬೋರ್ನ್: ಇಟಾಲಿಯನ್ ಸ್ಟಾರ್ ಟೆನಿಸ್ ಆಟಗಾರ ಯಾನಿಕ್ ಸಿನ್ನರ್ 2025ರ ಆಸ್ಟ್ರೇಲಿಯನ್ ಓಪನ್‌ನಲ್ಲಿ ಸಂಚಲನ ಸೃಷ್ಟಿಸಿದ್ದಾರೆ. ಭಾನುವಾರ 2 ಗಂಟೆ 42 ನಿಮಿಷಗಳ ಕಾಲ ನಡೆದ ಪುರುಷರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಯಾನಿಕ್ ಸಿನ್ನರ್ ಅವರು ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಅವರನ್ನು 6-3, 7-6 (4), 6-3 ನೇರ ಸೆಟ್‌ಗಳಿಂದ ಸೋಲಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಆ ಮೂಲಕ ಹಾಲಿ ಚಾಂಪಿಯನ್ ಪಟ್ಟವನ್ನು ತಮ್ಮಲ್ಲೇ ಉಳಿಸಿಕೊಳ್ಳುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಅನಾರೋಗ್ಯದ ನಡುವೆಯೂ ಶ್ರೇಷ್ಠ ಪ್ರದರ್ಶನ ನೀಡಿದ ಯಾನಿಕ್ ಸಿನ್ನರ್, ಸತತ ಎರಡನೇ ಬಾರಿಗೆ ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿ ಗೆದ್ದಿದ್ದಾರೆ.

ಪ್ರಸ್ತುತ ಆಸ್ಟ್ರೇಲಿಯನ್ ಓಪನ್ ಗೆದ್ದಿರುವ ಯಾನಿಕ್ ಸಿನ್ನರ್‌ಗೆ ಇದು ಕಳೆದ 13 ತಿಂಗಳುಗಳಲ್ಲಿ ಮೂರನೇ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿಯಾಗಿದೆ. ಇದಕ್ಕೂ ಮೊದಲು ಅವರು 2024ರ ಯುಎಸ್ ಓಪನ್ ಮತ್ತು ಕಳೆದ ಬಾರಿಯ ಆಸ್ಟ್ರೇಲಿಯನ್ ಓಪನ್ ಗೆಲ್ಲುವಲ್ಲಿಯೂ ಸಫಲರಾಗಿದ್ದರು. ಮತ್ತೊಂದೆಡೆ, ವಿಶ್ವ ನಂ.2 ಅಲೆಕ್ಸಾಂಡರ್ ಜ್ವೆರೆವ್ ಮತ್ತೊಮ್ಮೆ ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿಯನ್ನು ಗೆಲ್ಲುವುದರಿಂದ ವಂಚಿತರಾದರು.

ಸತತ ಎರಡನೇ ಬಾರಿಗೆ ಚಾಂಪಿಯನ್ ಆಗುವ ಮೂಲಕ ಯಾನಿಕ್ ಸಿನ್ನರ್ ಅವರು ಆಸ್ಟ್ರೇಲಿಯನ್ ಓಪನ್ ಇತಿಹಾಸದಲ್ಲಿ ತಮ್ಮ ಪ್ರಶಸ್ತಿಯನ್ನು ಉಳಿಸಿಕೊಂಡ 11ನೇ ಆಟಗಾರರಾಗಿದ್ದಾರೆ. ಮತ್ತೊಂದೆಡೆ, ಅವರು ಜಿಮ್ ಕೊರಿಯರ್ (1992 ಮತ್ತು 1993) ನಂತರ ಸತತ ಎರಡು ಬಾರಿ ಈ ಪ್ರಶಸ್ತಿಯನ್ನು ಗೆದ್ದ ಅತ್ಯಂತ ಕಿರಿಯ ಆಟಗಾರ ಎಂಬ ಮೈಲಿಗಲ್ಲನ್ನು ನಿರ್ಮಿಸಿದ್ದಾರೆ.

ಅಲೆಕ್ಸಾಂಡರ್ ಜ್ವೆರೆವ್: ಅನಾಯಾಸ ಫೈನಲ್ ಪ್ರವೇಶ

ಪ್ರಶಸ್ತಿ ಗೆಲ್ಲುವಲ್ಲಿ ವಿಫಲರಾದ ಅಲೆಕ್ಸಾಂಡರ್ ಜ್ವೆರೆವ್ 2015ರಿಂದ ಗ್ರ್ಯಾಂಡ್‌ಸ್ಲಾಮ್ ಆಡುತ್ತಿದ್ದು, 3 ಬಾರಿ ಫೈನಲ್ ತಲುಪುವಲ್ಲಿ ಯಶಸ್ವಿಯಾಗಿದ್ದಾರೆ, ಆದರೆ ಪ್ರತಿ ಬಾರಿಯೂ ಸೋಲನ್ನು ಎದುರಿಸಿದ್ದಾರೆ. ಈ ಬಾರಿ ಜ್ವೆರೆವ್ ಫೈನಲ್ ತಲುಪಲು ಹೆಚ್ಚಿನ ಪ್ರತಿರೋಧ ಎದುರಿಸಬೇಕಾಗಿರಲಿಲ್ಲ, ಏಕೆಂದರೆ, 24 ಬಾರಿಯ ಗ್ರ್ಯಾಂಡ್‌ಸ್ಲಾಮ್ ಚಾಂಪಿಯನ್ ನೊವಾಕ್ ಜೊಕೊವಿಕ್ ಅವರನ್ನು ಸೆಮಿ ಫೈನಲ್‌ನಲ್ಲಿ ಅವರು ಎದುರಿಸಿದರಾದರೂ, ಜೊಕೊವಿಕ್ ಕಾಲಿನ ಗಾಯದಿಂದಾಗಿ ಒಂದು ಸೆಟ್‌ನ ನಂತರ ಪಂದ್ಯದಿಂದ ಹಿಂದೆ ಸರಿಯಲು ನಿರ್ಧರಿಸಿದ್ದರು. ಹೀಗಾಗಿ ಅಲೆಕ್ಸಾಂಡರ್ ಜ್ವೆರೆವ್ ಯಾವುದೇ ತೊಂದರೆ ಇಲ್ಲದೆ ಫೈನಲ್‌ಗೆ ಎಂಟ್ರಿ ಕೊಟ್ಟಿದ್ದರು. ಮತ್ತೊಂದೆಡೆ, ಮೂರು ಬಾರಿ ಗ್ರ್ಯಾಂಡ್‌ಸ್ಲಾಮ್‌ನ ಫೈನಲ್‌ಗೆ ಎಂಟ್ರಿಕೊಟ್ಟಿರುವ ಸಿನ್ನರ್, ಮೂರು ಬಾರಿಯೂ ಪ್ರಶಸ್ತಿಯನ್ನು ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ.

ಬೌಲರ್‌ಗಳ ಗಮನಾರ್ಹ ಪ್ರದರ್ಶನ | ಬಾಂಗ್ಲಾ ವಿರುದ್ಧ ಅನಾಯಾಸ ಗೆಲುವು

ಸೂಪರ್ ಸಿಕ್ಸ್‌ನಲ್ಲೂ ಭಾರತಕ್ಕೆ ಜಯ

ಕೌಲಾಲಂಪುರ: ಅಂಡರ್-19 ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಭಾರತ ತಂಡದ ಗೆಲುವಿನ ನಾಗಲೋಟ ಸೂಪರ್-6 ಹಂತಕ್ಕೂ ವಿಸ್ತರಿಸಿದೆ. ಭಾನುವಾರ ನಡೆದ ಬಾಂಗ್ಲಾದೇಶ ವಿರುದ್ಧದ ಸೂಪರ್-6 ಪಂದ್ಯದಲ್ಲಿ 8 ವಿಕೆಟ್‌ಗಳ ಗೆಲುವು ಸಾಧಿಸಿದೆ.

ಮಳೆಯಿಂದ ಅಡಚಣೆಯಾದ ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ನಡೆಸಿದ ಬಾಂಗ್ಲಾದೇಶ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 64 ರನ್ ಬಾರಿಸಿತು. ಈ ಅಲ್ಪ ಮೊತ್ತದ ಗುರಿ ಬೆನ್ನಟ್ಟಿದ ಭಾರತ 7.1 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 66 ರನ್ ಬಾರಿಸಿ ಗೆಲುವು ದಾಖಲಿಸಿತು. ಮುಂದಿನ ಪಂದ್ಯದಲ್ಲಿ ಸ್ಕಾಟ್ಲೆಂಡ್ ವಿರುದ್ಧ ಭಾರತವು ಸೆಣಸಾಡಲಿದೆ. ಆ ಪಂದ್ಯ ಜ.28ರಂದು ನಡೆಯಲಿದೆ.

ಪಂದ್ಯ ಗೆಲ್ಲಲು ಗುರಿ ಬೆನ್ನಟ್ಟಿದ ವೇಳೆ ಗೊಂಗಡಿ ತ್ರಿಷಾ 40 ರನ್ ಬಾರಿಸಿದರು. ಅವರ ಈ ಬ್ಯಾಟಿಂಗ್ ಇನಿಂಗ್ಸ್‌ನಲ್ಲಿ 8 ಬೌಂಡರಿ ಸಿಡಿಯಿತು. ಅಂತಿಮವಾಗಿ ಸಾನಿಕಾ ಚಲ್ಕೆ (11) ಮತ್ತು ನಾಯಕಿ ನಿಕಿ ಪ್ರಸಾದ್(3) ಅಜೇಯ ರನ್ ಬಾರಿಸಿ ತಂಡವನ್ನು ಗೆಲುವಿನ ದಡ ಸೇರಿದರು.

ಭಾರತ ಪರ ಬೌಲಿಂಗ್‌ನಲ್ಲಿ ವೈಷ್ಣವಿ ಶರ್ಮಾ 15 ರನ್‌ಗೆ 3 ವಿಕೆಟ್ ಕಿತ್ತು ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಬಾಂಗ್ಲಾ ತಂಡಕ್ಕೆ ನಾಯಕಿ ಸುಮಿಯಾ ಅಕ್ತರ್ ಆಸರೆಯಾದರು. 7ನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸಿದ ಅವರು ಅಜೇಯ 21 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರ್

ಬಾಂಗ್ಲಾದೇಶ: 8 ವಿಕೆಟ್‌ಗೆ 64 (ಸುಮಿಯಾ ಅಕ್ತರ್ 21 ನಾಟೌಟ್, ಜನ್ನತುಲ್ ಮೌವಾ 14, ವೈಷ್ಣವಿ ಶರ್ಮಾ 15ಕ್ಕೆ 2).
ಭಾರತ: 2 ವಿಕೆಟ್‌ಗೆ 66 (ಗೊಂಗಡಿ ತ್ರಿಷಾ 40, ಸಾನಿಕಾ ಚಲ್ಕೆ11 ನಾಟೌಟ್, ನಿಕಿ ಪ್ರಸಾದ್ 3 ನಾಟೌಟ್, ಹಬೀಬಾ ಇಸ್ಲಾಂ ಪಿಂಕಿ 15 ಕ್ಕೆ 1.

ರಣಜಿ ಅಭ್ಯಾಸ: ರೈಲ್ವೇಸ್ ಪರ ಕೊಹ್ಲಿ ಕಣಕ್ಕೆ

ದೆಹಲಿ: ಕುತ್ತಿಗೆ ನೋವಿನಿಂದಾಗಿ ಸೌರಾಷ್ಟ್ರ ವಿರುದ್ಧದ ರಣಜಿ ಪಂದ್ಯದಿಂದ ಹೊರಗುಳಿದಿದ್ದ ಟೀಮ್ ಇಂಡಿಯಾದ ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ ಇದೀಗ ಜ.30ರಂದು ನಡೆಯುವ ರೈಲ್ವೇಸ್ ವಿರುದ್ಧದ ಪಂದ್ಯದಲ್ಲಿ ದೆಹಲಿ ಪರ ಕಣಕಿಳಿಯುವುದು ಖಚಿತವಾದಂತಿದೆ. ಕೊಹ್ಲಿ ಮಾಜಿ ಬ್ಯಾಟರ್ ಸಂಜಯ್ ಬಂಗಾರ್ ಅವರ ಮಾರ್ಗದರ್ಶನದಲ್ಲಿ ಕಠಿಣ ಬ್ಯಾಟಿಂಗ್ ಅಭ್ಯಾಸ ಆರಂಭಿಸಿದ್ದು, ಅಭ್ಯಾಸದ ಫೋಟೊ ಮತ್ತು ವಿಡಿಯೊಗಳು ವೈರಲ್ ಆಗಿದೆ.

ಕೊಹ್ಲಿ ಕೊನೆಯ ಬಾರಿಗೆ ರಣಜಿ ಟ್ರೋಫಿ ಪಂದ್ಯವಾಡಿದ್ದು 2012ರಲ್ಲಿ. ಇದೀಗ ಅವರು ರೈಲ್ವೇಸ್ ವಿರುದ್ಧ ಕಣಕ್ಕಿಳಿದರೆ 13 ವರ್ಷಗಳ ಬಳಿಕ ರಣಜಿ ಟ್ರೋಫಿಯಲ್ಲಿ ಆಡಿದಂತಾಗುತ್ತದೆ. ಮೂಲಗಳ ಪ್ರಕಾರ ಕೊಹ್ಲಿ ಕೊನೇ ಲೀಗ್ ಪಂದ್ಯದಲ್ಲಿ ಆಡಲು ತಾನು ಲಭ್ಯನಿದ್ದೇನೆ ಎಂದು ದೆಹಲಿ ಮತ್ತು ಜಿಲ್ಲಾ ಕ್ರಿಕೆಟ್ ಸಂಸ್ಥೆಗೆ (ಡಿಡಿಸಿಎ) ಈಗಾಗಲೇ ಮಾಹಿತಿ ನೀಡಿದ್ದಾರೆ ಎನ್ನಲಾಗಿದೆ.

ತವರಿನ ನ್ಯೂಜಿಲ್ಯಾಂಡ್ ಮತ್ತು ಆಸೀಸ್ ಪ್ರವಾಸದ ಟೆಸ್ಟ್ ಸರಣಿಯಲ್ಲಿ ಕೊಹ್ಲಿ ಸಂಪೂರ್ಣ ಬ್ಯಾಟಿಂಗ್ ವೈಫಲ್ಯ ಕಂಡಿದ್ದರು. ಇದೇ ಕಾರಣದಿಂದ ಬಿಸಿಸಿಐ ಹಿರಿಯ ಆಟಗಾರರು ಕೂಡ ದೇಶೀಯ ಪಂದ್ಯವನ್ನಾಡುವುದು ಕಡ್ಡಾಯ ಎಂಬ ನಿಯಮ ಜಾರಿಗೆ ತಂದಿದ್ದರು. ಈಗಾಗಲೇ ನಾಯಕ ರೋಹಿತ್ ಶರ್ಮ, ಶುಭಮನ್ ಗಿಲ್, ರಿಷಭ್ ಪಂತ್, ರವೀಂದ್ರ ಜಡೇಜಾ ಸೇರಿದಂತೆ ಕೆಲ ಆಟಗಾರರು ರಣಜಿ ಆಡಿದ್ದರು. ಆದರೆ ರೋಹಿತ್ ಮತ್ತು ಪಂತ್ ಸಂಪೂರ್ಣ ವಿಫಲರಾಗಿದ್ದರು.

2020ರ ಆರಂಭದಿಂದಲೂ ವಿರಾಟ್ ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರೀ ವೈಫಲ್ಯ ಎದುರಿಸುತ್ತಿದ್ದಾರೆ. 2020ರ ಆರಂಭದಿಂದ 39 ಟೆಸ್ಟ್ ಪಂದ್ಯಗಳಲ್ಲಿ, ವಿರಾಟ್ ಕೇವಲ 30.72ರ ಸರಾಸರಿಯಲ್ಲಿ 2,028 ರನ್ ಗಳಿಸಿದ್ದಾರೆ. ಕೇವಲ ಮೂರು ಶತಕಗಳು ಮತ್ತು ಒಂಬತ್ತು ಅರ್ಧಶತಕಗಳನ್ನಷ್ಟೇ ಗಳಿಸಿದ್ದಾರೆ.

ಅಂಧರ ಕ್ರಿಕೆಟ್: ತ.ನಾಡಿಗೆ ಜಯ

ಬೆಂಗಳೂರು: ಅಶ್ವಿನಿ ಅಂಗಡಿ ಟ್ರಸ್ಟ್ ಮತ್ತು ಭಾರತೀಯ ಅಂಧರ ಫುಟ್ಬಾಲ್ ಸಂಸ್ಥೆಯ ಸಹಯೋಗದಲ್ಲಿ ಅಂತಾ ರಾಷ್ಟ್ರೀಯ ಸೂಪರ್ ಲೀಗ್ ಅಂಧರ ಫುಟ್ಬಾಲ್ ಪಂದ್ಯಾವಳಿಯ ಫೈನಲ್ ದಿನದಾಟದ ಫಲಿತಾಂಶ ಬಿಡುಗಡೆ ಮಾಡಲಾಗಿದೆ.

ಪುರುಷರ ಫೈನಲ್ ಪಂದ್ಯದಲ್ಲಿ ತಮಿಳುನಾಡು ಮತ್ತು ಅರುಣಾಚಲ ಪ್ರದೇಶದ ನಡುವಿನ ಪಂದ್ಯದಲ್ಲಿ ತಮಿಳುನಾಡು ತಂಡ ಗೆದ್ದು ಮೊದಲನೇಯ ಬಹುಮಾನ 1ಲಕ್ಷ ರು. ಪಾರಿತೋಷಕವನ್ನು ಮುಡಿಗೇರಿಸಿಕೊಂಡಿತು. ಮಹಿಳೆ ಯರ ವಿಭಾಗದಲ್ಲಿ ತಮಿಳುನಾಡು ಮತ್ತು ಕರ್ನಾಟಕ ನಡುವಿನ ಪಂದ್ಯದಲ್ಲಿ ತಮಿಳುನಾಡು ಮಹಿಳೆಯರ ತಂಡವು ಜಯಭೇರಿ ಬಾರಿಸಿತು.

ಶಾಸಕ ಡಾ.ಸಿ.ಎನ್. ಅಶ್ವಥ್ ನಾರಾಯಣ್, ಆಶ್ವಿನಿ ಅಂಗಡಿರವರು ವಿಜೇತ ತಂಡಗಳಿಗೆ ನಗದು ಪುರಸ್ಕಾರ ಮತ್ತು ಪಾರಿತೋಷಕ ವಿತರಿಸಿದರು.

ತ್ರಿಕೋನ ಸರಣಿಯ ಬಳಿಕ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ

ಪಾಕಿಸ್ತಾನ ತಂಡ ಇನ್ನೂ ತಡವಾಗಿ ಪ್ರಕಟ

ಲಾಹೋರ್: ಐಸಿಸಿ ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಗೆ ಆತಿಥೇಯ ಪಾಕಿಸ್ತಾನ ಇನ್ನೂ ತಂಡವನ್ನು ಪ್ರಕಟಿಸಿಲ್ಲ. ಆದರೆ, ಲಾಹೋರ್ ಮತ್ತು ಕರಾಚಿಯಲ್ಲಿ ತ್ರಿಕೋನ ಏಕದಿನ ಸರಣಿಯೊಂದನ್ನು ಆಡಲು ಪಾಕ್ ನಿರ್ಧರಿಸಿದೆ. ನ್ಯೂಜಿಲೆಂಡ್ ಮತ್ತು ದ. ಆಫ್ರಿಕಾ ತಂಡಗಳ ವಿರುದ್ಧ ಪಾಕಿಸ್ತಾನ ಆಡಲಿಳಿಯಲಿದೆ. ಈ ಸರಣಿ ಬಳಿಕ ತಂಡವನ್ನು ಪ್ರಕಟಿಸುವ ಯೋಜನೆ ಪಾಕ್‌ನದ್ದಾಗಿದೆ.

ಪಾಕಿಸ್ತಾನ ಚಾಂಪಿಯನ್ಸ್ ಟ್ರೋಫಿ ಆರಂಭಕ್ಕೂ ಮುನ್ನ ದಿಢೀರ್ ಆಗಿ ತ್ರಿಕೋನ ಏಕದಿನ ಸರಣಿಯನ್ನಾಡಲು ಕೂಡ ಒಂದು ಕಾರಣವಿದೆ. ಕೆಲ ದಿನಗಳಿಂದ ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಗಳು ನಡೆಯುವ ಪಾಕ್‌ನ ಮೂರು ಮೈದಾನಗಳಲ್ಲಿ ಲಾಹೋರ್ ಮತ್ತು ಕರಾಚಿ ಕ್ರೀಡಾಂಗಣಗಳು ಇನ್ನೂ ಸಜ್ಜಾಗಿಲ್ಲ, ಹೀಗಾಗಿ ಪಂದ್ಯಗಳನ್ನು ಸಂಪೂರ್ಣವಾಗಿ ದುಬೈಗೆ ಸ್ಥಳಾಂತರಿಸುವ ಸಾಧ್ಯತೆ ಇದೆ ಎಂದು ಹೇಳಲಾಗಿತ್ತು. ಆದರೆ ಕ್ರೀಡಾಂಗಣ ಸಜ್ಜಾಗಿದೆ ಎಂದು ಜಗಜ್ಜಾಹೀರಾಗಲು ಪಾಕ್ ಈ ತಂತ್ರವನ್ನು ರೂಪಿಸಿದಂತಿದೆ. ಫೈನಲ್ ಸೇರಿದಂತೆ ನಾಲ್ಕು ಪಂದ್ಯಗಳ ಈ ಸರಣಿ ಫೆ.8ರಿಂದ 14ರ ತನಕ ನಡೆಯಲಿದೆ.

ಚಾಂಪಿಯನ್ಸ್ ಟ್ರೋಫಿ ಯಾವಾಗ: 19 ದಿನಗಳ ಕಾಲ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಒಟ್ಟು 15 ಪಂದ್ಯಗಳು ನಡೆಯಲಿವೆ. ಫೆಬ್ರವರಿ 19ರಂದು ಹಾಲಿ ಚಾಂಪಿಯನ್ ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ತಂಡಗಳು ಕರಾಚಿಯಲ್ಲಿ ಉದ್ಘಾಟನಾ ಪಂದ್ಯ ಆಡುವ ಮೂಲಕ ಪಂದ್ಯಾವಳಿಗೆ ಚಾಲನೆ ಸಿಗಲಿದೆ.

ಭಾರತ ಒಳಗೊಂಡ 3 ಲೀಗ್ ಪಂದ್ಯಗಳು ಮತ್ತು ಒಂದು ಸೆಮಿಫೈನಲ್ ಪಂದ್ಯ ದುಬೈನಲ್ಲಿ ನಿಗದಿಯಾಗಿದೆ. ಟೂರ್ನಿಯ ಉಳಿದ 9 ಲೀಗ್ ಮತ್ತು ಇನ್ನೊಂದು ಸೆಮಿಫೈನಲ್ ಪಂದ್ಯ ಪಾಕಿಸ್ತಾನದ ಕರಾಚಿ, ರಾವಲ್ಪಿಂಡಿ ಮತ್ತು ಲಾಹೋರ್‌ನಲ್ಲಿ ನಿಗದಿಯಾಗಿವೆ. 2ನೇ ಸೆಮಿಫೈನಲ್ ಮಾರ್ಚ್ 2ರಂದು ಲಾಹೋರ್‌ನಲ್ಲಿ ನಿಗದಿಯಾಗಿದೆ. ಟೂರ್ನಿಯಲ್ಲಿ ಆಡುವ 8 ತಂಡಗಳನ್ನು ತಲಾ 4ರಂತೆ 2 ಗುಂಪುಗಳಲ್ಲಿ ವಿಂಗಡಿಸಲಾಗಿದ್ದು, ರೌಂಡ್ ರಾಬಿನ್ ಲೀಗ್ ಬಳಿಕ ಪ್ರತಿ ಗುಂಪಿನ ಅಗ್ರ 2 ತಂಡಗಳು ಸೆಮಿಫೈನಲ್‌ಗೇರಲಿವೆ.

ತಾಯ್ನಾಡಿಗೆ ಮರಳಿದ ಶಿವಣ್ಣ

ಅನಾರೋಗ್ಯದಿಂದ ಬಳಲುತ್ತಿದ್ದ ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಚಿಕಿತ್ಸೆಗಾಗಿ ಅಮೇರಿಕಾಗೆ ತೆರಳಿದ್ದರು. ಅಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಶಿವಣ್ಣ, ಈಗ ಗುಣಮುಖರಾಗಿ ತಾಯ್ನಾಡಿಗೆ ಮರಳಿದ್ದಾರೆ. ಬೆಂಗಳೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದ ಶಿವರಾಜ್ ಕುಮಾರ್ ಅವರನ್ನು ಅದ್ದೂರಿಯಾಗಿ ಬರಮಾಡಿಕೊಳ್ಳಲಾಯಿತು. ಸೇಬಿನ ಹಾರ ಹಾಕಿ, ಹೂಮಳೆ ಸುರಿಸಿ ಅಭಿಮಾನಿಗಳು ಸಂಭ್ರಮಿಸಿದರು.

ತಮ್ಮ ಆರೋಗ್ಯ ಹಾಗೂ ಚಿಕಿತ್ಸೆಯ ಬಗ್ಗೆ ಮಾತನಾಡಿದ ಶಿವಣ್ಣ, ಅಮೆರಿಕಕ್ಕೆ ಹೋಗಬೇಕಾದರೆ ತುಂಬಾ ಎಮೋಷನಲ್ ಆಗಿದ್ದೆ, ಭಯವೂ ಕಾಡುತ್ತಿತ್ತು. ಏನೇ ಬಂದರೂ ಎದುರಿಸೋಣ ಎಂದುಕೊಂಡೆ. ವಿಮಾನದಲ್ಲಿ ಪ್ರಯಾಣಿಸುವಾಗಲೂ ನನಗೆ ಕೊಂಚ ಅಳುಕಿತ್ತು. ಶಸ್ತ್ರಚಿಕಿತ್ಸೆ ನಡೆಯುವ ದಿನವೂ ಭಯವಿತ್ತು. ಸತತ ಆರು ಗಂಟೆ ಶಸ್ತ್ರ ಚಿಕಿತ್ಸೆ, ಮನೆಯವರಿಗೂ ಟೆನ್ಷನ್ ಆಗಿತ್ತು. ದೇವರ ದಯೆ, ಎಲ್ಲರ ಹಾರೈಕೆಯಿಂದ ಎಲ್ಲವೂ ಯಶಸ್ವಿಯಾಗಿದೆ. ನಾನೀಗ ಚೇತರಿಸಿಕೊಂಡಿದ್ದೇನೆ.

ಆಪರೇಷನ್ ಬಳಿಕ ಸ್ವಲ್ಪ ದಿನ ಬಿಟ್ಟು ವಾಕಿಂಗ್ ಶುರುಮಾಡಿದೆ. ಇದರಿಂದ ನಿಧಾನಕ್ಕೆ ಆರೋಗ್ಯ ಸುಧಾರಿಸಿತು. ಎಲ್ಲರೂ ನನ್ನೊಂದಿಗಿದ್ದರು. ಚಿಕಿತ್ಸೆ ಬಳಿಕ ತುಂಬಾ ಸ್ಟ್ರಾಂಗ್ ಆಗಿದ್ದೀನಿ. ಮೂವತ್ತೆಂಟು ವರ್ಷಗಳಿಂದಲೂ ನನ್ನನ್ನು ಬೆಳೆಸಿದ್ದಾರೆ, ಎಲ್ಲರ ಆಶೀರ್ವಾದ ನನಗೆ ಸಿಕ್ಕಿದೆ. ನಿಜವಾಗಿಯೂ ನಾನು ಅದೃಷ್ಟವಂತ ಅನಿಸುತ್ತಿದೆ ಎಂದು ಶಿವರಾಜ್‌ಕುಮಾರ್ ಹೇಳಿದರು.

ಅಪ್ಪಾಜಿ ಕಿಡ್ನಾಪ್ ಆಗಿ ಮರಳಿ ಮನೆಗೆ ಬಂದಾಗ ಆದ ಖುಷಿಯಾಗಿದೆ. ಮೊದಲು ಶಿವುಗೆ ಕಾಡುತ್ತಿರುವ ಅನಾರೋಗ್ಯದ ಬಗ್ಗೆ ಕೇಳಿದಾಗ ತುಂಬಾ ದುಃಖವಾಯಿತು. ಶಿವಣ್ಣನ್ನು ಚಿಕಿತ್ಸೆಗೆ ಕಳುಹಿಸುವಾಗಲೂ ದುಃಖವಾಗಿತ್ತು. ಚಿಕಿತ್ಸೆ ಪಡೆಯುತ್ತಿರುವಾಗ ಪ್ರತಿದಿನ ಕರೆ ಮಾಡಿ ಮಾತನಾಡುತ್ತಿದ್ದೆ ಆಗ ಸ್ವಲ್ಪ ಸಮಾಧಾನವಾಗುತ್ತಿತ್ತು. ಅಭಿಮಾನಿಗಳ ಹಾರೈಕೆಯಿಂದ ಶಿವು ಆರೋಗ್ಯವಾಗಿ ಮರಲಿದ್ದಾರೆ,
-ರಾಘವೇಂದ್ರ ರಾಜ್‌ಕುಮಾರ್

ಜೀವನವೇ ಒಂದು ಪಾಠ, ಜೀವನದಲ್ಲಿ ಇದೆಲ್ಲ ತಾನಾಗಿಯೇ ಬರುತ್ತದೆ. ನಾನು ಎಲ್ಲವನ್ನೂ ಧೈರ್ಯವಾಗಿ ಎದುರಿಸಿದೆ. ಸದ್ಯ ಮುಂದಿನ ಸಿನಿಮಾಗಳ ಬಗ್ಗೆ ಯೋಜನೆ ನಡೆಯುತ್ತಿದೆ. ಮುಂದೆ ರಾಮ್ ಚರಣ್ ಅವರ ಸಿನಿಮಾದಲ್ಲಿಯೂ ನಟಿಸುತ್ತೇನೆ ಎಂದು ಶಿವಣ್ಣ ತಿಳಿಸಿದರು.



ವಿಟಾಕೀಸ್

ಲಕ್ಷ್ಮೀಪುತ್ರನಿಗೆ ಮುಹೂರ್ತ

ಉಪಾಧ್ಯಕ್ಷ ಬಳಿಕ ಚಿಕ್ಕಣ್ಣ ಮತ್ತೊಂದು ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿದ್ದಾರೆ. ಲಕ್ಷ್ಮಿಪುತ್ರ ಶೀರ್ಷಿಕೆಯಲ್ಲಿ ಸೆಟ್ಟೇರಿರುವ ಈ ಚಿತ್ರದ ಮುಹೂರ್ತ ನಾಗರಭಾವಿಯ ಶ್ರೀಲಕ್ಷ್ಮೀ ವೆಂಕಟೇಶ್ವರ ದೇಗುಲದಲ್ಲಿ ನೆರವೇರಿತು. ಅರ್ಜುನ್ ಗೂರೂಜಿ ಚಿತ್ರಕ್ಕೆ ಕ್ಲ್ಯಾಪ್ ಮಾಡಿ ಶುಭ ಹಾರೈಸಿದರು. ನಿರ್ದೇಶಕ ಎ.ಪಿ.ಅರ್ಜುನ್, ತಮ್ಮದೇ ಎ.ಪಿ.ಅರ್ಜುನ್ ಫಿಲಂಸ್ ಸಂಸ್ಥೆಯಲ್ಲಿ ಲಕ್ಷೀಪುತ್ರ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಸಚಿವ ಸಂತೋಷ್ ಲಾಡ್ ಅರ್ಪಿಸುತ್ತಿರುವ ಲಕ್ಷ್ಮೀಪುತ್ರ ಚಿತ್ರಕ್ಕೆ ಎ.ಪಿ.ಅರ್ಜುನ್ ಕಥೆ ಹಾಗೂ ಸಾಹಿತ್ಯ ಬರೆದಿದ್ದಾರೆ. ಹಲವು ಚಿತ್ರಗಳಿಗೆ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವ ವಿಜಯ್.ಎಸ್.ಸ್ವಾಮಿ ಈ ಸಿನಿಮಾಗೆ ಆಕ್ಷನ್ ಕಟ್ ಹೇಳುತ್ತಿದ್ದಾರೆ.

ಕಳೆದ ವರ್ಷದ ಜನವರಿಯಲ್ಲಿ ಉಪಾಧ್ಯಕ್ಷ ರಿಲೀಸ್ ಆಗಿತ್ತು. ಈ ವರ್ಷದ ಜನವರಿಯಲ್ಲಿ ಲಕ್ಷ್ಮೀಪುತ್ರ ಮುಹೂರ್ತ ನೆರವೇರಿದೆ. ಕೌಟುಂಬಿಕ ಕಥೆ ಬೆರತಿದ್ದ ಉಪಾಧ್ಯಕ್ಷ ಚಿತ್ರವನ್ನು ನಾಡಿನ ಜನತೆ ಮೆಚ್ಚಿದ್ದರು. ಹಾಗಾಗಿ ಮುಂದೆ ಫ್ಯಾಮಿಲಿ ಕುಳಿತು ನೋಡುವ ಸಿನಿಮಾದಲ್ಲಿ ನಟಿಸಬೇಕು ಎಂದುಕೊಂಡಿದ್ದೆ. ಆ ಹುಡುಕಾಟದಲ್ಲಿ ಸಿಕ್ಕಿದ್ದು ಲಕ್ಷ್ಮೀಪುತ್ರ. ಇಡೀ ಕುಟುಂಬ ಕುಳಿತು ನೋಡುವ ಸಿನಿಮಾ ಇದು ಎಂದು ಚಿಕ್ಕಣ್ಣ ಹೇಳಿದರು.

ಹಿರಿಯ ನಟಿ ತಾರಾ ಅನುರಾಧಾ, ಕುರಿ ಪ್ರತಾಪ್, ಧರ್ಮಣ್ಣ ಕಡೂರು ತಾರಾಗಣದಲ್ಲಿದ್ದಾರೆ. ಗಿರೀಶ್ ಆರ್ ಗೌಡ ಛಾಯಾಗ್ರಹಣ, ಅರ್ಜುನ್ ಜನ್ಯ ಸಂಗೀತವಿರುವ ಲಕ್ಷ್ಮೀಪುತ್ರನಿಗೆ ಡಾ.ಕೆ. ರವಿವರ್ಮ ಸಾಹಸ ನಿರ್ದೇಶನ ಮಾಡುತ್ತಿದ್ದಾರೆ. ಎ.ಪಿ.ಅರ್ಜುನ್, ಪ್ರಶಾಂತ್ ರಾಜಪ್ಪ ಹಾಗೂ ವಿಜಯ್ ಈಶ್ವರ್ ಸಂಭಾಷಣೆ ಬರೆದಿದ್ದಾರೆ.



ಲಕ್ಷ್ಮೀಪುತ್ರ ಕೊರೋನಾ ಸಮಯದಲ್ಲಿ ಮಾಡಿದ ಕಥೆಯಿದು. ತಾಯಿ, ಮಗನ ಭಾಂಧವ್ಯದ ಕಥೆ ಚಿತ್ರದಲ್ಲಿದೆ. ಪ್ರತಿಯೊಬ್ಬರೂ ನೋಡಬೇಕಾದ ಎಮೋಷನ್ ಸ್ಟೋರಿಯೂ ಬೆರೆತಿದೆ. ಇದು ಚಿಕ್ಕಣ್ಣ ಅವರಿಗೆ ಹೇಳಿ ಮಾಡಿಸಿದ ಕಥೆಯಾಗಿದ್ದು, ಅವರು ಕಥೆ ಕೇಳಿ ಮೆಚ್ಚಿ ಚಿತ್ರದಲ್ಲಿ ನಟಿಸಲು ಸಿದ್ಧವಾಗಿದ್ದಾರೆ. ನನ್ನ ಗೆಳೆಯ ವಿಜಯ್ ಸ್ವಾಮಿ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ.
-ಎ.ಪಿ.ಅರ್ಜುನ್ ನಿರ್ಮಾಪಕ

ಸದ್ದಿಲ್ಲದೆ ಮುಗಿದ ಮಾರುತ

ಖ್ಯಾತ ನಿರ್ದೇಶಕ ಎಸ್.ನಾರಾಯಣ್ ಹಲವು ಸೂಪರ್ ಹಿಟ್ ಸಿನಿಮಾಗಳನ್ನು ನಿರ್ದೇಶಿಸಿ ಸೈ ಎನಿಸಿಕೊಂಡಿದ್ದಾರೆ. ಈಗ ದುನಿಯಾ ವಿಜಯ್ ನಾಯಕನಾಗಿ ನಟಿಸುತ್ತಿರುವ ಮಾರುತ ಚಿತ್ರವನ್ನು ನಿರ್ದೇಶಿಸಿದ್ದು, ಸದ್ದಿಲ್ಲದೆ ಶೂಟಿಂಗ್ ಮುಗಿಸಿದ್ದಾರೆ. ಈ ಹಿಂದೆ ದಕ್ಷ ಮತ್ತು ಯಜ್ಞ ಚಿತ್ರವನ್ನು ನಿರ್ದೇಶಿಸಿದ್ದ ನಾರಾಯಣ್ ಮೂರನೇ ಬಾರಿಗೆ ವಿಜಯ್ ಜತೆಯಾಗಿದ್ದಾರೆ. ಶ್ರೇಯಸ್ ಮಂಜು ಕೂಡ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿ ಕೊಳ್ಳುತ್ತಿದ್ದಾರೆ. ಬೃಂದಾ ನಾಯಕಿಯಾಗಿ ಬಣ್ಣಹಚ್ಚಿದ್ದು, ಕ್ರೇಜಿಸ್ಟಾರ್ ರವಿಚಂದ್ರನ್ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ. ಸಾಧುಕೋಕಿಲ, ರಂಗಾಯಣ ರಘು, ತಾರಾ ಅನುರಾಧಾ, ಶರತ್ ಲೋಹಿತಾಶ್ವ, ಪ್ರಮೋದ್ ಶೆಟ್ಟಿ, ಮಂಜು ಪಾವಗಡ, ಚಿತ್ರಾ ಶೆಣೈ ಸೇರಿದಂತೆ ದೊಡ್ಡ ಕಲಾವಿದರ ತಾರಾಬಳಗವೇ ಚಿತ್ರದಲ್ಲಿದೆ.

ಈಶಾ ಪ್ರೊಡಕ್ಷನ್ಸ್‌ನಲ್ಲಿ ನಿರ್ಮಾಪಕರಾದ ಕೆ.ಮಂಜು ಹಾಗೂ ರಮೇಶ್ ಯಾದವ್ ಜಂಟಿಯಾಗಿ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಎಸ್.ನಾರಾಯಣ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಈ ಚಿತ್ರಕ್ಕೆ ಪಿ.ಕೆ. ಹೆಚ್ ದಾಸ್ ಛಾಯಾಗ್ರಹಣ, ಶಿವಪ್ರಸಾದ್ ಯಾದವ್ ಸಂಕಲನ, ವಿನೋದ್ ಹಾಗೂ ಅರ್ಜುನ್ ಸಾಹಸ ನಿರ್ದೇಶನ ಮತ್ತು ಮೋಹನ್ ಕುಮಾರ್, ಸಂತು ನೃತ್ಯ ನಿರ್ದೇಶನವಿದೆ. ಅದ್ದೂರಿ ವೆಚ್ಚದ ಈ ಚಿತ್ರಕ್ಕೆ ಬೆಂಗಳೂರು, ಮೈಸೂರು, ಚಿಕ್ಕಮಗಳೂರು, ಧಾರವಾಡ, ಕೂಡಲ ಸಂಗಮ, ಸವದತ್ತಿ, ಬೆಳಗಾವಿ, ಗೋವಾ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಬೆಂಗಳೂರು ಸಮೀಪ ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಕುಂಬಳಕಾಯಿ ಒಡೆದಿದೆ.

ಮಾರುತ ಕಂಟೆಂಟ್ ಓರಿಯಂಟೆಡ್ ಚಿತ್ರ. ಇದು ನಿಮ್ಮ ಕಥೆ. ನಮ್ಮ, ನಿಮ್ಮೆಲ್ಲರ ಮನೆಯ ಕಥೆಯೂ ಹೌದು. ನಮಗೆ ಗೊತ್ತಿಲ್ಲದ ಹಾಗೆ ಭೂತವೊಂದು ನಮ್ಮನ್ನೆಲ್ಲಾ ಆವರಿಸಿಕೊಂಡಿದೆ. ಅದರಿಂದ ಸಮಾಜದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳೇನು ಎಂಬುದನ್ನು ಈ ಚಿತ್ರದಲ್ಲಿ ಕಟ್ಟಿಕೊಡಲಾಗುತ್ತಿದೆ.
-ಎಸ್.ನಾರಾಯಣ್ ನಿರ್ದೇಶಕ

ಫೆಬ್ರವರಿಯಲ್ಲಿ ಅಧಿಪತ್ರ

ಬಿಗ್‌ಬಾಸ್ ಖ್ಯಾತಿಯ ರೂಪೇಶ್ ಶೆಟ್ಟಿ ನಾಯಕನಾಗಿ ನಟಿಸಿರುವ ಅಧಿಪತ್ರ ಚಿತ್ರ, ತೆರೆಗೆ ಸಿದ್ಧವಾಗಿದ್ದು, ಫೆಬ್ರವರಿ 7 ರಂದು ರಾಜ್ಯಾದ್ಯಂತ ರಿಲೀಸ್ ಆಗಲಿದೆ. ಕರಾವಳಿಯ ಸಂಸ್ಕೃತಿಯಾದ ಹುಲಿ ಕುಣಿತ, ಯಕ್ಷಗಾನ, ದೈವರಾಧನೆ ಹಾಗೂ ಆಟಿ ಕಳಂಜಾ ಸೇರಿದಂತೆ ಹಲವು ವಿಚಾರಗಳುಳ್ಳ ಸಸ್ಪೆನ್ಸ್ ಥ್ರಿಲ್ಲರ್ ಕಥನಾ ಚಿತ್ರದಲ್ಲಿದ್ದು, ರೂಪೇಶ್ ಖಾಕಿ ತೊಟ್ಟು ಖದರ್ ತೋರಿದ್ದಾರೆ. ಜಾಹ್ನವಿ ನಾಯಕಿಯಾಗಿ ನಟಿಸಿದ್ದಾರೆ. ಎಂ.ಕೆ.ಮಠ, ಪ್ರಕಾಶ್ ತುಮ್ಮಿನಾಡು, ರಘು ಪಾಂಡೇಶ್ವರ್, ದೀಪಕ್ ರೈ, ಕಾರ್ತಿಕ್ ಭಟ್, ಅನಿಲ್ ಉಪ್ಪಾಲ್, ಪ್ರಶಾಂತ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಶ್ರೀಹರಿ ಶ್ರೇಷ್ಠಿ ಸಂಗೀತ ನಿರ್ದೇಶನ, ಶ್ರೀಕಾಂತ್ ಸಂಕಲನ, ರಿತ್ವಿಕ್ ಮುರುಳಿಧರ್ ಹಿನ್ನೆಲೆ ಸಂಗೀತ ಈ ಚಿತ್ರಕ್ಕಿದೆ.

ಅಧಿಪತ್ರ ಚಿತ್ರಕ್ಕೆ ಚಯನ್ ಶೆಟ್ಟಿ ಆಕ್ಷನ್ ಕಟ್ ಹೇಳಿದ್ದು, ನಿರ್ದೇಶಕರಾಗಿ ಇದು ಇವರ ಮೊದಲ ನಿರ್ದೇಶನದ ಚಿತ್ರವಾಗಿದೆ. ಕೆ.ಆರ್.ಸಿನಿ ಕಂಬೈನ್ಸ್ ಬ್ಯಾನರ್‌ನಲ್ಲಿ ದಿವ್ಯಾ ನಾರಾಯಣ್, ಕುಲದೀಪ್ ರಾಘವ್ ಲಕ್ಷ್ಮಿ ಗೌಡ ಚಿತ್ರ ನಿರ್ಮಾಣ ಮಾಡಿದ್ದಾರೆ.

ಒಂದೊಳ್ಳೆ ತಂಡದೊಂದಿಗೆ ನಾನು ಸಿನಿಮಾ ಜರ್ನಿ ಪ್ರಾರಂಭಿಸುತ್ತಿರುವುದು ಖುಷಿ ಕೊಟ್ಟಿದೆ. ಚಿತ್ರದಲ್ಲಿ ಗಟ್ಟಿಕಥೆ ಇದೆ. ದೊಡ್ಡ ತಾರಾಬಳಗವೂ ಇಲ್ಲಿದೆ. ನಾನು ಬೃಹತಿ ಎಂಬ ಪಾತ್ರದಲ್ಲಿ ನಟಿಸಿದ್ದೇನೆ. ಕಥೆ ಎಷ್ಟು ಸಸ್ಪೆನ್ಸ್ ಇದೆಯೋ. ನನ್ನ ಪಾತ್ರವೂ ಹಾಗೆಯೇ ಇದೆ ಎಂದು ಜಾಹ್ನವಿ ತಮ್ಮ ಪಾತ್ರದ ಬಗ್ಗೆ ಹೇಳಿದರು.

ಇದು ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾ. ಇದರ ಜತೆಗೆ ಕರಾವಳಿ ಭಾಗದ ಆಟಿ ಕಳಂಜಾ ಸಂಸ್ಕೃತಿಯನ್ನು ಅಧಿಪತ್ರ ಸಿನಿಮಾದಲ್ಲಿ ಕಟ್ಟಿಕೊಡಲಾಗಿದೆ. ಈ ಸಿನಿಮಾದಲ್ಲಿ ಒಳ್ಳೆಯ ಕಂಟೆಂಟ್ ಇದೆ. ಪ್ರೇಕ್ಷಕರನ್ನು ಖಂಡಿತಾ ಸೆಳೆಯಲಿದೆ.
-ಚಯನ್ ಶೆಟ್ಟಿ ನಿರ್ದೇಶಕ

ಟೀಸರ್ ನೋಡಿದರೆ ಇದು ಅದ್ಭುತ ಕಥೆಯ ಸಿನಿಮಾ ಎಂಬುದು ಸ್ಪಷ್ಟವಾಗುತ್ತದೆ. ಇದು ಹೀರೋಯಿಸ್ ಇರುವ ಚಿತ್ರವಲ್ಲ. ಇಲ್ಲಿ ಕಥೆಯೇ ನಾಯಕ. ಕಥೆಯಿಂದ ಗೆಲ್ಲುವ ಸಿನಿಮಾ. ನಾನು ಪೊಲೀಸ್ ಪಾತ್ರದಲ್ಲಿ ನಟಿಸಿದ್ದೇನೆ.
-ರೂಪೇಶ್ ಶೆಟ್ಟಿ ನಟ

ಪಾರು ಪಾರ್ವತಿ ಮೆಚ್ಚಿದ ಕಿಚ್ಚ

ರೋಹಿತ್ ಕೀರ್ತಿ ನಿರ್ದೇಶನದಲ್ಲಿ ಸಿದ್ಧವಾಗಿರುವ ಪಾರು ಪಾರ್ವತಿ ಟೀಸರ್ ಹಾಗೂ ಹಾಡಿನಲ್ಲಿ ಮನಗೆದ್ದಿದೆ. ಈಗ ಟ್ರೇಲರ್ ರಿಲೀಸ್ ಆಗಿದ್ದು ಸಖತ್ ಸದ್ದು ಮಾಡುತ್ತಿದೆ. ಕಿಚ್ಚ ಸುದೀಪ್ ಟ್ರೇಲರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಅಡ್ವೆಂಚರ್ ಜಾನರ್‌ನ ಈ ಚಿತ್ರದ ಟ್ರೇಲರ್ ಸಾಕಷ್ಟು ಕುತೂಹಲ ಮೂಡಿಸಿದೆ. ಚಿತ್ರ ಯಶಸ್ವಿಯಾಗಲಿ ಎಂದು ಸುದೀಪ್ ಹಾರೈಸಿದರು. ಚಿತ್ರದಲ್ಲಿ ಪ್ರಮುಖ ಪಾತ್ರವಾಗಿರುವ ಕಾರ್ ಅನ್ನು ಸಹ ಸುದೀಪ್ ವೀಕ್ಷಿಸಿದರು. ಇದೊಂದು ಟ್ರಾವೆಲಿಂಗ್ ಅಡ್ವೆಂಚರ್ ಕಥೆಯ ಸಿನಿಮಾವಾಗಿದ್ದು, ಬಿಗ್ ಬಾಸ್ ಖ್ಯಾತಿಯ ದೀಪಿಕಾ ದಾಸ್, ಪೂನಂ ಸರ್ ನಾಯಕ್ ಹಾಗೂ ಫವಾಜ್ ಅಶ್ರಫ್ ಪ್ರಮುಖಪಾತ್ರದಲ್ಲಿ ನಟಿಸಿದ್ದಾರೆ. ಟ್ರೇಲರ್‌ಗೆ ಮೆಚ್ಚುಗೆಯ ಮಹಾಪೂರವೇ ಹರಿದು ಬರುತ್ತಿದ್ದು, ಈಗಾಗಲೇ ಒಂದು ಮಿಲಿಯನ್‌ಗೂ ಹೆಚ್ಚು ವೀಕ್ಷಣೆ ಕಂಡಿದೆ. ಬಹು ನಿರೀಕ್ಷಿತ ಪಾರು ಪಾರ್ವತಿ ಇದೇ 31 ರಂದು ರಾಜ್ಯಾದ್ಯಂತ ತೆರೆಗೆ ಬರಲಿದೆ. ಈ ಪ್ರವಾಸ ಕಥನಕ್ಕೆ ಬೆಂಗಳೂರು, ಗೋವಾ, ಮಹಾರಾಷ್ಟ್ರ, ರಾಜಸ್ಥಾನ ಹಾಗೂ ಉತ್ತರಕಾಂಡದಲ್ಲಿ ಶೂಟಿಂಗ್ ನಡೆಸಲಾಗಿದೆ. ಅಬಿನ್ ರಾಜೇಶ್ ಛಾಯಾಗ್ರಹಣ, ಆರ್.ಹರಿ ಸಂಗೀತ ನಿರ್ದೇಶನ ಹಾಗೂ ಸಿ.ಕೆ.ಕುಮಾರ ಸಂಕಲನ ಪಾರು ಪಾರ್ವತಿ ಚಿತ್ರಕ್ಕಿದೆ.